# ಕನ್ನಡದ ಪೋಷಕರು

ಡಾ. ಜಿ. ಡಿ. ಜೋಶಿ

ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

# ಕನ್ನಡದ ಪೋಷಕರು

ಡಾ. ಜಿ. ಡಿ. ಜೋಶಿ

ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

KANNADAD POSHAKARU : (Profiles of Kannada Literateurs) :
by Dr. G. D. Joshi, 72/2433 Nehru Nagar, Om C.H.S. Kurla (E)
Mumbai- 400 024     Phone : 022-25231260

Published by : Karnataka Vidyavardhak Sangha, Dharwad

First Edition : 2005

Pages : x + 116          Copies : 700

Price : Rs. 50/-

ಪ್ರಥಮ ಮುದ್ರಣ : ೨೦೦೫          ಬೆಲೆ : ರೂ. ೫೦/-

ಮುದ್ರಕರು :
ರವೀಂದ್ರ ಆಕಳವಾಡಿ
ಮನೋಹರ ಮುದ್ರಣಾಲಯ
ಮಾರ್ಕೆಟ್, ಧಾರವಾಡ - ೫೮೦ ೦೦೧
ದೂರವಾಣಿ : ೨೭೬೦೦೩೦, ೨೭೪೧೯೮೪

# ಮುನ್ನುಡಿ

ಕನ್ನಡವನ್ನು ಕಟ್ಟಿಬೆಳೆಸಿದ ಹಲವು ಹತ್ತು ಜನರಲ್ಲಿ ಹದಿನೆಂಟು ಜನ ಕವಿ, ಸಾಹಿತಿಗಳನ್ನು ಪರಿಚಯಿಸುವ ಕೃತಿ 'ಕನ್ನಡದ ಪೋಷಕರು'. ಕನ್ನಡ, ಕನ್ನಡಿಗ, ಕರ್ನಾಟಕ ಎಂಬೀ ದಿವ್ಯ ಮಂತ್ರವನ್ನು ಆತ್ಮಸಾಥ ಮಾಡಿಕೊಂಡು ಸಮಗ್ರ ಕರ್ನಾಟಕದ ಉತ್ತರೋತ್ತರ ಸರ್ವಾಂಗೀಣ ಉನ್ನತಿಗಾಗಿ ದುಡಿಯುತ್ತ ಬಂದಿರುವ ನಮ್ಮ ಸಂಸ್ಥೆ ಪ್ರಸ್ತುತ ಗ್ರಂಥವನ್ನು ಪ್ರಕಟಿಸುತ್ತಿರುವುದು ಸಂತೋಷ, ಅಭಿಮಾನದ ವಿಷಯ. ಮುಂಬಯಿ ಕರ್ನಾಟಕ ಸಂಘದ ಜೊತೆಗೂಡಿ ಒಂಭತ್ತು ದಿನಗಳ ಕಾಲ 'ನ ಭೂತೋ ಭವಿಷ್ಯತಿ' ಎಂಬಂತೆ ಕನ್ನಡ ಸಮ್ಮೇಳನವನ್ನು ಜರುಗಿಸಿದ ಕೀರ್ತಿಗೆ ಭಾಜನವಾಗಿರುವ ನಮ್ಮ ಸಂಸ್ಥೆ ಮುಂಬಯಿ ವಾಸಿಯಾಗಿರುವ, ಮುಂಬಯಿಯಲ್ಲಿ ಕನ್ನಡ ಮಂತ್ರಾಕ್ಷತೆಯನ್ನು ಬಿತ್ತಿ ಬೆಳೆಯಲು ಕಾರಣರಾದ ಡಾ. ಜಿ. ಡಿ. ಜೋಶಿ ಅವರ ಪ್ರಸ್ತುತ ಗ್ರಂಥವನ್ನು ಹೊರತರಲು ಉದ್ಯೋಗಿಸಿರುವುದು ಮುಂಬಯಿ - ಧಾರವಾಡಗಳ ಸ್ನೇಹ ಸೇತುವೆಯ ಸಂಕೇತ ಎಂದೇ ಹೇಳಬೇಕು.

ಮುಂಬಯಿಯಿಂದ ಪ್ರಕಟವಾಗುತ್ತಿರುವ ಜನಪ್ರಿಯ ಕನ್ನಡ ದಿನಪತ್ರಿಕೆ 'ಕರ್ನಾಟಕ ಮಲ್ಲ'ದಲ್ಲಿ ಪ್ರತಿ ಸೋಮವಾರ ಅಂಕಣಬರೆಹಗಳಾಗಿ ಮೂಡಿಬಂದ ಲೇಖನಗಳಲ್ಲಿ ಹದಿನೆಂಟನ್ನು ಅಣಿಗೊಳಿಸಿ ಪ್ರಸ್ತುತ ಕೃತಿಯಲ್ಲಿ ಪ್ರಕಟಿಸಲಾಗಿದೆ. ಈಗಾಗಲೇ ಈ ಪತ್ರಿಕೆಯ ಅಂಕಣಬರೆಹಗಳಲ್ಲಿಯ ಕೆಲವನ್ನು ಆಯ್ದು 'ಜ್ಞಾನಪೀಠ ವಿಜೇತ ಕನ್ನಡಿಗರು (೧೯೯೬), ಕನ್ನಡದ ಕಣ್ಮಣಿಗಳು (೧೯೯೭) ಹಾಗೂ ಕನ್ನಡದ ಕಾರಣಪುರುಷರು (೧೯೯೮) ಎಂದು ಮೂರು ಪುಸ್ತಿಕೆಗಳನ್ನು ಪ್ರಕಟಿಸಿ ಡಾ. ಜೋಶಿ ಅವರು ಕನ್ನಡಿಗರ ಗೌರವಾದರಗಳಿಗೆ ಪಾತ್ರರಾಗಿದ್ದಾರೆ. ಇದೀಗ ಈ ಕೃತಿಯಲ್ಲಿ ಮತ್ತೆ ಹದಿನೆಂಟು ಜನ ಕನ್ನಡದ ಉದ್ದಾಮ ಕವಿ - ಸಾಹಿತಿಗಳ ಪರಿಚಯವನ್ನು ಕನ್ನಡಿಗರ ಕೈಗೆ ನೀಡಲು ಅಣಿಮಾಡಿಕೊಟ್ಟಿದ್ದಾರೆ. ಅವರಿಗೆ ನಾವು ಎಷ್ಟು ಕೃತಜ್ಞತೆ ಸಲ್ಲಿಸಿದರೂ ಕಡಿಮೆಯೆ. ಇಂಥ ಕವಿ - ಸಾಹಿತಿ - ಕಲಾವಿದರನ್ನು ಕನ್ನಡ ಜನಮಾನಸದಲ್ಲಿ ಮೂರ್ತಗೊಳಿಸಲು ತನ್ನನ್ನು ತೊಡಗಿಸಿಕೊಂಡಿರುವ 'ಕರ್ನಾಟಕ ಮಲ್ಲ' ಪತ್ರಿಕೆಯ ಸಂಪಾದಕರಿಗೆ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸಲೇಬೇಕು.

KANNADAD POSHAKARU : (Profiles of Kannada Literateurs) :
by Dr. G. D. Joshi, 72/2433 Nehru Nagar, Om C.H.S. Kurla (E)
Mumbai- 400 024    Phone : 022-25231260

Published by : Karnataka Vidyavardhak Sangha, Dharwad

First Edition : 2005

Pages : x + 116    Copies : 700

Price : Rs. 50/-

ಪ್ರಥಮ ಮುದ್ರಣ : ೨೦೦೫    ಬೆಲೆ : ರೂ. ೫೦/-

ಮುದ್ರಕರು :

ರವೀಂದ್ರ ಆಕಳವಾಡಿ
ಮನೋಹರ ಮುದ್ರಣಾಲಯ
ಮಾರ್ಕೆಟ್, ಧಾರವಾಡ - ೫೮೦ ೦೦೧
ದೂರವಾಣಿ : ೨೭೯೦೦೩೦, ೨೭೪೧೯೮೪

# ಮುನ್ನುಡಿ

ಕನ್ನಡವನ್ನು ಕಟ್ಟಿಬೆಳೆಸಿದ ಹಲವು ಹತ್ತು ಜನರಲ್ಲಿ ಹದಿನೆಂಟು ಜನ ಕವಿ, ಸಾಹಿತಿಗಳನ್ನು ಪರಿಚಯಿಸುವ ಕೃತಿ 'ಕನ್ನಡದ ಪೋಷಕರು'. ಕನ್ನಡ, ಕನ್ನಡಿಗ, ಕರ್ನಾಟಕ ಎಂಬೀ ದಿವ್ಯ ಮಂತ್ರವನ್ನು ಆತ್ಮಸಾಥ ಮಾಡಿಕೊಂಡು ಸಮಗ್ರ ಕರ್ನಾಟಕದ ಉತ್ತರೋತ್ತರ ಸರ್ವಾಂಗೀಣ ಉನ್ನತಿಗಾಗಿ ದುಡಿಯುತ್ತ ಬಂದಿರುವ ನಮ್ಮ ಸಂಸ್ಥೆ ಪ್ರಸ್ತುತ ಗ್ರಂಥವನ್ನು ಪ್ರಕಟಿಸುತ್ತಿರುವುದು ಸಂತೋಷ, ಅಭಿಮಾನದ ವಿಷಯ. ಮುಂಬಯಿ ಕರ್ನಾಟಕ ಸಂಘದ ಜೊತೆಗೂಡಿ ಒಂಭತ್ತು ದಿನಗಳ ಕಾಲ 'ನ ಭೂತೋ ಭವಿಷ್ಯತಿ' ಎಂಬಂತೆ ಕನ್ನಡ ಸಮ್ಮೇಳನವನ್ನು ಜರುಗಿಸಿದ ಕೀರ್ತಿಗೆ ಭಾಜನವಾಗಿರುವ ನಮ್ಮ ಸಂಸ್ಥೆ ಮುಂಬಯಿ ವಾಸಿಯಾಗಿರುವ, ಮುಂಬಯಿಯಲ್ಲಿ ಕನ್ನಡ ಮಂತ್ರಾಕ್ಷತೆಯನ್ನು ಬಿತ್ತಿ ಬೆಳೆಯಲು ಕಾರಣರಾದ ಡಾ. ಜಿ. ಡಿ. ಜೋಶಿ ಅವರ ಪ್ರಸ್ತುತ ಗ್ರಂಥವನ್ನು ಹೊರತರಲು ಉದ್ಯೋಗಿಸಿರುವುದು ಮುಂಬಯಿ - ಧಾರವಾಡಗಳ ಸ್ನೇಹ ಸೇತುವೆಯ ಸಂಕೇತ ಎಂದೇ ಹೇಳಬೇಕು.

ಮುಂಬಯಿಯಿಂದ ಪ್ರಕಟವಾಗುತ್ತಿರುವ ಜನಪ್ರಿಯ ಕನ್ನಡ ದಿನಪತ್ರಿಕೆ 'ಕರ್ನಾಟಕ ಮಲ್ಲ'ದಲ್ಲಿ ಪ್ರತಿ ಸೋಮವಾರ ಅಂಕಣಬರೆಹಗಳಾಗಿ ಮೂಡಿಬಂದ ಲೇಖನಗಳಲ್ಲಿ ಹದಿನೆಂಟನ್ನು ಅಣಿಗೊಳಿಸಿ ಪ್ರಸ್ತುತ ಕೃತಿಯಲ್ಲಿ ಪ್ರಕಟಿಸಲಾಗಿದೆ. ಈಗಾಗಲೇ ಈ ಪತ್ರಿಕೆಯ ಅಂಕಣಬರೆಹಗಳಲ್ಲಿಯ ಕೆಲವನ್ನು ಆಯ್ದು 'ಜ್ಞಾನಪೀಠ ವಿಜೇತ ಕನ್ನಡಿಗರು (೧೯೯೬), ಕನ್ನಡದ ಕಣ್ಮಣಿಗಳು (೧೯೯೭) ಹಾಗೂ ಕನ್ನಡದ ಕಾರಣಪುರುಷರು (೧೯೯೮) ಎಂದು ಮೂರು ಪುಸ್ತಿಕೆಗಳನ್ನು ಪ್ರಕಟಿಸಿ ಡಾ. ಜೋಶಿ ಅವರು ಕನ್ನಡಿಗರ ಗೌರವಾದರಗಳಿಗೆ ಪಾತ್ರರಾಗಿದ್ದಾರೆ. ಇದೀಗ ಈ ಕೃತಿಯಲ್ಲಿ ಮತ್ತೆ ಹದಿನೆಂಟು ಜನ ಕನ್ನಡದ ಉದ್ದಾಮ ಕವಿ - ಸಾಹಿತಿಗಳ ಪರಿಚಯವನ್ನು ಕನ್ನಡಿಗರ ಕೈಗೆ ನೀಡಲು ಅಣಿಮಾಡಿಕೊಟ್ಟಿದ್ದಾರೆ. ಅವರಿಗೆ ನಾವು ಎಷ್ಟು ಕೃತಜ್ಞತೆ ಸಲ್ಲಿಸಿದರೂ ಕಡಿಮೆಯೆ. ಇಂಥ ಕವಿ - ಸಾಹಿತಿ - ಕಲಾವಿದರನ್ನು ಕನ್ನಡ ಜನಮಾನಸದಲ್ಲಿ ಮೂರ್ತಗೊಳಿಸಲು ತನ್ನನ್ನು ತೊಡಗಿಸಿಕೊಂಡಿರುವ 'ಕರ್ನಾಟಕ ಮಲ್ಲ' ಪತ್ರಿಕೆಯ ಸಂಪಾದಕರಿಗೆ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸಲೇಬೇಕು.

ಕವಿ ಈಶ್ವರ ಸಣಕಲ್ಲ, ಡಿ. ಎಸ್. ಕರ್ಕಿ, ಅನಕೃ, ಜಿ. ಪಿ. ರಾಜರತ್ನಂ, ಕೃಷ್ಣಕುಮಾರ ಕಲ್ಲೂರ, ದಿನಕರ ದೇಸಾಯಿ, ರಾವಬಹಾದ್ದೂರ, ಸಂ. ಶಿ. ಭೂಸನೂರಮಠ, ಜಯಲಕ್ಷ್ಮೀ ಶ್ರೀನಿವಾಸ, ಜಯದೇವಿತಾಯಿ ಲಿಗಾಡೆ, ಎಸ್. ಡಿ. ಇಂಚಲ, ಬೀಚಿ, ಎನ್ಕೆ, ಎಸ್. ವಿ. ಪರಮೇಶ್ವರ ಭಟ್ಟ, ಭಾರತೀಸುತ, ಕೆ. ಎಸ್. ನರಸಿಂಹಸ್ವಾಮಿ, ಎಚ್. ಎಲ್. ನಾಗೇಗೌಡ, ಪ್ರೊ. ಜಿ. ವೆಂಕಟಸುಬ್ಬಯ್ಯ ಮೊದಲಾದ ಬಹುಮುಖ ಪ್ರತಿಭೆಯ, ಸಾಹಿತ್ಯಾಕಾಶದಲ್ಲಿ ತಮ್ಮದೇ ಆದ ದೇದೀಪ್ಯಮಾನವಾದ ಕಾಂತಿಯನ್ನು ಹೊಮ್ಮಿಸಿರುವ ಕವಿ - ಸಾಹಿತಿಗಳನ್ನು ಸಾಮಾನ್ಯ ಓದುಗರನ್ನು, ವಿದ್ಯಾರ್ಥಿ ಜನಸ್ತೋಮವನ್ನು ಗಮನದಲ್ಲಿರಿಸಿಕೊಂಡು ಸಾದ್ಯಂತವಾಗಿ ಪರಿಚಯಿಸಿಕೊಡುವ ಸ್ಮರಣೀಯವಾದ ಕಾರ್ಯವನ್ನು ಶ್ರೀ ಜೋಶಿಯವರು ಮಾಡಿದ್ದಾರೆ. ಪ್ರತಿ ಲೇಖನದ ಕೊನೆಯಲ್ಲಿ ಆಯಾ ಕವಿ ಸಾಹಿತಿಯನ್ನು ಪ್ರಮುಖ ಅಂಶಗಳ ಮೂಲಕ ನೆನಪಿಡುವ ಪರಿಯಲ್ಲಿ ಮುದ್ದೆಗಳನ್ನಿತ್ತು ಉಪಕರಿಸಿದ್ದಾರೆ. ಅಂಗೈಯಲ್ಲಿ ಆಕಾಶ ತೋರುವ ಬಗೆಯಲ್ಲಿ ಕಿರಿದರಲ್ಲಿಯೇ ಆಯಾಯಾ ಕವಿ ಸಾಹಿತಿಗಳ ಬದುಕು - ಬರೆಹಗಳನ್ನು ಖಂಡರಿಸಿರುವುದು ಶ್ಲಾಘನೀಯವೆನಿಸಿದೆ.

ಡಾ. ಜಿ. ಡಿ. ಜೋಶಿ ಅವರು ಅಧ್ಯಾಪಕರಾಗಿ ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ ನಡೆದು ಬಂದ ದಾರಿ ಎಲ್ಲರಿಗೂ ಅನುಕರಣೀಯವಾಗಿದೆ. ೨೮-೮-೧೯೩೩ ರಂದು ಅಂದಿನ ಧಾರವಾಡ ಜಿಲ್ಲೆ ಇಂದಿನ ಗದಗ ಜಿಲ್ಲೆಯ ಬೆಳ್ಳಟ್ಟಿಯಲ್ಲಿ ಜನಿಸಿದ ಶ್ರೀಯುತರು ಬೆಳ್ಳಟ್ಟಿ, ಸೂರಣಗಿ, ಹುಬ್ಬಳ್ಳಿಗಳಲ್ಲಿ ಪ್ರಾಥಮಿಕ ಶಿಕ್ಷಣ ಪಡೆದರು. ಮುಂದೆ ೧೯೫೭ ರಲ್ಲಿ ಮುಂಬಯಿಗೆ ಹೋದ ಶ್ರೀಯುತರು ತಮ್ಮ ಶಿಕ್ಷಣವನ್ನು ಮುಂದುವರಿಸಿ ಬಿ.ಎ. ಪಾಸುಮಾಡಿ ಅಧ್ಯಾಪನ ಕಾರ್ಯಗೈದರು. ನಂತರ ಬಿ.ಎಡ್. ಪದವಿಯನ್ನು ಸಂಪಾದಿಸಿದರು. ವಿಜಗೀಷು ವೃತ್ತಿಯ ಅವರು ೧೯೬೬ ರಲ್ಲಿ ಕನ್ನಡದಲ್ಲಿ ಎಂ.ಎ. ಮಾಡಿ ಕನ್ನಡ ಪ್ರಾಧ್ಯಾಪಕರಾದರು. ಶ್ರೀಯುತರು ೧೯೭೨ ರಿಂದ ೧೯೯೬ ರ ವರೆಗೆ ಮುಂಬೈ ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ದುಡಿದಿದ್ದಾರೆ. ಶ್ರೀಯುತರು ಕನ್ನಡ ಅಭ್ಯಾಸ ಮಂಡಳಿ ಸದಸ್ಯರಾಗಿ, ಅಧ್ಯಕ್ಷರಾಗಿ, ಸಿನೆಟ್ ಅಕಾಡೆಮಿಕ ಕೌನ್ಸಿಲ್ ಸದಸ್ಯರಾಗಿ ಆರ್ಟ ಫೆಕಲ್ಟಿ ಸದಸ್ಯರಾಗಿ, ಮುಂಬೈ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸಿದ್ದಾರೆ. ಶ್ರೀಯುತರು ಅಧ್ಯಾಪನ ಕಾರ್ಯದೊಂದಿಗೆ ಪತ್ರಿಕೆಗಳ ಸಂಪಾದಕರಾಗಿಯೂ ದುಡಿದಿದ್ದಾರೆ. ೧೯೬೮ ರಿಂದ ೧೯೮೧ ರ ವರೆಗೆ ಮಹಾರಾಷ್ಟ್ರ ರಾಜ್ಯ ಪಠ್ಯಪುಸ್ತಕ ಸಮಿತಿ ಅಭ್ಯಾಸ ಸಂಶೋಧನ ಮಂಡಳಿಗಳ ಕನ್ನಡ ಭಾಷಾ ಸಮಿತಿ ಸದಸ್ಯರಾಗಿ ಕಾರ್ಯಗೈದಿದ್ದಾರೆ. ಪ್ರಾಥಮಿಕ - ಮಾಧ್ಯಮಿಕ ಹಾಗೂ ಉಚ್ಚ ಮಾಧ್ಯಮಿಕ ಪಠ್ಯಪುಸ್ತಕ ರಚನಾ ಮಂಡಳಿಯ ಸದಸ್ಯರಾಗಿ, ನೇತಾರರಾಗಿಯೂ ಕಾರ್ಯಗೈದಿದ್ದಾರೆ.

೧೯೬೮ - ೯೨ ರ ವರೆಗೆ ಬೆಂಗಳೂರಿನಲ್ಲಿಯ ಕನ್ನಡ ಸಾಹಿತ್ಯ ಪರಿಷತ್ತ ಗೌರವ ಕಾರ್ಯದರ್ಶಿಯಾಗಿ, ೧೯೮೧-೮೨ ರಲ್ಲಿ ಕನ್ನಡ ಸಾಹಿತ್ಯ ಪರಿಷತ್ ಕಾರ್ಯಕಾರಿ ಸಮಿತಿ ಸದಸ್ಯರಾಗಿ, ೧೯೭೬, ೮೧, ೮೭ ರಲ್ಲಿ ಮುಂಬೈಯಲ್ಲಿ ಸಾಹಿತ್ಯ ಸಮ್ಮೇಳನ ನಡೆದಾಗ ಗೌರವಾಧ್ಯಕ್ಷರಾಗಿ ಕಾರ್ಯನಿರ್ವಹಿಸಿ ಯಶಸ್ವಿಗೊಳಿಸಿದ್ದಾರೆ. ಮುಂಬೈ ಕನ್ನಡ ಸಂಘದ ಅಧ್ಯಕ್ಷರಾಗಿ ಅದರ ಏಳ್ಗೆಗೆ ಕಾರಣರಾಗಿದ್ದಾರೆ. ಅಲ್ಲಿಯ ಕರ್ನಾಟಕ ಸಂಘದ

ಉಪಾಧ್ಯಕ್ಷರಾಗಿ ಕಾರ್ಯಗೈದಿದ್ದಾರೆ. ಆ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾಗಿ, ಗ್ರಂಥಾಲಯದಲ್ಲಿ ಮಾಹಿತಿ ಕೇಂದ್ರ, ಸಾಹಿತ್ಯ ಭಾರತಿ, ವಿದ್ಯಾವಿಕಾಸ ವಿಭಾಗಗಳಲ್ಲಿ ಸಂಚಾಲಕರಾಗಿ, ಸ್ನೇಹಸಂಬಂಧ ಮಾಸಪತ್ರಿಕೆ ಸಂಚಾಲಕರಾಗಿ ಶ್ರೀಯುತರು ಮಾಡುತ್ತಿರುವ ಕಾರ್ಯ ಸ್ಮರಣೀಯವಾದದ್ದು. ಶ್ರೀ ಜೋಶಿ ಅವರು ೧೯೯೫ - ೨೦೦೫ ರ ವರೆಗೆ ಮಹಾರಾಷ್ಟ್ರ ಘಟಕದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿಯೂ ಯಶಸ್ವಿಯಾಗಿ ಸೇವೆಗೈದಿದ್ದಾರೆಂಬುದನ್ನು ಯಾರೂ ಮರೆಯಲಾಗದು.

ವಿದ್ಯಾರ್ಥಿ ದೆಸೆಯಿಂದಲೇ ಸಾಹಿತ್ಯ ಕೃಷಿಗೆ ತಮ್ಮನ್ನು ತೊಡಗಿಸಿಕೊಂಡಿರುವ ಶ್ರೀಯುತರು ಹರಟೆಗಳು, ಕತೆಗಳು, ಲೇಖನಗಳು, ಅನುವಾದಗಳನ್ನು ಗೈದು ಸಾಹಿತ್ಯ, ಸಂಸ್ಕೃತಿಯ ಸೇವೆ ಗೈದಿದ್ದಾರೆ. ಶ್ರೀಯುತರು 'ಉದಯವಾಗಲಿ ಚೆಲುವ ಕನ್ನಡ ನಾಡು' ಗೀತೆಯ ಕರ್ತೃ 'ಶ್ರೀ ಹುಯಿಲಗೋಳ ನಾರಾಯಣರಾಯರನ್ನು' ಕುರಿತು ಪ್ರೌಢ ಪ್ರಬಂಧ ರಚಿಸಿ ಡಾಕ್ಟರೇಟ ಪದವಿಯನ್ನು ಸಂಪಾದಿಸಿಕೊಂಡಿದ್ದಾರೆ. ಅದು ಪ್ರಕಟಗೊಂಡಿರುವುದು ಕನ್ನಡಿಗರ ಭಾಗ್ಯವಿಶೇಷ.

ಡಾ. ಜೋಶಿ ಅವರು ತಮ್ಮ ಷಷ್ಟಬ್ದಿ ಸಂದರ್ಭದಲ್ಲಿ ಸನ್ಮಾನ ಸಮಿತಿಯವರು ಅರ್ಪಿಸಿದ ಹಮ್ಮಿಣಿ ಹಣವನ್ನು ಪ್ರತಿವರ್ಷ ಪ್ರತಿಭಾನ್ವಿತ ಯುವಸಾಹಿತಿಯ ಪ್ರಥಮ ಕೃತಿ ಪ್ರಕಟಣೆಗೆ ನೀಡುತ್ತಿರುವದು ಅನುಕರಣೀಯ ಹಾಗೂ ಅಭಿನಂದನೀಯವಾಗಿದೆ.

ಕರ್ನಾಟಕ ಸರಕಾರ, ಸಾಹಿತ್ಯ ಅಕಾಡೆಮಿ, ಕನ್ನಡ ಸಾಹಿತ್ಯ ಪರಿಷತ್ತು ಮೊದಲಾದವು ಅವರ ಕಾರ್ಯಕ್ಷಮತೆಗಳನ್ನು ಮೆಚ್ಚಿ ಅವರಿಗೆ ಪ್ರಶಸ್ತಿ ಗೌರವಮನ್ನಣೆ ಇತ್ತು ಶುಭ ಹಾರೈಸಿವೆ. 'ಹೊರನಾಡ ಕನ್ನಡ ಕಟ್ಟಾಳು' ಎನ್ನುವ ಬಿರುದು ಸಂಪಾದಿಸಿರುವ ಅವರು ಹೊರನಾಡಿನಲ್ಲಿ ಕನ್ನಡದ ಕಂಪು ಹರಡುವಲ್ಲಿ ತಮ್ಮನ್ನು ಅರ್ಪಿಸಿಕೊಂಡಿದ್ದಾರೆ. ಅವರ ನಾಡು - ನುಡಿ - ನಾಡವರನ್ನು ಕುರಿತಾದ ಅಭಿಮಾನ ಬತ್ತದಿರಲಿ, ಬೃಹತ್ ಮುಂಬಯಿಯಲ್ಲಿ ಅವರ ಸಾಹಿತ್ಯ ಕೃಷಿ - ನುಡಿ ಸೇವೆಯ ಕಾರ್ಯ ಅಬಾಧಿತವಾಗಿ ಮುಂದೆ ಸಾಗಲಿ ಎಂದು ಈ ಸಂದರ್ಭದಲ್ಲಿ ವೈಯಕ್ತಿಕವಾಗಿ ಹಾಗೂ ಸಂಘದ ಪದಾಧಿಕಾರಿಗಳು, ಸದಸ್ಯರು ಹಾಗೂ ಸಮಸ್ತ ಕನ್ನಡಿಗರ ಪರವಾಗಿ ಹಾರೈಸುತ್ತೇನೆ.

ಧಾರವಾಡ
೧-೨-೨೦೦೫

**ಪ್ರೊ. ಬಿ. ವಿ. ಗುಂಜೆಟ್ಟಿ**
ಪ್ರಧಾನ ಕಾರ್ಯದರ್ಶಿ
ಕರ್ನಾಟಕ ವಿದ್ಯಾವರ್ಧಕ ಸಂಘ

# ಸಹೃದಯರಲ್ಲಿ ವಿನಂತಿ

ಮುಂಬಯಿ ಕನ್ನಡ ದಿನ ಪತ್ರಿಕೆ, 'ಕರ್ನಾಟಕ ಮಲ್ಲ'ದಲ್ಲಿ ಪ್ರತಿ ಸೋಮವಾರ ಪ್ರಕಟವಾದ 'ಕನ್ನಡದ ಕಣ್ಮಣಿಗಳು' ಎಂಬ ಕವಿ-ಕಾವ್ಯ ಪರಿಚಯಾತ್ಮಕ ಲೇಖನಗಳು ಅಂಕಣ ರೂಪದಲ್ಲಿ ೧೯೯೩ರಿಂದ ಪ್ರಕಟವಾಗುತ್ತಲಿವೆ. ಮೊದಲು ಬರೆದ ಲೇಖನಗಳು 'ಜ್ಞಾನಪೀಠ ಪ್ರಶಸ್ತಿ ವಿಜೇತ ಕನ್ನಡಿಗರು' ಎಂಬ ಚಿಕ್ಕ ಹೊತ್ತಿಗೆಯಲ್ಲಿ ೧೯೯೬ರಲ್ಲಿ ಪ್ರಕಟವಾಗಿದೆ. ೨೦೦೨ರಲ್ಲಿ ಅದರ ದ್ವಿತೀಯ ಮುದ್ರಣ ಪ್ರಕಟವಾಗಿ ಅದರಲ್ಲಿ ಇಲ್ಲಿಯ ವರೆಗೆ ದೊರೆತ ಏಳು ಪ್ರಶಸ್ತಿ ವಿಜೇತರ ಬಗ್ಗೆ ಲೇಖನಗಳಿವೆ.

ಈ ಅಂಕಣದಲ್ಲಿ ಪ್ರಕಟವಾದ ಲೇಖನಗಳ ಎರಡನೆಯ ಗ್ರಂಥ 'ಕನ್ನಡದ ಕಣ್ಮಣಿಗಳು' ಸಂಕಲನವು ೧೯೯೭ರಲ್ಲಿ ಪ್ರಕಟವಾಗಿದೆ. ೧೯೯೮-೯೯ರ ಅವಧಿಯಲ್ಲಿ ಪ್ರಕಟವಾದ ಅಂಕಣಗಳ ಮೂರನೆಯ ಸಂಕಲನ 'ಕನ್ನಡದ ಕಾರಣಪುರುಷರು' ಎಂಬ ಶೀರ್ಷಿಕೆಯಲ್ಲಿ ಅಚ್ಚಾಗಿದೆ.

ಅನಂತರ ಅದೇ ಅಂಕಣದಲ್ಲಿ ಪ್ರಕಟವಾದ ಬೇರೆ ಲೇಖನಗಳನ್ನು ಈಗ 'ಕನ್ನಡದ ಪೋಷಕರು' ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸಲು ಕರ್ನಾಟಕ ವಿದ್ಯಾವರ್ಧಕ ಸಂಘವು ಒಪ್ಪಿರುವುದು ಹೊರನಾಡಿನಲ್ಲಿಯ ನನ್ನ ಕನ್ನಡ ಕಾರ್ಯಕ್ಕೆ ಕೊಟ್ಟ ಮನ್ನಣೆ ಎಂದೇ ಭಾವಿಸುತ್ತೇನೆ. ಇದಕ್ಕೆ ಸಂಬಂಧಪಟ್ಟ ಸಂಘದ ಅಧ್ಯಕ್ಷರಿಗೆ ಮತ್ತು ಕಾರ್ಯಕಾರೀ ಸಮಿತಿಯ ಸದಸ್ಯರಿಗೆ ನನ್ನ ಹಾರ್ದಿಕ ನಮನಗಳು.

ಈ ಗ್ರಂಥಕ್ಕೆ ಮುನ್ನುಡಿ ಬರೆದು ಹರಸಿದ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಪ್ರೊ. ಬಿ.ವಿ. ಗುಂಜೆಟ್ಟಿ ಅವರಿಗೆ, ಬೆನ್ನುಡಿ ಬರೆದು ಪ್ರೋತ್ಸಾಹಿಸಿದ ಶ್ರೀ ಎಚ್. ಸಿ. ಮೊಗಲಿ, ಕಾರ್ಯಾಧ್ಯಕ್ಷರು, ಕ.ವಿ.ವ. ಸಂಘ, ಧಾರವಾಡ ಇವರಿಗೆ ನಾನು ಆಭಾರಿಯಾಗಿದ್ದೇನೆ.

ವಿದ್ಯಾರ್ಥಿಗಳಿಗಾಗಿ ಇಂಥ ಅಂಕಣ ಬರೆಯಲು ತೊಡಗಿಸಿದ ನನ್ನ ಪ್ರಿಯಶಿಷ್ಯ ಶೇಖರ್ ಅಜೆಕಾರುವನ್ನು ನಾನಿಲ್ಲಿ ಸ್ಮರಿಸದೇ ಇರಲಾರೆ.

ನನಗೆ ಪ್ರಿಯವಾದ ಹರಟೆ (ಪ್ರಬಂಧ) ಸಾಹಿತ್ಯ ಪ್ರಕಾರದಲ್ಲಿ ಐವತ್ತು ವರ್ಷಗಳಿಂದ ಬರೆಯುತ್ತಿದ್ದೇನೆ. ಈಗಾಗಲೇ ಸುಮಾರು ನೂರು ಹರಟೆಗಳು ಪ್ರಕಟವಾಗಿವೆ. ಅವುಗಳಲ್ಲಿ ಹಲವು ಏಳು ಸಂಕಲನಗಳಲ್ಲಿ ಪ್ರಕಟವಾಗಿವೆ. ೨೦೦೩ರಲ್ಲಿ

ದ್ವಿತೀಯ ಅಭಿಪ್ರಾಯ (ಹದಿನಾರು ಹರಟೆಗಳು) ಸಂಕಲನ ಪ್ರಕಟವಾಗಿದೆ. ನನ್ನ ಪಿಎಚ್.ಡಿ. ಮಹಾಪ್ರಬಂಧ 'ಹುಯಿಲಗೋಳ ನಾರಾಯಣರಾಯರು : ಜೀವನ ಹಾಗೂ ಸಾಹಿತ್ಯ'ವನ್ನು ೧೯೯೬ರಲ್ಲಿ ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗ ಪ್ರಕಟಿಸಿದೆ.

ಈಗ ಈ ಗ್ರಂಥ 'ಕನ್ನಡದ ಪೋಷಕರು' ಪ್ರಕಟವಾಗುತ್ತಿದೆ. ನನ್ನ ಹಿಂದಿನ ಗ್ರಂಥಗಳಿಗೆ ದೊರಕಿದ ವಾಚಕರ ಪ್ರೋತ್ಸಾಹ ಈ ಗ್ರಂಥಕ್ಕೂ ದೊರೆಯುವುದೆಂಬ ಭರವಸೆ ಇದೆ. ಓದಿ ಒಂದು ಪೋಸ್ಟಕಾರ್ಡು ಬರೆಯುವ ಕೃಪೆ ಮಾಡುವಿರೆಂದು ನಂಬಿದ್ದೇನೆ.

ಈ ಗ್ರಂಥವನ್ನು ಪ್ರಕಟಿಸಿದ ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ ಮತ್ತು ಅಂದವಾಗಿ ಮುದ್ರಿಸಿದ ಮನೋಹರ ಮುದ್ರಣಾಲಯದ ಶ್ರೀ ರವಿ-ಚಂದ್ರು ಅವರಿಗೆ ನಾನು ಚಿರಋಣಿಯಾಗಿದ್ದೇನೆ.

**Dr. G. D. Joshi**
72/2433 Nehru Nagar, Om C.H.S.
Kurla (E), Mumbai- 400 024
ದೂರವಾಣಿ : 022-25231260

**ಡಾ. ಜಿ. ಡಿ. ಜೋಶಿ**
ಮುಂಬಯಿ

# ಪರಿವಿಡಿ


| | | | |
|---|---|---|---|
| | ಮುನ್ನುಡಿ | .... | iii |
| | ಸಹೃದಯರಲ್ಲಿ ವಿನಂತಿ | .... | vii |
| ೧. | ಈಶ್ವರ ಸಣಕಲ್ಲ | .... | ೧ |
| ೨. | ಡಾ. ಡಿ. ಎಸ್. ಕರ್ಕಿ | .... | ೬ |
| ೩. | ಅ. ನ. ಕೃ | .... | ೧೧ |
| ೪. | ಜಿ. ಪಿ. ರಾಜರತ್ನಂ | .... | ೧೬ |
| ೫. | ಕೃಷ್ಣಕುಮಾರ ಕಲ್ಲೂರ | .... | ೨೩ |
| ೬. | ದಿನಕರ ದೇಸಾಯಿ | .... | ೩೦ |
| ೭. | ರಾವ್‌ಬಹಾದ್ದೂರ್ | .... | ೩೭ |
| ೮. | ಸಂ. ಶಿ. ಭೂಸನೂರಮಠ | .... | ೪೪ |
| ೯. | ಜಯಲಕ್ಷ್ಮಿ ಶ್ರೀನಿವಾಸ್ | .... | ೫೦ |
| ೧೦. | ಜಯದೇವಿತಾಯಿ ಲಿಗಾಡೆ | .... | ೫೫ |
| ೧೧. | ಕವಿ ಎಸ್. ಡಿ. ಇಂಚಲ | .... | ೬೦ |
| ೧೨. | ಬೀChi (ಬೀಚಿ) | .... | ೬೭ |
| ೧೩. | ಎನ್ಕೆ | .... | ೭೩ |
| ೧೪. | ಎಸ್. ವಿ. ಪರಮೇಶ್ವರ ಭಟ್ಟ | .... | ೮೨ |
| ೧೫. | ಭಾರತೀಸುತ | .... | ೮೮ |
| ೧೬. | ಕೆ. ಎಸ್. ನರಸಿಂಹಸ್ವಾಮಿ | .... | ೯೩ |
| ೧೭. | ಎಚ್. ಎಲ್. ನಾಗೇಗೌಡ | .... | ೯೯ |
| ೧೮. | ಪ್ರೊ. ಜಿ. ವೆಂಕಟಸುಬ್ಬಯ್ಯ | .... | ೧೦೮ |

# ಈಶ್ವರ ಸಣಕಲ್ಲ

ಕವಿ ಈಶ್ವರ ಸಣಕಲ್ಲ ಅವರು ತಮ್ಮ ಕವನಗಳನ್ನು ಕನ್ನಡ ಸಾಹಿತ್ಯಕ್ಕೆ ಕಾಣಿಕೆಯಾಗಿ ಕೊಟ್ಟು ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅಜರಾಮರರಾಗಿದ್ದಾರೆ. 'ಜಗವೆಲ್ಲ ನಗುತಿರಲಿ, ಜಗದಳುವು ನನಗಿರಲಿ' ಎಂಬುದು ಅವರ ಜೀವನ ಧ್ಯೇಯವಾಗಿತ್ತು. ಬಹಳ ಕಷ್ಟ-ಕಾರ್ಪಣ್ಯಗಳನ್ನು ಸ್ಥೈರ್ಯದಿಂದ ಎದುರಿಸುತ್ತ ಉತ್ತಮ ಕವನ ರಚಿಸಿ, ಬಾಳಿ ಬೆಳಗಿದ ಹಿರಿಯ ಚೇತನ.

ಈಶ್ವರ ಸಣ್ಣಕಲ್ಲ ಅವರು ೧೯೦೬ ರಲ್ಲಿ ಜನಿಸಿ, ಬಾಲ್ಯದಲ್ಲಿ ತಂದೆಯನ್ನು ಕಳೆದುಕೊಂಡರೂ ಸಾಹಿತ್ಯಾಭಿರುಚಿಯನ್ನು ಉಳಿಸಿ, ಬೆಳೆಸಿಕೊಂಡವರು. ಗಂಗಾಧರ ಮಡಿವಾಳೇಶ್ವರ ಚುರಮರಿ ಅವರು ಬಾಣಭಟ್ಟನ ಸಂಸ್ಕೃತ 'ಕಾದಂಬರಿ'ಯನ್ನು ಕನ್ನಡಕ್ಕೆ ಅನುವಾದಿಸಿದ್ದರು. ಈಶ್ವರ ಅದನ್ನು ಅಭ್ಯಾಸಮಾಡಿ ಬಹಳ ಪ್ರಭಾವ ಹೊಂದಿದರು. ಮೆಟ್ರಿಕ್ ಪಾಸಾಗಿ ಮುಂದಿನ ಅಭ್ಯಾಸಕ್ಕಾಗಿ ಶಾಂತಿನಿಕೇತನಕ್ಕೆ ಹೋಗಲು ಬಯಸಿದ್ದರು. ಆದರೆ ಬಡತನದ ಕಾರಣದಿಂದ ಸಾಧ್ಯವಾಗದೇ ಹೋಯಿತು. ಜೀವನವನ್ನು ಪತ್ರಕರ್ತನಾಗಿ ಪ್ರಾರಂಭಿಸಲು ಹಳಕಟ್ಟಿಯವರು ನೆರವಾದರು. ಕವನ ಹಾಗೂ ಇತರ ಸಾಹಿತ್ಯ ರಚನೆ ಜೊತೆಗೆ ನಡದೇ ಇತ್ತು. ಅನಂತರ ಹಂಗಾಮಿ ಅಧ್ಯಪಕರಾಗಿ, ಅನಂತರ ಮುಂಬಯಿ ಸರಕಾರದ ಸಹಕಾರಿ ಶಿಕ್ಷಣದ ಮೇಲ್ವಿಚಾರಕರಾಗಿ ಸೇವೆ ಸಲ್ಲಿಸಿದರು. ಆದರೆ ವಿಧಿ ಅವರಿಗೆ ನೆಮ್ಮದಿಯಿಂದ ಬಾಳಲು ಬಿಡಲಿಲ್ಲ. ಆದರೇನು ಕಾವ್ಯರಚನೆ ತಡೆಗಟ್ಟಲು ಯಾರಿಗೂ ಸಾಧ್ಯವಾಗಲಿಲ್ಲ. ಬರಹಗಾರರಾಗಿ ಕವನ, ಕಾದಂಬರಿ, ಜೀವನ ಚರಿತ್ರೆ ರಚನಾಕಾರರಾಗಿ ಹಾಗೂ ಅನುವಾದಕರಾಗಿ ಸುಮಾರು ೧೬ ಕೃತಿಗಳನ್ನು ಪ್ರಕಟಿಸಿದ್ದಾರೆ. ಇದಕ್ಕೆ ಅವರು ಪೂರ್ವಭಾವಿಯಾಗಿ ಸ್ವಪ್ರಯತ್ನದಿಂದ ಕನ್ನಡ, ಇಂಗ್ಲೀಷ್, ಮರಾಠಿ ಭಾಷೆಗಳನ್ನು ಅಭ್ಯಾಸಮಾಡಿ ಪಾಂಡಿತ್ಯಗಳಿಸಿದರು. ಸಾಹಿತ್ಯ ರಚಿಸಿಕೊಟ್ಟು ಜನಮನ್ನಣೆಗಳಿಸಿದರು. ಅಭಿನಂದನೆ ಪ್ರಶಸ್ತಿಗಳನ್ನೂ ಪಡೆದರು.

೧೯೦೬ ರಂದು (೨೦-೧೨-೧೯೦೬) ಗೋಕಾಕ ತಾಲೂಕಿನ ಯಾದವಾಡದಲ್ಲಿ ಮಹಾರುದ್ರಪ್ಪ-ನೀಲಾಂಬಿಕೆಯರಿಗೆ ಮಗನಾಗಿ ಜನಿಸಿದ ಈಶ್ವರ ಸಣಕಲ್ಲ ಚಿಕ್ಕವರಿದ್ದಾಗಲೇ ತಂದೆಯನ್ನು ಕಳೆದುಕೊಂಡರು. ಅಜ್ಜ (ಮಲ್ಲಪ್ಪ) ಮತ್ತು ತಾಯಿ ನೀಲವ್ವ ಮಗುವನ್ನು ಪ್ರೀತಿಯಿಂದ ಪೋಷಿಸಿದರು. ತಂದೆ ಮಹಾರುದ್ರಪ್ಪ ರಬಕವಿಯವರು. ನೇಕಾರ ವೃತ್ತಿಯಲ್ಲಿ ತೊಡಗಿದ್ದರೂ ಬಡವರು. ತಾಯಿ ಕೂಲಿ ಮಾಡಿ

ಬಡ ಕುಟುಂಬಕ್ಕೆ ಸಹಾಯ ಮಾಡುತ್ತಿದ್ದರು. ಯಾದವಾಡದಲ್ಲಿ ಪ್ರಾಥಮಿಕ ಶಿಕ್ಷಣ ಪಡೆದ ಈಶ್ವರಪ್ಪ. ರಬಕವಿಯಲ್ಲಿ ಮಾಧ್ಯಮಿಕ ಶಿಕ್ಷಣ ಪಡೆದರು. ಬಾಲ್ಯದಲ್ಲಿಯೇ ಓದುವ ಹವ್ಯಾಸ ಬೆಳೆಸಿಕೊಂಡು, ಕವಿತಾ ರಚನೆಯನ್ನು ಮಾಡಲು ಪೂರ್ವಭಾವಿಯಾದ ಮನದ ಒಲವನ್ನು ವ್ಯಕ್ತಪಡಿಸತೊಡಗಿದರು. ಬೆಳಗಾವಿಗೆ ಬಂದು ಪ್ರೌಢಶಿಕ್ಷಣ ಪಡೆದು ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತರು. ಆದರೆ ಪಾಸಾಗಲಿಲ್ಲ.

ಶಾಂತಿನಿಕೇತನಕ್ಕೆ ಹೋಗಿ ರವೀಂದ್ರನಾಥ ಠಾಗೂರ್ ಅವರ ಸನಿಹದಲ್ಲಿದ್ದು ಹೆಚ್ಚಿನ ಜ್ಞಾನ ಪಡೆಯುವ ಮಹದಾಸೆ ಅವರಿಗಿತ್ತು. ಆ ಕುರಿತು ಶಕ್ತಿಮೀರಿ ಪ್ರಯತ್ನ ಕೂಡಾ ಮಾಡಿದರು. ಹೇಗೋ ಪುಣೆಯ ವರೆಗೆ ಹೋದರು. ಆದರೆ ಅವರ ಮಿತ್ರರೂ ಬಡವರಾದ್ದರಿಂದ, ಅವರು ಶಾಂತಿನಿಕೇತನಕ್ಕೆ ಹೋಗುವುದನ್ನು ಬಿಟ್ಟುಕೊಟ್ಟು ಮರಳಿ ರಬಕವಿಗೆ ಬರಬೇಕಾಯಿತು. ಆಗಿನ ಕಾಲದಲ್ಲಿ ಕೆಲವು ಪ್ರತಿಭಾವಂತ ಯುವಕರಿಗೆ ಶಾಂತಿನಿಕೇತನದಲ್ಲಿದ್ದು ಜ್ಞಾನಾರ್ಜನೆ ಮಾಡುವುದು ಜೀವನದ ಮಹತ್ವಾಕಾಂಕ್ಷೆಯಾಗಿರುತ್ತಿತ್ತು. ಕರ್ನಾಟಕದಿಂದಲೂ ಹಲವಾರು ಯುವಕರು ಶಾಂತಿನಿಕೇತನದಲ್ಲಿ ಅಭ್ಯಾಸ ಮಾಡಿ ಬರುತ್ತಿದ್ದರು. ಸಣಕಲ್ಲರು ತಾವೇ ಬಹಳ ಪ್ರಯತ್ನಪಟ್ಟು ಕನ್ನಡ, ಇಂಗ್ಲಿಷ್ ಮತ್ತು ಮರಾಠೀ ಭಾಷೆಗಳನ್ನು ಅಭ್ಯಾಸ ಮಾಡಿ, ಪಾಂಡಿತ್ಯ ಗಳಿಸಿದರು. ೧೯೨೯ ರಲ್ಲಿ ಮತ್ತೆ ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತು ಪಾಸಾದರು.

ಕೂಡಲೇ ಕೊಲ್ಲಾಪುರಕ್ಕೆ ಹೋಗಿ ರಾಜಾರಾಮ ಕಾಲೇಜ್ ಸೇರಿದರು. ಆದರೆ ಬಡತನ ಹಾಗೂ ವಿಧಿ ಅವರ ಬೆನ್ನು ಬಿಡಲಿಲ್ಲ. ಕಾಲೇಜು ಫೀ ಕೊಡಲು ಸಾಧ್ಯವಾಗದೆ ಮರಳಿ ರಬಕವಿಗೆ ಬಂದರು. ಈಗ ಅವರಿಗೆ ನೌಕರಿ ಮಾಡಿ ಹೊಟ್ಟೆ ತುಂಬಿಕೊಳ್ಳದೇ ಬೇರೆ ಉಪಾಯವೇ ಇರಲಿಲ್ಲ. ಹಲವರನ್ನು ಭೇಟಿಯಾಗಿ ನೌಕರಿಗಾಗಿ ಪ್ರಯತ್ನಿಸಿದರು. ಕೊನೆಗೆ ಸಣಕಲ್ಲರ ಮೇಲೆ ದಯೆ ತೋರಿ, ಹಳಕಟ್ಟಿಯವರು ನೌಕರಿ ಕೊಟ್ಟರು. ತಾವೇ ಕಷ್ಟಪಟ್ಟು ನಡೆಸುತ್ತಿದ್ದ 'ಶಿವಾನುಭವ' ಮತ್ತು 'ನವಕರ್ನಾಟಕ' ಪತ್ರಿಕೆಗಳ ಪ್ರಕಟಣಾಕಾರ್ಯದಲ್ಲಿ ತಮಗೆ ಸಹಾಯಕನನ್ನಾಗಿಸಿಕೊಂಡರು. ಈಗ ಅವರಿಗೆ ತಾವು ಪಡೆದ ಪಾಂಡಿತ್ಯ ಮತ್ತು ಕವಿತಾ ರಚನಾ ಸಾಮರ್ಥ್ಯಗಳು ಬಹಳ ನೆರವಾದುವು. ಕವಿತಾ ರಚನೆಗೆ ಪ್ರೇರಣೆಯೂ ದೊರೆಯಿತು. ಲೇಖನ ಅನುವಾದಗಳಿಗೆ ಅನುವೂ ದೊರೆಯಿತು. ಗುಪ್ತನಾಮದಲ್ಲಿ ಬರೆದು ಪ್ರಕಟಿಸುತ್ತಿದ್ದ ಸಣಕಲ್ಲರ ಕವನಗಳನ್ನು ಹಳಕಟ್ಟಿ ಅವರು ಓದಿ ಸಂತೋಷಪಡುತ್ತಿದ್ದರು. ಸ್ವಂತ ಹೆಸರಿನಲ್ಲಿ ಈ ಕವಿತೆಗಳನ್ನು ಪ್ರಕಟಿಸಲು ಸೂಚಿಸಿದರಷ್ಟೇ ಅಲ್ಲ, 'ಕೋರಿಕೆ' ಎಂಬ ಶೀರ್ಷಿಕೆಯಲ್ಲಿ ಸಣಕಲ್ಲರ ಪ್ರಥಮ ಕವನ ಸಂಕಲನವನ್ನು ೧೯೩೪ ರಲ್ಲಿ ಪ್ರಕಟಿಸಿಬಿಟ್ಟರು. ಕಾವ್ಯಕ್ಷೇತ್ರದಲ್ಲಿ ಅವರ ಪ್ರತಿಭೆಯನ್ನು ಪರಿಚಯಿಸಲು ನೆರವಾದರು. ಈ ಸಂಕಲನದಿಂದ ಸಣಕಲ್ಲರು ಜನಮನವನ್ನು ಗೆದ್ದರು. ಕನ್ನಡ ನಾಡಿನ ಶ್ರೇಷ್ಠ ಕವಿಯ ಸಾಲಿಗೆ ಸೇರಿದರು.

ಜಗವೆಲ್ಲ ನಗುತಿರಲಿ
ಜಗದಳುವು ನನಗಿರಲಿ
ನಾನಳಲು ಜಗವೆನ್ನನೆತ್ತಿಕೊಳ್ಳದೆ ?
ನಾನಕ್ಕು, ಜಗದಳಲು ನೋಡಬಹುದೇ ?

ಸಣಕಲ್ಲರ ಕವನದ ಈ ಸಾಲುಗಳು ಅವರು ಕಷ್ಟದ ಬಾಳಿನಲ್ಲಿ ಗೋಳಾಡುತ್ತಿದ್ದಾಗಲೂ ಅವರು ಪ್ರಕಟಿಸಿದ, ನಂಬಿದ, ನಂಬಿದಂತೆ ಬಾಳಿದ ಜೀವನ ಧ್ಯೇಯ ಸಾರುತ್ತವೆ.

ಹಳ್ಳಿಕಟ್ಟಿಯವರು ತಮ್ಮ ಪತ್ರಿಕೆಗಳನ್ನು ಬಹಳ ಧೈರ್ಯದಿಂದ, ಆರ್ಥಿಕ ಹಾನಿಯನ್ನು ಸಹಿಸಿಯೂ ಪ್ರಕಟಿಸುತ್ತಿದ್ದರು. ಸಣಕಲ್ಲರಿಗೆ ಇದು ತಿಳಿದಿತ್ತು. ಆದುದರಿಂದ ಅವರಿಗೆ ದೊರೆತಷ್ಟು ಗೌರವ ಧನದಿಂದ ತೃಪ್ತರಾಗಿ ಬಡತನದಲ್ಲಿ ಬಾಳುತ್ತಿದ್ದರು. ನೌಕರಿ ದೊರಕಿಸಲು ಅಲ್ಲಲ್ಲಿ ಪ್ರಯತ್ನಿಸುತ್ತಿದ್ದರು. ಮೂರುವರೆ ವರುಷ ಹಂಗಾಮಿ ಪ್ರಾಧ್ಯಾಪಕರಾಗಿ ದುಡಿದು ಮತ್ತೆ ನಿರುದ್ಯೋಗಿಯಾದರು. ಆ ಕಾಲದಲ್ಲಿ 'ಗ್ರಾಮ ಸೇವಕ' 'ಹಳ್ಳಿಯ ಆಳು' ಎಂಬ ಪತ್ರಿಕೆಗಳಲ್ಲಿ ಉಪ ಸಂಪಾದಕರಾಗಿ ದುಡಿದರು. ಆದರೆ ಬರುವ ಆದಾಯದಿಂದ ಹೊಟ್ಟೆ ತುಂಬಿಕೊಳ್ಳುವುದು ಸಾಧ್ಯವಾಗುತ್ತಿರಲಿಲ್ಲ. ಅಂತೂ ಕೊನೆಗೆ ಕಡಿಮೆ ಸಂಬಳ ದೊರೆಯುವ ಸರಕಾರೀ ನೌಕರಿ ದೊರೆಯಿತು. ಮುಂಬೈ-ಕರ್ನಾಟಕದ ನಾಲ್ಕು ಜಿಲ್ಲೆಗಳ ಸಹಕಾರಿ ಶಿಕ್ಷಣದ ಮೇಲ್ವಿಚಾರಕರಾಗಿ ನೇಮಿಸಲ್ಪಟ್ಟರು. ಒಂದು ರೀತಿಯಿಂದ ಮನಸ್ಸಿಗೆ ನೆಮ್ಮದಿ ಉಂಟಾಯಿತು. ಆದರೆ ವಿಧಿ ಅವರ ಬೆನ್ನು ಬಿಡಲಿಲ್ಲ. ೧೯೩೮ ರಿಂದ ೧೯೬೨ರ ವರೆಗೆ ಅವರು ದುಡಿಯುತ್ತಿದ್ದಾಗ ಹಲವಾರು ತೊಂದರೆಗಳನ್ನು ಎದುರಿಸಬೇಕಾಯಿತು. ಉದಾಹರಣೆಗೆ ಅವರ ಸೇವಕನೊಬ್ಬ ಕೃತಘ್ನನಾಗಿ ವರ್ತಿಸಿದನು. ತಾಂತ್ರಿಕ ದೋಷದಿಂದ ಅವರ ನೌಕರಿಯಲ್ಲಿಯೂ ಅನ್ಯಾಯವಾಗಿ ನಿವೃತ್ತಿ ವೇತನ ದೊರೆಯುವುದು ಕಡಿಮೆಯಾಯಿತು. ಮೊದಲ ಹೆಂಡತಿ ತೀರಿಕೊಂಡಾಗ, ಮರುಮದುವೆ ಮಾಡಿಕೊಂಡರು.

ಬಡತನದಲ್ಲಿ ಹೆಚ್ಚು ಮಕ್ಕಳನ್ನು ಪಡೆದದ್ದು ಹೆಚ್ಚು ಕಷ್ಟದಾಯಕವಾಯಿತು. ಇಂಥ ತೊಂದರೆಯಲ್ಲಿ ಸಿಲುಕಿದರೂ ಅವರು ಲೇಖನಿಯನ್ನು ಬಿಟ್ಟುಕೊಡಲಿಲ್ಲ. ಬಹುಶಃ ತಮ್ಮ ಕಷ್ಟ ಮರೆಯಲು ಅವರಿಗೆ ಸಾಹಿತ್ಯ ರಚನಾ ಕಾರ್ಯವೇ ನೆರವಾಗಿರಬಹುದು.

> "ಅಳಲದಿರು ಬಡವನೆಂದಳಲದಿರು ನೀ
> ಇಳೆಯಾಣ್ಮನಾ ದಿವ್ಯ ಸಂಪದವದಿರಲು"

ಎಂಬ ಅವರ ಕವನದ ಸಾಲುಗಳನ್ನು ಸ್ಮರಿಸಿಕೊಳ್ಳಬಹುದು. ಅವರು ಬರವಣಿಗೆ ಮತ್ತು ಅನುವಾದ ಕಾರ್ಯಗಳನ್ನು ಅವಿರತವಾಗಿ ಮಾಡುತ್ತಲೇ ಬಾಳಿದರು. ಅವರ ಮೂರು ಕವನ ಸಂಕಲನಗಳು ಪ್ರಕಟವಾಗಿವೆ. ಕೋರಿಕೆ (೧೯೩೪), ಹುಲ್‌ಕಲ್ಗೆಗೆ ಬಟ್ಟೆ (೧೯೬೨) ಮತ್ತು ಕಿಡಿ (೧೯೮೦) ಅವರ ಪ್ರಕಟವಾಗದ ಹಲವಾರು ಕವನಗಳು ಪ್ರಕಟವಾಗಿದ್ದರೆ, ಕನ್ನಡಿಗರು ಅವರ ಇನ್ನೂ ನೂರಾರು ಕವನಗಳನ್ನು ಓದಿ ನಲಿಯಲು ಸಾಧ್ಯವಾಗುತ್ತಿತ್ತು.

ಸಣಕಲ್ಲರು ಬೇರೆ ಭಾಷೆಗಳಿಂದ ಕನ್ನಡಕ್ಕೆ ಉತ್ತಮ ಕೃತಿಗಳನ್ನು ಸಮರ್ಥವಾಗಿ ಅನುವಾದಿಸಿ ಕೊಟ್ಟಿದ್ದಾರೆ. ಬ್ರಹ್ಮಚರ್ಯವೇ ಜೀವನ, ವೀರ್ಯನಾಶವೇ ಮೃತ್ಯು (೧೯೩೦), ಗ್ರಾಮೋದ್ಧಾರ (೧೯೩೫), ಸಂಸಾರ ಸಮರ (೧೯೩೯), ಬ್ಯಾಂಕುಗಳ ವ್ಯವಹಾರ (೧೯೪೦) ನೆದರ್‌ಲ್ಯಾಂಡಿನಲ್ಲಿಯ ಸಹಕಾರ ನಸುನೋಟ (೧೯೫೩) ಮೊದಲಾದವು ಅವರ ಉತ್ತಮ

ಅನುವಾದಿತ ಕೃತಿಗಳಾಗಿವೆ. ಹಲವಾರು ಆತ್ಮೀಯರು ಇವರಿಂದ ಅನುವಾದ ಕಾರ್ಯ ಮಾಡಿಸಿಕೊಂಡು ಪ್ರತಿಫಲ ಕೊಡದಿದ್ದರೂ ಅವರನ್ನು ಸಣಕಲ್ಲರು ಬಹಿರಂಗವಾಗಿ ದೂರುತ್ತಿರಲಿಲ್ಲ. ಅನುವಾದ ಕಾರ್ಯ ಉತ್ತಮವಾಗಿದ್ದರೂ ಅವರಿಗೆ ಆರ್ಥಿಕವಾಗಿ ಜೀವನದಲ್ಲಿ ಅದು ಸಾಕಷ್ಟು ಹಣ ದೊರಕಿಸಿಕೊಡಲಿಲ್ಲವೆಂಬುದು ಸತ್ಯ. ಪ್ರಕಾಶಕರೊಬ್ಬರು ಗರಗದ 'ಶ್ರೀ ಮಡಿವಾಳ ಶಿವಯೋಗಿ' ಜೀವನವನ್ನು ಇವರಿಂದ ರಚಿಸಿಕೊಂಡು ಪ್ರತಿಫಲ ಕೊಡದಿದ್ದುದು ಸರ್ವವಿದಿತ. ಐದು ವರ್ಷ ಅದಕ್ಕಾಗಿ ಅಭ್ಯಾಸ ಮಾಡಿ ಗ್ರಂಥ ರಚಿಸಿದ್ದರು. ಸರಕಾರೀ ನೌಕರಿಯಿಂದ ಬಿಡುಗಡೆ ಪಡೆದ ನಂತರ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸಣಕಲ್ಲರು 'ವಚನ ಸಂಶೋಧನೆ' ವಿಭಾಗದಲ್ಲಿ ಭಾಷಾತಜ್ಞರೆಂದು ನೇಮಕಗೊಂಡರು. ೧೯೬೭ ರಿಂದ ೧೯೭೭ರ ವರೆಗೆ ಅವರು ಮಾಡಿದ ಕಾರ್ಯ ಸ್ತುತ್ಯಾರ್ಹವಾಗಿದೆ. ಅಲ್ಲಿಯ ಮಿತ್ರರೊಡನೆ ಸಾಹಿತ್ಯ ಸಲ್ಲಾಪದಲ್ಲಿ ಸಂತೋಷ ಪಡೆಯುತ್ತಿದ್ದರು. ಉತ್ತಮ ಕವಿಯಲ್ಲಿರಬೇಕಾದ ಪ್ರತಿಭೆ ಇವರಲ್ಲಿತ್ತು. ಜೊತೆಗೆ ಹಾಸ್ಯಪ್ರಜ್ಞೆಯೂ ಇವರಲ್ಲಿತ್ತು. ಆದರೆ ಒಮ್ಮೆ ಒಂದು ವಿಚಾರಕ್ಕೆ ಕಟ್ಟುಬಿದ್ದರೆ (ಅದು ತಪ್ಪಾಗಿದ್ದರೂ) ತಿದ್ದಿಕೊಳ್ಳದೇ ಅದನ್ನೇ ಸಾಧಿಸುವ ಇವರ ಹಟದ ಸ್ವಭಾವವು ಹಲವಾರು ಮಿತ್ರರನ್ನು ಕಳೆದುಕೊಳ್ಳುವಂತೆ ಮಾಡಿತು. ಜೀವನದಲ್ಲಿ ಹೆಚ್ಚು ಕಡಿಮೆಯಾದಲ್ಲಿ ಹೊಂದಾಣಿಕೆ ಮಾಡಿಕೊಂಡರೆ ಸುಖವಾಗಿ ಬಾಳಬಹುದೆಂಬುದನ್ನು ಅವರು ನಂಬುತ್ತಿರಲಿಲ್ಲ, ಪಾಲಿಸುತ್ತಿರಲಿಲ್ಲ. ಇದನ್ನು ದೋಷವೆನ್ನುವುದಕ್ಕಿಂತ ಅವರ ಜೀವನ ಧೋರಣೆ ಎನ್ನುವುದು ಸರಿಯಾದೀತು.

ಬೆಳಗಾವಿಯ ಶ್ರೀ ನಾಗನೂರ ರುದ್ರಾಕ್ಷಿ ಮಠದ ಅಧಿಪತಿಗಳಾದ ಡಾ. ಸದಾಶಿವ, ಡಾ. ನಾಗಲೋಟಿಮಠ, ಡಾ. ಸುಭಾಸ ನೇಗಿನಹಾಳ, ಡಾ. ವೈ. ಬಿ. ಕುಲಗೋಡ ಮುಂತಾದವರು ಸಣಕಲ್ಲರಿಗೆ ಅವರ ಕಷ್ಟದ ದಿನಗಳಲ್ಲಿ ನೆರವಾದರು. ರಬಕವಿಯ ಲಯನ್ಸ್ ಕ್ಲಬ್ ೧೯೮೩ ರಲ್ಲಿ ಭವ್ಯ ಸನ್ಮಾನ ಮಾಡಿತು. ಆಗ ಡಾ. ಎಂ. ಎಸ್. ಸುಂಕಾಪುರ ಮುಖ್ಯ ಅತಿಥಿಗಳಾಗಿ ಬಂದು ಗೌರವಿಸಿದ್ದರು.

ಸಣಕಲ್ಲರ ಹದಿನಾರು ಕೃತಿಗಳಲ್ಲಿ 'ಬಟ್ಟೆ' ಕವನ ಸಂಕಲನಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ ದೊರೆತಿದೆ. ಅವರಿಗೆ ಸಲ್ಲಬೇಕಾಗಿದ್ದ ಸಾಮಾಜಿಕ ಮನ್ನಣೆ, ಗೌರವ, ಸನ್ಮಾನ ಸಾಕಷ್ಟು ಲಭಿಸಲಿಲ್ಲ. ಅದಕ್ಕಾಗಿ ನೊಂದವರೂ ಅವರಲ್ಲ.

ಅವರ ಬವಣೆಗೆ ಇನ್ನೊಂದು ಕಾರಣ, ಅವರ ಸಾಂಸಾರಿಕ ಜೀವನದಲ್ಲಿ ಉಂಟಾದ ವಿರಸ ಎನ್ನಬಹುದು. ಅದು ವಿಕೋಪಕ್ಕೆ ಹೋಗಿ ಸಣಕಲ್ಲ ಗೃಹ ತ್ಯಾಗ ಮಾಡಿ ಊರೂರು ತಿರುಗಿದರು. ಕೊನೆಗಾಲದಲ್ಲಿ ಅವರ ಮನಸ್ಸಿಗೆ ನೆಮ್ಮದಿ ಇರಲಿಲ್ಲ. ದೈಹಿಕ ಕಾಯಿಲೆಯಿಂದಲೂ ಬಹಳ ತೊಳಲಾಡಿದರು. ಮುಂದೆ ಕೆಲದಿನ ಹೇಗೊ ಜೀವ ಹಿಡಿದು ಡಿಸೆಂಬರ್ ೧೩, ೧೯೮೮ ರಲ್ಲಿ ಕೊನೆಯುಸಿರೆಳೆದರು. ತಮ್ಮ ಕಾವ್ಯಕಾರಣದಿಂದ ಕನ್ನಡ ಸಾಹಿತ್ಯದಲ್ಲಿ ಅಜರಾಮರವಾಗಿ ಉಳಿದರು.

# ಈಶ್ವರ ಸಣಕಲ್ಲ ಅವರ ಜೀವನ ವಿವರ

**ಜನನ :** ೧೯೦೬ (ಡಿಸೆಂಬರ ೨೦, ೧೯೦೬) ಯಾದವಾಡ ಗ್ರಾಮದಲ್ಲಿ (ಬೆಳಗಾವಿ ಜಿಲ್ಲೆ).

**ತಂದೆ-ತಾಯಿ :** ಮಹಾರುದ್ರಪ್ಪ-ನೀಲಾಂಬಿಕೆ.

**ಶಿಕ್ಷಣ :** ಪ್ರಾಥಮಿಕ ಶಿಕ್ಷಣ ಯಾದವಾಡ ಗ್ರಾಮದಲ್ಲಿ (ಗೋಕಾಕ ತಾಲೂಕು). ಮಾಧ್ಯಮಿಕ ಶಿಕ್ಷಣ ರಬಕವಿಯಲ್ಲಿ. ಪ್ರೌಢ ಶಿಕ್ಷಣ ಬೆಳಗಾವಿಯಲ್ಲಿ. ೧೯೨೯ ರಲ್ಲಿ ಮ್ಯಾಟ್ರಿಕ್ ಪರೀಕ್ಷೆ ಪಾಸಾದದ್ದು. ಕೊಲ್ಹಾಪುರದ ರಾಜಾರಾಮ ಕಾಲೇಜಿಗೆ ಸೇರಿದರೂ ಶಿಕ್ಷಣ ಮುಂದುವರಿಸಲು ಆರ್ಥಿಕ ಪರಿಸ್ಥಿತಿ ಅವಕಾಶ ಮಾಡಿಕೊಡಲಿಲ್ಲ.

**ಸ್ವಪರಿಶ್ರಮದಿಂದ ಮನನ ಮಾಡಿದ ಭಾಷೆಗಳು :** ಕನ್ನಡ, ಇಂಗ್ಲಿಷ್, ಮರಾಠಿ.

**ಪತ್ರಿಕಾ ಕಾರ್ಯ :** ಫ. ಗು. ಹಳಕಟ್ಟಿಯವರು ಪ್ರಕಟಿಸುತ್ತಿದ್ದ 'ಶಿವಾನುಭವ' 'ನವಕರ್ನಾಟಕ' ಪತ್ರಿಕೆಗಳ ಸಂಪಾದನಾ ಕಾರ್ಯದಲ್ಲಿ ಅವರಿಗೆ ಸಹಾಯಕರಾಗಿ ಸೇವೆ.

**ಕವಿತಾ ರಚನೆ :** ಗುಪ್ತ ನಾಮದಲ್ಲಿ ಅನೇಕ ಕವನ ರಚಿಸಿ ಪ್ರಕಟಿಸಿದರು. ಹಳಕಟ್ಟಿಯವರ ಸೂಚನೆಯಂತೆ ಸ್ವಂತ ಹೆಸರಿನಲ್ಲಿ ಕವಿತಾ ಪ್ರಕಟಣೆ ಪ್ರಾರಂಭಿಸಿದರು. ಪ್ರಥಮ ಕವನ ಸಂಕಲನ 'ಕೋರಿಕೆ' ಪ್ರಕಟಣೆ ೧೯೩೪ರಲ್ಲಿ.

**ಹಂಗಾಮಿ ಶಿಕ್ಷಕ :** ರಬಕವಿಯಲ್ಲಿ ಮೂರುವರೆ ವರ್ಷ.

**ಉಪ ಸಂಪಾದಕ :** 'ಗ್ರಾಮ ಸೇವಕವ, 'ಹಳ್ಳಿಯ ಆಳು', ಪತ್ರಿಕೆಗಳು.

**ಸಹಕಾರಿ ಶಿಕ್ಷಣದ ಮೇಲ್ವಿಚಾರಕ :** ಖಾಯಂ ನೌಕರಿ, ಮುಂಬಯಿ ಕರ್ನಾಟಕದ ನಾಲ್ಕು ಜಿಲ್ಲೆಗಳ ಮೇಲ್ವಿಚಾರಕ (೧೯೩೩-೬೨)

**ಭಾಷಾತಜ್ಞ :** ಕರ್ನಾಟಕ ವಿಶ್ವವಿದ್ಯಾಲಯದ ವಚನ, ಸಂಶೋಧನೆ ವಿಭಾಗದಲ್ಲಿ ಸೇವೆ (೧೯೬೨-೭೨).

**ಬಹುಮಾನ :** ರಾಜ್ಯ ಸಾಹಿತ್ಯ ಅಕಾಡೆಮಿಯಿಂದ 'ಬಟ್ಟೆ' ಕವನ ಸಂಕಲನಕ್ಕೆ.

**ಸಾರ್ವಜನಿಕ ಸನ್ಮಾನ :** ೧೯೮೩ (೨೯-೬-೧೯೮೩) ರಬಕವಿಯಲ್ಲಿ ಲಯನ್ಸ್ ಕ್ಲಬ್‌ನ ನೇತೃತ್ವದಲ್ಲಿ.

**ಮರಣ :** ೧೯೮೪ (೩-೧೨-೧೯೮೪) ಹುಬ್ಬಳ್ಳಿಯಲ್ಲಿ.

**ಈಶ್ವರ ಸಣಕಲ್ಲ ಅವರ ಕೃತಿಗಳು :** ಕವನ ಸಂಕಲನ : ೧. ಕೋರಿಕೆ (೧೯೩೪), ೨. ಹುಲ್‌ಕಲ್ಗೆಗೆ ಬಟ್ಟೆ (೧೯೬೨), ೩. ಕಿಡಿ (೧೯೮೦).

**ಜೀವನ ಚರಿತ್ರೆ :** ಗರಗದ 'ಶ್ರೀ ಮಡಿವಾಳ ಶಿವಯೋಗಿ'

**ಅನುವಾದ (ಬೇರೆ ಬೇರೆ ಭಾಷೆಗಳಿಂದ) :** ಬ್ರಹ್ಮಚರ್ಯವೇ ಜೀವನ, ವೀರ್ಯನಾಶವೇ ಮೃತ್ಯು (೧೯೩೦), ಗ್ರಾಮೋದ್ಧಾರ (೧೯೩೫), ಸಂಸಾರ ಸಮರ (೧೯೩೭), ಬ್ಯಾಂಕುಗಳ ವ್ಯವಹಾರ (೧೯೪೦), ನೆದರ್‌ಲ್ಯಾಂಡಿನಲ್ಲಿಯ ಸಹಕಾರದ ನಸುನೋಟ (೧೯೫೩).

✱ ✱ ✱

# ಡಾ. ಡಿ. ಎಸ್. ಕರ್ಕಿ

ಕನ್ನಡ ನವೋದಯ ಸಾಹಿತ್ಯ ಪರಂಪರೆಯಲ್ಲಿ ಕಾವ್ಯ ರಚಿಸಿ ಬಹಳ ಜನಪ್ರಿಯರಾಗಿರುವ ಹಿರಿಯ ಕವಿಗಳ ಪಂಕ್ತಿಯಲ್ಲಿ ಡಾ. ಡಿ. ಎಸ್. ಕರ್ಕಿ ಅವರೂ ಒಬ್ಬರು. ವಿಶೇಷವೆಂದರೆ ಕೊನೆಯ ವರೆಗೆ ನವೋದಯದ ಪರಂಪರೆಯಲ್ಲಿಯೇ ಅವರು ಕವನ ರಚಿಸಿದ್ದು. ಕಾವ್ಯ ರಚನೆಯ ರೀತಿಯಲ್ಲಿ ಬದಲಾವಣೆಗಳನ್ನು, ಆಂದೋಲನಗಳನ್ನು ಕಂಡರೂ ತಮ್ಮ ಬದ್ಧತೆಯನ್ನು ನವೋದಯ ಪರಂಪರೆಗೆ ಮೀಸಲಾಗಿರಿಸಿದ ಧೀರರವರು.

"ಹಚ್ಚೇವು ಕನ್ನಡದ ದೀಪ, ಕರುನಾಡ ದೀಪ, ಸಿರಿ ನುಡಿಯ ದೀಪ, ಒಲವೆತ್ತಿ ತೋರುವ ದೀಪ" ಎಂದು ಸ್ವಾತಂತ್ರ್ಯಪೂರ್ವದಲ್ಲಿಯೇ ಹಾಡಿದ ಕವಿ ಇವರು. ಇಂಥ ಇನ್ನೂ ಹಲವಾರು ಕಾವ್ಯ ದೀಪಗಳನ್ನು ಬೆಳಗಿಸಿ ನಾಡಿನ ಸುಪ್ರಸಿದ್ಧ ಕವಿಗಳೆನಿಸಿಕೊಂಡರು. ಉಚ್ಚ ಶಿಕ್ಷಣ ಪಡೆದು ಆದರ್ಶ ಪ್ರಾಧ್ಯಾಪಕರೆನಿಸಿಕೊಂಡರು.

ಸಾಹಿತ್ಯ ಲೋಕದಲ್ಲಿ 'ಡಿ. ಎಸ್. ಕರ್ಕಿ' ಎಂದು ಸುಪ್ರಸಿದ್ಧರಾಗಿದ್ದ ಕರ್ಕಿ ಅವರ ಸಂಪೂರ್ಣ ಹೆಸರು ದುಂಡಪ್ಪ ಸಿದ್ಧಪ್ಪ ಕರ್ಕಿ. ೧೯೦೭ ರಲ್ಲಿ (೧೫-೧೧-೧೯೦೭) ಹಿರೇಕೊಪ್ಪದಲ್ಲಿ ಜನಿಸಿದರು. ಹಿರೇಕೊಪ್ಪವು ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲೂಕಿನಲ್ಲಿದೆ. ಡಾ. ಕರ್ಕಿ ಅವರ ತಾಯಿಯ ಹೆಸರು 'ದುಂಡವ್ವ'. ಇವರು ತಂದೆಯನ್ನು ಬಾಲ್ಯದಲ್ಲಿಯೇ ಕಳಕೊಂಡರು. ಸೋದರ ಮಾವನ ಮನೆಯಲ್ಲಿ ಬಾಲ್ಯವನ್ನು ಕಳೆದರು. ಸೋದರ ಮಾವನು ಬೆಲ್ಲದ ಬಾಗೇವಾಡಿಯಲ್ಲಿರುತ್ತಿದ್ದನು. ಕರ್ಕಿ ಅವರು ಪ್ರಾಥಮಿಕ ಶಿಕ್ಷಣವನ್ನು ಅಲ್ಲಿಯೇ ಪಡೆದರು. ತಂದೆಯಂತೆ ಕರ್ಕಿ ಅವರು ಪ್ರತಿಭಾಶಾಲಿಯಾಗಿದ್ದರು. ಕರ್ಕಿ ಅವರ ಮಾಧ್ಯಮಿಕ ಶಿಕ್ಷಣ ಬೆಳಗಾವಿಯಲ್ಲಾದರೆ ಕಾಲೇಜು ಶಿಕ್ಷಣ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಆಯಿತು. ಎಂ. ಎ. ಪಾಸಾಗಿ ಕಾರವಾರದಲ್ಲಿ ಶಿಕ್ಷಣ ಇಲಾಖೆಯಲ್ಲಿ ಅಧ್ಯಾಪಕ ವೃತ್ತಿಯಲ್ಲಿ ತೊಡಗಿದರು. ಅನಂತರ ಬೆಳಗಾವಿಯಲ್ಲಿ ಕೆ.ಎಲ್.ಇ ಸೊಸಾಯಿಟಿಯ ಜಿ. ಎ. ಹೈಸ್ಕೂಲ್‌ನಲ್ಲಿ ಶಿಕ್ಷಕರಾದರು. ಕೆಲ ಸಮಯದಲ್ಲಿಯೇ ಅವರು ಬೆಳಗಾವಿಯ ಲಿಂಗರಾಜ್ ಕಾಲೇಜಿನಲ್ಲಿ ಟಿ. ಡಿ. ವಿಭಾಗದ ಮುಖ್ಯಸ್ಥರಾದರು. ಅನಂತರ ಹುಬ್ಬಳ್ಳಿಯ ಕಾಡಸಿದ್ಧೇಶ್ವರ ಆರ್ಟ್ಸ್ ಕಾಲೇಜಿನ ಪ್ರಿನ್ಸಿಪಾಲರೆಂದು ನೇಮಕಗೊಂಡರು. ನಿವೃತ್ತರಾಗುವವರೆಗೆ ಆ ಹುದ್ದೆಯಲ್ಲಿದ್ದು ಹಲವಾರು ಯುವಕರಿಗೆ, ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾದರು. ಅಚ್ಚುಮೆಚ್ಚಿನ ಶಿಕ್ಷಕರೆಂದು ಹೆಸರು ಪಡೆದರು.

ಇತ್ತ ವಿದ್ಯಾರ್ಥಿಯಾಗಿರುವಾಗಿನಿಂದಲೇ ಕಾವ್ಯ ರಚನೆ ಪ್ರಾರಂಭಿಸಿದ್ದರೂ ಕರ್ಕಿ ಅವರು ತಾವು ನಂಬಿದ ತತ್ವಗಳನ್ನು, ಧೋರಣೆಗಳನ್ನು ತಮ್ಮ ಕಾವ್ಯದಲ್ಲಿ ಸು. ರಂ. ಎಕ್ಕುಂಡಿ ಅವರ ಹಾಗೆ ನಿಷ್ಠೆಯಿಂದ ನಿರೂಪಿಸಿದ್ದಾರೆ. ಅವರು ಕಾವ್ಯ ರಚನೆಗೆ ತೊಡಗಿ ಮುಂದುವರಿಸಿದ ನವೋದಯ ಕಾಲದಲ್ಲಿ, ಸ್ವಾತಂತ್ರ್ಯ ಆಂದೋಲನ, ಕರ್ನಾಟಕದ ಏಕೀಕರಣದ ಚಳವಳಿಗಳು ಕವಿಗಳಿಗೆ ಪ್ರೇರಕವಾಗಿದ್ದವು.

ನಕ್ಷತ್ರಗಾನ ಸಂಕಲನದಲ್ಲಿ 'ನಕ್ಷತ್ರಗಾನ', 'ಕಸ್ತೂರಬಾ', 'ದಿವ್ಯ ಜ್ಯೋತಿ', 'ಮಲ್ಲಿಗೆಗೆ', 'ಕಾರವಾರ', 'ಹಚ್ಚೇವು ಕನ್ನಡದ ದೀಪ', 'ಮೋಡಗಳ ಹಾಡು', 'ಮೇಘೋಪಾಸನೆ', 'ಗರ್ಭಸ್ಥ ಶಿಶು', 'ಅಕ್ಕಮಹಾದೇವಿ' ಹೆಸರಿಸಲೇ ಬೇಕಾದ ಉತ್ತಮ ಕವನಗಳು. 'ಹಚ್ಚೇವು ಕನ್ನಡದ ದೀಪ' ಭಾವಗೀತೆಯಾಗಿ ಬೆಳಗಿದಂತೆ ನಾಡಗೀತೆಯಾಗಿಯೂ ಬೆಳಗಿತು. ಯುವಕರಲ್ಲಿ ಕನ್ನಡತನವನ್ನು ಪ್ರೇರೇಪಿಸುವಲ್ಲಿ ಇಂದಿಗೂ ಯಶಸ್ವಿಯಾದ ನಾಡಗೀತೆಯಾಗಿದೆ. ಸಮೂಹಗೀತೆಯಾಗಿದೆ. ಅದರ ಕೆಲವು ಸಾಲುಗಳು ಹೀಗಿವೆ :

"ನಡು ನಾಡೆ ಇರಲಿ ಗಡಿನಾಡೆ ಇರಲಿ
ಕನ್ನಡದ ಕಳೆಯ ಕೆಚ್ಚೇವು
ಮರತೇವು ಮರವ ತೆರದೇವು ಮನವ
ಎರೆದೇವು ಒಲವ ಹಿಡಿ ನೆನಪ
ನರನರವನೆಲ್ಲ ಹುರಿಗೊಳಿಸಿ ಹೊಸೆದು ಹಚ್ಚೇವು ಕನ್ನಡದ ದೀಪ"

'ಭಾವತೀರ್ಥ' ಕವನ ಸಂಕಲನದ ಹೆಸರೇ ಸೂಚಿಸುವಂತೆ ಕವಿಯು ನಾಡಿನಲ್ಲಿ ತೀರ್ಥಯಾತ್ರೆ ಕೈಕೊಂಡು ತನಗಾದ ಶಾಂತಿ ಹಾಗೂ ಕಾಂತಿಯ ಅನುಭವಗಳನ್ನು ಓದುಗರಿಗೆ ನೀಡಿದ್ದಾರೆ. ಪುಣ್ಯಕ್ಷೇತ್ರ ಹಾಗೂ ಐತಿಹಾಸಿಕ ಸ್ಥಳಗಳ ದರ್ಶನ ಲಾಭವನ್ನು ಈ ಸಂಕಲನ ನಮಗೆ ಒದಗಿಸಿಕೊಡುತ್ತದೆ.

"ಕಂಬಗಿಂಬಗಳ ಹಂಗು ಹರಿದು ಬಯಲನ್ನೇ
ಅಪ್ಪಿಹುದು ಗುಮ್ಮಟ
ರೂಪ ಬ್ರಹ್ಮದಲಿ ಶಬ್ದಬ್ರಹ್ಮವನು
ತುಂಬಿಕೊಂಡಿಹುದು ಗೊಮ್ಮಟ
ಬೆರಗಿನೊಡನೆ ನಿಬ್ಬೆರಗ ನೆಯ್ದಿಹುದು
ತನ್ನ ಗರ್ಭದಲ್ಲಿ ಗುಮ್ಮಟ"

ಇದು ವಿಜಾಪುರದ ಗೋಲಗುಮ್ಮಟವನ್ನು ಕವಿ ಕರ್ಕಿ ಅವರು ವರ್ಣಿಸಿದ ಅತ್ಯದ್ಭುತ ರೀತಿ.

"ಅಂದಿನಾ ಸಿರಿ ಇಂದಿನೀ ಪರಿ ಏನಿದೇನಿದು ಅಂತರ
ಕಳಚಿ ಬಿದ್ದಿದೆ ಹೊನ್ನ ಕಳಸವು ಹುಡಿಯನಪ್ಪಿದೆ ಹಂದರ
ಹರಣ ಹಾರಿದೆ ಕಿರಣ ಜಾರಿದೆ ಮಂಕದೇನೋ ಕವಿದಿದೆ
ಭಗ್ನ ಭಿತ್ತಿಯ ಮಧ್ಯದಲಿ ಬರಿ ಗಾಳಿ, ಹಾಳು ಸುರಿಯುತ್ತಿದೆ"

– ಹಾಳಾದ ಹಂಪೆಯನ್ನು ಕಂಡಾಗ ಕರ್ಕಿಯವರಿಗನಿಸಿದ ಭಾವನೆಗಳು ಹೀಗೆ 'ತುಂಗಭದ್ರೆ' ಕವನದಲ್ಲಿ ಮೂಡಿ ಬಂದಿವೆ.

'ಗೀತ ಗೌರವ' ಎಂಬ ಕವನ ಸಂಕಲನದಲ್ಲಿ ಹಲವು ಐತಿಹಾಸಿಕ ವ್ಯಕ್ತಿಗಳನ್ನು ಮತ್ತು ಘಟನೆಗಳನ್ನು ಕಥಾಕವನಗಳ ರೂಪದಲ್ಲಿ ಕವಿ ಕರ್ಕಿ ಸೆರೆ ಹಿಡಿದಿದ್ದಾರೆ. ಅವರ ಕಥನ ಕವನಗಳ ವೈಶಿಷ್ಟ್ಯವೆಂದರೆ, ಗೇಯತೆ. ಉದಾ : ಸಿದ್ಧಾರ್ಥ, ದಾನ ಚಿಂತಾಮಣಿ, ನೀಲಾಂಬಿಕೆ, ಪುಟ್ಟ ಹಣತೆ, ಸುಜಾತಾ ಇತ್ಯಾದಿ.

"ಅಲ್ಲಿ ಇಹ ಸಂಗಮನು ಇಲ್ಲಿಯೂ
ಇರನೆ ? ನಾನಿದನರಿಯೆನೆ ?
ನೀವೆ ಕರುಣಿಸಿದರುಹು ಬೆಳಗಿದರೆ
ಬೆಳಕಿನಲ್ಲಿ ನಾ ಬೆರೆಯೆನೇ ?"

ಈ ಗೀತೆಯಲ್ಲಿ ಕರ್ಕಿಯವರ ಅನುಭವದ ಗಾಢತೆ ಮತ್ತು ಕಾವ್ಯ ವಸ್ತುವಿನೊಡನೆ ಪಡೆಯುವ ತಾದಾತ್ಮ್ಯ ಎದ್ದು ಕಾಣುತ್ತವೆ.

'ಕರಿಕೆ ಕಣಗಿಲ' ಎಂಬ ಕವನ ಸಂಕಲನವನ್ನು ೧೯೭೬ ರಲ್ಲಿ ಪ್ರಕಟಿಸಿದ್ದಾರೆ. ಇದರಲ್ಲಿಯೂ ಕವಿಯ ಮನೋಧರ್ಮ ಯಾವ ಬದಲಾವಣೆಯಾಗದೇ ಇದ್ದುದನ್ನು ನಾವು ಗಮನಿಸಬಹುದಾಗಿದೆ. ಆದರೆ ರಚನಾ ತಂತ್ರದ ಸ್ವಲ್ಪ ಬದಲಾದ ವಿನ್ಯಾಸ ನೋಡಬಹುದಾಗಿದೆ. ಆದರೆ ಸೌಂದರ್ಯಾರಾಧನೆಯು ಮುಂದುವರಿದೇ ಇದೆ. ಉದಾ :

"ಇದು ಜೋಳದ ಬೆಳೆ ಬೆಳಗಿದೆ ಬೆಳವಲ
ಸೀಮೆಯ ಚೆಲುವನ್ನೆ
ರನ್ನನ ನಾಡಿನೊಳಿದು ಚಿನ್ನದ ಬೆಳೆ
ಬೆಳೆಸಿದೆ ಬಲವನ್ನೆ"

ಎಂದು ಜೋಳದ ಬೆಳೆಯನ್ನು ಬಹಳ ಸ್ವಾಭಾವಿಕವಾಗಿ ಕವಿ ವರ್ಣಿಸಿದ್ದಾರೆ.

"ಕದವ ತೆರೆ ಬೆಳಕು ಬರಲಿ
ಓ ಚಿತ್ತ
ಕದವ ತೆರೆ ಬೆಳಕು ಬರಲಿ"

ಕರ್ಕಿ ಅವರ ಪ್ರಾರ್ಥನಾ ಗೀತೆಗಳ ಸಂಕಲನ 'ನಮನ'ದಲ್ಲಿ ವ್ಯಕ್ತವಾದ ಬೆಳಕನ್ನು ಕಾಣುವ ಹಂಬಲ, ಕವಿಯ ಹೃದಯದಿಂದ ತೂರಿ ಬರುವ ಆಸೆ, ಈ ಸಾಲುಗಳಲ್ಲಿ ಕಾಣಬಹುದಾಗಿದೆ. ಕರ್ಕಿ ಅವರ ಕಥನ ಕವನಗಳು ಬಹಳ ಜನಪ್ರಿಯವಾಗಿವೆ. ಮಕ್ಕಳು ಕೂಡ ಓದಿ, ಹಾಡಿ ಸಂತೋಷಪಡಬಹುದಾಗಿದೆ. ಶಿಶುಗೀತೆಗಳನ್ನೊಳಗೊಂಡ ಎರಡು ಸಂಕಲನಗಳು ಪ್ರಕಟವಾಗಿವೆ. ಹಲವಾರು ಛಂದಸ್ಸುಗಳ ಪ್ರಕಾರಗಳನ್ನು ಕಾವ್ಯದಲ್ಲಿ ಯಶಸ್ವಿಯಾಗಿ ಬಳಸಿದ್ದಾರೆ. ಛಂದಃಶಾಸ್ತ್ರವನ್ನು ಆಳವಾಗಿ ಅಭ್ಯಾಸ ಮಾಡಿದ ಕರ್ಕಿಯವರು ತಮ್ಮ ಅಭ್ಯಾಸವನ್ನು ಗ್ರಂಥರೂಪದಲ್ಲಿ ಪ್ರಕಟಿಸಿದ್ದಾರೆ. ಅದೇ ಕನ್ನಡ

'ಛಂದೋವಿಕಾಸ'. ಅದಕ್ಕೆ ಮುಂಬಯಿ ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ಪದವಿ ನೀಡಿದೆ.

ಹಿಂದೆ ಬೆಳಗಾವಿಯಲ್ಲಿದ್ದಾಗ 'ಕಿರಿಯರ ಬಳಗವನ್ನು' ಕಟ್ಟಿ ಅದನ್ನು ದೊಡ್ಡ ಸಾಂಸ್ಕೃತಿಕ ಕೇಂದ್ರವನ್ನಾಗಿ ಬೆಳೆಸಿದರು. ಹುಬ್ಬಳ್ಳಿಯ ಹೊಸೂರಿನ ಒಂದು ಬೀದಿಗೆ ಕರ್ಕಿಯವರ ಹೆಸರನ್ನಿಟ್ಟು ಮಹಾನಗರ ಪಾಲಿಕೆ ಅವರಿಗೆ ಗೌರವ ಸಲ್ಲಿಸಿದೆ. ಡಾ. ಡಿ. ಎಸ್. ಕರ್ಕಿ ಸಾಹಿತ್ಯ ವೇದಿಕೆಯು, ಕರ್ಕಿ ಅವರ ಜೀವನ ಕೃತಿಗಳನ್ನು ಜನರಿಗೆ ಪರಿಚಯಿಸುತ್ತಿದೆ. ಆ ವೇದಿಕೆಯ ಆಶ್ರಯದಲ್ಲಿ ಕರ್ಕಿ ಅವರ ೯೫ನೆಯ ಜನ್ಮದಿನ ನಿಮಿತ್ತ ೧೫-೧೧-೨೦೦೨ ರಂದು ಗೀತ ಸಂಗೀತ ಮಹೋತ್ಸವ ಏರ್ಪಟ್ಟಿತ್ತು. ಕರ್ಕಿ ಅವರ ಮರಣದ ೧೫ ವರ್ಷಗಳ ನಂತರ, ೨೦೦೦ ಇಸ್ವಿಯಲ್ಲಿ ಡಿ. ಎಸ್. ಕರ್ಕಿ ಅವರ ಸಮಗ್ರ ಕಾವ್ಯ ಗ್ರಂಥ ಪ್ರಕಟವಾಗಿದೆ. ಕರ್ಕಿ ಅವರ ಪ್ರತಿಭೆಗೆ ಇನ್ನೂ ಹೆಚ್ಚು ಸಾಮಾಜಿಕ ಗೌರವ ದೊರೆಯಬೇಕಾಗಿತ್ತು ಎನಿಸುತ್ತದೆ. ಆದರೆ ಅವರು ಅದಕ್ಕಾಗಿ ಹಂಬಲಿಸಿದವರಲ್ಲ. 'ಗೀತ ಗೌರವ' ಸಂಕಲನಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

ಅವರಿಗೆ ಆಧಾರವಾಗಿದ್ದ ಇಬ್ಬರು ಮಕ್ಕಳನ್ನೂ ಕಳೆದುಕೊಂಡು ಅವರು ಕೆಲ ಕಾಲ ಬಾಳಿ ೧೯೮೪ ರಲ್ಲಿ (೧೬-೧-೧೯೮೪) ಲಿಂಗೈಕ್ಯರಾದರು. ಆದರೆ ರಚಿಸಿದ ಕಾವ್ಯ ಸಂಕಲನಗಳು ಮತ್ತು ಛಂದೋವಿಕಾಸ ಗ್ರಂಥ ಅವರನ್ನು ಅಜರಾಮರಗೊಳಿಸಿವೆ.

ಡಾ. ಡಿ. ಎಸ್. ಕರ್ಕಿ ಅವರ ಜೀವನ, ಸಾಧನೆಗಳ ಕುರಿತು ಕೆಲವು ಹೇಳಿಕೆಗಳು ಇಲ್ಲಿವೆ :

- 'ಭಾವತೀರ್ಥ'ದಲ್ಲಿ ಮಿಂದು 'ನಕ್ಷತ್ರ ಗಾನವ ಹಾಡಿ', 'ಗೀತ ಗೌರವವಿತ್ತ ಕಾವ್ಯರ್ಷಿ' ಕರ್ಕಿ ಅವರು ೧೯೮೪ ಜನವರಿ ೧೬ರಂದು 'ಕರಕಿ ಕಣಗಿಲ' ಹೂವಾಗಿ ಶಿವನ ಪಾದ ಸೇರಿದರು. "ಕವಿ ಇರದಿದ್ದರೂ ಕಾವ್ಯ ಸೌರಭ ನಾಡನ್ನೆಲ್ಲ ವ್ಯಾಪಿಸಿದೆ" ಎಂದು ಡಾ. ಸಂಗಮೇಶ ಹೆಂಡಿಗಿ ಕವಿ ಕಾವ್ಯಗಳ ಬಗ್ಗೆ ನುಡಿದಿದ್ದಾರೆ.

- "ಕರ್ಕಿ ಅವರು ನಾಡಿನ ತೀರ್ಥಯಾತ್ರೆಯನ್ನು ಗೈದು ತಮಗೆ ಲಭಿಸಿದ ಶಾಂತಿ-ಕಾಂತಿ ದರ್ಶನಗಳನ್ನು ಕವನಿಸಿ ಕಾವ್ಯಪ್ರೇಮಿಗಳಿಗೆ ನೀಡಿರುವರು" ಎಂದು 'ಭಾವತೀರ್ಥ' ಸಂಕಲನದ ಮುನ್ನುಡಿಯಲ್ಲಿ ಡಾ. ವಿ. ಕೃ. ಗೋಕಾಕರು ಹೇಳಿದ್ದಾರೆ.

- "ಹರಿಹರ ಕವಿಯ ಪುಷ್ಪರಗಳೆ, ಶರಣರ ವಚನಗಳು, ಕವೀಂದ್ರ ರವೀಂದ್ರರ ಭಾವಗೀತೆಗಳು. ಅದರಂತೆ ನಮ್ಮ ಇಂದಿನ ಹಿರಿಯ ಕವಿಗಳಾದ ಮಾಸ್ತಿ, ಮಧುರಚೆನ್ನ, ಬೇಂದ್ರೆ, ಪುಟ್ಟಪ್ಪ, ವೀಸೀ ಅವರ ಗೀತೆಗಳ ಪರಿಚಯವು ಮೊದಲು ಮಸಮಸಕಾಗಿ ಮೂಡಿಸಿದ ಒಲವನ್ನು ನಿಚ್ಚಳಗೊಳಿಸಿ, ಭಾವಾಭಿವ್ಯಕ್ತಿಗೆ ಒಂದು ದೀಕ್ಷೆಯನ್ನು ಕೊಟ್ಟಿರಬಹುದೆಂದು ನಾನು ಭಾವಿಸುತ್ತೇನೆ" ಎಂದು ಕರ್ಕಿ ಅವರು 'ನಕ್ಷತ್ರಗಾನ' ಸಂಕಲನದ ಮೊದಲ ಮಾತಿನಲ್ಲಿ ತಮ್ಮ ಕಾವ್ಯಾರಂಭದ ಬಗ್ಗೆ ಬರೆದಿದ್ದಾರೆ.

● "ಡಾ. ಡಿ. ಎಸ್. ಕರ್ಕಿ ಅವರು ಕನ್ನಡ ನಾಡು-ನುಡಿಯ ದೀಕ್ಷೆ ತೊಟ್ಟಿದ್ದರು. ಕನ್ನಡನಾಡಿನ ಸೌಂದರ್ಯ, ಸಂಸ್ಕೃತಿ, ಭಾಷೆಯ ಹಿರಿಮೆಯನ್ನು ಅವರಷ್ಟು ಆರಾಧಿಸಿದವರು ಕುವೆಂಪು ಅವರನ್ನು ಹೊರತುಪಡಿಸಿದರೆ ಬೇರೊಬ್ಬರಿಲ್ಲ" ಎಂದು ಜಗದೀಶ ಮಂಗಳೂರಮಠ ಅವರು ಕರ್ಕಿ ಅವರ ಸಮಗ್ರ ಕಾವ್ಯ (೨೦೦೦)ದ ಸಂಪಾದಕರಾಗಿ ಸಾರಿದ್ದಾರೆ.

## ಡಾ. ಡಿ. ಎಸ್. ಕರ್ಕಿ ಅವರ ಜೀವನ ವಿವರ

ಜನನ : ೧೯೦೭ (೧೫-೧೧-೧೯೦೭) ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲೂಕಿನ ಹಿರೇಕೊಪ್ಪದಲ್ಲಿ.

**ಬಾಲ್ಯ :** ದೊಡ್ಡಪ್ಪನ ಮನೆಯಲ್ಲಿ, ಬೆಲ್ಲದ ಬಾಗೇವಾಡಿಯಲ್ಲಿ.

**ಶಿಕ್ಷಣ :** ಪ್ರಾಥಮಿಕ– ಬೆಲ್ಲದ ಬಾಗೇವಾಡಿಯಲ್ಲಿ, ಮಾಧ್ಯಮಿಕ– ಬೆಳಗಾವಿಯಲ್ಲಿ, ಬಿ. ಎ. ಕೊಲ್ಲಾಪುರದ ರಾಜಾರಾಮ ಕಾಲೇಜ್, ಎಂ. ಎ.– ಧಾರವಾಡದ ಕರ್ನಾಟಕ ಕಾಲೇಜ್, ಪಿಎಚ್.ಡಿ.– ಮುಂಬಯಿ ವಿ. ವಿ. 'ಕನ್ನಡ ಛಂದೋವಿಕಾಸ'ಕ್ಕೆ.

**ವೃತ್ತಿ :** ಕಾರವಾರದ ಸರಕಾರೀ ಇಲಾಖೆಯಲ್ಲಿ ಅಧ್ಯಾಪಕರು, ಬೆಳಗಾವಿ ಕೆ.ಎಲ್.ಇ ಸೊಸಾಯಿಟಿ ಹೈಸ್ಕೂಲಿನಲ್ಲಿ ಶಿಕ್ಷಕರು, ಬೆಳಗಾವಿಯ ಲಿಂಗರಾಜ ಕಾಲೇಜಿನಲ್ಲಿ ಟಿ. ಡಿ. ವಿಭಾಗದ ಮುಖ್ಯಸ್ಥರು, ಹುಬ್ಬಳ್ಳಿಯ ಕಾಡ ಸಿದ್ಧೇಶ್ವರ ಆರ್ಟ್ಸ್ ಕಾಲೇಜಿನಲ್ಲಿ ಪ್ರಾಚಾರ್ಯರು.

**ಪ್ರಥಮ ಕವನಸಂಕಲನ :** ನಕ್ಷತ್ರಗಾನ ೧೯೪೯.

**ಸಮಾಜ ಸೇವೆ :** 'ಕಿರಿಯರ ಬಳಗ'ವನ್ನು ಬೆಳಗಾವಿಯಲ್ಲಿ ಪ್ರಾರಂಭಿಸಿ, ಸಾಂಸ್ಕೃತಿಕ ಕೇಂದ್ರವನ್ನಾಗಿ ಬೆಳೆಸಿದರು.

**ಮರಣ :** ೧೯೮೪ (೧೭-೧-೧೯೮೪).

## ಡಾ. ಡಿ. ಎಸ್. ಕರ್ಕಿ ಅವರ ಕೃತಿಗಳು :

**ಕವನ :** ನಕ್ಷತ್ರಗಾನ, ಭಾವತೀರ್ಥ, ಗೀತ ಗೌರವ, ಕರಿಕೆ ಕಣಗಿಲ, ನಮನ, ಸಮಗ್ರ ಕಾವ್ಯ, ಛಂದಸ್ಸು ಶಾಸ್ತ್ರ : ಕನ್ನಡ ಛಂದೋವಿಕಾಸ. ಇತರ : ಮಕ್ಕಳ ಶಿಕ್ಷಣ.

❋ ❋ ❋

# ಅ. ನ. ಕೃ

ಕನ್ನಡ ಕಾದಂಬರಿ ಸಾರ್ವಭೌಮರೆಂಬ ಖ್ಯಾತಿ ಗಳಿಸಿದ ಅ.ನ.ಕೃ. ಅವರು ತಮ್ಮ ಈ ಸಂಕ್ಷಿಪ್ತ ನಾಮದಿಂದ ಚಿರಪರಿಚಿತರಾಗಿದ್ದರೂ ಅವರ ಸಂಪೂರ್ಣ ಹೆಸರು ಅರಕಲಗೂಡು ನರಸಿಂಗರಾಯರು ಕೃಷ್ಣರಾಯರು. ಉತ್ತಮ ಲೇಖಕರಾಗಿ, ದಕ್ಷ ಸಂಪಾದಕರಾಗಿ ಉಜ್ವಲ ಭಾಷಣಕಾರರಾಗಿ ಹಾಗೂ ಕನ್ನಡವನ್ನು ಉಳಿಸಿ, ಕಟ್ಟಿ ಬೆಳೆಸುವಲ್ಲಿ ತ್ರಿಕರಣಪೂರ್ವಕವಾಗಿ ಸುಮಾರು ನಲ್ವತ್ತು ವರ್ಷ ದುಡಿದ ಕನ್ನಡ ಮಾತೆಯ ಸತ್ಪುತ್ರರು.

ಅನಕೃ ಒಬ್ಬ ವ್ಯಕ್ತಿಯಾಗಿರಲಿಲ್ಲ. ಒಂದು ಮಹಾನ್ ಕನ್ನಡದ ಶಕ್ತಿಯಾಗಿದ್ದರು. ಅವರು ಶಾಲಾ ಕಾಲೇಜುಗಳಲ್ಲಿ ಕಲಿತದ್ದು ಬಹಳ ಕಡಿಮೆ. ಆದರೆ ವಿಶಾಲ ಜಗತ್ತಿನಲ್ಲಿ ಸ್ವಾನುಭವ, ಸ್ವಪ್ರಯತ್ನಗಳಿಂದ ಕಲಿತದ್ದು ಅಸಾಧಾರಣ. ಪಾಶ್ಚಾತ್ಯ ಕಾವ್ಯಗಳನ್ನು ಅಷ್ಟೇ ತತ್ಪರತೆಯಿಂದ ಅಭ್ಯಾಸ ಮಾಡಿದ್ದರು.

ಹೊಯ್ಸಳ ಕರ್ನಾಟಕ ಮನೆತನದಲ್ಲಿ ೧೯೦೮ ರಲ್ಲಿ (೯-೫-೧೯೦೮) ಕೋಲಾರದಲ್ಲಿ ಅನಕೃ ಜನಿಸಿದರು. ತಂದೆ ನರಸಿಂಗರಾಯರು, ತಾಯಿ ಅನ್ನಪೂರ್ಣಮ್ಮ. ಬೆಂಗಳೂರಿನ ದೇಶೀಯ ವಿದ್ಯಾಶಾಲೆಯಲ್ಲಿಯ ಅವರ ವಿದ್ಯಾಭ್ಯಾಸ ಅರ್ಧಕ್ಕೆ ನಿಂತುಹೋಯಿತು. ಬೆಂಗಳೂರು ಕಾಲೇಜಿನಲ್ಲಿ ಎಂಟ್ರನ್ಸ್ ಪರೀಕ್ಷೆ ಮುಗಿಸಿ ಸಾರ್ವಜನಿಕ ಕ್ಷೇತ್ರಕ್ಕೆ ಇಳಿದು ಕಾರ್ಯಪ್ರವೃತ್ತರಾದರು. ಸ್ವಾಮಿ ವಿವೇಕಾನಂದರ ಕೃತಿಗಳಿಂದ ಪ್ರಭಾವಿತರಾಗಿದ್ದ ಅನಕೃ, ಪಂಡಿತ ತಾರಾನಾಥ, ಗಾಂಧೀಜಿ, ಆಲೂರ ವೆಂಕಟರಾಯರು, ಕೈಲಾಸಂ ಅವರಿಂದಲೂ ಪ್ರಭಾವಿತರಾಗಿದ್ದರು. ಸ್ವಾಭಿಮಾನಿಯಾದ ಅನಕೃ ಇನ್ನೊಬ್ಬರ ಕೃಪಾಛತ್ರದಲ್ಲಿ ಬಾಳುವವರಾಗಿರಲಿಲ್ಲ. ಕ್ರಾಂತಿಕಾರಿ ಮನೋಭಾವವುಳ್ಳ ಅನಕೃ, ಶಾಂತವಾದ ವಾತಾವರಣವನ್ನು ಕಲಕುವಷ್ಟು ದುಷ್ಟಜೀವಿಯಾಗಿರಲಿಲ್ಲ. ಒಳ್ಳೆಯ ಸ್ವಭಾವ ಅವರದು. ಹಿರಿಯರಲ್ಲಿ ವಿಶ್ವಾಸ, ಕಿರಿಯರಲ್ಲಿ ವಾತ್ಸಲ್ಯ ಇತ್ತು.

ಸಂಪದ್ಗಿರಿರಾಯರ, ಕೃಷ್ಣಯ್ಯಂಗಾರರ ಮೆಚ್ಚಿನ ವಿದ್ಯಾರ್ಥಿಯಾಗಿದ್ದಾಗಲೇ ವೆಂಕಟಾಚಾರ್ಯರ. ಗಳಗನಾಥರ ಮತ್ತು ಪುಟ್ಟಣ್ಣನವರ ಕಾದಂಬರಿಗಳನ್ನು ಓದಿ ಪ್ರಭಾವಿತರಾದರು. ಇದು ಮುಂದೆ ಕಾದಂಬರಿ ರಚನೆಗೆ ಅವರಿಗೆ ನೆರವಾಯಿತೆನ್ನಬಹುದು. ಕೆಲಸಮಯ ರವೀಂದ್ರನಾಥ ಟಾಗೋರರ ಶಾಂತಿನಿಕೇತನದಲ್ಲಿ ಅಭ್ಯಾಸ ಮಾಡಿದ ಅ.ನ.ಕೃ

ಮರಳಿ ಬಂದು ವೃತ್ತಿಗಿಳಿದಾಗ 'ಕಥಾಂಜಲಿ' ಪತ್ರಿಕೆಯನ್ನು ೧೯೨೬ರಲ್ಲಿ ಪ್ರಾರಂಭಿಸಿ ನಡೆಯತೊಡಗಿದರು. ಜೊತೆಗೆ ಕಾವ್ಯ, ನಾಟಕ, ಶಾಸ್ತ್ರಗಳ ಅಧ್ಯಯನ ಹಾಗೂ ಇತರ ಬರವಣಿಗೆ ನಡೆದೇ ಇತ್ತು. ಸಣ್ಣಕಥೆಗಳಿಗೆ ಮೀಸಲಾದ 'ಕಥಾಂಜಲಿ' ಮಾಸ ಪತ್ರಿಕೆಯ ಮುಖಾಂತರ ಆನಂದ, ರಾಶಿ, ರಾಜರತ್ನಂ, ಕೆ. ಗೋಪಾಲ ಕೃಷ್ಣರಾಯರಂಥ ಪ್ರತಿಭಾನ್ವಿತರನ್ನು ಸಾಹಿತ್ಯ ಲೋಕಕ್ಕೆ ಪರಿಚಯಿಸಿದರು.

'ವಿಶ್ವ ಕರ್ನಾಟಕ' ಪತ್ರಿಕೆಯಲ್ಲಿ ಕನ್ನಡನಾಡು- ನುಡಿಗಳ ಬಗ್ಗೆ, ಲಲಿತ ಕಲೆಗಳ ಬಗ್ಗೆ ಹಲವಾರು ಲೇಖನಗಳನ್ನು ಪ್ರಕಟಿಸಿದರು. ೧೯೩೦ರಲ್ಲಿ ಧಾರವಾಡದಲ್ಲಿ ನಡೆದ ಮೊದಲ ನಾಟಕ ಸಮ್ಮೇಳನಕ್ಕೆ ಅತಿಥಿಯಾಗಿ ಮಿಂಚಿದರು. ಅನಂತರ ಅಖಂಡ ಕರ್ನಾಟಕದ ಕನಸನ್ನು ನನಸನ್ನಾಗಿಸಲು ಹಲವಾರು ಬಾರಿ ಕನ್ನಡನಾಡನ್ನು ಸುತ್ತಾಡಿದರು, ಪ್ರಚಾರ ಮಾಡಿದರು, ಅಭಿಮಾನ ಮೂಡಿಸಿದರು. ೧೯೩೨ ರಲ್ಲಿ ಹೈದರಾಬಾದಿನಲ್ಲಿ ವಾಸಿಸುತ್ತಿದ್ದ ಕೃಷ್ಣರಾಯರ ಮಗಳೊಡನೆ (ವಿಶಾಲಾಕ್ಷಿ) ವಿವಾಹವಾದರು. 'ಭಾರತೀಯ ಚಿತ್ರಕಲೆಯಲ್ಲಿ ರಾಜಾ ರವಿವರ್ಮನ ಸ್ಥಾನ', ಎಂಬ ವಿಶಿಷ್ಟ ವಿಮರ್ಶಾ ಗ್ರಂಥವನ್ನು ರಚಿಸಿದರು. ಈ ಮೊದಲೇ ೧೯೨೪ರಲ್ಲಿ ಅವರ ಮೊದಲ ನಾಟಕ 'ಮದುವೆಯೋ ಮನೆಹಾಳೋ' ಪ್ರಕಟವಾಗಿತ್ತು. 'ಕರ್ನಾಟಕದ ಕಲಾವಿದರು', 'ಬರಹಗಾರನ ಬದುಕು' ವ್ಯಕ್ತಿಚಿತ್ರಗಳ ಸಂಕಲನಗಳಾಗಿವೆ.

೧೯೩೫ರಲ್ಲಿ ಮುಂಬಯಿಗೆ ಹೋಗಿ ಅಂದಿನ ಇಂಗ್ಲಿಷ್ ಪತ್ರಿಕೆಗಳಾದ ದಿ ಬಾಂಬೆ ಕ್ರಾನಿಕಲ್ ಮತ್ತು ದಿ ಇಲ್ಲಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾಕ್ಕೆ ಹಲವಾರು ಲೇಖನಗಳನ್ನು ಬರೆದರು. ಅನಂತರ ೧೯೩೬-೩೭ರ ಅವಧಿಯಲ್ಲಿ ಮರಳಿ ಬೆಂಗಳೂರಿಗೆ ಬಂದು 'ವಿಶ್ವವಾಣಿ' ಪತ್ರಿಕೆಯ ಸಂಪಾದಕರಾಗಿ ಸೇವೆ ಸಲ್ಲಿಸಿದರು. ೧೯೩೮ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಪತ್ರಿಕೆ 'ಕನ್ನಡ ನುಡಿ' ಪ್ರಾರಂಭವಾಯಿತು. ಅದರ ಮೊದಲ ಸಂಪಾದಕರಾಗುವ ಅವಕಾಶ ಅನಕೃರಿಗೆ ದಕ್ಕಿತು.

೧೯೪೦ರಲ್ಲಿ ಪ್ರಗತಿಶೀಲ ಸಾಹಿತ್ಯ ಚಳುವಳಿ ಕನ್ನಡನಾಡಿನಲ್ಲಿ ಪ್ರಾರಂಭವಾದಾಗ ತರಾಸು, ಶ್ರೀರಂಗ, ನಿರಂಜನ, ಬಸವರಾಜ ಕಟ್ಟೀಮನಿ, ಡಿ. ಕೆ. ಭಾರದ್ವಾಜ, ನಾಡಿಗೇರ ಕೃಷ್ಣರಾಯ ಮೊದಲಾದವರೊಡನೆ ಅನಕೃ ಸಕ್ರಿಯವಾಗಿ ಪಾಲ್ಗೊಂಡರಷ್ಟೇ ಅಲ್ಲ, ಚಳುವಳಿಯ ಮುಂಚೂಣಿಯಲ್ಲಿದ್ದರು. ೧೯೪೩ರಲ್ಲಿ ಕರ್ನಾಟಕ ಪ್ರಗತಿಶೀಲರ ಸಂಘ ಸ್ಥಾಪಿಸಿ, ಪ್ರಗತಿಶೀಲ ಸಾಹಿತ್ಯ, ಮ್ಯಾಕ್ಸಿಂ ಗಾರ್ಕಿ ಸಂಸ್ಮರಣ ಗ್ರಂಥ, 'ರಸಋಷಿ' ಗ್ರಂಥಗಳನ್ನು ಪ್ರಕಟಿಸಿದರು. ಪ್ರಗತಿಶೀಲ ಸಾಹಿತ್ಯ ಚಳುವಳಿ, ಜನಸಾಮಾನ್ಯರ ಜೀವನವು ಸಾಹಿತ್ಯ ಕ್ಷೇತ್ರದಲ್ಲಿ ಕಂಡುಬರುವಂತೆ ಮಾಡಿತೆನ್ನಬಹುದಾಗಿದೆ. ಅನಕೃ ಅವರಿಗೆ 'ಸಂಧ್ಯಾರಾಗ ಪ್ರಶಸ್ತಿ' ಎಂಬ ಕೃತಿ ವಿಮರ್ಶಾ ಗ್ರಂಥವನ್ನು ಅರ್ಪಿಸಲಾಯಿತು. ಹೀಗೆ ಅವರ ಬರವಣಿಗೆ ಮತ್ತು ಪ್ರಕಟಣೆ ಅವ್ಯಾಹತವಾಗಿ ನಡೆದೇ ಇತ್ತು.

೧೯೬೦ರಲ್ಲಿ ಮಣಿಪಾಲದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅನಕೃ ಅಧ್ಯಕ್ಷರಾದರು. ಜೊತೆಗೆ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಯ ಗೌರವವೂ

ದೊರೆಯಿತು. ೧೯೭೦ರಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಇವರಿಗೆ ಗೌರವ ಡಿ.ಲಿಟ್ ಪದವಿ ಕೊಟ್ಟಿತು. ಸುಮಾರು ಇನ್ನೂರ ಇಪ್ಪತ್ತು ಕನ್ನಡ ಕೃತಿಗಳನ್ನು ರಚಿಸಿ ಈ ಕನ್ನಡ ಚೇತನ ೧೯೭೧ ರಲ್ಲಿ ಕಣ್ಮರೆಯಾಯಿತು.

ಅನಕೃ ಅವರು ೧೯೨೮ರಲ್ಲಿ ನಾಟಕ ರಚನೆಯ ಮುಖಾಂತರ ಕನ್ನಡ ಸಾಹಿತ್ಯ ಲೋಕದಲ್ಲಿ ಪ್ರವೇಶ ಪಡೆದಿದ್ದರು. ಇಪ್ಪತ್ತಕ್ಕೂ ಹೆಚ್ಚು ನಾಟಕಗಳನ್ನು ರಚಿಸಿದ್ದಾರೆ. ಸಾಮಾಜಿಕ, ಐತಿಹಾಸಿಕ ಮತ್ತು ಪೌರಾಣಿಕ ನಾಟಕಗಳನ್ನು ರಚಿಸಿದ್ದಾರೆ. ವಿಶೇಷವೆಂದರೆ ಅವರು 'ಶಾರದಾ' ಎಂಬ ನಾಟಕದಲ್ಲಿ ಅಭಿನಯ ಕೂಡ ಮಾಡಿದ್ದಾರೆ. ನಾಟಕ ರಚನೆಗೆ ಪೂರ್ವ ಸಿದ್ಧತೆಗಾಗಿ ಅವರು ಭರತನ ನಾಟ್ಯಶಾಸ್ತ್ರವನ್ನು ಮತ್ತು ಪಾಶ್ಚಾತ್ಯ ನಾಟಕ ಮೀಮಾಂಸೆಯನ್ನು ಚೆನ್ನಾಗಿ ಅಧ್ಯಯನ ಮಾಡಿದ್ದರು.

ನಾಟಕ ರಚನೆಯಿಂದ ಕಥಾ ರಚನೆಗೆ ಅನಕೃ ಬಂದದ್ದು ಕಂಡುಬರುತ್ತದೆ. ೧೯೩೧ರಲ್ಲಿ ಅಗ್ನಿಕನ್ಯೆ, ಮಿಂಚು, ಶಿಲ್ಪಿ, ಸಮರ ಸುಂದರಿ ಮೊದಲಾದ ಕಥಾ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಮದುವೆಯಾಗುವ ಮೊದಲೇ (೧೯೩೦ರಲ್ಲಿ), 'ಪ್ರಣಯ ಗೀತೆಗಳು' ಎಂಬ ಕವನ ಸಂಕಲನವನ್ನೂ ಸಂಪಾದಿಸಿ ಪ್ರಕಟಿಸಿದ್ದರು. ಚಲನಚಿತ್ರಗಳಿಗೆ ಸಂಭಾಷಣೆಯನ್ನೂ ಬರೆದಿದ್ದಾರೆ.

ಆದರೆ ಅವರಿಗೆ ಕಾದಂಬರಿ ಕ್ಷೇತ್ರ ಬಹುಪ್ರಿಯವಾದದ್ದು. ಸುಮಾರು ನೂರಾ ಹನ್ನೆರಡು ಕಾದಂಬರಿಗಳನ್ನು ಪ್ರಕಟಿಸಿದ್ದಾರೆ. ಅಂದರೆ ಅವರು ರಚಿಸಿದ ಸುಮಾರು ಇನ್ನೂರು ಕೃತಿಗಳಲ್ಲಿ ಕಾದಂಬರಿಗಳದೇ ಸಿಂಹಪಾಲು. ವೈವಿಧ್ಯಪೂರ್ಣ ಸಾಮಾಜಿಕ ಮತ್ತು ಐತಿಹಾಸಿಕ ಕಾದಂಬರಿಗಳನ್ನು ಕೊಟ್ಟು ಕನ್ನಡ ಕಾದಂಬರಿ ಕ್ಷೇತ್ರದ ಘನತೆಯನ್ನು ಹೆಚ್ಚಿಸಿದ್ದಾರೆ. ಜೀವನ ಯಾತ್ರೆ, ಉದಯ ರಾಗ, ಸಂಧ್ಯಾರಾಗ, ನಟ ಸಾರ್ವಭೌಮ, ಕನ್ನಡಮ್ಮನ ಗುಡಿಯಲ್ಲಿ, ತಾಯಿ ಮಕ್ಕಳು, ಕಂಕಣ ಬಲ, ಆಶೀರ್ವಾದ, ಅನುಗ್ರಹ, ನಗ್ನಸತ್ಯ, ಶನಿ ಸಂತಾನ, ಮಂಗಳಸೂತ್ರ, ಅನ್ನದಾತ, ಹೊಸಲು ದಾಟಿದ ಹೆಣ್ಣು ಮೊದಲಾದ ಕಾದಂಬರಿಗಳನ್ನು ರಚಿಸಿದ್ದಾರೆ. ಅನಕೃ ಎಂದರೆ ಕಾದಂಬರಿ ಎನ್ನುವಷ್ಟು ಇವರ ಉತ್ತಮ ಕಾದಂಬರಿಗಳು ಖ್ಯಾತಿ ಗಳಿಸಿಕೊಟ್ಟಿವೆ.

ಬೆಂಗಳೂರಿನಲ್ಲಿಯ ಚಿತ್ರಮಂದಿರಗಳು ಕನ್ನಡ ಚಿತ್ರಗಳನ್ನು ಪ್ರದರ್ಶಿಸಲು ಅಸಡ್ಡೆ ತೋರುತ್ತಿದ್ದ ಕಾಲದಲ್ಲಿ (೧೯೬೭) ಚಳವಳಿ ಹೂಡಿ, ಕನ್ನಡ ಚಲನಚಿತ್ರಗಳನ್ನು ಅನಂತರದ ಕಾಲದಲ್ಲಿ ಪ್ರದರ್ಶಿಸುವಂತೆ ಮಾಡಿದ ಶ್ರೇಯಸ್ಸು ಅನಕೃ ಅವರಿಗೆ ಸಲ್ಲಬೇಕು.

ಅವರು ಬೇರೆ ಬೇರೆ ಕೃತಿಗಳನ್ನು ರಚಿಸಿದ್ದಾರೆ. ಅಂಥ ಕೃತಿಗಳಲ್ಲಿ 'ಸಾಹಿತ್ಯ ಮತ್ತು ಸಂಸ್ಕೃತಿ', 'ಅಖಂಡ ಕರ್ನಾಟಕ', 'ಭಾರತೀಯ ಚಿತ್ರಕಲೆ, ಕನ್ನಡ ಕುಲರಸಿಕರು, ನನ್ನನ್ನು ನಾನು ಕಂಡೆ. ಬರಹಗಾರರ ಬದುಕು, ಕರ್ನಾಟಕದ ಕಲಾವಿದರು ಮತ್ತು ಕನ್ನಡ ನಾಡು - ನುಡಿ ಸಂಸ್ಕೃತಿಗಳನ್ನು ಮೆರೆಸುವ ಕೆಲವು ಕೃತಿಗಳನ್ನು ಇಂಗ್ಲಿಷ್ ಭಾಷೆಯಲ್ಲಿ ಕೊಟ್ಟಿದ್ದಾರೆ. ಅವುಗಳಲ್ಲಿ ಲಾರ್ಡ್ ಬಸವೇಶ್ವರ, ಅಲ್ಲಮಪ್ರಭು ಮತ್ತು ಅಕ್ಕಮಹಾದೇವಿ ಮುಖ್ಯವಾದವು.

ಅನಕೃ ಆಧುನಿಕ ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಬಹುಶಃ ಎಲ್ಲದರಲ್ಲಿ ತಮ್ಮ ಕೃತಿ ಕಾಣಿಕೆ ಕೊಟ್ಟಿದ್ದಾರೆ. ಸಮರ್ಥ ಲೇಖಕರೆನಿಸಿಕೊಂಡಿದ್ದಾರೆ. ಆದರೆ ಅವರು ರಚಿಸಿದ ಅದ್ವಿತೀಯವಾದ ಕಾಣಿಕೆ ಎಂದರೆ ಕಾದಂಬರಿ ಎಂದೇ ಹೇಳಬೇಕು. ಕಾದಂಬರಿಗಳನ್ನು ಜನಪ್ರಿಯಗೊಳಿಸುವುದರಲ್ಲಿ ಅನಕೃ ಅವರ ವಿಶೇಷ ಸಾಧನೆಯನ್ನು ಗುರುತಿಸಬಹುದು. ಅವರು ತಮ್ಮ ಅಸ್ಖಲಿತ ವಾಣಿಯಲ್ಲಿ ಯಾವುದೇ ವಿಷಯದ ಬಗ್ಗೆ ಮಾತನಾಡಿ ಜನರನ್ನು ತಲೆದೂಗಿಸಬಲ್ಲವರಾಗಿದ್ದರು. ಇವೆರಡಕ್ಕೂ ಮಿಗಿಲಾಗಿ ಅವರು ಕನ್ನಡಕ್ಕೆ ತಮ್ಮನ್ನು ಅರ್ಪಿಸಿಕೊಂಡು ಆಜೀವ ಅದಕ್ಕಾಗಿಯೇ ದುಡಿದದ್ದು.

ಅನಕೃ ಅವರ ಬಗ್ಗೆ ಹಾಗೂ ಅವರ ಕೃತಿಗಳ ಕುರಿತು ಕೆಲವು ಹೇಳಿಕೆಗಳನ್ನು ಗಮನಿಸಬಹುದಾಗಿದೆ.

- ಅನಕೃ ಅವರ ಭಾಷಣ ಕೇಳಿದ ಕನ್ನಡಿಗರೇ ಭಾಗ್ಯವಂತರು. ಅವರು ನಿರರ್ಗಳವಾಗಿ ಮೂರು ನಾಲ್ಕು ಗಂಟೆ ಓತಪ್ರೋತವಾಗಿ ಮಾತನಾಡುತ್ತಿದ್ದರೆ ಅವರ ಭಾಷಣದ ವೈಖರಿಗೆ ವಿಗ್ರಹಗಳಂತೆ ಕುಳಿತಿದ್ದ ಪ್ರೇಕ್ಷಕರಿಗೆ ಒಮ್ಮೊಮ್ಮೆ ಚೈತನ್ಯದ ಚಿಲುಮೆ ಉಕ್ಕಿ ಸಮರ್ಪಣಾ ಮನೋಭಾವ ಮೂಡುತ್ತಿತ್ತು. "ಆ ಮಹನೀಯನ ವಾಣಿ ನನ್ನ ಕಿವಿಯಲ್ಲಿ ಈಗಲೂ ಮೊಳಗುತ್ತಿದೆ" ಎಂದು ಕವಿತಾ ಕೃಷ್ಣ ಹೇಳಿದ್ದಾರೆ.

- "ಅನಕೃ ಬದುಕಿನ ನೂರಾರು ಸಾಧ್ಯತೆಗಳನ್ನು ಕಾದಂಬರಿಯ ಕಕ್ಷೆಯಲ್ಲಿ ತಂದರು. ಸಮಾಜಕ್ಕೂ ವ್ಯಕ್ತಿಗೂ ಇರುವ ಸಂಬಂಧವನ್ನು ಬಲಪಡಿಸಿದರು. ಅವರ ಕಾದಂಬರಿಗಳಲ್ಲಿ ಕೇಳಿಸುವ ಒಳದನಿ ಎಂದರೆ ಆಧುನಿಕ ಜೀವನದ ಒತ್ತಡ, ಸಂಪ್ರದಾಯವನ್ನು ಶಿಥಿಲಗೊಳಿಸುತ್ತಿರುವ ಚಿತ್ರ; ಕೌಟುಂಬಿಕ ಜೀವನದಲ್ಲಿ ಕಂಡುಬರುವ ಏರಿಳಿತಗಳು" ಎಂದು ಚಿ. ಶ್ರೀನಿವಾಸ ರಾಜು ಅಭಿಪ್ರಾಯಪಟ್ಟಿದ್ದಾರೆ.

- "ಕನ್ನಡವನ್ನು ಒಂದು cause ಎಂದು, ಕಟ್ಟಿಕೊಂಡು ಬದುಕಿದವರುಂಟು, ಕಾಸಿಗೋಸ್ಕರವಾಗಿ ಕನ್ನಡವನ್ನು ಕಟ್ಟಿಕೊಂಡು ಬದುಕಿದವರುಂಟು' ಕೃಷ್ಣರಾಯರು ಮೊದಲಿನ ವರ್ಗಕ್ಕೆ ಸೇರಿದವರು" ಎಂದು ಜಿ. ಪಿ. ರಾಜರತ್ನಂ ಹೇಳಿದ್ದಾರೆ.

- "೧೧೨ ಕಾದಂಬರಿಗಳನ್ನು ಬರೆದ, 'ಕಾದಂಬರಿ ಸಾರ್ವಭೌಮ' ಎನಿಸಿಕೊಂಡ ಅನಕೃ ಒಟ್ಟು ೨೦೦ಕ್ಕೂ ಹೆಚ್ಚು ಕೃತಿಗಳನ್ನು ಬರೆದು ಪ್ರಕಟಿಸಿದ್ದಾರೆ" ಎಂದು ಡಾ. ಆರ್. ಕೆ. ಗಣೇಶ್ ನುಡಿದಿದ್ದಾರೆ.

- "ಜನಜೀವನಾಡಿ ಮಿಡಿಯುವ ಕಥಾವಸ್ತು, ಹಿತಮಿತವಾದ ಸಂಭಾಷಣೆ, ಮನೋಹರವಾದ ವ್ಯಾಕರಣ, ಆಹ್ಲಾದ ನೀಡುವ ಕಥೆಯ ಓಟ ಇವಿಷ್ಟು ಅನಕೃ ಅವರ ಕಾದಂಬರಿಯ 'ಧ್ವನಿ' ಓದುಗರ ಮನಮುಟ್ಟಲು ಅವರು ಅನುಸರಿಸುತ್ತಿದ್ದ ಅನಾವರಣ ಭಾವದ ತಂತ್ರ. ಎಲ್ಲಾ ಲೇಖಕರಿಗೂ ಸುಲಭವಾಗಿ ಸಿದ್ಧಿಸದಂತಹದ್ದು" ಎಂದು ಕವಿತಾ ಕೃಷ್ಣ ತಿಳಿಸಿದ್ದಾರೆ.

## ಅನಕೃ ಜೀವನ ವಿವರ

ಜನನ : ೧೯೦೮ (೯-೫-೧೯೦೮) ಕೋಲಾರದಲ್ಲಿ.

ಶಿಕ್ಷಣ : ಬೆಂಗಳೂರು ಕಾಲೇಜಿನಲ್ಲಿ (ಎಂಟ್ರನ್ಸ್ ಪರೀಕ್ಷೆ) ಮತ್ತು ಶಾಂತಿನಿಕೇತನದಲ್ಲಿ,

ವೃತ್ತಿ : ಪತ್ರಿಕೋದ್ಯಮ, ಲೇಖನ. ಕಥಾಂಜಲಿ ಪತ್ರಿಕೆ (೧೯೨೯), ಬಾಂಬೆ ಕ್ರಾನಿಕಲ್ ಕೆಲಸ ೧೯೩೫, ವಿಶ್ವವಾಣಿ ಪತ್ರಿಕೆ (೧೯೩೬), ಕನ್ನಡ ನುಡಿ ೧೯೩೮-೩೯.

ಮೊದಲ ಕೃತಿ : ಮದುವೆಯೋ ಮನೆಹಾಳೋ ನಾಟಕ (೧೯೨೩). ಚಿತ್ರೋದ್ಯಮದಲ್ಲಿ : ೧೯೪೨. ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ : ೧೯೬೦, ಮಣಿಪಾಲದಲ್ಲಿ. ರಾಜ್ಯ ಸಾಹಿತ್ಯ ಅಕಾಡೆಮಿ ಅಧ್ಯಕ್ಷತೆ. ಗೌರವ ಡಿಲಿಟ್ : ಮೈಸೂರು ವಿ. ವಿದ್ಯಾನಿಲಯದಿಂದ (೧೯೭೦). ಮರಣ : ೧೯೭೧ (೮-೭-೧೯೭೧).

ಅ.ನ.ಕೃ ಕೃತಿಗಳು : ನಾಟಕ- ಮದುವೆಯೋ ಮನೆಹಾಳೋ, ಸ್ವರ್ಣ ಮೂರ್ತಿ (೧೯೫೯) ಆಹುತಿ, ಗೋಮುಖ ವ್ಯಾಘ್ರ, ಜ್ವಾಲಾಮುಖಿ, ಧರ್ಮ ಸಂಕಟ, ಹಿರಣ್ಯಕಶಿಪು, ಸೂತಪುತ್ರ ಕರ್ಣ, ಶ್ರೀರಾಮ ಪಾದುಕಾ ಪಟ್ಟಾಭಿಷೇಕ, ಮಾಗಡಿ ಕೆಂಪೇಗೌಡ, ಅನುಗ್ರಹ, ಜಗಜ್ಯೋತಿ ಬಸವೇಶ್ವರ, ರಜಪೂತ ಲಕ್ಷ್ಮೀ, ಕಿತ್ತೂರ ರಾಣಿ ಚೆನ್ನಮ್ಮ ಇತ್ಯಾದಿ.

ಕಥಾ ಸಂಕಲನ : ಅಗ್ನಿಕನ್ಯೆ (೧೯೫೧), ಕಣ್ಣುಮುಚ್ಚಾಲೆ, ಕಿಡಿ (೧೯೩೨), ಪಾಪ ಪುಣ್ಯ (೧೯೪೩), ಮಿಂಚು, ಶಿಲ್ಪಿ (೧೯೪೯), ಕಾಮನ ಸೋಲು, ಸಮರ ಸುಂದರಿ (೧೯೬೦) ಕಾದಂಬರಿ (ಸಾಮಾಜಿಕ) : ಜೀವನ ಯಾತ್ರೆ (೧೯೩೪), ಉದಯ ರಾಗ (೧೯೪೮), ಸಂಧ್ಯಾರಾಗ, ನಟ ಸಾರ್ವಭೌಮ (೧೯೪೦), ಬಣ್ಣದ ಬದುಕು, ಗಾಜಿನ ಮನೆ, ಗೃಹ ಲಕ್ಷ್ಮಿ, ಕಂಕಣಬಲ, ಕಾಮಿನಿ ಕಾಂಚನ, ಆಶೀರ್ವಾದ, ನಗ್ನ ಸತ್ಯ, ಶನಿ ಸಂತಾನ, ಸಂಜೆಗತ್ತಲು, ಮಂಗಳಸೂತ್ರ, ರೂಪಶ್ರೀ, ಹೊಸಲು ದಾಟಿದ ಹೆಣ್ಣು.

ಕಾದಂಬರಿ (ಐತಿಹಾಸಿಕ) : ಯಲಹಂಕ ಭೂಪಾಲ (೧೯೬೦), ವೀರರಾಣಿ ಕಿತ್ತೂರ ಚೆನ್ನಮ್ಮ, ವಿಜಯ ವಿದ್ಯಾರಣ್ಯ, ತಪೋಬಲ, ಪುಣ್ಯ ಪ್ರಭಾವ, ಯಶೋದುಂಧುಭಿ.

ಇತರೆ (ಜೀವನ ಚರಿತ್ರೆ, ವ್ಯಕ್ತಿಚಿತ್ರ ಕಲಾ ವಿಮರ್ಶೆ, ಸಾಹಿತ್ಯ ವಿಮರ್ಶೆ, ಪ್ರಚಾರ ಸಾಹಿತ್ಯ): ನನ್ನನ್ನು ಕಂಡೆ, ಬರಹಗಾರನ ಬದುಕು, ಕರ್ನಾಟಕದ ಕಲಾವಿದರು, ಕನ್ನಡ ಕುಲರಸಿಕರು (ಸುಮಾರು ಇನ್ನೂರು ಕೃತಿಗಳು ಅವುಗಳಲ್ಲಿ ೧೧೨ ಕಾದಂಬರಿಗಳು).

***

# ಜಿ. ಪಿ. ರಾಜರತ್ನಂ

ಗುಂಡ್ಲು ಪಂಡಿತ ರಾಜರತ್ನಂ ಇದು ಜಿ. ಪಿ. ರಾಜರತ್ನಂ ಅವರ ಸಂಪೂರ್ಣ ಹೆಸರು. ಅವರ ಕಾವ್ಯನಾಮ 'ರತ್ನ'. ಆಧುನಿಕ ಕನ್ನಡ ಸಾಹಿತ್ಯಲೋಕದಲ್ಲಿ ಘನತೆ, ಗೌರವಗಳಿಂದ ಎದ್ದು ಕಾಣುವ ವ್ಯಕ್ತಿತ್ವ ಜಿ. ಪಿ. ರಾಜರತ್ನಂ ಅವರದು. ನೂರಾ ಐವತ್ತಕ್ಕೂ ಹೆಚ್ಚು ವೈವಿಧ್ಯಮಯ ಕನ್ನಡ (ಹಳೆ-ಹೊಸ) ಕೃತಿಗಳನ್ನು ರಚಿಸಿ ಖ್ಯಾತರಾದದ್ದಷ್ಟೇ ಅಲ್ಲ, ಕನ್ನಡ ಕೃತಿಗಳನ್ನು ತಮ್ಮ ಭಾಷಣ- ಲೇಖನಗಳ ಮೂಲಕ ಓದುಗರ ಬಳಿ ಒಯ್ಯುವ ಸಾಹಿತ್ಯ ಪರಿಚಾರಿಕೆಯ ಕಾರ್ಯವನ್ನೂ ಮಾಡಿದ್ದಾರೆ. ಹಲವಾರು ವಿಚಾರಗಳ ಮಂಡನೆಯ ಮುಖಾಂತರ ಸಂಸ್ಕೃತಿ ಪ್ರಚಾರ ಕಾರ್ಯ ನೆರವೇರಿಸಿದ್ದಾರೆ. ಕೃತಿಗಳನ್ನು ರಚಿಸಿ, ಪ್ರಕಟಿಸಿ, ಮಾರಾಟ ಮಾಡಿ, ಭಾಷಣಗಳ ಮುಖಾಂತರ ಪ್ರಚಾರ ಮಾಡಿ 'ನ ಭೂತೋ ನ ಭವಿಷ್ಯತಿ' ಎಂಬಂಥ ಗುಣವಂತ ವ್ಯಕ್ತಿತ್ವ ಗಳಿಸಿ ತಮ್ಮ ಕೃತಿಗಳಿಂದಲೂ 'ರತ್ನ' ಆಗಿ ಅಜರಾಮರರಾಗಿದ್ದಾರೆ.

ಸುಸಂಸ್ಕೃತ ಪಂಡಿತ ಕುಟುಂಬದಲ್ಲಿ ಜನಿಸಿ ಬಡತನದ ಬವಣೆಗಳನ್ನು ಅನುಭವಿಸುತ್ತಾ, ಬಾಳಿ, ಕಷ್ಟಪಟ್ಟು ಕಲಿತಿದ್ದಾರೆ. ಕನ್ನಡಾಭಿಮಾನ ಹಾಗೂ ಅಭ್ಯಾಸದ ಜೊತೆಗೆ ಗಾಂಧೀಜಿಯ ವಿಚಾರಧಾರೆಯನ್ನು ಅಳವಡಿಸಿಕೊಂಡು ಅಧ್ಯಾಪಕ ವೃತ್ತಿಯಲ್ಲಿ ನೆಮ್ಮದಿಯ ಬಾಳನ್ನು ನಡೆಸಿದರು. ನಾಗನ ಪದಗಳು ಕೃತಿಗಳು ಇವರನ್ನು ವಿಶಿಷ್ಟ ಕಾವ್ಯ ರಚನಾ ಪ್ರಕಾರದಲ್ಲಿ ಚಿರಸ್ಥಾಯಿಗೊಳಿಸಿವೆ.

ಜಿ. ಪಿ. ರಾಜರತ್ನಂ ೧೯೦೮ ರಂದು (೫-೧೨-೧೯೦೮) ಕ್ಲೋಸ್ ಪೇಟೆಯಲ್ಲಿ (ರಾಮನಗರ) ಜನಿಸಿದರು. ಸುಸಂಸ್ಕೃತ ಹಾಗೂ ಧಾರ್ಮಿಕ ಪರಂಪರೆಯ ಗುಂಡ್ಲು ಪಂಡಿತ ವಂಶದಲ್ಲಿ. ತಂದೆ ಗೋಪಾಲಕೃಷ್ಣ ಅಯ್ಯಂಗಾರ್ ಮೈಸೂರು ಜಿಲ್ಲೆಯಲ್ಲಿ ಒಳ್ಳೆಯ ಉಪಾಧ್ಯಾಯರೆಂದು ಹೆಸರು ಗಳಿಸಿದ್ದರು. ಬಾಲ್ಯದಲ್ಲಿಯೇ ತಾಯಿಯನ್ನು ಕಳೆದುಕೊಂಡ ರಾಜರತ್ನಂ ಅಜ್ಜಿಯ ಮತ್ತು ತಂದೆಯ ಆಸರೆಯಲ್ಲಿ ಬೆಳೆದರು. ಬಡಕುಟುಂಬದಲ್ಲಿ ಬೆಳೆದುಬಂದ ರಾಜರತ್ನಂ ಧೈರ್ಯದಿಂದ ಕಷ್ಟ ಎದುರಿಸುವುದನ್ನು ರೂಢಿಸಿಕೊಂಡಿದ್ದರು. ಬಹಳ ಕಷ್ಟಪಟ್ಟು ವಿದ್ಯಾರ್ಜನೆ ಮಾಡಬೇಕಾಯಿತು. ೧೯೨೮ ರಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಿಂದ ಬಿ. ಎ. ಪದವಿ ಪಡೆದರು. ಶಿಕ್ಷಣ ಮುಂದುವರಿಸಿ ಮೈಸೂರಿನ ಮಹಾರಾಜಾ ಕಾಲೇಜಿನಿಂದ ೧೯೩೧ರಲ್ಲಿ ಎಂ. ಎ. ಪದವಿ ಗಳಿಸಿದರು. ಸರಿಯಾದ ಕೆಲಸ ಸಿಕ್ಕದೆ ಆರೇಳು

ವರ್ಷ ಅತ್ತಿತ್ತ ಪರದಾಡಬೇಕಾಯಿತು. ೧೯೩೮ ರಲ್ಲಿ ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಅಧ್ಯಾಪಕರಾಗಿ ವೃತ್ತಿ ಜೀವನ ಪ್ರಾರಂಭಿಸಿ, ಕೆಲ ಕಾಲ ಅಲ್ಲಿದ್ದರು. ಅನಂತರ ತುಮಕೂರು, ಶಿವಮೊಗ್ಗ ಕಾಲೇಜುಗಳಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿ ಕೊನೆಗೆ 'ರೀಡರ್' ಎಂದು ನೇಮಕಗೊಂಡು ಬೆಂಗಳೂರಿನ ಸೆಂಟ್ರಲ್ ಕಾಲೇಜಿಗೆ ಬಂದರು. ಅಲ್ಲಿಂದಲೇ ವೃತ್ತಿಯಿಂದ ೧೯೬೪ರಲ್ಲಿ ನಿವೃತ್ತರಾದರು. ಕಾಲೇಜಿನಲ್ಲಿ ಅಧ್ಯಾಪಕರಾಗುವ ಮೊದಲು ಶಿಶುವಿಹಾರದ ಮಾಸ್ತರಿಕೆಯ ಅನುಭವವು, ರಾಜರತ್ನಂ ಅವರ ಶಿಶು ಸಾಹಿತ್ಯ ರಚನೆಗೆ ಭದ್ರಬುನಾದಿ ಒದಗಿಸಿತೆನ್ನಬಹುದು. ಅವರ ಅಭ್ಯಾಸ, ಸಾಹಿತ್ಯ ರೂಪವನ್ನೋ ಭಾಷಣ ರೂಪವನ್ನೋ ಪಡೆದು ಕೊನೆಗೆ ಅನುಭವದ ಮೂಸೆಯಲ್ಲಿ ಹದ ಪಡೆದು ಕೃತಿಯಾಗಿ ಗ್ರಂಥರೂಪದಲ್ಲಿ ಹೊರಬರುತ್ತಿತ್ತು.

ಸೆಂಟ್ರಲ್ ಕಾಲೇಜಿನಿಂದ ನಿವೃತ್ತರಾದ ಮೇಲೆಯೂ ಒಂದೆರಡು ವರ್ಷ ಯುಜಿಸಿ ಪ್ರಾಧ್ಯಾಪಕ ಎಂದು ನೇಮಕಗೊಂಡಿದ್ದರು. ಅನಂತರ ಕೆಲಕಾಲ ನ್ಯಾಶನಲ್ ಕಾಲೇಜ್, ಎಂ. ಇ. ಎಸ್. ಕಾಲೇಜ್ ಮತ್ತು ಸತ್ಯಸಾಯಿ ಕಾಲೇಜುಗಳಲ್ಲಿ ಬೇರೆ ಬೇರೆ ವಿಷಯಗಳನ್ನು ಬೋಧನ ಮಾಡಿದರು.

ಕಾಲೇಜಿನಲ್ಲಿ ಅಧ್ಯಾಪನ ಮಾಡುವುದರ ಜೊತೆಗೆ ವಿದ್ಯಾರ್ಥಿಗಳಿಂದ ಸಾಹಿತ್ಯ ರಚನೆ ಮಾಡಿಸಿ, ಪ್ರಕಟಿಸಿ, ಪ್ರೋತ್ಸಾಹ ಕೊಟ್ಟರು. ಸೆಂಟ್ರಲ್ ಕಾಲೇಜಿನ ಸುಪ್ರಸಿದ್ಧ ಕನ್ನಡ ಸಂಘಕ್ಕೆ ಚೈತನ್ಯ ನೀಡಿದರು. ಹಲವು ಕೃತಿಗಳನ್ನು ಸಂಘ ಪ್ರಕಟಿಸುವಂತೆ ಮಾಡಿದರು. ಗೋಖಲೆ ಸಾರ್ವಜನಿಕ ಸಂಸ್ಥೆ, ಗಾಂಧೀ ಸಾಹಿತ್ಯ ಸಂಘ ಮೊದಲಾದವುಗಳಿಗೂ ತಮ್ಮ ಸೇವೆ ಸಲ್ಲಿಸಿದರು. ಉತ್ತಮ ವಾಗ್ಮಿಯಾಗಿದ್ದ ರಾಜರತ್ನಂ ಹಲವಾರು ವಿಷಯಗಳ ಮೇಲೆ ಭಾಷಣ ಮಾಡಿ ಶ್ರೋತೃಗಳನ್ನು ತಣಿಸಿದರು. ಹಲವಾರು ಕನ್ನಡ ಸಮ್ಮೇಳನಗಳ ಗೋಷ್ಠಿಗಳ ಅಧ್ಯಕ್ಷತೆ ವಹಿಸಿದ ರಾಜರತ್ನಂ ಅವರನ್ನು ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ನೀಡಿ ೧೯೬೯ರಲ್ಲಿ ಗೌರವಿಸಿತು. ೧೯೭೦ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಅವರಿಗೆ ದೊರೆಯಿತು. ಮೈಸೂರು ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪದವಿ ೧೯೭೭ ರಲ್ಲಿ ದೊರೆಯಿತು. ಅಖಿಲ ಭಾರತ ದಿಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಗೌರವ ರಾಜರತ್ನಂ ಅವರಿಗೆ ೧೯೭೮ರಲ್ಲಿ ಲಭಿಸಿತು. ೧೯೭೯ರಲ್ಲಿ ಅ.ಭಾ. ಸಾಹಿತ್ಯ ಸಮ್ಮೇಳನದ ಮಕ್ಕಳ ಸಾಹಿತ್ಯ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದೇ ಕೊನೆಯ ಅಧ್ಯಕ್ಷತೆಯಾಯಿತು. ೧೯೭೯ ಮಾರ್ಚ ೧೧ರಂದು ದೈವಾಧೀನರಾದರು.

ರಾಜರತ್ನಂ ಅವರ ಬಾಳಿನ ಕಷ್ಟಪರಂಪರೆಗೆ ತಕ್ಕಮಟ್ಟಿಗೆ ವಿರಾಮ ದೊರೆತದ್ದು ಅವರು ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರೆಂದು ನೇಮಕಗೊಂಡ ನಂತರವೇ. ರಾಷ್ಟ್ರೀಯ ಜಾಗೃತಿಯ ಕಾಲದಲ್ಲಿ ಅವರು ನೇರ ಆಂದೋಲನದಲ್ಲಿ ಪಾಲ್ಗೊಳ್ಳದಿದ್ದರೂ ಗಾಂಧಿ ಪ್ರಭಾವದಿಂದಾಗಿ ಖಾದೀ ವಸ್ತ್ರವನ್ನೇ ಧರಿಸತೊಡಗಿದರು. ದಟ್ಟಿಪಂಚೆ, ಜುಬ್ಬ, ಶಲ್ಲೆ –ಎಲ್ಲ ಶುದ್ಧ ಬಿಳಿ ಉಡುಪು. ಸರಳ, ನಿರಾಡಂಬರ ಜೀವನಕ್ಕೆ ಮಾರುಹೋದವರು. ಗರ್ವ, ಕಪಟತನ ಅವರ ಬಳಿ ಸುಳಿಯುತ್ತಿರಲಿಲ್ಲ. ಅವರ ವೈಶಿಷ್ಟ್ಯಗಳಲ್ಲಿ ಸತತಾಭ್ಯಾಸ. ಶಿಸ್ತು, ಪ್ರಾಮಾಣಿಕತೆ, ದುಡಿಮೆ, ನಿಯಮ ಪಾಲನೆ, ಸರ್ವಧರ್ಮಗಳನ್ನು ಸಮಾನವಾಗಿ

ಕಾಣುವ ಉದಾರ ಮನೋಭಾವ, ನಗುಮುಖ, ವಾಕ್ಚಟುತ್ವ, ವಿದ್ಯಾರ್ಥಿ ಪ್ರೇಮ, ಸಾಹಿತ್ಯ ಪರಿಚಾರಿಕೆ ಹಾಗೂ ಭಗವದ್ಭಕ್ತಿಗಳು ಗಮನಾರ್ಹ. ಇವು ಅವರನ್ನು ಬಹುದೊಡ್ಡ ವ್ಯಕ್ತಿಯನ್ನಾಗಿ ರೂಪಿಸಿದ್ದವು. ಅವರ ಲೇಖನ, ಭಾಷಣ, ಮಾತುಕತೆಗಳಲ್ಲಿ ಅವರ ಪಾಂಡಿತ್ಯ, ಪ್ರತಿಭೆ, ಅನುಭವಗಳ ಮೇಲ್ಮೆ ಎದ್ದು ಕಾಣುತ್ತಿತ್ತು.

೧೯೨೮ರಿಂದ ೧೯೩೮ರ ಕಾಲಾವಧಿಯಲ್ಲಿ ಪರದಾಟ, ತೊಂದರೆ ವಿಪತ್ತುಗಳ ಮಧ್ಯದಲ್ಲಿ ಲಲಿತಮ್ಮನನ್ನು ಮದುವೆಯಾದರು. ಕಾಲಾನಂತರ ಕಾಯಿಲೆಗೆ ಅವರು ಬಲಿಯಾದದ್ದನ್ನು ಕಂಡರು. ತಂದೆ, ಅಣ್ಣರನ್ನು ಕಳೆದುಕೊಂಡರು. ಆದರೆ ಮನದ ಸ್ಥೈರ್ಯ ಕಳೆದುಕೊಳ್ಳದೆ ಅಭ್ಯಾಸ ಮಾಡಿ ಎಂ. ಎ. (೧೯೩೧) ಪಾಸು ಮಾಡಿದರು. ಸಂಸಾರ ತೂಗಿಸಿಕೊಂಡು ಹೋಗಲು ನೆರವಾಗಲೆಂದು ಸೀತಮ್ಮನ ಕೈಹಿಡಿದರು. ಸೀತಮ್ಮನವರ ಸಹಕಾರ, ಮಾಸ್ತಿಯವರ ಪ್ರೋತ್ಸಾಹ, ಮಾವಂದಿರ ನೆರವು, ರಾಜರತ್ನಂ ಅವರ ಜೀವನಕ್ಕೆ ನೆಮ್ಮದಿ ತಂದುವು. ವಿಶೇಷವೆಂದರೆ ರಾಜರತ್ನಂ ಅವರ ಬರವಣಿಗೆ ಮುಂದುವರಿದೇ ಇತ್ತು. ಗಂಡುಗೊಡಲಿ ನಾಟಕ, ಬುದ್ಧನ ಜಾತಕಗಳು, ಭಗವಾನ್ ಮಹಾವೀರ, ರತ್ನನ ಪದಗಳು, ತುತ್ತೂರಿ ಮೊದಲಾದ ಕೃತಿಗಳಿಂದ ಸಾಹಿತ್ಯರಂಗದಲ್ಲಿ ಅವರು ಉತ್ತಮ ಸ್ಥಾನ ಪಡೆಯುವಂತಾಯಿತು. ೧೯೬೭ ರಲ್ಲಿ ಸೀತಮ್ಮನವರು ನಿಧನರಾದರು. ರಾಜರತ್ನಂ ಅವರಿಗೆ ಒಬ್ಬ ಮಗ ಮತ್ತು ಇಬ್ಬರು ಹೆಣ್ಣುಮಕ್ಕಳು.

ರಾಜರತ್ನಂ ಅವರು ಅತ್ಯುತ್ತಮ ಪ್ರತಿಭಾನ್ವಿತ ಹಾಗೂ ಜನಪ್ರಿಯ ಸಾಹಿತಿ ಎನಿಸಿಕೊಂಡದ್ದು ಅವರ ಸಾಹಿತ್ಯ ಸೇವೆಯ ಒಂದು ಮಗ್ಗುಲಾದರೆ ಅದಕ್ಕಿಂತ ಹೆಚ್ಚು ಉದಾರವಾದ ಇನ್ನೊಂದು ಮಗ್ಗುಲು, ಅವರು ಮಾಡಿದ ಸಾಹಿತ್ಯ ಪರಿಚಾರಿಕೆ. ಸಾಮಾನ್ಯವಾಗಿ ಇಂಥ ಪರಿಚಾರಿಕೆ ಮಾಡುವ ಸಾಹಿತಿಗಳು ಬಹಳ ವಿರಳ. ಯುವ ಪ್ರತಿಭೆಗಳನ್ನು ಬರೆಯಲು ಪ್ರೋತ್ಸಾಹಿಸುತ್ತಿದ್ದರು. ಅವರ ಕೃತಿಗಳನ್ನು ಪ್ರಕಟಿಸುತ್ತಿದ್ದರು. ಹಳೆಯ ಹೊಸ ಸಾಹಿತಿಗಳ ಕೃತಿಗಳನ್ನು ತಮ್ಮ ಅಮೋಘ ಭಾಷಣಗಳ ಮುಖಾಂತರ ವಿಮರ್ಶಿಸುತ್ತಿದ್ದರು. ಸಾಮಾನ್ಯ ಜನರಿಗೂ ಸಾಹಿತ್ಯ ತಲುಪುವಂತೆ ಮಾಡುವುದು ಅವರ ವಿಶೇಷತೆ. ತಾವು ಪ್ರಕಟಿಸಿದ ಗ್ರಂಥಗಳನ್ನು ಮಾರಾಟ ಮಾಡುವುದು ಮತ್ತೊಂದು ಅವರ ಕಾರ್ಯ. ಸಾಮಾನ್ಯರ ಮನೆಗಳಿಗೆ ಗ್ರಂಥಗಳನ್ನು ಕೊಂಡೊಯ್ದು ತಲುಪಿಸುವುದು ತಮ್ಮ ವಿಮರ್ಶಾ ಭಾಷಣಗಳನ್ನು ಮುದ್ರಿಸಿ ಓದುಗರ ಗಮನ ಸೆಳೆಯುವಂತೆ ಮಾಡುತ್ತಿದ್ದರು. ಹಲವಾರು ಸಂಘ ಸಂಸ್ಥೆಗಳ, ವ್ಯಕ್ತಿಗಳ ಒಡನಾಟವಿದ್ದ ರಾಜರತ್ನಂ ಪುಸ್ತಕ ಕೊಂಡು ಓದುವಂತೆ ಪ್ರೇರಣೆ ಕೊಡುವುದೂ ಒಂದು ಮಹತ್ವದ ಪರಿಚಾರಿಕೆ. ಹೀಗೆ ಹಳೆಯ ಹೊಸ ಸಾಹಿತ್ಯ ಪೋಷಣೆ ಅವರ ಪರಿಚಾರಿಕೆಯ ಮುಖ್ಯ ಅಂಶವಾಗಿತ್ತು. ಅವರಲ್ಲಿ ಹಿರಿ-ಕಿರಿಯರೆಂಬ ಭೇದವಿರಲಿಲ್ಲ. ಅವರಲ್ಲಿ ಪ್ರೌಢ ಸಾಹಿತ್ಯ ಮತ್ತು ಶಿಶು ಸಾಹಿತ್ಯ ಎಂಬ ಭೇದವಿರಲಿಲ್ಲ. ಸರ್ವ ರೀತಿಯ ಸಾಹಿತ್ಯ ರಚನೆ, ಪ್ರಕಟಣೆ, ಮಾರಾಟ, ಕೃತಿ ವಿಮರ್ಶೆಗಳಿಗೆ ತಮ್ಮನ್ನೇ ಅರ್ಪಿಸಿಕೊಂಡ ಸಾಹಿತ್ಯ ಪರಿಚಾರಕರಾದರು. ಇದರೊಡನೆ ವಿವಿಧ ಪ್ರಕಾರಗಳಲ್ಲಿ ಸಾಹಿತ್ಯ ರಚನೆ ತಾವೂ ಮಾಡಿ ಕೃತಾರ್ಥರಾದರು. 'ರತ್ನನ ಪದಗಳು' ಎಂದ ಕೂಡಲೇ ರಾಜರತ್ನಂ ನಮ್ಮ ಕಣ್ಣೆದುರು ಕಂಗೊಳಿಸುತ್ತಾರೆ. ಆ ಸಂಕಲನದಲ್ಲಿ

ವ್ಯಕ್ತವಾದ ಅವರ ಜೀವನ ದರ್ಶನ ಅಸಾಧಾರಣವಾದುದು. ಬಡವರ ನೋವು-ನಲಿವು, ಸೋಲು-ಗೆಲುವು, ಒಲವು-ದುಃಖ, ಆಕ್ರೋಶ, ಪ್ರತಿಭಟನೆಗಳ ರೀತಿ, ಹಾಸ್ಯ ಹೊಮ್ಮಿಸುವ ರೀತಿ ಮೇಲಾಗಿ ರಾಜರತ್ನಂ ಅವರ ವಿಶಿಷ್ಟ ಭಾಷೆ-ಶೈಲಿ ಅವರನ್ನು ಎತ್ತರಕ್ಕೆ ಏರಿಸುತ್ತವೆ. ಇನ್ನೊಂದು ಇದೇ ತೆರನಾದ ಕವನ ಸಂಕಲನ ನಾಗನ ಪದಗಳು ಕೃತಿಯಲ್ಲಿ, ಸ್ವಲ್ಪ ನೆಮ್ಮದಿಯ ಬಾಳನ್ನು ನಡೆಸುವವರ ಚಿತ್ರಣಗಳಿವೆ. 'ಪುರುಷ ಸರಸ್ವತಿ' ಕಾವ್ಯದಲ್ಲಿ ರಾಜರತ್ನಂ ಅವರ ವಿಡಂಬನ ಸಾಹಿತ್ಯದ ಮೆರಗನ್ನು ಗುರುತಿಸಬಹುದು. ಹಾಸ್ಯ-ವಿಡಂಬನ-ಅಣಕ ಪ್ರಕಾರಗಳಲ್ಲಿ ಸಾಹಿತ್ಯ ರಚಿಸಿದ್ದಾರೆ. 'ನಿರ್ಭಯಾಗ್ರಫಿ' ಎಂಬ ಲೇಖನ ಸಂಕಲನವು ರಾಜರತ್ನಂ ಅವರ ವಿಡಂಬನ ಸಾಹಿತ್ಯಕ್ಕೆ ಇನ್ನೊಂದು ಉತ್ತಮ ಉದಾಹರಣೆಯಾಗಿದೆ.

ಪಾಲೀ ಭಾಷೆಯನ್ನು ಅಭ್ಯಾಸ ಮಾಡಿ, ಬೌದ್ಧ ಸಾಹಿತ್ಯ ಅಭ್ಯಾಸ ಮಾಡಿ ರಾಜರತ್ನಂ ಅವರು ಗೌತಮ ಬುದ್ಧ, ಧರ್ಮಪದ, ಜಾತಕ ಕಥೆ ಮೊದಲಾದ ಕೃತಿಗಳನ್ನು ಕನ್ನಡಕ್ಕೆ ಕೊಟ್ಟಿದ್ದಾರೆ. ಜೈನಶಾಸ್ತ್ರವನ್ನು ಅಭ್ಯಾಸ ಮಾಡಿ 'ಮಹಾವೀರನ ಮಾತುಕತೆ', 'ಗೋಮಟೇಶ್ವರ', 'ಭಗವಾನ್ ಮಹಾವೀರ', 'ಭಗವಾನ್ ಪಾರ್ಶ್ವನಾಥ' ಮೊದಲಾದ ಕೃತಿಗಳನ್ನು ರಚಿಸಿ ಪ್ರಕಟಿಸಿದ್ದಾರೆ.

ಸರ್ವಧರ್ಮಗಳನ್ನು ಸಮನಾಗಿ ಕಾಣುತ್ತಿದ್ದ ರಾಜರತ್ನಂ ಅವರು ಇತರ ಧರ್ಮಗಳ ಬಗ್ಗೆಯೂ ಅಭ್ಯಾಸ ಮಾಡಿ ಹಲವಾರು ಭಾಷಣ-ಲೇಖನಗಳನ್ನು ಕೊಟ್ಟಿದ್ದಾರೆ.

ರಾಜರತ್ನಂ ಅವರು ಕೊಟ್ಟ ಶಿಶು ಸಾಹಿತ್ಯ ಕನ್ನಡ ಕಲಿಯುವ ಮಕ್ಕಳನ್ನು ನಲಿಸಿದೆ, ಕುಣಿಸಿದೆ. ಮಕ್ಕಳಾಗಿದ್ದಾಗ ಕಲಿತ ರಾಜರತ್ನಂ ಅವರ ಹಾಡುಗಳನ್ನು ಹಿರಿಯರಾದವರೂ ನೆನಪಿಸಿಕೊಂಡು ಸಂತೋಷಪಡುತ್ತಾರೆ. ಮಕ್ಕಳೊಡನೆ ರಾಜರತ್ನಂ ಅವರು ಗುರುಗಳಾಗಿ ಬಾಳಿದ್ದು ಇಂಥ ಸಾಹಿತ್ಯ ಪ್ರಕಾರದಲ್ಲಿ ಅವರು ಸಾಕಷ್ಟು ಕೃಷಿ ಮಾಡುವಂತೆ ಪ್ರೇರೇಪಿಸಿತೆನ್ನಬಹುದು. ಮಕ್ಕಳ ಮೇಲಿನ ಮಮತೆ ಅಪಾರವಾಗಿತ್ತು ಎಂಬುದಕ್ಕೆ ಅವರು ಕೊಟ್ಟ ಶಿಶು ಸಾಹಿತ್ಯ ಪ್ರಕಾರದಲ್ಲಿಯ ಪುಸ್ತಿಕೆಗಳೇ ಸಾಕ್ಷ್ಯ ನುಡಿಯುತ್ತವೆ.

ಹಳೆಯ ಹಾಗೂ ಹೊಸ ಸಾಹಿತ್ಯ ಕೃತಿಗಳನ್ನು ಅಭ್ಯಾಸ ಮಾಡಿ, ಪಾಂಡಿತ್ಯಪೂರ್ಣ ಭಾಷಣವನ್ನು ಗಂಟೆಗಟ್ಟಲೆ ಮಾಡಿ, ಜನರನ್ನು ಮಂತ್ರಮುಗ್ಧರನ್ನಾಗಿ ಮಾಡುವ ಅವರ ವಾಕ್ಪಟುತ್ವ ಮೆಚ್ಚಲೇಬೇಕು. ಇಂಥ ಅನೇಕ ಭಾಷಣ, ಲೇಖನಗಳು ಸಂಕಲನಗಳಾಗಿ ಪ್ರಕಟವಾಗಿವೆ. ತಾವು ಬೇರೆಯವರು ಏರ್ಪಡಿಸಿದ ಕಾರ್ಯಕ್ರಮಗಳಲ್ಲಿ ಭಾಷಣ ಕೊಡುತ್ತಿದ್ದರಲ್ಲದೆ, ತಾವೂ ಇಂಥ ಕಾರ್ಯಕ್ರಮಗಳನ್ನು ಸಂಯೋಜಿಸಿ ಬೇರೆಯವರೂ ಭಾಷಣ ಮಾಡುವಂತೆ ಪ್ರೋತ್ಸಾಹ ನೀಡುತ್ತಿದ್ದರು.

ಗಾಂಧಿ ಸಾಹಿತ್ಯವನ್ನೂ, ಸಾಯಿ ಸಾಹಿತ್ಯವನ್ನೂ ಜನರಿಗೆ ಕೊಟ್ಟ ಶ್ರೇಯಸ್ಸು ರಾಜರತ್ನಂ ಅವರಿಗಿದೆ. ಅವರ ಕೃತಿಗಳಲ್ಲಿ ಎದ್ದು ಕಾಣುವ ಅವರ ಕನ್ನಡ ಪ್ರೇಮ ಅನುಪಮವಾದದ್ದು.

ಸಾಹಿತಿಗಳ ಸಾಲಿನಲ್ಲಿ ಎದ್ದು ಕಾಣುವಂಥ ವ್ಯಕ್ತಿತ್ವಪಡೆದ ರಾಜರತ್ನಂ ಅವರು ನೂರಕ್ಕಿಂತಲೂ ಹೆಚ್ಚು ಕೃತಿಗಳನ್ನು ಕನ್ನಡಕ್ಕೆ ಕೊಟ್ಟು ಅದನ್ನು ಶ್ರೀಮಂತಗೊಳಿಸಿದ್ದಾರೆ. ತ್ರಿಕರಣಪೂರ್ವಕವಾಗಿ ಕನ್ನಡ ಕಟ್ಟುವ ಕೆಚ್ಚೆದೆಯ ರಾಜರತ್ನಂ ಅಂಥ ಕನ್ನಡದ ಸಾಹಿತಿಗಳು ಹಲವರು ಹುಟ್ಟಿ ಬರಲಿ. ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯಲಿ ಎಂದು ಹಾರೈಸೋಣ.

ರಾಜರತ್ನಂ ಅವರ ಜೀವನ ಸಾಧನೆಗಳ ಕುರಿತಾದ ಕೆಲವು ಹೇಳಿಕೆಗಳನ್ನು ಇನ್ನು ಗಮನಿಸಬಹುದಾಗಿದೆ :

- "ಸರ್ವ ಧರ್ಮ ಸಮವಾದ" ಅವರು ನಂಬಿದ್ದ ಇನ್ನೊಂದು ಮೌಲ್ಯ ವೇದೋಪನಿಷತ್ತಿನ ವಾಕ್ಯಗಳು, ಬುದ್ಧ ಅಶೋಕರ ಮಾತುಗಳು, ಗಾಂಧಿವಾಣಿ, ಸತ್ಯಸಾಯಿ ಅವರ ಮಾತುಗಳು ಎಲ್ಲವೂ ಅವರಿಗೆ ಈ ನಿಟ್ಟಿನಲ್ಲಿ ಬಲವಾದ ಆಧಾರವನ್ನು ಒದಗಿಸಿದ್ದವು. ಅಂತೆಯೇ ಅವರು ಜಗತ್ತಿನ ನಾನಾ ಧರ್ಮಗಳನ್ನು ಸಮಾನಾಸಕ್ತಿಯಿಂದ ಶ್ರದ್ಧೆಯಿಂದ ಅಧ್ಯಯನ ಮಾಡಿದರು. ಜನತೆಗೆ ತಿಳಿಯ ಹೇಳಿದರು. "ಮತಗಳ ನಡುವೆ ಸಂಪರ್ಕ ಸೇತು ಆದರು" ಎಂದು ನೀಲತ್ತಹಳ್ಳಿ ಕಸ್ತೂರಿ ನುಡಿದಿದ್ದಾರೆ.

- "ಕವಿ, ನಾಟಕಕಾರ ಗುಂಡ್ಲು ಪಂಡಿತ ರಾಜರತ್ನಂ ಅಯ್ಯಂಗಾರ್ ಬೌದ್ಧ ಧರ್ಮವನ್ನು ಆಳವಾಗಿ ಅಭ್ಯಾಸ ಮಾಡಿದ್ದರು. ಭ್ರಮರ ಎಂಬ ಹೆಸರಿನಿಂದ ಅಂಕಣ ಬರಹಗಾರರಾಗಿದ್ದರು" ಎಂದು ಕನ್ನಡ ನುಡಿ ನಿಪುಣರು ಗ್ರಂಥದಲ್ಲಿ ಹೇಳಲಾಗಿದೆ.

- "ನನ್ನ ತಂದೆ 'ಪುಸ್ತಕ ಪ್ರಾಣಿ'. ಒಳ್ಳೆಯ ಪುಸ್ತಕವನ್ನು ಕುರಿತ ಓದು ಬರಹಗಳು ಅವರಿಗೆ ಉಚ್ಛ್ವಾಸ, ನಿಃಶ್ವಾಸವಿದ್ದಂತೆ. ಅವರ ಪಾಲಿಗೆ ಪುಸ್ತಕಗಳೇ ಶರಣ ಸಮೂಹ. ಉಚ್ಚಾರ ಶುದ್ಧಿ, ವಿಚಾರ ಶುದ್ಧಿ, ಆಚಾರ ಶುದ್ಧಿಗಳನ್ನೊಳಗೊಂಡು ಆ ಮೂಲಕ ರಸವರ್ಷವನ್ನು ಉಂಟು ಮಾಡುವ ಸಕಲವೂ ಅವರಿಗೆ ಪ್ರಿಯವಾಗಿದ್ದವು" ಎಂದು ರಾಜರತ್ನಂ ಅವರ ಪುತ್ರ ಶ್ರೀಧರ್ ತಿಳಿಸಿದ್ದಾರೆ.

- "ಮಕ್ಕಳ ಮೇಲಿನ ಅವರ ಅಕ್ಕರೆ, ಅವರಿಗಾಗಿ ಒಳ್ಳೆಯ ಸಾಹಿತ್ಯ ಒದಗಿಸುವ ಕಾಳಜಿ, ಬೇರೆ ಬೇರೆ ವಯಸ್ಸಿನ ಮಕ್ಕಳ ಮಾನಸಿಕ ಮಟ್ಟಕ್ಕೆ ಸೂಕ್ತವಾಗುವಂತೆ ಸಾಹಿತ್ಯದ ಆಕರ್ಷಕ ಅಚ್ಚುಕಟ್ಟು, ಚಿತ್ರ, ಅಕ್ಷರ ವಿನ್ಯಾಸಗಳು, ಹದವಾದ ಭಾಷೆ, ಹಾಡಲು, ಕುಣಿಯಲು, ಅಭಿನಯಿಸಲು, ಓದಿಕೊಳ್ಳಲು, ಸರಾಗವಾಗಿ ಒದಗಿ ಬರುವಂತಹ ಗಮನಾರ್ಹ ಭಾಗವಾಗಿದೆ" ಎಂದು ನೀಲತ್ತಹಳ್ಳಿ ಕಸ್ತೂರಿ ಬಣ್ಣಿಸಿದ್ದಾರೆ.

- "ನಾನು ಕಂಡಂತೆ ನನ್ನ ತಂದೆ ಕನ್ನಡದ ಗರಡಿಯಾಳು. ಅವರು ಒಳಗೆ ತೆಗೆದುಕೊಳ್ಳುತ್ತಿದ್ದ ಉಸಿರು ಯಾವ ಭಾಷೆಯ ಮೂಲಕವಾದರೂ ನಡೆಯುತ್ತಿತ್ತು. ಆದರೆ ಹೀಗೆ ಹತ್ತೂ ಕಡೆಯಿಂದ ತಂದು ತುಂಬಿಕೊಂಡ ಉಸಿರನ್ನು ಹೊರಗೆ ನಡೆಸುತ್ತಿದ್ದುದು ಮಾತ್ರ ಕನ್ನಡವೊಂದರಿಂದಲೇ" ಎಂದು ಮಗ ಶ್ರೀಧರ ಹೇಳಿದ್ದಾರೆ.

## ಜಿ. ಪಿ. ರಾಜರತ್ನಂ ಅವರ ಜೀವನ ವಿವರ

ಜನನ : ೧೯೦೮ (೫-೧೨-೧೯೦೮) ಕ್ಲೋಸ್ ಪೇಟೆ (ರಾಮ್‌ನಗರ).

**ಕಾಲೇಜ್ ಶಿಕ್ಷಣ :** ೧೯೨೮ ಬಿ. ಎ. ಸೆಂಟ್ರಲ್ ಕಾಲೇಜ್ ಬೆಂಗಳೂರು. ೧೯೩೧ ಕನ್ನಡ ಎಂ. ಎ. ಮೈಸೂರಿನ ಮಹಾರಾಜಾ ಕಾಲೇಜಿನಿಂದ.

**ಕನ್ನಡ ಅಧ್ಯಾಪಕ :** ೧೯೩೮ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕೆಲ ಸಮಯ ಅನಂತರ ಬೆಂಗಳೂರು, ಮೈಸೂರು, ತುಮಕೂರು, ಶಿವಮೊಗ್ಗಗಳಲ್ಲಿ ರೀಡರ್ : ಬೆಂಗಳೂರಿನ ಸೆಂಟ್ರಲ್ ಕಾಲೇಜ್ (ನಿವೃತ್ತಿ ಪೂರ್ವದಲ್ಲಿ), ಯುಜಿಸಿ ಪ್ರಾಧ್ಯಾಪಕ (ನಿವೃತ್ತಿ ನಂತರ) 'ದೇವರಾಜ ಬಹದ್ದೂರು ಪ್ರಶಸ್ತಿ 'ರತ್ನನ ಪದಗಳು', 'ಬುದ್ಧ ವಚನ' 'ಪರಿಚಯ'ಗಳಲ್ಲಿ.

**ಪ್ರಶಸ್ತಿ :** ೧೯೬೯ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ, ೧೯೭೦ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ. ಗೌರವ ಡಿ.ಲಿಟ್ ೧೯೭೭ ಮೈಸೂರು ವಿಶ್ವವಿದ್ಯಾನಿಲಯದಿಂದ.

**ಅಧ್ಯಕ್ಷತೆ :** ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ದೆಹಲಿ ೧೯೭೮.

**ಸಂಸ್ಮರಣ ಗ್ರಂಥಗಳು :** ೧೯೭೯ ಜೀವ ರತ್ನ, ಸಾಹಿತ್ಯ ಪರಿಚಾರಕ ಎಂಬ ಸಂಸ್ಮರಣ ಗ್ರಂಥಗಳ ಪ್ರಕಟಣೆ.

ನಿಧನ : ೧೯೭೯ (೧೩-೩-೧೯೭೯)

## ಜಿ. ಪಿ. ರಾಜರತ್ನಂ ಅವರ ಕೃತಿಗಳು

**ಕವನ ಸಂಗ್ರಹಗಳು :** ಪುರುಷ ಸರಸ್ವತಿ, ಜಪಾನಿನ ಹಿಮಗಿರಿ, ರತ್ನನ ಪದಗಳು, ನಾಗನ ಪದಗಳು, ನೂರು ಪುಟಾಣಿ (ಅನುವಾದ), ಶಾಂತಿ.

**ಕತೆ :** ಕರಿಯ ಕಂಬಳಿ, ಕಲ್ಲಿನ ಕಾಮಣ್ಣ, ಕ್ಯಾಂಡಿಡ್ (ಅನುವಾದ), ನೆನಪು ನಂಜುಂಡ, ಹನಿಗಳು.

**ನಾಟಕ :** ಕಂಬಳಿ ಸೇವೆ, ಗಂಡುಗೊಡಲಿ, ನರಕದ ನ್ಯಾಯ, ನೆನಪು, ಮಹಾಕವಿ ಮೇಳ, ಮಹಾಮೂರ್ತಿ, ಶಕಾರನ ಸಾರೋಟು, ಶ್ರೀ ನಂದಳಿಕೆ ನಾಟಕ, ಶ್ರೀ ಬಾಹುಬಲಿ, ವಿಜಯ, ಶ್ರೀ ಗೊಮ್ಮಟ ಶಿಲ್ಪ, ಸಂಭವಾಮಿ ಯುಗೇ ಯುಗೇ, ಸೋಲಿಗರ ಸಿದ್ಧ, ಹೆಂಡದ ಹೆಣ, ವೀರ ಮಾರ್ತಾಂಡ ಚಾವುಂಡರಾಯ.

ವಿಡಂಬನೆ : ಅಪಕಥಾ ವಲ್ಲರಿ, ಪರಗತಿ ಪಕ್ಷಿ, ರಾಘವಾಂಕನ ಹಲ್ಲು, ನಿರ್ಭಯಾಗ್ರಫಿ.

**ಭಾಷಣಗಳು / ಲೇಖನಗಳು :** ಒಬ್ಬನೇ ದೇವರು ಒಂದೇ ಜನ, ಸಪ್ತಾಕ್ಷರೀ ಮಂತ್ರ, ನೆನಪಿನ ಬೀರುವಿನಿಂದ, ವಿದ್ಯಾರ್ಥಿಯೋಗ, ರಾಮರಾಜ್ಯ ಇತ್ಯಾದಿ.

**ಮಕ್ಕಳ ಸಾಹಿತ್ಯ :** (ಅ) **ಕವನ :** ಕಂದನ ಕಾವ್ಯಮಾಲೆ, ಕಡಲೆಪುರಿ, ಕಲ್ಲು ಸಕ್ಕರೆ, ತುತ್ತೂರಿ. (ಆ) **ಕತೆ :** ಅಣ್ಣ ತಮ್ಮ, ಆಳ್ವಾರರ ಕತೆಗಳು, ಕೋಳಿಕಳ್ಳ ಇತ್ಯಾದಿ. (ಇ) **ರೂಪಕ :** ಗ್ರಾಮಣಿ

ಚಂಡ. ಧ್ವಜ ವಂದನೆ, ಬೆಳೆಯುವ ಪೈರು ಇತ್ಯಾದಿ (ಈ) ಇತರೆ : ಗಾಂಧಿ ವಿದ್ಯೆ, ನಮ್ಮ ಬಾವುಟ, ಪುಟಾಣಿ ಪ್ರಾರ್ಥನೆಗಳು ಇತ್ಯಾದಿ.

ಬೌದ್ಧ ಸಾಹಿತ್ಯ : ಚೀನಾ ದೇಶದ ಬೌದ್ಧ ಯಾತ್ರಿಕರು, ಜಾತಕ ಕಥೆಗಳು, ಧರ್ಮಪದ, ಬುದ್ಧನ ಕತೆಗಳು, ಭಗವಾನ್ ಬುದ್ಧ, ಹತ್ತು ಮಕ್ಕಳ ತಾಯಿ ಇತ್ಯಾದಿ.

ಜೈನ ಸಾಹಿತ್ಯ : ಕಾರ್ಕಳದ ಗೋಮಟೇಶ್ವರ ಸ್ವಾಮಿ, ಭಗವಾನ್ ಮಹಾವೀರ ಸ್ವಾಮಿ, ಪಾರ್ಶ್ವನಾಥ ಸ್ವಾಮಿ ಇತ್ಯಾದಿ.

ವಿಷ್ಣುಭಕ್ತಿ ಸಾಹಿತ್ಯ : ಕಸ್ತೂರಿ ತಿಲಕಂ, ಗೀತ ಗೋಪಾಲಂ, ಜಯ ಮಂಗಳಂ, ನನ್ನ ಶ್ರೀ ವೈಷ್ಣವ ಕೈಂಕರ್ಯ, ಮಾಧವ ಪದ ಮಾಧುರ್ಯ, ವೈರಾಗ್ಯ ಪಂಚಕ, ಶ್ರೀರಾಮ ನಾಮ, ಶ್ರೀ ವಿಷ್ಣು ಚಿತ್ತ, ಶ್ರೀಕೃಷ್ಣ ಸೇವಾವ್ರತಂ ಇತ್ಯಾದಿ.

ಗಾಂಧೀ ಸಾಹಿತ್ಯ : ಗಾಂಧೀ ಜಯಂತಿಯ ಕಾಣಿಕೆ, ಗಾಂಧಿ ಶಕ್ತಿಯ ಮೂಲ, ಗಾಂಧಿ ಗಾಯತ್ರಿ, ಗಾಂಧೀ ರಾಜ್ಯಭಾರ ಇತ್ಯಾದಿ.

ಧರ್ಮ/ನೀತಿ : ಆತ್ಮರಥ ದೇವರಥ, ಇಸ್ಲಾಂ ಧರ್ಮದ ಪರಿಮಳ, ಜ್ಞಾನಸೂರ್ಯ, ಬೆಳಕಿನ ದಾರಿ, ಸನಾತನ ಧರ್ಮ ಬೋಧೆ, ಸರ್ವದೇವ ನಮಸ್ಕಾರ ಇತ್ಯಾದಿ.

ಸತ್ಯಸಾಯಿ ಸಾಹಿತ್ಯ : ಕಪಿಧ್ವಜ ಎಂಬ ಕೆಲವು ಸತ್ಯಸಾಯಿ ಕಥೆಗಳು, ಗುರುಪೂರ್ಣಿಮಾ, ಶ್ರೀ ಸಾಯಿ ಚಿಂತನ, ಶ್ರೀ ಸಾಯಿ ಸರಸ್ವತಿ, ಶ್ರೀ ಸಾಯಿ ಮಾರ್ಗ, ಸಾಯಿ ವಚನ ಮಧು, ಸಾಯಿ ಸಲ್ಲಾಪ, ಸಾಯಿ ಮಹಾ ಪರ್ವ ಇತ್ಯಾದಿ.

❋ ❋ ❋

# ಕೃಷ್ಣಕುಮಾರ ಕಲ್ಲೂರ

ಮುಂಬಯಿಯ ಚಿಂತನಶೀಲ ಹಿರಿಯ ಕನ್ನಡ ಸಾಹಿತಿ, ಸಂಶೋಧಕ, ಉತ್ಕಟ ಕನ್ನಡ ಅಭಿಮಾನಿ, ಕರ್ನಾಟಕದ ಸರ್ವಾಂಗೀಣ ಪ್ರಗತಿಗಾಗಿ ಪರಿತಪಿಸುತ್ತಿದ್ದ ಕೆಚ್ಚಿನ ಕನ್ನಡಿಗ, ಕೃಷ್ಣಕುಮಾರ ಕಲ್ಲೂರ. ಕಾಶ್ಯಪ ಕೃಷ್ಣಕುಮಾರ ಕಲ್ಲೂರ ಎಂದೂ ಪ್ರಸಿದ್ಧರಾಗಿದ್ದಾರೆ. ಜೀವನೋಪಾಯಕ್ಕಾಗಿ ಮುಂಬಯಿಯಲ್ಲಿ ನೆಲೆಸಿದರೂ ಕನ್ನಡದ, ಕರ್ನಾಟಕದ ಕುರಿತೇ ಇವರು ಸದಾ ಚಿಂತನೆ ಮಾಡುತ್ತಿದ್ದರು.

ಮೂಲತಃ ಧಾರವಾಡ ಜಿಲ್ಲೆಯವರಾದ ಕೃಷ್ಣಕುಮಾರರು ೧೯೦೮ರಲ್ಲಿ ಜನಿಸಿದರು. (೨೧-೧೨-೧೯೦೮) ತಂದೆಯ ಹೆಸರು ಅನಂತರಾಯರು. ತಾಯಿ ರಾಧಾಬಾಯಿ. ಕೃಷ್ಣಕುಮಾರರು ಧಾರವಾಡ ಮತ್ತು ಶಾಂತಿನಿಕೇತನಗಳಲ್ಲಿ ಶಿಕ್ಷಣ ಪಡೆದರು. ಮುಂಬಯಿ ವಿಶ್ವವಿದ್ಯಾಲಯದ ಬಿ. ಎ. ಪದವಿಗೆ ಅವರು ಸಾಹಿತ್ಯ ವಿಷಯವನ್ನು ಆಯ್ದುಕೊಂಡಿದ್ದರು. ೧೯೩೦ ರಲ್ಲಿ ಬಿ. ಎ. ಪಾಸಾದರು. ಎಂ. ಎ. ಪದವಿಗೆ ಸಮಾಜಶಾಸ್ತ್ರ ಆಯ್ದುಕೊಂಡು ೧೯೩೩ ರಲ್ಲಿ ಪಾಸಾದರು. ಲಂಡನ್ ವಿಶ್ವವಿದ್ಯಾಲಯದಿಂದ ಡಿಪ್ ಎಡ್ ಮತ್ತು ಎಂ. ಆರ್. ಎಸ್. ಟಿ. ಪದವಿಗಳನ್ನು ಪಡೆದರು. ಧಾರವಾಡದ ಗೆಳೆಯರ ಗುಂಪಿನಲ್ಲಿ ಬೇಂದ್ರೆ, ಗೋಕಾಕರ ಒಡನಾಡಿಯಾಗಿ ನಾಟಕ, ಪ್ರಬಂಧ, ಸಣ್ಣಕತೆ, ಕವನಗಳನ್ನು ರಚಿಸಿ ಕನ್ನಡದ ಹಿರಿಯ ಸಾಹಿತಿ ವರ್ಗಕ್ಕೆ ಸೇರಿದರು.

ಕನ್ನಡ ಸಣ್ಣಕಥಾ ಪ್ರಪಂಚದಲ್ಲಿ ಮಾಸ್ತಿಯವರ ನಂತರ (೧೯೩೦) ಇವರ ಹೆಸರು ಸ್ಮರಿಸುವಷ್ಟು ಅತ್ಯುತ್ತಮ ಸಣ್ಣ ಕತೆಗಳನ್ನು ಆಗಿನ ಕಾಲದಲ್ಲಿ ರಚಿಸಿ ಖ್ಯಾತರಾಗಿದ್ದರು. ೧೯೫೯ ರಲ್ಲಿ ನಡೆದ ಅಖಿಲ ಭಾರತ ಕರ್ನಾಟಕ ಸಣ್ಣ ಕತೆಗಾರರ ಸಮ್ಮೇಳನಕ್ಕೆ ಕೃಷ್ಣಕುಮಾರರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದುದು ಮೇಲಿನ ಮಾತಿಗೆ ಸಾಕ್ಷ್ಯ ಒದಗಿಸುತ್ತದೆ.

ಇಂಗ್ಲಿಷ್‌ನಲ್ಲಿಯೂ ಇವರು ಲೇಖನ ಕಾರ್ಯ ಮಾಡಿದ್ದಾರೆ. ಆಗಿನ ಕಾಲದಲ್ಲಿಯ ಮುಂಬಯಿ ಸರಕಾರದ 'ವೆಸ್ಟ್ ಪೋರ್ಟ್ ಡೆವಲಪ್‌ಮೆಂಟ್ ಕಮಿಟಿ'ಯ ಕಾರ್ಯದರ್ಶಿಯಾಗಿ. 'ಕಾರವಾರ ಆ್ಯಂಡ್ ಕ್ಯಾನರಾ ಪೋರ್ಟಿನ' ಲೇಖಕರಾಗಿ, ೧೯೭೩ರಲ್ಲಿ ಪ್ರಕಟವಾದ 'ಕರ್ನಾಟಕ ನಾಮಕರಣ' ಮಹೋತ್ಸವ ಸಮಿತಿಯ ಸ್ಮರಣ ಸಂಚಿಕೆಯ ಸಂಪಾದಕ ಮಂಡಲದ ಪ್ರಮುಖ ಸದಸ್ಯರಾಗಿ, ಮುಂಬಯಿ- ಕರ್ನಾಟಕ ಸಂಘದ

'ಕರ್ನಾಟಕ ಡಿರೆಕ್ಟರಿ' (೧೯೬೧)ಯ ಸಂಪಾದನಾ ಸಮಿತಿಯ ಗಣ್ಯ ಸದಸ್ಯರಾಗಿ, ಪ್ರ್ಯಾಟಿಕ್ ಟೆಕ್ನಿಕಲ್ ಶಾಲೆಯ ಮುಖ್ಯೋಪಾಧ್ಯಾಯರಾಗಿ, ಕಾರ್ಯದರ್ಶಿಯಾಗಿ ಹಾಗೂ ಎಡ್ಮಿನಿಸ್ಟ್ರೇಟರ್ ಆಗಿ ಸೇವೆ ಸಲ್ಲಿಸಿದ್ದಾರೆ.

ಕೃಷ್ಣಕುಮಾರರು ತಮ್ಮ ಸೃಜನಶೀಲ ಹಾಗೂ ಇತರ ಲೇಖನ ಕಾರ್ಯದ ಜೊತೆಗೆ ಗ್ರಂಥ ಪ್ರಕಟಣೆ, ಪತ್ರಿಕಾ ಸಂಪಾದನೆ, ಕೆಲವು ವಿಶಿಷ್ಟ ಕಾರ್ಯಕ್ರಮಗಳ ಸಂಯೋಜನೆ, ಕರ್ನಾಟಕದ ಕುರಿತು ವಿಷಯ ಸಂಗ್ರಹ, ಅಭ್ಯಾಸ ಮತ್ತು ಚಿಂತನೆ ಜೀವನದುದ್ದಕ್ಕೂ ಮಾಡಿದ್ದಾರೆ. ಕನ್ನಡ ಲಿಪಿಯಲ್ಲಿ ಮಾಡಬಹುದಾದ ಸುಧಾರಣೆಗಳ ಬಗ್ಗೆ ಅವರು ಅಲ್ಲಲ್ಲಿ ಭಾಷಣ. ಪ್ರಚಾರ ಮಾಡುತ್ತಿದ್ದರು. ಉದಾ : ೧೯೬೦ರ ದಶಕದಲ್ಲಿ ಮುಂಬಯಿಯಲ್ಲಿ ಸಾಹಿತ್ಯ ಕೂಟವು ಮಾಟುಂಗ ಮುಂಬಯಿ ಕನ್ನಡ ಸಂಘದ ವಾಚನಾಲಯದಲ್ಲಿ ಏರ್ಪಡಿಸಿದ ಲಿಪಿ ಸುಧಾರಣೆಯ ಬಗ್ಗೆ ಅವರು ಮಾಡಿದ ಸಂಶೋಧನ ಪರ ಭಾಷಣ. ಮುಂದೆ ಕೃಷ್ಣಕುಮಾರರು ಮತ್ತು ಡಾ. ಹಾವನೂರ ಅವರು ಲಿಪಿ ಸುಧಾರಣೆ ಸೂಚನೆಗಳಲ್ಲಿ ಕೆಲವನ್ನು ತಮ್ಮ ಲೇಖನಗಳಲ್ಲಿ ಬಳಸಲು ತೊಡಗಿದರು. ಉದಾ : ಈ-ಇೀ (ದೀರ್ಘ ಸ್ವರಗಳ ಅಕ್ಷರಗಳನ್ನು ಲಿಪಿ ಸುಧಾರಣೆಯ ಮೂಲಕ ಕಡಿಮೆ ಮಾಡುವುದು.)

ಕನ್ನಡ ಭಾಷೆಯಲ್ಲಿಯ ಪ್ರೌಢಿಮೆಯಲ್ಲದೆ ಬಂಗಾಲಿ, ಗುಜರಾತಿ, ಮರಾಠಿ, ಹಿಂದಿ, ಇಂಗ್ಲಿಷ್ ಹಾಗೂ ಸಂಸ್ಕೃತ ಭಾಷೆಗಳನ್ನೂ ಬಲ್ಲವರಾಗಿದ್ದರು. ಇವುಗಳಲ್ಲಿ ಕೆಲವು ಭಾಷೆಗಳಿಂದ ಸಣ್ಣ ಕತೆಗಳನ್ನು ಅನುವಾದಿಸಿ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ.

ಬಾಳಿನ ಕೊನೆಯ ಕಾಲದಲ್ಲಿ ಕೆಲ ಸಮಯ ರೋಗಗ್ರಸ್ತರಾಗಿ ೧೫-೫-೧೯೮೨ರಂದು ದೈವಾಧೀನರಾದರೂ ತಮ್ಮ ಅಮೂಲ್ಯ ಸಾಹಿತ್ಯಿಕ ಮತ್ತು ಸಾಮಾಜಿಕ ಕಾರ್ಯಗಳಿಂದ ಅಜರಾಮರರಾಗಿದ್ದಾರೆ. ಮುಂಬಯಿ ಕನ್ನಡಿಗರಂತೂ ಅವರನ್ನು ಮರೆಯಲು ಸಾಧ್ಯವಿಲ್ಲ.

ಕಲ್ಲೂರ ಅವರು ಯುವಕರಾಗಿದ್ದಾಗ ಧಾರವಾಡದ ಗೆಳೆಯರ ಗುಂಪಿನ ಸ್ನೇಹಿತರೊಡನೆ ವಿಶೇಷವಾಗಿ ಪ್ರಹ್ಲಾದ ನರೇಗಲ್, ಶೇ. ಗೋ. ಕುಲಕರ್ಣಿ ಅವರೊಡನೆ ಧಾರವಾಡದ ಸಾಧನಕೇರಿಯಲ್ಲಿ ಸುತ್ತಾಡುತ್ತಿದ್ದರಲ್ಲದೆ ಅವರೊಡನೆ ಶಾಂತಿನಿಕೇತನಕ್ಕೆ ಹೋಗಿ ರವೀಂದ್ರರ ಬಳಿ ವ್ಯಾಸಂಗ ಮಾಡಿಯೂ ಬಂದರು. ಕಲ್ಲೂರ ಅವರಿಗೆ ಆದರ್ಶಗಳ ವಿಚಾರ ಬೋಧಿಸಿದ ಗುರುಗಳು ಬೇಂದ್ರೆಯವರಾದರೆ, ಕರ್ನಾಟಕದ ಬಗ್ಗೆ ಅಭಿಮಾನ ಕೆರಳಿಸಿದವರು ಆಲೂರ ವೆಂಕಟರಾಯರು. ಇವರಿಬ್ಬರೂ ಕಲ್ಲೂರ ಅವರ ಗೌರವಕ್ಕೆ ಪಾತ್ರರಾದ ಪ್ರಾತಃಸ್ಮರಣೀಯರು.

## ಕೃಷ್ಣಕುಮಾರರ ಸಾಹಿತ್ಯ ಕೃಷಿ ಈ ರೀತಿಯಾಗಿದೆ :

**೧. ಸಣ್ಣ ಕತೆಗಳ ಸಂಗ್ರಹಗಳು :** ೧. ಮಂಗನ ಮೆರವಣಿಗೆ (೧೯೩೧), ೨. ಬಿಸಿಲು ಕುದುರೆ (೧೯೩೩), ೩. ಜೀವನ (೧೯೩೮), ೪. ಬೆಳದಿಂಗಳು (ಅಪ್ರಕಟಿತ).

೨. ನಾಟಕ : ೧. ಮಿಂಚಿನ ಹುಡಿ (ಏಕಾಂಕ ಸಂಕಲನ೧೯೪೪), ೨. ನೆರಳು ಬಿಸಿಲು (ಏಕಾಂಕ ಸಂಕಲನ - ೧೯೫೦), ೩. ಕೌರವ (ಏಕಾಂಕ ನಾಟಕ -ಅಪ್ರಕಟಿತ), ೪. ಹೃದಯದ ಬೆಳಕು (ಐತಿಹಾಸಿಕ ನಾಟಕ ಅಪ್ರಕಟಿತ), ೫. ಧರ್ಮ ದಿವಾಳಿ (ಮೂರಂಕದ ಸಾಮಾಜಿಕ ನಾಟಕ-ಅಪ್ರಕಟಿತ), ೬. ತಿರುಕರ ಪಿಡುಗು.

೩. ಕವನಗಳು : ಬಿಡಿ ಬಿಡಿಯಾಗಿ ಹಲವು ಕಡೆಗಳಲ್ಲಿ ಸುಮಾರು ೨೫ ಕವನಗಳು.

೧. ಕಾವ್ಯಭಂಡಾರ : (ಸಂ), ೨. ಕರ್ನಾಟಕ ಗೀತೆಗಳು (ಇದರಲ್ಲಿ ಎರಡು ಕವನಗಳು), ೩. ಕರ್ನಾಟಕ ನಾಮಕರಣ ಮಹೋತ್ಸವ ಸಂಪುಟದಲ್ಲಿ - ೧೪ ಪದ್ಯಗಳು.

೪. ಕಾದಂಬರಿ : ತೇಲಿಬಿಟ್ಟ ದೀಪ- (ಸಂಸಾರ ಸಾಗರದ ಸೆಳವಿನೊಡನೆ ಹೆಣಗಾಡಿ, ತೀರ ಕಾಣದೆ ತೊಳಲಾಡುವ ಯುವತಿಯೊಬ್ಬಳ ಸಹಜ ರಮಣೀಯ ಕಲ್ಪನಾ ಚಿತ್ರದ ಕಾದಂಬರಿ ಅಪ್ರಕಟಿತ).

೫. ಪ್ರಬಂಧ : ಕರ್ನಾಟಕ ದರ್ಶನ, 'ಭಾರತಿ' ಮಾಸ ಪತ್ರಿಕೆಗಳಲ್ಲಿ.

೬. ಇಂಗ್ಲಿಷಿನಲ್ಲಿ ಅವರ ಪ್ರಕಟಣೆಗಳು : 1. Karwar and Canara Ports.

2. Karnataka Calling etc.

೭. ಅನುವಾದ : ಕೆಲವು ಭಾಷೆಗಳಿಂದ ಕತೆಗಳನ್ನು ಭಾಷಾಂತರಿಸಿ ಭಾರತಿ ಮಾಸ ಪತ್ರಿಕೆಯಲ್ಲಿ ಪ್ರಕಟಣೆ ಹಾಗೂ ಜನುಮದ ಜೋಡಿಯ ಅನುವಾದ.

೮. ಸಂಪಾದನೆ : ಭಾರತಿ ಮಾಸಪತ್ರಿಕೆ ಮತ್ತು ಕರ್ನಾಟಕ ಡಿರೆಕ್ಟರಿ (೧೯೬೧) ಕರ್ನಾಟಕ ನಾಮಕರಣ ಮಹೋತ್ಸವ ಸಮಿತಿಯ ಸ್ಮರಣ ಸಂಚಿಕೆಯಲ್ಲಿ ಪ್ರಮುಖ ಸದಸ್ಯರಾಗಿ.

ವಿಶೇಷ ಉಲ್ಲೇಖನೀಯವಾದ ಅವರ ಜೀವನದ ಒಂದು ಘಟನೆಯೆಂದರೆ ಇವರು ೧೯೫೫ರಲ್ಲಿ ಅಖಿಲ ಕರ್ನಾಟಕ ಸಣ್ಣ ಕತೆಗಾರರ ಸಮ್ಮೇಳನದಲ್ಲಿ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಮೈಸೂರು ರಾಜ್ಯವನ್ನು ಕರ್ನಾಟಕ ರಾಜ್ಯ ಎಂದು ಕರೆಯುವವರೆಗೆ ನಾನು ಇನ್ನು ಮುಂದೆ ಭಾಷಣ ಮಾಡುವುದಿಲ್ಲ. ಏನೂ ಬರೆಯುವುದಿಲ್ಲ ಎಂದು ತಮ್ಮ ಪ್ರತಿಜ್ಞೆಯನ್ನು ಸಾರಿದ್ದು ಮತ್ತು ಮುಂದೆ ಅದರಂತೆ ಅವರು ನಡೆದುಕೊಂಡದ್ದು, ಇದರಿಂದಾಗಿ ಕನ್ನಡ ಸಾಹಿತ್ಯಕ್ಕೆ ಅಪಾರ ನಷ್ಟವಾಗಿದೆ ಎಂಬುದನ್ನು ನಾವು ಅಲ್ಲಗಳೆಯುವಂತಿಲ್ಲ. ಮುಂದೆ ೧೯೭೩ರಲ್ಲಿ 'ಕರ್ನಾಟಕ ರಾಜ್ಯ' ಎಂಬ ಹೆಸರು ಕೊಡಮಾಡಿದ ಸಂದರ್ಭದಲ್ಲಿ ಮುಂಬಯಿಯಲ್ಲಿ ಪೋದ್ದಾರ್ ಕಾಲೇಜಿನ ಸಭಾಗೃಹದಲ್ಲಿ ಕೃಷ್ಣಕುಮಾರರು ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು. ತಮ್ಮ ಅಂದಿನ ಭಾಷಣದಲ್ಲಿ ತಮ್ಮ ಪ್ರತಿಜ್ಞೆ ಪೂರ್ಣವಾಗಿದ್ದನ್ನು ಅಂದರೆ ಕರ್ನಾಟಕ ಎಂದು ರಾಜ್ಯ ನಾಮಕರಣ ಹೊಂದಿದ ನಂತರವೇ ತಮ್ಮ ಲೇಖನ/ಭಾಷಣ ಕಾರ್ಯ ಪುನಃ ಪ್ರಾರಂಭಿಸುವುದನ್ನು ಸಂತೋಷದಿಂದ ಸಾರಿದರು.

೧೯೭೨ ರಲ್ಲಿ ಪ್ರಕಟವಾದ 'ಕರ್ನಾಟಕ ದರ್ಶನ' ಎಂಬ ಪುಸ್ತಿಕೆಯಲ್ಲಿ 'ಭಾರತದಲ್ಲಿ ಕರ್ನಾಟಕ' ಎಂಬ ಹೆಸರಿಗೆ ಇರುವ ವೈಶಿಷ್ಟ್ಯ 'ಬಂಗಾಲ'ಕ್ಕೆ ಮಾತ್ರ ಇದ್ದು ಉಳಿದ ಯಾವ ರಾಜ್ಯಗಳಿಗೂ ಇಲ್ಲ ಎಂಬ ಅಭಿಪ್ರಾಯವನ್ನು ಅಲ್ಲಿ ಕೃಷ್ಣಕುಮಾರ ಅವರು ವ್ಯಕ್ತಗೊಳಿಸಿದ್ದಾರೆ.

ಕರ್ನಾಟಕದ ಪ್ರಗತಿಯ ಬಗ್ಗೆ ಅವರಿಗೆ ಬಹಳ ಕಳಕಳಿ ಇತ್ತು. ಕರ್ನಾಟಕದ ರೈಲುಗಳು, ಬಂದರುಗಳು, ವ್ಯಾಪಾರ, ಉದ್ಯೋಗ ಇವುಗಳ ಬಗ್ಗೆ ಆಳವಾಗಿ ಅಭ್ಯಾಸ ಮಾಡಿದ್ದರು. ಅಂಕಿ-ಸಂಖ್ಯೆ ಕೊಟ್ಟು ಬರೆದ ಕೃಷ್ಣಕುಮಾರರ ಇಂಥ ಲೇಖನಗಳನ್ನು ಓದಿದಾಗ ಅವರ ಮೌಲಿಕ ವಿಚಾರಗಳು ನಮಗೆ ಆಶ್ಚರ್ಯ ಹುಟ್ಟಿಸುತ್ತವೆ.

೧೯೫೬ರಲ್ಲಿ ಭಾಷಾವಾರು ಪ್ರಾಂತ ರಚನೆಯಾದಾಗ ನವೆಂಬರ್ ೧ರಂದು 'ಮೈಸೂರು' ರಾಜ್ಯ ಉದಯವಾಯಿತು. ಕೃಷ್ಣಕುಮಾರ ಕಲ್ಲೂರ ಅವರು ಈ ಏಕೀಕೃತ ಮೈಸೂರು ರಾಜ್ಯೋತ್ಸವ ಮಾಡಿದ ರೀತಿ ಎಷ್ಟು ವಿಚಿತ್ರ, ಎಷ್ಟು ಸುಂದರ, ಎಂತಹ ಹೃದಯಸ್ಪರ್ಶಿ ಕಲ್ಪನೆ ! ಕೃಷ್ಣಕುಮಾರರು ಹಂಪೆಯ ವಿರೂಪಾಕ್ಷ ದೇವಾಲಯದಲ್ಲಿ ೧೯೫೬ರ ಅಕ್ಟೋಬರ್ ೩೧ರ ರಾತ್ರಿ ಹನ್ನೆರಡು ಗಂಟೆಗೆ ಕೆ.ಎಫ್. ಪಾಟೀಲ, ನಾರಾಯಣ ಸಂಗಮ, ವಿ. ಚ. ಹಿತ್ತಲಮನಿ, ಕೆಲವು ಮುಂಬಯಿ ಕನ್ನಡಿಗರು ಹಾಗೂ ಹಿರಿಯರಾದ ಕರ್ನಾಟಕ ಕುಲಪುರೋಹಿತ ಆಲೂರ ವೆಂಕಟರಾಯರು ಮೊದಲಾದವರನ್ನು ಸೇರಿಸಿದರು. ವೆಂಕಟರಾಯರ ಪೌರೋಹಿತ್ಯದಲ್ಲಿ ವೇದಘೋಷ, ಮಂತ್ರ ಪಠನ, ಆಲೂರರು ಬರೆದ ಕರ್ನಾಟಕ ಏಕೀಕರಣ ಸೂತ್ರಗಳ ವಾಚನ, ಕೊನೆಗೆ ಜೋಳದ ರೊಟ್ಟಿ ಮತ್ತು ಬೆಣ್ಣೆಗಳ ಸಹಭೋಜನ! ಕರ್ನಾಟಕ ಸರಕಾರ ಆಲೂರ ವೆಂಕಟರಾಯರಿಗೆ ಸಲ್ಲಿಸಬೇಕಾಗಿದ್ದ ಗೌರವ ಸಲ್ಲಿಸಲಿಲ್ಲ. ಆದರೆ ಕೃಷ್ಣಕುಮಾರರು ಅವರಿಗೆ ಈ ರೀತಿಯಾಗಿ ಸಲ್ಲಿಸಿದರು.

ಡಾ. ಹಾ.ಮಾ. ನಾಯಕ ಅವರು ಗೋಕಾಕ ವರದಿಯ ಬಗ್ಗೆ ಕೃಷ್ಣಕುಮಾರರ ಅಭಿಪ್ರಾಯ ಕೇಳಿದಾಗ ಕೃಷ್ಣಕುಮಾರರು ತಮ್ಮ ಸ್ಪಷ್ಟ ವಿಚಾರ ಹೀಗೆ ತಿಳಿಸಿದ್ದರು. "ಇಲ್ಲಿ ಮಹಾರಾಷ್ಟ್ರದಲ್ಲಿ ಮರಾಠಿಯನ್ನು ಕಡ್ಡಾಯ ಮಾಡಿಲ್ಲ. ಆದರೆ ಯಾರಿಗೂ ಮರಾಠಿ ಕಲಿಯದೆ ಇರುವುದು ಸಾಧ್ಯವಿಲ್ಲ. ಜನರಿಗೆ ಅಭಿಮಾನವನ್ನು ಕಾನೂನಿನಿಂದ ಕಲಿಸುವುದು ಸಾಧ್ಯವಿಲ್ಲ. ಅದು ಸರಳವಾಗಿ ಬರಬೇಕು. ನಮ್ಮಲ್ಲಿ ಅದರ ಕೊರತೆ ಬಹಳ ಇದೆ".

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಕೂಡಲೇ ಮುಂಬಯಿಗೆ ಬಂದ ಡಾ. ಹಂಪನಾ ಅವರು ಹಿರಿಯ ಸಾಹಿತಿ, ಕೃಷ್ಣಕುಮಾರರನ್ನು ಭೇಟಿಯಾದಾಗಿನ ಅನುಭವ ಹೀಗೆ ಬರೆದಿದ್ದಾರೆ– "ನೇರವಾಗಿ ಸಾಹಿತ್ಯ ಚರ್ಚೆಗೇ ತೊಡಗಿದರು. ಛಂದಸ್ಸು, ಅಲಂಕಾರ ಶಾಸ್ತ್ರ, ಭಾಷಾ ಶಾಸ್ತ್ರ ಹೀಗೆ ಹೊರಳಿತು ವಿಚಾರ ಲಹರಿ. ಇಂಗ್ಲಿಷಿನಲ್ಲಿ ಕನ್ನಡ ಸಾಹಿತ್ಯದ ಕುರಿತು ಬರವಣಿಗೆ ಸಾಲದೆಂಬ ಅತೃಪ್ತಿಯನ್ನು ತೋಡಿಕೊಂಡರು. ತಮ್ಮಿಂದ ಇನ್ನೂ ಹೆಚ್ಚಿನ ಲೇಖನ ಕೃಷಿ ಆಗದಿದ್ದಕ್ಕೆ ವಿಷಾದಿಸಿದರು. ಕುಗ್ಗುತ್ತಿರುವ ಆರೋಗ್ಯದಿಂದ ಪ್ರಯಾಣ ಮಿತಗೊಂಡಿರುವುದನ್ನು ತಿಳಿಸಿದರು. ಪರಿಷತ್ತಿನ ಚಟುವಟಿಕೆಗಳನ್ನು ಹಾಗೂ ಕನ್ನಡ ಸಾಹಿತ್ಯದ ಇತ್ತೀಚಿನ ಒಲವುಗಳನ್ನು ಪ್ರಶ್ನಿಸಿ ಪರಿಚಯಿಸಿಕೊಂಡರು".

ಬೇಂದ್ರೆಯವರು ಚಿಕಿತ್ಸೆ ಪಡೆಯಲು ಮುಂಬಯಿಗೆ ಬಂದು ಆಸ್ಪತ್ರೆಯಲ್ಲಿದ್ದಾರೆಂಬುದನ್ನು ಅರಿತ ಕೂಡಲೇ ತಮ್ಮ ಆರೋಗ್ಯವನ್ನೂ ಲೆಕ್ಕಿಸದೇ ಕೃಷ್ಣಕುಮಾರರು ಅಲ್ಲಿಗೆ ಧಾವಿಸಿ ದರ್ಶನ ಪಡೆದುಕೊಂಡರು. ಮುಂಬಯಿ ಕನ್ನಡಿಗರ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನ ಮಾಡಿ ಸಮರ್ಪಿಸಿದ ಶಾಲನ್ನು ಬೇಂದ್ರೆಯವರಿಗೆ ಭಕ್ತಿಯಿಂದ ಅರ್ಪಿಸಿದರು. ಆ ಶಾಲು ಸ್ಮಶಾನದ ಚಿತೆಯಲ್ಲಿ ಬೇಂದ್ರೆ ದೇಹದೊಡನೆ ಭಸ್ಮವಾಯಿತು. ತಮ್ಮ ಈ ಕೃತ್ಯವನ್ನು ಅಪಾರ್ಥ ಮಾಡಿಕೊಳ್ಳಬಾರದೆಂದು ಕೃಷ್ಣಕಮಾರರು ಸಮ್ಮೇಳನದ ಕಾರ್ಯಕರ್ತರಿಗೆ ಪತ್ರ ಬರೆದು ಕೇಳಿಕೊಂಡಿದ್ದರು.

ಕ್ಯಾನ್ಸರ್ ರೋಗದಿಂದ ಬಳಲುತ್ತಿದ್ದ ಕೃಷ್ಣಕುಮಾರರನ್ನು ಕೊನೆಗೆ ಹೃದಯಾಘಾತ ಸೆಳೆದುಕೊಂಡಿತು. ಇದರಿಂದಾಗಿ ೧೯೮೨ರ ದೀಪಾವಳಿಯನ್ನು ಗೆಳೆಯ ಗುರುನಾಥ ಜೋಶಿಯೊಡನೆ ಕರ್ನಾಟಕ ಆರೋಗ್ಯಧಾಮ (ಘಟಪ್ರಭಾ)ದಲ್ಲಿ ಕಳೆಯಬೇಕೆಂಬ ಆಸೆ ಈಡೇರಲಿಲ್ಲ. ಗೆಳೆಯ ಜೋಶಿ ಅವರು ಪ್ರಕಟಿಸಬಾರದೆಂದು ಕಳಿಸಿಕೊಟ್ಟ ಕವನಗಳನ್ನು ಕೃಷ್ಣಕುಮಾರರ ಮರಣದ ನಂತರ ಪ್ರಕಟಿಸಿ, ಆ ಮೂಲಕ ಗೆಳೆಯನಿಗೆ ತನ್ನ ಶ್ರದ್ಧಾಂಜಲಿ ಸಮರ್ಪಿಸಿದರು. ಕೃಷ್ಣಕುಮಾರರು ಗೆಳೆಯ ಜೋಶಿಗೆ (ಪ್ರಕಟಿಸಬಾರದೆಂದು ತಿಳಿಸಿ) ಕಳಿಸಿದ ಅವರ ಕೊನೆಯ ಕವನಗಳಿವು. ೧. ಮಾನವನು ಏರದಾ ಊರ್ಧ್ವಗಳೆ ಇಲ್ಲಾ. ೨. ಸಿದ್ಧಾರ್ಥ, ೩. ಕೆಲವು ಭಾಷಾಂತರಗಳು.

ಕೃಷ್ಣಕುಮಾರರ ಒಂದು ಲೇಖನದ ಭಾಗ ಹಾಗೂ ಒಂದು ಕವನ ಪರಿಶೀಲಿಸೋಣ : -

ಕೃಷ್ಣಕುಮಾರ ಕಲ್ಲೂರ ಅವರ 'ಕರ್ನಾಟಕದ ವಿರಾಟ ಸ್ವರೂಪ ದರ್ಶನ' ಲೇಖನದಿಂದ ಆಯ್ದ ಭಾಗ : ಕರ್ನಾಟಕ 'ಕರ್ನಾಟಕ'ವೇ ಆಗುವುದರಲ್ಲಿ ಯಾವ ಮೋಡಿ, ಯಾವ ಗಾರುಡಿ. ಯಾವ ಇಂದ್ರಜಾಲವಿದೆಯೆಂದರೆ – "ಕರ್ನಾಟಕ ಎಂದೊಡನೆ, ಒಂದು ಉಜ್ವಲವಾದ, ಗೌರವಶಾಲಿಯಾದ, ಪುರಾತನವಾದ, ಅಪರಂಪಾರವಾದ ಸಾಂಸ್ಕೃತಿಕ ಪರಂಪರೆಯ ವಿರಾಟ್ ದೃಶ್ಯದ ಮಹಾದ್ವಾರವೇ ತೆರೆದಂತಾಗುವುದು. ಸದಭಿಮಾನಿ ಕರ್ನಾಟಕಸ್ಥನೊಬ್ಬ ಆ ತೆರೆದ ಮಹಾದ್ವಾರವನ್ನು ಪ್ರವೇಶಿಸಿ ಒಳಹೊಕ್ಕನೆಂದರೆ, ಆ ರಮ್ಯೋದ್ಯಾನದ ಬಾಗಿಲ ಬಳಿಯಲ್ಲಿಯೇ ಆಲೂರ ವೆಂಕಟರಾಯರು, ಕಡಪ ರಾಘವೇಂದ್ರ ರಾಯರು, ಮುದವೀಡು ವೆಂಕಟರಾಯರು, ಶಾಂತಕವಿಗಳು, 'ಶ್ರೀ' ಅವರು, ತೀ. ನಂ. ಶ್ರೀ, ಉತ್ತಂಗಿ, ಪಂಜೆ ಗೋವಿಂದ ಪೈ, ದೊಡ್ಡಮೇಟಿ, ವಿಶ್ವೇಶ್ವರಯ್ಯ ಮುಂತಾದ ಅನೇಕ ಹಿರಿಯರು ಸಿಗುತ್ತಾರೆ".

ಕೃಷ್ಣಕುಮಾರ ಕಲ್ಲೂರ ಅವರ 'ನಿನಗಾಗಿ ತಾಯೀ' ಕವನ ೧೯೭೩ (ಕರ್ನಾಟಕ ನಾಮಕರಣದ ಸಂದರ್ಭದಲ್ಲಿ ರಚಿಸಿದ್ದು) :-

ಎಲ್ಲ ನಿನಗಾಗಿ ತಾಯೀ! ನಿನಗಾಗಿ ತಾಯೀ!!
ಬೆಳೆದದ್ದು ಬದುಕಿದ್ದು ನಿನಗಾಗಿ ತಾಯೀ
ದುಡಿಯುವದು, ಮಡಿಯುವದು ನಿನಗಾಗಿ ತಾಯೀ

ಈ ವಿದ್ಯೆ ಬುದ್ಧಿಗಳು, ನಿನಗಾಗಿ ತಾಯೀ
ಈ ಗಳಿಕೆ ಉಳಿಕೆಗಳು ನಿನಗಾಗಿ ತಾಯೀ
ಹಾರೈಕೆ ಹರಕೆಗಳು, ನಿನಗಾಗಿ ತಾಯೀ
ಭಾವೋರ್ಮಿಗಳ ಸೆಳವು ನಿನಗಾಗಿ ತಾಯೀ
ಹೃತ್ಕಂಪದುತ್ಕಂಪ, ನಿನಗಾಗಿ ತಾಯೀ
ಈ ಭಕ್ತಿ ಅನುರಕ್ತಿ ನಿನಗಾಗಿ ತಾಯೀ !
ಅಂತೆ ನೀ ನನಗಾಗಿ ಬಂದಿರುವೆ ತಾಯೀ
ಆಯುಷ್ಯಕನಿವಾರ್ಯ ತಂದಿರುವೆ ತಾಯೀ
ಪಾಂಡವರ ಹನ್ನೆರಡು ಕಿರಾದಾಯ್ತು ತಾಯೀ
ರಾಘವನ ಹದಿನಾಲ್ಕು, ಪರವಿಲ್ಲ ತಾಯೀ
ನಾನೂರು ವರ್ಷಗಳು ಸಾಲದೆನೆ, ತಾಯೀ
ಮತ್ತೆ ಹದಿನೇಳರಾ ವನವಾಸ, ತಾಯೀ
ನಿನ್ನ ಪುನರುತ್ಥಾನಕೀಗಿಹುದು, ತಾಯೀ
ಉದ್ಯಾಪನೆಯ ಸಮಾರಾಧನೆಯು ತಾಯೀ
ಕನ್ನಡದ ಜನತೆಯದ ನಡೆಸೀತು, ತಾಯೀ
ನಾನಂತು ಕಂಣೀರ ತಂದಿರುವೆ, ತಾಯೀ
ಎದೆಯಲ್ಲಿ ಮತ್ತೇನು ಉಳಿದಿಲ್ಲ, ತಾಯೀ
ನಿನ್ನ ಅಭಿಷೇಕಕ್ಕೆ ಸಾಲದಿರೆ, ತಾಯೀ
ಕಾಲ್ತೊಳೆಯುವಷ್ಟಂತು ತುಂಬಿಹುದು ತಾಯೀ.

ಕೃಷ್ಣಕುಮಾರ ಕಲ್ಲೂರ ಅವರ ಬಗ್ಗೆ ಕೆಲವು ಅಭಿಪ್ರಾಯಗಳು ಹೀಗಿವೆ :

● "ಸಾಂತಾಕ್ರೂಜ್ ಪ್ಯಾಟಕ್ ಪಾಲಿಟೆಕ್‌ನಿಕ್ ಕಾಲೇಜ್ ಆವರಣದಲ್ಲೆ, ಸಂಸ್ಥೆಗೆ ಸೇರಿದ ಮನೆಯಲ್ಲಿ ಕೃಷ್ಣಕುಮಾರರ ವಾಸ. ೧೯೩೦ರಲ್ಲಿ ಅವರು ಸ್ಥಾಪಕ ಪ್ರಿನ್ಸಿಪಾಲರಾಗಿ ಸಂಸ್ಥೆಗೆ ಸೇರಿದರು. ದೀರ್ಘಕಾಲದ ಸೇವೆಯ ಬಳಿಕ ಅವರು ನಿವೃತ್ತರಾದರು. ಆದರೂ ತಾವು ಕಟ್ಟಿ ಬೆಳೆಸಿದ ಸಂಸ್ಥೆಯ ಆವರಣದಲ್ಲೇ ವಾಸ ಮಾಡುವುದು ಅವರಿಗೆ ಪ್ರಿಯವಾಗಿತ್ತು. ಸಂಸ್ಥೆಯಾದರೂ ಉದಾರವಾದದ್ದು. ಅದು ಅವರಿಗೆ ಆ ಅವಕಾಶವನ್ನು ಉಳಿಸಿಕೊಟ್ಟಿತ್ತು. ಈ ಬಾಂಧವ್ಯ ಇಂದಿನ ದಿನಗಳಲ್ಲಿ ತೀರ ವಿರಳ" ಎಂದು ಡಾ. ಹಾ.ಮಾ. ನಾಯಕರು ಹಿಂದೆ ಮುಂಬಯಿಗೆ ಬಂದಾಗ ಕೃಷ್ಣಕುಮಾರರ ಬಗ್ಗೆ ಬರೆದ ಅಂಕಣದಲ್ಲಿ ತಿಳಿಸಿದ್ದರು.

● "ಮುಂಬಯಿ ಒಬ್ಬ ಮಹಾನ್ ಚೇತನವನ್ನು ಕಳೆದುಕೊಂಡಿತು. ಕನ್ನಡ ಸಾಹಿತ್ಯಕ್ಕೆ ಒಬ್ಬ ಸಮರ್ಥ, ಲೇಖಕ, ಚಿಂತಕ, ಶೋಧಕ ನಷ್ಟವಾದಂತಾಯಿತು" ಎಂದು ಡಾ. ಹಂಪನಾ ಅವರು 'ಕಲ್ಲೂರರ ನೆನಪು' ಲೇಖನದಲ್ಲಿ ಹೇಳಿದ್ದಾರೆ.

● "ಕೃಷ್ಣಕುಮಾರ ಕಲ್ಲೂರ ಅವರು ಸ್ವತಂತ್ರವಾಗಿ ಸಣ್ಣಕತೆ ಬರೆದದ್ದಲ್ಲದೆ, 'ಭಾರತಿ' ಕನ್ನಡಕ್ಕೆ ಅನುವಾದಿಸಿ ಪ್ರಸಿದ್ಧಿಸಿದರು" ಎಂದು ದಿವಂಗತ ಡಾ. ವರದರಾಜ ಹುಯಿಲಗೋಳ ಅವರು ತಮ್ಮ ಒಂದು ಲೇಖನದಲ್ಲಿ ಬರೆದಿದ್ದರು.

● "ಅವರು ಮನಬಿಚ್ಚಿ, ಹೃದಯ ಬಿಚ್ಚಿ ಪತ್ರ ಬರೆದಿದ್ದಾರೆ. ಅವರ ಪತ್ರಗಳು ಒಂದು ರೀತಿಯಾಗಿ ಓರ್ವ ಕಳಕಳಿಯ ಶುದ್ಧಾತ್ಮ ಕನ್ನಡಿಗನ ಉತ್ತಮ ಐತಿಹಾಸಿಕ ದಾಖಲೆಗಳಾಗಿವೆ ಎನ್ನಬಹುದು. ಅವು ಅವರ ವ್ಯಕ್ತಿತ್ವದ ಮೇಲೆ, ವಿಚಾರ ಸರಣಿಯ ಮೇಲೆ ಬೆಳಕು ಚೆಲ್ಲುತ್ತವೆ" ಎಂದು ಕಲ್ಲೂರ ಅವರ ಪರಮ ಮಿತ್ರ ಗುರುನಾಥ ಜೋಶಿ ನುಡಿದಿದ್ದರು.

● "ಕೃಷ್ಣಕುಮಾರ ಕಲ್ಲೂರ ಅವರ ಕಥೆಗಳು ಸ್ವಾತಂತ್ರ್ಯಪೂರ್ವ ಯುಗದಲ್ಲಿ ಇಂಗ್ಲೀಷ್ ವಿದ್ಯಾಭ್ಯಾಸವು ನಮ್ಮ ಮಧ್ಯಮ ವರ್ಗದ ಜನರ ಸಂವೇದನೆಗಳ ಮೇಲೆ ಬೀರಿದ ಪ್ರಭಾವವನ್ನು ಸೆರೆಹಿಡಿಯುತ್ತವೆ. ಇದಕ್ಕೆ ನಿದರ್ಶನವಾಗಿ ಜೀವನ ಸಂಕಲನದ ಜೀವನ ಕಥೆಯನ್ನು ನೋಡಬಹುದು" ಎಂದು ಡಾ. ಕೆ. ರಘುನಾಥ ಅಭಿಪ್ರಾಯ ಪಡುತ್ತಾರೆ.

❋ ❋ ❋

# ದಿನಕರ ದೇಸಾಯಿ

ಪ್ರತಿಭಾವಂತ ಕವಿ ನಿಷ್ಠಾವಂತ ಸಮಾಜ ಸೇವಕ, ಪ್ರಾಮಾಣಿಕ ಶಿಕ್ಷಣಪ್ರೇಮಿ, ನಿರ್ಭೀತ ಪತ್ರಕರ್ತ, ನವ ಭಾರತದ ಕನಸುಗಾರರಾದರೂ ಪ್ರಚಾರಕ್ಕೆ ಮಾರು ಹೋಗದ ಕನ್ನಡದ ಸದಭಿಮಾನಿಗಳಾಗಿ ಜೀವನದ ಬಹುಕಾಲ ಮುಂಬಯಿಯಲ್ಲಿ ಜೀವಿಸಿದ ದಿನಕರ ದೇಸಾಯಿ ಅವರು ಕರ್ಮಯೋಗಿಯಾಗಿ ಬಾಳಿದರು.

೧೯೦೯ (೧೦-೯-೧೯೦೯) ಅಂಕೋಲಾದ ಬಳಿಯಿರುವ ಹೊನ್ನಕೇರಿಯಲ್ಲಿ ಜನಿಸಿದ ದಿನಕರ ದೇಸಾಯಿಯವರು, ಅಲಗೇರಿಯಲ್ಲಿ ತಮ್ಮ ಬಾಲ್ಯ ಜೀವನ ಪ್ರಾರಂಭಿಸಿದರು. ದಿನಕರರ ತಾಯಿಯ ಹೆಸರು ಗಂಗಾ. ತಂದೆಯ ಹೆಸರು ದತ್ತಾತ್ರೇಯ ಸಾಂಬ ದೇಸಾಯಿ. ಅವರ ಊರು ಕುಮಟಾ ತಾಲೂಕಿನ ಹೊಂಡದಕ್ಕಲ. ಕನ್ನಡ ಪ್ರಾಥಮಿಕ ಶಾಲಾ ಶಿಕ್ಷಕರಾಗಿದ್ದ ಅವರು ಅಲಗೇರಿಯಲ್ಲಿ ನೆಲೆಸಿದರು. ಅವರ ಮೂವರು ಗಂಡುಮಕ್ಕಳಲ್ಲಿ ದಿನಕರ ಕೊನೆಯವ.

ಬಾಲ್ಯದಲ್ಲಿ (೧೯೧೮) ತಾಯಿಯನ್ನು ಕಳೆದುಕೊಂಡು ದಿನಕರ ತಬ್ಬಲಿಯಾಗಿದ್ದ. ತಂದೆ ಶಿಕ್ಷಕರಾಗಿದ್ದ ಅಲಗೇರಿಯ ಪ್ರಾಥಮಿಕ ಶಾಲೆ ಸೇರಿದ ದಿನಕರ ಮುಂದೆ ಮಾಧ್ಯಮಿಕ ಶಿಕ್ಷಣವನ್ನು ಅಂಕೋಲಾ ಮತ್ತು ಕಾರವಾರಗಳಲ್ಲಿ ಪಡೆದರು. ಅಂಕೋಲಾ ಶಾಲೆಯಲ್ಲಿ ಕಲಿಯುತ್ತಿದ್ದಾಗಲೇ ಕುಮಟಾದ 'ಕಾನಡಾ ಧುರೀಣ' ಪತ್ರಿಕೆಯಲ್ಲಿ ತಮ್ಮ ಕೆಲವು ಕವನ ಪ್ರಕಟಿಸಿದರು. ಉಚ್ಚ ಶಿಕ್ಷಣಕ್ಕಾಗಿ ಬೆಂಗಳೂರಿಗೆ ಹೋಗಿ ಇಂಟರ್ ಮೀಡಿಯೇಟ್ ತರಗತಿಯವರೆಗೆ ಅಭ್ಯಾಸ ಮಾಡಿದರು. ಆಗ ಧಾರವಾಡದ ಸುಪ್ರಸಿದ್ಧ ಪತ್ರಿಕೆ 'ಜಯ ಕರ್ನಾಟಕ'ದಲ್ಲಿ ಕವನಗಳನ್ನು ಪ್ರಕಟಿಸಿದರು. ಬೆಂಗಳೂರಿನಲ್ಲಿ ವೀ. ಸೀ. ಅವರು ಗುರುಗಳಾಗಿದ್ದರಲ್ಲದೆ ದಿನಕರರ ಸಾಹಿತ್ಯ ರಚನೆಗೆ ಪ್ರೋತ್ಸಾಹ ನೀಡಿದರು. ಅನಂತರ ಬಿ. ಎ. ತರಗತಿಗೆ ಸೇರಲು ಮೈಸೂರಿಗೆ ಹೋಗಿ ಮಹಾರಾಜಾ ಕಾಲೇಜ್ ಸೇರಿದರು. ರಾಜ್ಯಶಾಸ್ತ್ರ, ಇತಿಹಾಸ ಮತ್ತು ಕನ್ನಡ ಅವರು ಆಯ್ದುಕೊಂಡ ಮುಖ್ಯ ವಿಷಯಗಳಾಗಿದ್ದವು. ಟಿ. ಎಸ್. ವೆಂಕಣ್ಣಯ್ಯನವರು ಇಲ್ಲಿ ಅವರ ಗುರುಗಳಾಗಿದ್ದರು. ಬಿ. ಎಂ. ಶ್ರೀಕಂಠಯ್ಯನವರನ್ನು ತಮ್ಮ ಕಾವ್ಯ ಗುರುವೆಂದೇ ಮನ್ನಿಸಿದ್ದರು. ಆಗ ಬಿ. ಎಂ. ಶ್ರೀ ಪ್ರಕಟಿಸಿದ 'ಕಿರಿಯರ ಕಾಣಿಕೆ' ಕವನ ಸಂಗ್ರಹದಲ್ಲಿ ದಿನಕರರ ನಾಲ್ಕು ಕವನಗಳು ಸೇರ್ಪಡೆಯಾಗಿದ್ದವು. ಬಿ. ಎಂ. ಶ್ರೀಕಂಠಯ್ಯನವರು ಪ್ರಕಟಿಸಿದ್ದ 'ಇಂಗ್ಲೀಷ್ ಗೀತೆಗಳು'

ದಿನಕರರ ಮೇಲೆ ಬಹಳ ಪ್ರಭಾವ ಬೀರಿತೆನ್ನಬಹುದು. ೧೯೩೧ರಲ್ಲಿ ಬಿ. ಎ. ಅಂತಿಮ ಪರೀಕ್ಷೆಯಲ್ಲಿ ಸರ್ವ ಪ್ರಥಮ ಸ್ಥಾನ ಪಡೆದರಲ್ಲದೆ 'ಕ್ಯಾಂಡಿ' ಪಾರಿತೋಷಕವನ್ನೂ ಗಳಿಸಿದರು.

ಮುಂದಿನ ಅಭ್ಯಾಸಕ್ಕಾಗಿ ದಿನಕರರು ಮುಂಬಯಿಗೆ ಬಂದು ಎಂ. ಎ. ಮತ್ತು ಎಲ್ಎಲ್.ಬಿ. ಪದವಿಗಳನ್ನು ಅನುಕ್ರಮವಾಗಿ ೧೯೩೩ ಮತ್ತು ೧೯೩೪ರಲ್ಲಿ ಪಡೆದರು. ಎಂ. ಎ. ಪರೀಕ್ಷೆಯನ್ನು ಪ್ರಥಮ ದರ್ಜೆಯಲ್ಲಿ ಪಾಸಾದರಲ್ಲದೆ ಸೇಂಟ್ ಝೇವಿಯರ್ ಬೆಳ್ಳಿಪದಕವನ್ನೂ ಪಡೆದರು. ಕಾನೂನು ಪದವಿ ಪಡೆದ ನಂತರ ಅವರು ಮುಂಬಯಿಗೆ 'ಸನದು' ಪಡೆದುಕೊಳ್ಳಲು ಹೋದಾಗ ಭಾರತ ಸೇವಕ ಸಮಾಜದ ಆಜೀವ ಕಾರ್ಯ ಮಾಡಲು (ಸದಸ್ಯರಾಗಲು) ಯುವಕರಿಗೆ ಕರೆ ನೀಡುವ ಪ್ರಕಟಣೆಯೊಂದನ್ನು ಪತ್ರಿಕೆಯಲ್ಲಿ ಓದಿದರು.

ಗೆಳೆಯ ಪಿಕಳೆಯವರ ನೆರವಿನಿಂದ ಅದರ ಕುರಿತು ಹೆಚ್ಚಿನ ಮಾಹಿತಿ ಸಂಗ್ರಹಿಸಿದರು. ಸಮಾಜದ ಕಚೇರಿಗೆ ಹೋಗಿ, ಅಲ್ಲಿ ಭಾರತೀಯ ಕಾರ್ಮಿಕರ ಧುರೀಣರಾಗಿ ಕೆಲಸ ಮಾಡುತ್ತಿದ್ದ ಎನ್. ಎಂ. ಜೋಶಿ ಅವರನ್ನು ಕಂಡು ತಾವು ಆಜೀವ ಸದಸ್ಯರಾಗುವ ಆಕಾಂಕ್ಷೆ ವ್ಯಕ್ತಪಡಿಸಿದರು. ಜೋಶಿ ಅವರು ಆಗ ಸೆಂಟ್ರಲ್ ಅಸೆಂಬ್ಲಿಯ ಸದಸ್ಯರಾಗಿ ನಾಮಕರಣ ಹೊಂದಿದ್ದರು. ತಮ್ಮೊಡನೆ ದಿನಕರರನ್ನೂ ಕರೆದೊಯ್ದು ದಿನಾಲು ಅಸೆಂಬ್ಲಿಯ ಗ್ಯಾಲರಿಯಲ್ಲಿ ಕೂಡ್ರಿಸಿ ಅಲ್ಲಿ ದಿನಾಲು ಕಂಡದ್ದನ್ನು ಪತ್ರಿಕೆಗೆ ಬರೆಯಲು ಹೇಳಿದರು. 'ಅಸೆಂಬ್ಲಿಯ ಗ್ಯಾಲರಿಯಿಂದ' ಎಂಬ ಶೀರ್ಷಿಕೆಯಲ್ಲಿ ಸಂಯುಕ್ತ ಕರ್ನಾಟಕ ದಿನಪತ್ರಿಕೆಗೆ (ಹುಬ್ಬಳ್ಳಿ) ವರದಿ ಮಾಡತೊಡಗಿದರು. ಇದು ಪರ್ಯಾಯವಾಗಿ ಜೋಶಿ ಅವರು ನಡೆಸಿದ ಪರೀಕ್ಷೆಯಾಗಿತ್ತು. ಉತ್ತಮ ಲೇಖನ ಕಾರ್ಯ ಮಾಡಿ ಈ ಪರೀಕ್ಷೆಯಲ್ಲಿ ಪಾಸಾದರು. ಇದರಿಂದಾಗಿ ಭಾರತ ಸೇವಕ ಸಮಾಜ ಸೇರಲು ಸಾಧ್ಯವಾಯಿತು.

ಗೋಕಾಕ ಗಿರಣಿ ಕಾರ್ಮಿಕರು ಹೂಡಿದ ಸಂಪಿನ ಮೇಲ್ವಿಚಾರಣೆ ನಡೆಸಲು ಜೋಶಿ ಅವರು ದಿನಕರರನ್ನು ಅಲ್ಲಿಗೆ ಕಳಿಸಿದರು. ದಿಲ್ಲಿಗೆ ವರದಿ ಕಳಿಸಿ ಜೋಶಿ ಅವರಿಂದ ಮಾರ್ಗದರ್ಶನ ಪಡೆದು ದಿನಕರರು ಕಾರ್ಯ ಮಾಡತೊಡಗಿದರು. ಸಂಘಟನೆಯ ಹೋರಾಟಕ್ಕಾಗಿ ಧನ ಸಂಗ್ರಹ ಮಾಡಲು ಹತ್ತಿರದ ಧಾರವಾಡ-ಹುಬ್ಬಳ್ಳಿಗಳಿಗೆ ಹೋದ ದಿನಕರರ ಕಾರ್ಯ ವೈಖರಿ ಮೆಚ್ಚಿ ಇತರ ಕಾರ್ಯಕರ್ತರಿಗೂ ದಿನಕರರನ್ನು ಅನುಸರಿಸಬೇಕೆಂದು ಜೋಶಿ ಅವರು ಹೇಳಿದರು.

ದಿನಕರ ದೇಸಾಯಿಯವರು ಕಾರ್ಮಿಕ ಸಂಘಟನಾ ಕಾರ್ಯ ಮುಂದುವರಿಸಿದರು ಮತ್ತು ಅದರಲ್ಲಿ ಅಪೂರ್ವ ಯಶಸ್ಸನ್ನು ಗಳಿಸಿದರು. ಅಖಿಲ ಭಾರತ ಕಡಲ (ಹಡಗು) ಕೆಲಸಗಾರರ ಸಂಘ ಸ್ಥಾಪಿಸಿ ಕಾರ್ಯದರ್ಶಿಯಾಗಿ ಅನಂತರ ಅಧ್ಯಕ್ಷರಾಗಿ ದುಡಿದರು. ಅನಂತರ ಮುಂಬೈ ಪ್ರಾಂತದ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನ ಪದಾಧಿಕಾರಿಯಾದರು. ಹಿಂದ್ ಮಜ್ದೂರ್ ಸಭಾದ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದರು.

ಮುಂಬಯಿಯಲ್ಲೇ ವಾಸಿಸತೊಡಗಿದ ದಿನಕರ ದೇಸಾಯಿಯವರು ೧೯೪೮ರಿಂದ ೧೯೬೨ ರ ವರೆಗೆ ಮುಂಬಯಿ ನಗರಪಾಲಿಕೆಯ ಸದಸ್ಯರಾಗಿದ್ದರು. ೧೯೬೭ರಲ್ಲಿ ಉತ್ತರ ಕನ್ನಡ ಜಿಲ್ಲೆಯಿಂದ ಸ್ಪರ್ಧಿಸಿ ಲೋಕಸಭೆಗೆ ಸದಸ್ಯರಾಗಿ ಆಯ್ಕೆಯಾದರು. ಈ ಮೊದಲು ೧೯೪೦ರಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ರೈತರ ಶೋಷಣೆ ತಡೆಗಟ್ಟಲು ಹಾಗೂ ಅವರ ಹಕ್ಕುಗಳನ್ನು ದೊರಕಿಸಿ ಕೊಡಲು ರೈತರ ಸಂಘಟನೆಗೆ ಬಹಳ ಕಾರ್ಯ ಮಾಡಿದ್ದರು. ೧೯೪೨ ರಲ್ಲಿ ವಿಜಾಪುರದಲ್ಲಿಯ ಭೀಕರ ಕ್ಷಾಮದ ಮೇಲ್ವಿಚಾರಕರಾಗಿ ಕಾರ್ಯ ಮಾಡಿದರು. ೧೯೫೩ರಲ್ಲಿ ಅಂಕೋಲಾದಲ್ಲಿ ವಿದ್ಯಾಭಿವೃದ್ಧಿಗಾಗಿ ಕ್ಯಾನರಾ ವೆಲ್‌ಫೇರ್ ಟ್ರಸ್ಟ್ ಸ್ಥಾಪಿಸಿ, ಎರಡು ಡಿಗ್ರಿ ಕಾಲೇಜು- ಜ್ಯೂನಿಯರ್ ಕಾಲೇಜುಗಳನ್ನು, ಹದಿನೈದು ಹೈಸ್ಕೂಲ್‌ಗಳನ್ನು ಮತ್ತು ಹಾಲಕ್ಕಿ ಜನಾಂಗದ ವಿದ್ಯಾರ್ಥಿಗಳಿಗಾಗಿ ಒಂದು ವಿದ್ಯಾರ್ಥಿ ನಿಲಯವನ್ನು ಪ್ರಾರಂಭಿಸಿದರು.

ಹಿಂದೆ ಕಾರ್ಮಿಕ ಧುರೀಣರಾಗಿ ೧೯೪೫ರಲ್ಲಿ ಡೆನ್ಮಾರ್ಕ್‌ನಲ್ಲಿ ಕೋಪನ್ ಹೇಗನ್ ಪಟ್ಟಣದಲ್ಲಿ ನಡೆದ ಕಾರ್ಮಿಕರ ಸಮ್ಮೇಳನದಲ್ಲಿ ಮತ್ತು ೧೯೪೬ರಲ್ಲಿ ಅಮೇರಿಕೆಯ ಸಿಯಟಲ್ ಪಟ್ಟಣದಲ್ಲಿ ಸೇರಿದ ಅಂತರಾಷ್ಟ್ರೀಯ ಕಾರ್ಮಿಕರ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು.

ದಿನಕರ ದೇಸಾಯಿ ಅವರ ಮತ್ತೊಂದು ಮಹತ್ವದ ಕೊಡುಗೆ ಎಂದರೆ ಪತ್ರಿಕೋದ್ಯಮಕ್ಕೆ ಅವರು ೧೯೫೫ ರಿಂದ ಹಾಗೂ ಆ ಮೊದಲೇ ಮಾಡಿದ ಕಾರ್ಯ. ೧೯೫೫ ರಲ್ಲಿ 'ಜನಸೇವಕ' ಎಂಬ ವಾರ ಪತ್ರಿಕೆಯನ್ನು ಪ್ರಾರಂಭಿಸಿದರು. ಅಮ್ಮೆಂಬಳ ಆನಂದರನ್ನು ಅದರ ಸಂಪಾದಕರನ್ನಾಗಿ ಮಾಡಿ ಅದರ ಹಿಂದೆ ತ್ರಿಕರಣಪೂರ್ವಕವಾದ ಶಕ್ತಿಯಾಗಿ ನಿಂತು ಹದಿನೇಳು ವರ್ಷಗಳ ಕಾಲ ನಡೆಸಿದರು. ಅದನ್ನೊಂದು ಆದರ್ಶ ಪತ್ರಿಕೆಯನ್ನಾಗಿ ಮಾಡಿದರು. ಪತ್ರಿಕೆಯ ಸಂಪಾದಕೀಯ ಮತ್ತು ಮುಖಪುಟದ ಲೇಖನಗಳನ್ನು ದೇಸಾಯಿಯವರು ಬರೆಯುತ್ತಿದ್ದರು. ಅದರ ಮುಖಾಂತರ ಉತ್ತರ ಕನ್ನಡ ಜಿಲ್ಲೆಯ ಜನಜಾಗೃತಿ ಸಾಧಿಸಿದರೆಂಬುದು ಉಲ್ಲೇಖಾರ್ಹ. ಗದ್ಯ ಲೇಖನಗಳಲ್ಲದೆ ದೇಸಾಯಿಯವರು ಪ್ರತಿವಾರ ಎರಡು ಚುಟುಕುಗಳನ್ನು ಪತ್ರಿಕೆಯಲ್ಲಿ 'ಭತ್ತದ ತೆನೆ' ಎಂಬ ಕಾವ್ಯನಾಮದಿಂದ ಪ್ರಕಟಿಸುತ್ತಿದ್ದರು. ಅವರು ಬರೆಯುತ್ತಿದ್ದ ವಾರದ ಉಪ್ಪಿನಕಾಯಿ' ಓದುಗರಿಗೆ ಬಹು ಆಕರ್ಷಕವಾಗಿರುತ್ತಿತ್ತು. ದೇಸಾಯಿಯವರು ಈ ಪತ್ರಿಕೆಗೆ ಬರೆಯುವ ಕೆಲವು ವರ್ಷ ಹಿಂದೆಯೇ 'ಜಯಂತಿ', 'ಕರ್ನಾಟಕ ಧುರೀಣ', 'ಜಾಗೃತ ಕರ್ನಾಟಕ' ಮೊದಲಾದ ಪತ್ರಿಕೆಗಳಿಗೆ ಬರೆಯುತ್ತಿದ್ದರು.

೧೯೫೨ರಿಂದ ೧೯೬೭ರ ವರೆಗೆ ಕಾರವಾರದಿಂದ ದಿಲ್ಲಿಯ ಲೋಕಸಭೆಗೆ ಆಯ್ಕೆಯಾಗಿ ಸಂಸತ್ ಪಟುವಾಗಿ, ಶುದ್ಧ ರಾಜಕಾರಣಿಯಾಗಿ, ಸಮಾಜವಾದಿಯಾಗಿ ಕಾರ್ಯ ನಿರ್ವಹಿಸಿದರು. ಸಮಾಜದಲ್ಲಿ, ರಾಜಕೀಯದಲ್ಲಿ, ಭ್ರಷ್ಟಾಚಾರ, ಅನ್ಯಾಯ, ಕುತಂತ್ರ ಇವುಗಳನ್ನು ಕಂಡ ಅವರ ಮನಸ್ಸು ಸಿಡಿದೆದ್ದು, ಚುಟುಕುಗಳ ರೂಪದಲ್ಲಿ ೧೯೫೭ರಿಂದ ಅವು ಹೊರಹೊಮ್ಮಿ ಬಂದುವು. ಈ ಮೊದಲೇ ಅಂದರೆ ೧೯೫೦ರಲ್ಲಿ ಅವರ

ಕವನ ಸಂಕಲನ 'ಕವನ ಸಂಗ್ರಹ' ಪ್ರಕಟವಾಗಿ ಜನಪ್ರಿಯತೆ ಪಡೆದಿತ್ತು. ಅದರಲ್ಲಿಯ 'ದೀನಗಿಂತ ದೇವ ಬಡವ' ಹಾಗೂ 'ಬಂಗಾಲದ ಬರಗಾಲ' ಜನರ ಬಾಯಿಯಲ್ಲಿ ಉಳಿದಿರುವುದು ಒಂದು ವಿಶೇಷ.

ಮುಂಬಯಿ ಮಹಾನಗರ ಪಾಲಿಕೆಯಲ್ಲಿ ೧೯೪೮ ರಿಂದ ೧೯೬೨ರ ವರೆಗೆ ಮತ್ತು ಕಾರವಾರ ಮತದಾರ ಕ್ಷೇತ್ರದಿಂದ ಆಯ್ಕೆಯಾಗಿ ೧೯೫೭ರಿಂದ ೧೯೬೭ರ ವರೆಗೆ ದಿಲ್ಲಿಯ ಸಂಸತ್ತಿನಲ್ಲಿ ಕ್ರಿಯಾಶೀಲ ಸದಸ್ಯರಾಗಿ, ಶುದ್ಧ ರಾಜಕಾರಣಿಯಾಗಿ ಮೆರೆದರು. ಇವೆಲ್ಲವುಗಳ ಜೊತೆಗೆ ಅವರ ಬರವಣಿಗೆಯ ಕಾರ್ಯ ನಡೆದೇ ಇತ್ತು. ದೇಸಾಯಿಯವರು 'ಕವನ ಸಂಗ್ರಹ', 'ಹೂ ಗೊಂಚಲು' ಮೊದಲಾದ ಭಾವಗೀತ ಸಂಕಲನಗಳನ್ನು, ಮಕ್ಕಳ ಗೀತೆಗಳು, ಮಕ್ಕಳ ಪದ್ಯಗಳು ಎಂಬ ಶಿಶುಗೀತೆಗಳನ್ನು ಮತ್ತು ದಿನಕರನ ಔಷಧಿ ಎಂಬ ದೊಡ್ಡ ಚುಟುಕು ಸಂಕಲನ, ಕನ್ನಡ ಹಾಡುಗಳು, ರೈತರ ಹಾಡುಗಳನ್ನು ಕನ್ನಡಕ್ಕೆ ಕೊಟ್ಟು ಪ್ರಮುಖ ಕನ್ನಡ ಕವಿ ಎನಿಸಿಕೊಂಡಿದ್ದಾರೆ. ಚಟುಕು ಬ್ರಹ್ಮರಾಗಿ ಮೆರೆದಿದ್ದಾರೆ. 'ನಾ ಕಂಡ ಪಡುವಣ' ಎಂಬ ಪ್ರವಾಸ ಕಥನ ಅವರ ಗದ್ಯ ರಚನಾ ಸಾಮರ್ಥ್ಯವನ್ನು ಪ್ರಕಟಿಸುತ್ತದೆ. ನಿರಾಡಂಬರ, ಸರಳ, ಸುಂದರ ಗದ್ಯಶೈಲಿ ಆಕರ್ಷಕವಾಗಿದೆ. ದಿನಕರ ದೇಸಾಯಿಯವರು ತಮ್ಮ ಮಾತೃಭಾಷೆ ಕೊಂಕಣಿಯಲ್ಲಿ ಬರೆದ 'ಪಾಳಗೊ' ಉತ್ತಮ ಗೀತೆಗಳಾಗಿವೆ. ಇಂಗ್ಲಿಷ್‌ನಲ್ಲಿಯೂ ಅವರು ಗ್ರಂಥ ರಚಿಸಿ ತಮ್ಮ ಅಧ್ಯಯನ ಚಿಂತನೆಗಳನ್ನು ಹಿಡಿದಿಟ್ಟಿದ್ದಾರೆ.

ಮಕ್ಕಳ ಕವಿಯೆಂದು ಖ್ಯಾತಿ ಗಳಿಸಿದರೂ ಇವರ ಧೋರಣೆಗಳನ್ನು ಪ್ರಕಟಿಸಿದ ರೀತಿಯನ್ನು ಕಂಡು ಇವರನ್ನು ಕನ್ನಡದ ಮೊದಲ 'ಬಂಡಾಯ ಕವಿ' ಎನ್ನಬಹುದಾಗಿದೆ. ತಾವು ಸಮಾಜದಲ್ಲಿ ಕಂಡ ಅನ್ಯಾಯ, ಭ್ರಷ್ಟಾಚಾರಗಳೂ ಸೇರಿದಂತೆ ಹಲವಾರು ಸಂಗತಿಗಳಿಗೆ ತಮ್ಮ ಚುಟುಕುಗಳಲ್ಲಿ ತಮ್ಮ ಪ್ರತಿಕ್ರಿಯೆ ತೋರಿದ್ದಾರೆ. ರಾಜಕೀಯದ ಬಗ್ಗೆ ಅವರ ಪ್ರತಿಕ್ರಿಯೆಗಳು :

೧. ಇದು ನಮ್ಮ ರಾಜಕಾರಣದ ವಟವೃಕ್ಷ
ಇದಕ್ಕೆನ್ನುವರು ಮಗನೆ ಆಡಳಿತ ಪಕ್ಷ
ಬಲು ದೊಡ್ಡದಾದರೂ ಮರದ ವಿಸ್ತಾರ
ಅಮಟೆಕಾಯಿಗೂ ಸಣ್ಣ ಹಣ್ಣಿನಾಕಾರ

೨. ಇಲ್ಲಿಂದ ಅಲ್ಲಿ ಹಾರಿದ ಬಳಿಕ ಈತ
ಆಗಿಬಿಟ್ಟನು ರಾಜಕೀಯದಲಿ ಪ್ರೇತ
ಕುನ್ನಿಯೂ ಈಗ್ಗೆ ನೋಡುವುದಿಲ್ಲ ಮೂಸಿ
ಆಗಬಾರದು ಯಾರೂ ಇಂಥ ಪರದೇಸಿ.

೩. ಈ ಪ್ರಜಾ ರಾಜ್ಯದಲಿ ಬೇಕಷ್ಟು ಶಾಯಿ
ಕುಡಿದರು ಕಪ್ಪು ಆಗುವುದಿಲ್ಲ ಬಾಯಿ
ಇದುವೆ ಬ್ಲಾಟಿಂಗ್ ಪೇಪರಿನ ಮಹಾ ಕೆಲಸ
ದವಡೆಯಲ್ಲಿಟ್ಟು ಕೇಳಿ ಪ್ರತಿಯೊಂದು ದಿವಸ.

೪. ರಾಜಕಾರಣದಲ್ಲಿ ಅತಿಯಾದ ಮಾತು
ಬಡವರಿಗೆ ಪ್ರತಿದಿವಸ ಕೇಸರಿ ಭಾತು
ಕನಸು ಮುಗಿಯುವ ಮೊದಲೇ ತಿನ್ನಬೇಕಷ್ಟು
ಬಡಿಸುವನು ನವಭಾರತದ ಸೋಷಲಿಸ್ಟು.

೫. ರಾಜಕಾರಣದಲ್ಲಿ ಆಡುಗಳ ಜಾತಿ
ಮೈದೋರಿ ಬಡ ಭಾರತಾಂಬೆಯ ಫಜೀತಿ
ಸಿಕ್ಕಿ ಸಿಕ್ಕಿದ ಗಿಡಕ್ಕೆ ಹಚ್ಚಿದವು ಬಾಯಿ
ಹೂ ಬಿಡದೆ ಬಂಜೆಯಾಯಿತು ಲೋಕಶಾಹಿ.

ಹೀಗೆಲ್ಲ ಕಾವ್ಯ ರಚಿಸಿ ರಂಜಿಸಿದ ದೇಸಾಯಿಯವರು ಹಲವಾರು ಸನ್ಮಾನಗಳಿಂದ ವಿಭೂಷಿತರಾಗಿ ೧೯೮೨ರಲ್ಲಿ ಮುಂಬಯಿಯಲ್ಲಿ ಮರಣ ಹೊಂದಿದರು. ಅವರ ಬಗ್ಗೆ ಅವರ ಸಾಹಿತ್ಯದ ಬಗ್ಗೆ ಕೆಲವು ಅಭಿಪ್ರಾಯಗಳು :

- "ಚುಟುಕು ಸಾಹಿತ್ಯ ಎಂದೊಡನೆ ತಟ್ಟನೆ ನೆನಪಾಗುವ ಹೆಸರು ದಿನಕರ ದೇಸಾಯಿ. ಈ ಸಾಹಿತ್ಯ ಪ್ರಕಾರಕ್ಕೆ ಅವರ ಕೊಡುಗೆ ಅಸಾಮಾನ್ಯವಾದದ್ದು. ಸಂಖ್ಯೆ ದೃಷ್ಟಿಯಿಂದ ಮಾತ್ರವೇ ಅಲ್ಲ, ಪ್ರಭಾವ ದೃಷ್ಟಿಯಿಂದಲೂ" ಎಂದು ವಿಷ್ಣು ನಾಯಕ ಹೇಳಿದ್ದಾರೆ.

- "ನಮ್ಮ ಉತ್ತರ ಕನ್ನಡದ ಹಿರಿಯ ಕವಿ ಡಾ. ದಿನಕರ ದೇಸಾಯಿ ಸತ್ವದಿಂದಲೂ ಸಿದ್ಧಿಯಿಂದಲೂ ಜನತೆಯ ಕವಿ. ಅದರ ಜತೆಗೇ ಪ್ರಸಿದ್ಧಿಯಿಂದ ಮಕ್ಕಳ ಕವಿ" ಎಂದು ಗೌರೀಶ ಕಾಯ್ಕಿಣಿ ಅಭಿಪ್ರಾಯ ಪಡುತ್ತಾರೆ.

- "ಇವರ ಚುಟುಕುಗಳ ತೀವ್ರತೆ, ಮೊನಚು, ಒಗಟು, ಖಾರ, ಹರಿತ ಅಪಾರ. ಮಾತಿನ ಮೋಡಿ ಬೆಡಗು ಸಾಕಷ್ಟು ಆಕರ್ಷಣೀಯವಾಗಿದೆ. ವಿಡಂಬನೆಗೆ ಅವರು ಹೆಚ್ಚಿನ ಪಾತ್ರವನ್ನಿತ್ತಿದ್ದಾರೆ. ಅದು ಸಹಜವೂ ಹೌದು" ಎಂದು ಜಿ. ಶಂಕರಯ್ಯ ನುಡಿದಿದ್ದಾರೆ.

- "ಇಲ್ಲಿ (ಹೂ ಗೊಂಚಲು ಸಂಕಲನ) ನವ್ಯತೆ ಇಲ್ಲ. ಆದರೆ ಆಧುನಿಕತೆ ಮತ್ತು ಪ್ರಗತಿಶೀಲತೆ ಇದೆ" ಎಂದು ಹೂ ಗೊಂಚಲು ಗ್ರಂಥದ ಪ್ರಸ್ತಾವನೆಯಲ್ಲಿ ದಿನಕರ ದೇಸಾಯಿ ಹೇಳಿದ್ದಾರೆ.

● "ದಿನಕರರು ಕನಸು ಕಂಡರೂ ಕೇವಲ ಕನಸುಣಿಯಾಗಿರಲಿಲ್ಲ. ಕಂಡ ಕನಸನ್ನು ಕಾರ್ಯರೂಪಕ್ಕಿಳಿಸಿದರು, ಕಂಡರಿಸಿದರು. ಅವರ ಒಟ್ಟು ಸಾಧನೆಯನ್ನು ಸಮಗ್ರವಾಗಿ ನೋಡಿದಾಗ ಅವರಿಗಿಂತ ಅರ್ಹರು ಒಂದು ಕೈಯ ಬೆರಳೆಣಿಕೆಗೂ ಬರುವುದಿಲ್ಲ ಎಂಬುದು ದಿನಕರರ ಘನತೆಯನ್ನು ಸ್ಪಷ್ಟಪಡಿಸುತ್ತದೆ" ಎಂದು ಡಾ. ಹಂಪನಾ ಅಭಿಪ್ರಾಯಪಡುತ್ತಾರೆ.

● "ಸರ್ವಜ್ಞ ಕವಿ ನೀನು ಮೂಡಿಸಿದ ತ್ರಿಪದಿ
ನನ್ನ ಚೌಪದಿಗಳಿಗೆ ತೋರಿಸಿತು ಹಾದಿ
ನಿನ್ನ ಮಾತಿನ ಸೊಗಸು ಬರಲಿಲ್ಲ ನನಗೆ
ನೀನೊಬ್ಬನೇ ಸಾರ್ವಭೌಮ ಇದುವರೆಗೆ" - ದಿನಕರ ದೇಸಾಯಿ

## ದಿನಕರ ದೇಸಾಯಿ ಅವರ ಜೀವನ ವಿವರ :

ಜನನ : ೧೯೦೯ (೧೦-೯-೧೯೦೯) ಅಂಕೋಲಾದಲ್ಲಿ.

**ಶಿಕ್ಷಣ** : ಪ್ರಾಥಮಿಕ- ಅಲಗೇರಿಯಲ್ಲಿ, ಮಾಧ್ಯಮಿಕ- ಅಂಕೋಲಾ ಮತ್ತು ಕಾರವಾರಗಳಲ್ಲಿ, ಇಂಟರ್ ಮೀಡಿಯೆಟ್- ಬೆಂಗಳೂರು, ಬಿ. ಎ.- ಮೈಸೂರಿನಲ್ಲಿ (೧೯೩೧) -ಕ್ಯಾಂಡಿ ಪಾರಿತೋಷಕ, ಎಂ. ಎ.- ಮುಂಬಯಿ ೧೯೩೩, (ಸೈಂಟ್ ಝೇವಿಯರ್ ಪಾರಿತೋಷಕ), ಎಲ್‌ಎಲ್.ಬಿ- ಮುಂಬಯಿ ವಿ. ವಿ. (೧೯೩೪).

**ವೃತ್ತಿ** : ವಕೀಲಿ ವೃತ್ತಿ, ೧೯೩೩ ರಲ್ಲಿ ಬೆಳಗಾವಿಯಲ್ಲಿ ಪ್ರಾರಂಭ.

**ಆಜೀವ ಸದಸ್ಯ** : ಗೋಪಾಲಕೃಷ್ಣ ಗೋಖಲೆ ಅವರು ಸ್ಥಾಪಿಸಿದ ಭಾರತ ಸೇವಕ ಸಮಾಜ ೧೯೩೫ರಿಂದ.

**ಕಾರ್ಮಿಕ ಧುರೀಣ** : ಉಗಿ ಹಡಗು ಕೆಲಸಗಾರರ ಸಂಘ ಸ್ಥಾಪನೆ ಮತ್ತು ಅದರ ಕಾರ್ಯದರ್ಶಿ ೧೯೩೬.

ವಿವಾಹ : 'ಇಂದು' ಅವರೊಡನೆ ಬೆಳಗಾವಿಯಲ್ಲಿ ೧೯೩೭.

**ಅಂತರಾಷ್ಟ್ರೀಯ ಕಾರ್ಮಿಕ ಸಮ್ಮೇಳನ** : ಡೆನ್ಮಾರ್ಕ್‌ನ ಕೋಪನ್ ಹೇಗ್‌ನಲ್ಲಿ ಪಾಲ್ಗೊಂಡದ್ದು ೧೯೪೫, ಅಮೇರಿಕೆಯ ಸಿಯಾಟಲ್‌ನಲ್ಲಿ ಪಾಲ್ಗೊಂಡದ್ದು ೧೯೪೬.

**ಮಹಾನಗರ ಪಾಲಿಕೆಯ ಸದಸ್ಯ** : ೧೯೪೮-೧೯೬೧.

**ಪ್ರಥಮ ಕೃತಿ** : ೧೯೫೦ 'ಕವನ ಸಂಗ್ರಹ' ಪ್ರಕಟಣೆ.

**ಉತ್ತರ ಕನ್ನಡ ಜಿಲ್ಲೆ ಬಹುಮಾನ** : ಮುಂಬಯಿ ಸರಕಾರದಿಂದ 'ಮಕ್ಕಳ ಗೀತೆಗಳು' ಸಂಗ್ರಹಕ್ಕೆ ೧೯೫೬.

ಉ. ಕನ್ನಡ ಜಿಲ್ಲೆಗೆ ಮಾಡಿದ ಸೇವೆ : ರೈತ ಸಂಘಟನೆ ೧೯೪೦-೪೫, ಕರ್ನಾಟಕ ಏಕೀಕರಣ ಆಂದೋಲನದಲ್ಲಿ ಅಗ್ರ ಪಾತ್ರ. ೧೯೫೩ರಲ್ಲಿ ಕೆನರಾ ವೆಲ್ಫೇರ್ ಟ್ರಸ್ಟ್‌ನ ಸ್ಥಾಪನೆ ಮತ್ತು ಎರಡು ಡಿಗ್ರಿ ಕಾಲೇಜು, ಜ್ಯೂನಿಯರ್ ಕಾಲೇಜು, ೧೫ ಹೈಸ್ಕೂಲ್, ಒಂದು ಹಾಲಕ್ಕಿ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸ್ಥಾಪನೆ.

ಬ್ರಿಟಿಶ್ ಕೌನ್ಸಿಲ್ ಆಮಂತ್ರಣ : ೧೯೫೯ರಲ್ಲಿ ಇಂಗ್ಲೆಂಡಿನಲ್ಲಿ ಶಿಕ್ಷಣ ಸಂಸ್ಥೆಗಳ ಕಾರ್ಯಾಚರಣೆಗಳ ಪರಿಶೀಲನೆಗಾಗಿ.

ಲೋಕಸಭೆಗೆ ಆಯ್ಕೆ : ೧೯೬೭ ಉತ್ತರ ಕನ್ನಡ ಜಿಲ್ಲೆಯಿಂದ.

ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ : ೧೯೭೩ರಲ್ಲಿ.

ಪತ್ರಿಕಾ ಪ್ರಪಂಚಕ್ಕೆ ಸೇವೆ : ೧೯೫೫ರಿಂದ ೧೯೭೨ 'ಜನಸೇವಕ' ವಾರ ಪತ್ರಿಕೆಯ ಚಾಲಕರಾಗಿ. ಪ್ರಮುಖ ಲೇಖಕರಾಗಿ.

ಗೌರವ ಡಾಕ್ಟರೇಟ್ : ಕರ್ನಾಟಕ ವಿಶ್ವವಿದ್ಯಾಲಯದಿಂದ ೧೯೭೫.

ಕರ್ನಾಟಕ ಸಾಹಿತ್ಯ ಅಕಾಡೆಮಿ ಪುರಸ್ಕಾರ : ದಿನಕರನ ಚೌಪದಿ ಗ್ರಂಥಕ್ಕೆ ೧೯೮೦.

ಮರಣ : (೬-೧೧-೧೯೮೨) ಮುಂಬಯಿಯಲ್ಲಿ.

## ದಿನಕರ ದೇಸಾಯಿ ಅವರ ಪ್ರಕಟಿತ ಕೃತಿಗಳು :

ಕವನ ಸಂಗ್ರಹ ೧೯೫೦, ಮಕ್ಕಳ ಗೀತೆಗಳು ೧೯೫೧, ಪ್ರಪಂಚದ ಕೆಲಸಗಾರರು ೧೯೫೩, ಮಕ್ಕಳ ಪದ್ಯಗಳು ೧೯೫೬, ಹೂಗೊಂಚಲು- ೧೯೫೮, ನಾ ಕಂಡ ಪಡುವಣ- ೧೯೬೧, ಮಕ್ಕಳ ಪದ್ಯ ೧೯೭೬, ದಿನಕರನ ಚೌಪದಿ- ೧೯೭೬, ದಾಸಾಳ -೧೯೮೩.

ಇಂಗ್ಲಿಷ್‌ನಲ್ಲಿ : ಪ್ರೈಮರಿ ಎಜ್ಯುಕೇಶನ್ ಇನ್ ಇಂಡಿಯಾ -೧೯೬೧.

ಮೆರಿಟೈಮ್ ಲೇಬರ್ ಇನ್ ಇಂಡಿಯಾ, ೩. ಮಹಾಮಂಡಲೇಶ್ವರ ಅಂಡರ್‌ದ ಚಾಲುಕ್ಯಾಸ್ ೧೯೫೧.

ಕೊಂಕಣಿಯಲ್ಲಿ : ದಿನಕರಾಲಿ ಕವನಾ- ೧೯೮೨.

✵ ✵ ✵

# ರಾವ್‌ಬಹಾದ್ದೂರ್

ಆಧುನಿಕ ಕನ್ನಡ ಸಾಹಿತ್ಯದಲ್ಲಿ ರಾವ್‌ಬಹಾದ್ದೂರ್ ಅವರು ತಮ್ಮ 'ಗ್ರಾಮಾಯಣ' ಕಾದಂಬರಿಯ ರಚನೆಯಿಂದ ಬಹಳ ಪ್ರಸಿದ್ಧರಾಗಿದ್ದಾರೆ. ಅವರು ಕಾದಂಬರಿಗಳನ್ನಲ್ಲದೆ, ಕತೆ, ಹರಟೆ ಮತ್ತು ಪತ್ರಿಕೋದ್ಯಮಕ್ಕೂ ತಮ್ಮ ಮಹತ್ವದ ಕೊಡುಗೆಯನ್ನು ನೀಡಿ ಖ್ಯಾತನಾಮರಾಗಿದ್ದಾರೆ. 'ರಾವ್ ಬಹಾದ್ದೂರ್' ಕಾವ್ಯನಾಮದಿಂದ ಜನಪ್ರಿಯತೆ ಗಳಿಸಿದ ರಾಮಚಂದ್ರ ಭೀಮರಾವ್ ಕುಲಕರ್ಣಿ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿ, ಗಾಂಧೀವಾದಿಯಾಗಿ ಬಾಳಿದರು. ಆಜೀವ ಖಾದೀ ಬಟ್ಟೆ ಧರಿಸಿದರು. ಬಡತನದಲ್ಲಿ ಹುಟ್ಟಿ, ಬೆಳೆದು ಸಂವೇದನಾಶೀಲತೆಯನ್ನು ಗಳಿಸಿಕೊಂಡರು. ಹೋರಾಟದ ಬದುಕಿನಲ್ಲಿ ಹಲವಾರು ಕ್ಷೇತ್ರಗಳಲ್ಲಿ ದುಡಿದರು. ದುಡಿಯುತ್ತಲೇ ಉಚ್ಚ ಶಿಕ್ಷಣ ಪಡೆದರು. ಸಂಯುಕ್ತ ಕರ್ನಾಟಕದಲ್ಲಿ ಉಪಸಂಪಾದಕರಾಗಿ ನಲ್ವತ್ತರ ದಶಕದಲ್ಲಿ ವ್ಯಂಗ್ಯ-ವಿಡಂಬನೆ ಲೇಖನ ಬರೆಯುವುದರಲ್ಲಿ ಪಳಗಿದರು. ಇತಿಹಾಸ ಭೂತ ಅವರು ರಚಿಸಿದ ೫೦-೬೦ ಸಣ್ಣ ಕತೆಗಳೆಲ್ಲ ಹೆಸರು ಗಳಿಸಿವೆ. ಇದು ಅಮೇರಿಕೆಯ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದಿದೆ.

ರಾವ್ ಬಹಾದ್ದೂರ್ ಅವರು ಹಿರೇಪಡಸಲಗಿ ಗ್ರಾಮದಲ್ಲಿ ೩೦-೯-೧೯೦೯ ರಂದು ಜನಿಸಿದರು. ಹಿಂದೆ ವಿಜಾಪುರ ಜಿಲ್ಲೆಯಲ್ಲಿದ್ದ ಈ ಗ್ರಾಮ ಈಗ ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನಲ್ಲಿದೆ. ತಂದೆ ಭೀಮರಾಯರು ಗ್ರಾಮ ತಲಾಠಿಯಾಗಿಯೂ, ಬೇಸಾಯಗಾರರಾಗಿಯೂ ಪಡಸಲಗಿಯಲ್ಲಿದ್ದರು.

ಇವರ ಬಾಲ್ಯ ಜೀವನವು ಹಾಗೂ ಪ್ರಾರಂಭಿಕ ಶಿಕ್ಷಣವು ಪಡಸಲಗಿ, ಜಮಖಂಡಿಗಳಲ್ಲಿ ನಡೆಯಿತು. ಮುಂದಿನ ಪ್ರೌಢ ಶಿಕ್ಷಣಕ್ಕಾಗಿ ಧಾರವಾಡಕ್ಕೆ ಹೋಗಿ ಅಲ್ಲಿಯ ವಿಕ್ಟೋರಿಯಾ ಹೈಸ್ಕೂಲಿನಲ್ಲಿ ಅಭ್ಯಾಸ ಮಾಡಿದರು. ಅಲ್ಲಿ ದ. ರಾ. ಬೇಂದ್ರೆ ಮತ್ತು ಶಂ. ಬಾ. ಜೋಶಿ ಇವರ ಮೆಚ್ಚಿನ ಗುರುಗಳಾಗಿದ್ದರು. ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಪಾಸಾಗಿ ಧಾರವಾಡದಲ್ಲಿಯೇ ಕರ್ನಾಟಕ ಕಾಲೇಜ್ ಸೇರಿದರು. ಬಡತನದ ಪರಿಸ್ಥಿತಿ ಇದ್ದುದರಿಂದ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಲೇ ಕಾಲೇಜ್ ಶಿಕ್ಷಣ ಪಡೆಯಬೇಕಾಯಿತು. ಇವರು ರಾಜ್ಯಶಾಸ್ತ್ರ ಮತ್ತು ಅರ್ಥಶಾಸ್ತ್ರಗಳನ್ನು ಅಭ್ಯಾಸ ಮಾಡಿ ಮುಂಬಯಿ ವಿಶ್ವವಿದ್ಯಾಲಯದಿಂದ ಪದವಿ ಗಳಿಸಿದರು. ಪರೀಕ್ಷೆಯ ವಿಷಯಗಳನ್ನು ಬಿಟ್ಟು ಬೇರೆ ಕವಿ-

ಲೇಖಕರನ್ನು ಅಭ್ಯಾಸ ಮಾಡಲು ಅವರಿಗೆ ಸಮಯವಿರಲಿಲ್ಲ. ಮುಂದೆ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಸಹ ಸಂಪಾದಕರಾದಾಗಲೂ ಅವರಿಗೆ ಹೆಚ್ಚಿನ ಓದಿಗಾಗಿ ಸಮಯದ ಅಭಾವವಿತ್ತು. ಚಿಕ್ಕಂದಿನಲ್ಲಿ ರಾವ್ ಬಹಾದ್ದೂರ್ ಮೇಲೆ ಪ್ರಭಾವ ಬೀರಿದ ಕುಟುಂಬದ ಪ್ರಮುಖ ವ್ಯಕ್ತಿ ಅಜ್ಜಿ, ಅಹಿಂಸೆಯ ಬೀಜ ಮೊಮ್ಮಗನ ಮನದಲ್ಲಿ ಬಿತ್ತಿದ್ದಳು. ಮುಂದೆ ಗಾಂಧೀಜಿಯವರ ಪ್ರಭಾವಕ್ಕೊಳಗಾಗಲು ಅದು ನೆರವಾಯಿತು. ತಂದೆಯ ಪ್ರಭಾವದಿಂದಾಗಿ ಉಚ್ಚ-ನೀಚ, ಬ್ರಾಹ್ಮಣ-ಶೂದ್ರ ಎಲ್ಲರೂ ಸರಿಸಮಾನರೆಂಬ ಭಾವನೆ ಮೂಡಿಬರಲು ಸಾಧ್ಯವಾಯಿತು. ವಾರಕರಿ ಪಂಥದವರಾದ ತಂದೆ ಪ್ರತಿ ವರುಷ ದಿಂಡಿಯಲ್ಲಿ ಎಲ್ಲರೊಡನೆ ಪಂಢರಪುರ ಯಾತ್ರೆ ಹೋಗುವುದು, ಎಲ್ಲರೊಡನೆ ಸಮಾನತೆಯಿಂದ ವ್ಯವಹರಿಸುವುದು ಅವರ ಪಂಥದ ಧೋರಣೆಯಾಗಿತ್ತು.

ಮುಂದೆ ಗಾಂಧೀಜಿಯವರ ಸೇವಾಗ್ರಾಮದಲ್ಲಿ ಎಲ್ಲ ಜಾತಿ-ಮತ-ಪಂಥದವರೊಡನೆ ಸಹಬಾಳ್ವೆ ನಡೆಸಲು ಇದೂ ರಾವ್ ಬಹಾದ್ದೂರರಿಗೆ ನೆರವಾಯಿತು. ಸತ್ಯ ಅಹಿಂಸೆಯ ಬಗ್ಗೆ ತಾಯಿ ರಾವ್ ಬಹಾದ್ದೂರ್ ಅವರಿಗೆ ಹಾಕಿದ ಭದ್ರಬುನಾದಿಯನ್ನು ರಾವ್ ಬಹಾದ್ದೂರ್ ಆಜೀವ ಮರೆಯಲು ಸಾಧ್ಯವಾಗಲಿಲ್ಲ.

''ನಾವು ಹುಟ್ಟಿ ಬಂದಿರುವ ಈ ಜಗತ್ತಿನಲ್ಲಿ ನಾವು ಇರುವವರೆಗೆ ನಾವು ಬಂದಾಗ ಇದ್ದುದಕ್ಕಿಂತ ಹೆಚ್ಚು ಸುಂದರವನ್ನಾಗಿ ಮಾಡಿ, ನಾವೂ ಸುಖದಿಂದ ಬಾಳಿ, ನೆರೆಹೊರೆಯವರಿಗೆ ನಾವು ಹೊರೆಯಾಗದಂತೆ ಪ್ರೀತಿ-ಸ್ನೇಹ-ಸಹಿಷ್ಣುತೆಯಿಂದ ಬಾಳಬೇಕೆಂಬುದು'' ರಾವ್ ಬಹಾದ್ದೂರರು ಕಂಡುಕೊಂಡ ಜೀವನ ದರ್ಶನ. ಅದಕ್ಕೆ ಅನುಗುಣವಾಗಿ ಬಾಳಿದರು, ಬಾಳಿ ಬೆಳಗಿದರು.

ರಾವ್ ಬಹಾದ್ದೂರ್ ಅವರು ಶಿಕ್ಷಣ ಪಡೆಯುತ್ತಿದ್ದಾಗ ಅತ್ತಿತ್ತ ಹೋಗಿ ವಾಸಿಸಿದ್ದರೂ, ಸಂಯುಕ್ತ ಕರ್ನಾಟಕ, ಚರಕಾ ಸಂಘ ಮೊದಲಾದುವುಗಳಲ್ಲಿ ನೌಕರಿ ಮಾಡುತ್ತಿದ್ದಾಗ ಅತ್ತಿತ್ತ ಹೋಗಿ ನೆಲೆಸುತ್ತಿದ್ದರೂ ಅವರು ತಮ್ಮ ಊರು ಪಡಸಲಿಗಿಗೆ ಮರಳಿ ಮರಳಿ ಬಂದು ವಾಸಿಸುತ್ತಿದ್ದರು. ತಮ್ಮ ಗ್ರಾಮೀಣ ಜೀವನದ ಕೌಟುಂಬಿಕ ಪ್ರೇಮ, ರೈತಾಪಿ ಜನರೊಡನೆ ಸಂಪರ್ಕ ಮೊದಲಿನಿಂದ ಕೊನೆಯವರೆಗೆ ಇಟ್ಟುಕೊಂಡೇ ಇದ್ದರು. ಸೀತಾಬಾಯಿಯೊಡನೆ ೧-೪-೧೯೪೦ರಂದು ಅವರ ವಿವಾಹವಾಯಿತು.

ರಾವ್ ಬಹಾದ್ದೂರ್ ದಂಪತಿಗಳಿಗೆ ನಾಲ್ಕು ಗಂಡು ಹಾಗೂ ಎರಡು ಹೆಣ್ಣುಮಕ್ಕಳೂ ಜನಿಸಿದರು. ಹಿರಿಯ ಮಗ ವಾದಿರಾಜನು ಮಹಾರಾಷ್ಟ್ರ ಸರಕಾರದಲ್ಲಿ ಡೆಪ್ಯುಟಿ ಇಂಜಿನಿಯರ್ ಆಗಿದ್ದರು. ಈಗ ನಿವೃತ್ತರಾಗಿ ಪುಣೆಯಲ್ಲಿ ವಾಸವಾಗಿದ್ದಾರೆ.

ಎರಡನೆಯವ ವಿಜಯಕುಮಾರ ಬೆಳಗಾವಿಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಫೀಲ್ಡ್ ಆಫೀಸರ್ ಆಗಿದ್ದಾರೆ. ಮೂರನೆಯ ಮಗ ಸುಧೀಂದ್ರನು ಜಮಖಂಡಿಯಲ್ಲಿ ಕಾಂಟ್ರಾಕ್ಟ್ ಮತ್ತು ವ್ಯವಸಾಯ ಮಾಡುತ್ತಿದ್ದಾನೆ. ನಾಲ್ಕನೆಯವ ಗುಲ್ಬರ್ಗದಲ್ಲಿ ತಾಯಿಯೊಡನೆ ವಾಸವಾಗಿದ್ದಾನೆ. ಅಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಕ್ಯಾಶಿಯರ್ ಆಗಿದ್ದಾನೆ.

ರಾವ್ ಬಹಾದ್ದೂರ್ ಅವರ ಮೊದಲ ಮಗಳು, ಉಷಾ ಮದುವೆಯಾಗಿ ಧೀರೇಂದ್ರ ಬಂಡೋಪಂತ ಜೋಶಿ ಅವರ ಪತ್ನಿಯಾಗಿ ನೆಮ್ಮದಿಯ ಬಾಳನ್ನು ನಡೆಸಿದ್ದಾಳೆ. ಎರಡನೆಯ ಮಗಳು ಶೋಭಾ, ಅನಂತ ರಾಮರಾವ್ ಕುಲಕರ್ಣಿ ಅವರ ಪತ್ನಿಯಾಗಿ ಮುಂಬಯಿಯಲ್ಲಿ ವಾಸಿಸುತ್ತಿದ್ದಾಳೆ. ಮೇಲ್ನೋಟದಿಂದ ರಾವ್ ಬಹಾದ್ದೂರ್ ಅವರು ಆಶಾವಾದಿಗಳಲ್ಲ ಎಂದು ಎನಿಸಿದರೂ ಅವರು ನಂಬಿದ ಮೌಲ್ಯಗಳು ಅವರ ಆಶಾವಾದಿ ಧೋರಣೆಯನ್ನು ಬಿಂಬಿಸುತ್ತವೆ. ತಮಗೆ ಬಿಡುವು ದೊರೆತಾಗಲೆಲ್ಲ, ಪತ್ರಿಕೋದ್ಯಮದಲ್ಲಿ ನಿರತರಾಗುವ ಮೊದಲು, ನಿರತರಾದಾಗ ಮತ್ತು ಅನಂತರ ಬೇಸಾಯದಲ್ಲಿ ತೊಡಗಿದಾಗಲೂ ಪಣತೊಟ್ಟು ಸತತ ಬರವಣಿಗೆ ಮಾಡುತ್ತಿದ್ದರು. ಆಗ ಅವರಿಗೆ ಹಗಲು-ರಾತ್ರಿಗಳ ಎಚ್ಚರವೇ ಇರುತ್ತಿರಲಿಲ್ಲವಂತೆ !

ಮೂಲತಃ ಕೃಷಿಕರಾಗಿಯೇ ಬೆಳೆದ ರಾವ್ ಬಹಾದ್ದೂರ್ ಅವರು ತಮ್ಮ ಜೀವನದ ಬಹುಭಾಗವನ್ನು ಜಮಖಂಡಿ ತಾಲೂಕಿನಲ್ಲಿ ಬೇಸಾಯ ನಡೆಸುತ್ತಲೇ ಕಳೆದರು. ಹೈಬ್ರಿಡ್ ಜೋಳ ಬೆಳೆದು ತಮ್ಮ ವಿಕ್ರಮ ಮೆರೆದರಲ್ಲದೆ, ಹೈಬ್ರಿಡ್ ಟೊಮ್ಯಾಟೋ ಹಾಳಾಗಿ ಹೊಲವೆಲ್ಲ ಹೊಲಸಾಯಿತಂತೆ. ಆದರೆ ರಾವ್ ಬಹಾದ್ದೂರ್ ಅವರಿಗೆ ಈ ಬೆಳೆಯಿಂದ ಹಾನಿಯಾದರೂ ಟೊಮ್ಯಾಟೊ ಬೆಳೆಯುವುದರಲ್ಲಿ ಸ್ಥಾಪಿಸಿದ ದಾಖಲೆ ಅವರಿಗೆ ಸಂತೋಷ ತಂದುಕೊಟ್ಟಿತ್ತು !

ರಾವ್ ಬಹಾದ್ದೂರ್ ಅವರು ಹುಬ್ಬಳ್ಳಿಯಲ್ಲಿ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಉಪ ಸಂಪಾದಕರಾಗಿದ್ದಾಗ 'ಜಯಹಿಂದ್' ಎಂಬ ವಾರ ಪತ್ರಿಕೆಯೂ ಹುಬ್ಬಳ್ಳಿಯಿಂದ ಪ್ರಕಟವಾಗುತ್ತಿತ್ತು. ಅದರಲ್ಲಿಯೂ ಪ್ರತಿವಾರ ರಾಜಕೀಯ ಧೋರಣೆಗಳ ಬಗ್ಗೆ, ವ್ಯಕ್ತಿಗಳ ಬಗ್ಗೆ ವಿಡಂಬನಾತ್ಮಕ ಲೇಖನಗಳನ್ನು ಬರೆಯುತ್ತಿದ್ದರು.

ಸ್ವಾತಂತ್ರ್ಯಪೂರ್ವದ ಆಗಿನ ಕಾಲದಲ್ಲಿ ಬ್ರಿಟಿಶ್ ಸರಕಾರವು 'ರಾವ್ ಸಾಹೇಬ್' 'ರಾವ್ ಬಹಾದ್ದೂರ್', 'ದಿವಾನ್ ಬಹಾದ್ದೂರ್'ಗಳಂಥ ಬಿರುದುಗಳನ್ನು ನಿಷ್ಠ ವ್ಯಕ್ತಿಗಳಿಗೆ ಕೊಟ್ಟು ಗೌರವಿಸುತ್ತಿತ್ತು. ಆದರೆ ಆರ್. ಬಿ. ಕುಲಕರ್ಣಿ ಅವರಿಗೆ 'ರಾವ್ ಬಹಾದ್ದೂರ' ಎಂಬ ಹೆಸರು ಬಂದದ್ದು ಬ್ರಿಟಿಶ್‌ರಿಂದ ಅಲ್ಲ, ಸಂಯುಕ್ತ ಕರ್ನಾಟಕದ ಸಹೋದ್ಯೋಗಿ ಮಿತ್ರರಿಂದ. ೧೯೪೮ರಲ್ಲಿ ರಾಮಚಂದ್ರ ಭೀಮರಾವ್ ಕುಲಕರ್ಣಿ ಅವರು ಉಪ ಸಂಪಾದಕರಾಗಿ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ದುಡಿಯುತ್ತಿದ್ದಾಗ ಈ ಹೆಸರು ಪಡೆದು ಮುಂದೆ ಸಾಹಿತ್ಯ ಕ್ಷೇತ್ರದಲ್ಲಿ ಆ ಹೆಸರಿನಿಂದಲೇ ಜನಪ್ರಿಯರಾದರು. ಸಹೋದ್ಯೋಗಿಗಳು ಮತ್ತು ಮಿತ್ರರು ಆರ್. ಬಿ. ಎಂದು ಕರೆದರೆ ಏಕವಚನದಲ್ಲಿ ಕರೆದು ಅಗೌರವ ತೋರಿದಂತಾಗಬಾರದೆಂದು ಯೋಚಿಸಿ ಆರ್. ಬಿ. ಬದಲಾಗಿ 'ರಾವ್ ಬಹಾದ್ದೂರ್' ಎಂದು ಕರೆಯಲು ತೊಡಗಿದರು. ಸ್ವಾತಂತ್ರ್ಯ ದೊರೆತಾಗ ಬ್ರಿಟಿಶರಿಂದ ದೊರೆತ ಇಂಥ ಬಿರುದುಗಳನ್ನು ವೈಸರಾಯರಿಗೆ ಮರಳಿ ಕಳಿಸಿ ರಾತ್ರೋರಾತ್ರಿ ದೇಶಭಕ್ತರಾಗಿ, ಕಾಂಗ್ರೆಸ್ ಸೇರಿ, ನಗರ ಸಭೆಯ ಅಧ್ಯಕ್ಷರಾದಂಥ ಸ್ವಾರ್ಥಿಗಳನ್ನು ಮೂದಲಿಸಿ ಪತ್ರಿಕೆಯಲ್ಲಿ ರಾ. ಬ. ದೇ. ಭ. (ರಾವ್ ಬಹಾದ್ದೂರ್ ದೇಶಭಕ್ತರು) ಎಂಬ

ವ್ಯಂಗ್ಯ ಲೇಖನಗಳನ್ನು ಪ್ರಕಟಿಸಿದರು. ಅವು ಬಹಳ ಜನಪ್ರಿಯವಾಗಿದ್ದವು. ಮುಂದೆ ಗ್ರಾಮಾಯಣ ಪ್ರಕಟವಾದದ್ದೂ 'ರಾವ್ ಬಹಾದ್ದೂರ್' ಎಂಬ ಹೆಸರಿನಿಂದಲೇ. ಅದೇ ಹೆಸರು ದೃಢವಾಗಿ ರಾಮಚಂದ್ರರಾಯರಿಗೆ ಅಂಟಿಕೊಂಡಿತು. ಪತ್ರಕರ್ತರಾಗಿ, ಸಾಹಿತ್ಯ ರಚನಾಕಾರರಾಗಿ ಮತ್ತು ಕೃಷಿಕರಾಗಿದ್ದಾಗ ಹಲವು ಪ್ರಕಾರಗಳಲ್ಲಿ ಸಾಹಿತ್ಯ ರಚಿಸಿದ್ದರೂ ಅವರು ನಮ್ಮ ಕಣ್ಣೆದುರು ಒಮ್ಮೆಲೇ ನಿಲ್ಲುವುದು ಅವರ 'ಗ್ರಾಮಾಯಣ' ಕಾದಂಬರಿಯಿಂದಲೇ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಆತ್ಮೀಯರೊಡನೆ ಹರಟೆ, ಸರಸ ಸಲ್ಲಾಪಗಳಲ್ಲಿ ಅವರು ತೊಡಗಿದರೆ ಸಮಯ ಕಳೆದು ಹೋದದ್ದು ಗೊತ್ತಾಗುತ್ತಿರಲಿಲ್ಲ. ವಿಶಾಲ ಅನುಭವ, ಸರಸ ಸಂಭಾಷಣೆ ಅವರೆಡೆಗೆ ಆತ್ಮೀಯರನ್ನು ಆಕರ್ಷಿಸುತ್ತಿತ್ತು. ಕಥೆ, ಹರಟೆ, ಕಿರುಕಥೆಗಳು ಹಾಗೂ ಕನ್ನಡದಲ್ಲಿ ವಿಶಿಷ್ಟವೆನ್ನಬಹುದಾದ 'ಗುರುಪಾದಪ್ಪನ ವ್ಯಕ್ತಿ ಚಿತ್ರ' ಮೊದಲಾದವನ್ನು ರಚಿಸಿದ್ದಾರೆ.

ಗ್ರಾಮಾಯಣ ಕಾದಂಬರಿಯನ್ನು ಹದಿನಾಲ್ಕು ಭಾರತೀಯ ಭಾಷೆಗಳಲ್ಲಿ ಪ್ರಕಟಿಸಲು ನ್ಯಾಶನಲ್ ಬುಕ್ ಟ್ರಸ್ಟ್ ತೊಡಗಿದ್ದು, ಈಗಾಗಲೇ ಆರು ಭಾಷೆಗಳಲ್ಲಿ ಅನುವಾದಿಸಿ ಪ್ರಕಟಿಸಿದೆ. ಗ್ರಾಮಾಯಣ ಕಾದಂಬರಿಯ ಕುರಿತು ಬಂದ ಖ್ಯಾತ ವಿಮರ್ಶಕರ ಲೇಖನಗಳನ್ನು ಸಂಗ್ರಹಿಸಿ 'ಗ್ರಾಮಾಯಣ ಸಮೀಕ್ಷೆ' ಎಂಬ ಸಮೀಕ್ಷಾ ಗ್ರಂಥವನ್ನು ಶ್ರೀ ಕೃಷ್ಣ ಆಲನಹಳ್ಳಿ ೧೯೭೦ ರಲ್ಲಿ ಪ್ರಕಟಿಸಿದ್ದಾರೆ. ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಎಂ. ಎಸ್. ಸತ್ಯು ಅವರು ಗ್ರಾಮಾಯಣವನ್ನು ಹಿಂದೀ ಚಲನಚಿತ್ರವನ್ನಾಗಿ ನಿರ್ಮಿಸಲು ಬಯಸಿ, ರಾವ್ ಬಹಾದ್ದೂರ್ ಅವರಿಂದ ಅದಕ್ಕೆ ಅನುಮತಿಯನ್ನೂ ಪಡೆದಿದ್ದರು. ಗ್ರಾಮಾಯಣ ರಾವ್ ಬಹಾದ್ದೂರ್ ಅವರ ಸಾಹಿತ್ಯ ಗುಣ ವಿಶೇಷತೆಗಳನ್ನು ಒಟ್ಟಾರೆಯಾಗಿ ಚಿತ್ರಿಸಿದ ಬೃಹತ್ ಕಾದಂಬರಿ ಎನ್ನಬಹುದು.

ಮೊದಲು ಧಾರಾವಾಹಿಯಾಗಿ ಪ್ರಕಟವಾದ 'ಮುತ್ತು ಕಟ್ಟಿದಳು' ಕಾದಂಬರಿ, ವೇಶ್ಯಾ ಸಮಸ್ಯೆಯ ಹಲವು ಸ್ತರಗಳನ್ನು ಎತ್ತಿ ತೋರಿಸುವ ಸಾಮಾಜಿಕ ಕಾದಂಬರಿ. ದೇವದಾಸಿ ಪದ್ಧತಿಯನ್ನು ಇಂದಿನ ಸಮಾಜ ದುರುಪಯೋಗಪಡಿಸಿಕೊಳ್ಳುವುದರ ಚಿಂತನೆ ಇವರಲ್ಲಿದೆ.

'ಗೌಡರ ಕೋಣ' ಕಾದಂಬರಿಯಲ್ಲಿ ಅಧಿಕಾರ ಒಬ್ಬನಲ್ಲಿ ಕೇಂದ್ರೀಕೃತವಾದರೆ ಇತರರ ಶೋಷಣೆಗಾಗಿ ಅವನು ಅದನ್ನು ಬಳಸಿಕೊಳ್ಳುತ್ತಾನೆ. ಪ್ರಜಾಪ್ರಭುತ್ವದಲ್ಲಿಯೂ ರಾಜಕೀಯ ಕ್ಷೇತ್ರದಲ್ಲಿ ಇದನ್ನು ಕಾಣಬಹುದು. ಊರಿನಲ್ಲಿ ಗೌಡನ ಕೋಣ ಯಾರ ಹೊಲವನ್ನಾದರೂ ನುಗ್ಗಿ ಮೇಯಬಹುದು. ಇಲ್ಲಿ ಕೋಣ ಅಧಿಕಾರದ ಸಂಕೇತವಾಗಿದೆ. ಹೀಗೆ ನೈತಿಕ ಮೌಲ್ಯಗಳನ್ನು ರಾವ್ ಬಹಾದ್ದೂರ್ ತಮ್ಮ ಕಾದಂಬರಿಗಳಲ್ಲಿ ಎತ್ತಿ ಹಿಡಿದದ್ದು ಕಂಡುಬರುತ್ತದೆ. 'ಹಳ್ಳ ಬತ್ತಿತು ಗುಡಿ ಎದ್ದಿತು' ಕಥೆ, 'ಗೌಡರ ಕೋಣ' ಕಾದಂಬರಿಗಳನ್ನು ಸಿನೇಮಾಕ್ಕೆ ರೂಪಾಂತರಿಸಲು ಸ್ವೀಕರಿಸಿದವರು ಅವನ್ನು ಸಿನೇಮಾಕ್ಕೆ ತರಲಿಲ್ಲ.

೧೯೬೪ರಲ್ಲಿ ತಮ್ಮ ೭೫ನೆಯ ವಯಸ್ಸಿನಲ್ಲಿ ಮೈಸೂರಿನಲ್ಲಿ ಧ್ವನ್ಯಾಲೋಕದಲ್ಲಿ ರೆಸಿಡೆಂಟ್‌ಫೆಲೋ ಆಗಿ ಒಂದು ತಿಂಗಳು ವಾಸಿಸಿ ಒಂದು ಮಹಾನ್ ಕಾದಂಬರಿ ಬರೆಯಲು ಪ್ರಾರಂಭಿಸುವ ಮೊದಲೇ ಅವರು ದೈಹಿಕವಾಗಿ ಕುಗ್ಗಿದ್ದರು. ರೋಗದಿಂದ ಬಳಲಿ ಬೆಂದಿದ್ದರು. ಧ್ವನ್ಯಾಲೋಕದ ಪರಿಸರ ರಮ್ಯವಾಗಿತ್ತು. ಅಲ್ಲಿ ರಾವ್ ಬಹಾದ್ದೂರ್‌ರನ್ನು ಧ್ವನ್ಯಾಲೋಕದ ಪ್ರೊಫೆಸರ್ ಸಿ. ಡಿ. ನರಸಿಂಹಯ್ಯನವರು ಪಾಲನೆ-ಪೋಷಣೆ ಮಾಡಿದರು. ಬ್ರಹ್ಮಾಂಡ ಕಾದಂಬರಿಯನ್ನು ರಚಿಸಲು ರೂಪರೇಷೆ ಸಿದ್ಧಪಡಿಸಿದ್ದರು. "ಅದರಲ್ಲಿ ಒಂದು ಜನಾಂಗದ ದಾಸ್ಯ ವಿಮೋಚನೆಯ ಮಾರ್ಗದರ್ಶಕರಾದ ಮಹಾತ್ಮಾ ಗಾಂಧೀಜಿಯವರ ತತ್ವ ಪ್ರಣಾಲಿಕೆಗೆ ಸ್ಪಂದಿಸಿದ ಜನತೆಯ ತ್ಯಾಗಮಯ ದೃಢಸಂಕಲ್ಪದ, ಹೋರಾಟದ ಹಿನ್ನೆಲೆಯಲ್ಲಿ ಒಂದು ಗ್ರಾಮದ ಜನತೆ ತೋರಿದ ಪ್ರತಿಕ್ರಿಯೆಯನ್ನು ಬಳಸಿಕೊಳ್ಳಲಾಗುವುದು. ಇಂತಹ ತ್ಯಾಗಮಯ ಜೀವನಕ್ಕೆ ಬದ್ಧವಾದ ಜನತೆ ನೈತಿಕ ಅಧಃಪತನ ಹೊಂದಿ ಸಮಾಜ ದ್ರೋಹಿ ಪ್ರವೃತ್ತಿಗೆ ಬಲಿಯಾಗುವುದನ್ನು ವಿಶ್ಲೇಷಿಸಲಾಗುವುದು. ಒಂದು ಅರ್ಥದಲ್ಲಿ ಈ ಕಾದಂಬರಿಯು (ಬ್ರಹ್ಮಾಂಡ) ಗಾಂಧಿಯುಗದ ಆರಂಭ ಅದರ ಉಚ್ಛ್ರಾಯ ಸ್ಥಿತಿ ಹಾಗೂ ಅವನತಿ ಇವುಗಳ ಸಮಗ್ರ ಚಿತ್ರವನ್ನು ಅಭಿವ್ಯಕ್ತಿಗೊಳಿಸುವ ಕೃತಿಯಾಗಬಹುದು" ಎಂದು ರಾವ್ ಬಹಾದ್ದೂರ್ ಅವರು ಧ್ರುವರಾಜ ಮುತಾಲಿಕ ದೇಸಾಯಿ ಅವರು ಕೇಳಿದ ಪ್ರಶ್ನೆಗೆ ಉತ್ತರ ಕೊಟ್ಟಿದ್ದರು.

'ಮೈಸೂರಿನ ಧ್ವನ್ಯಾಲೋಕದಲ್ಲಿ' ಬಂದು ಬರವಣಿಗೆಯಲ್ಲಿ ತೊಡಗುವ ಮೊದಲು ಸ್ಪೈನಲ್ ಕಾರ್ಡ್ ಮೃದುತ್ವದಿಂದ ಬಳಲಿ ವೈದ್ಯರ ಉಪಚಾರದಿಂದ ಗುಣಮುಖರಾಗಿದ್ದರು. ಮೈಸೂರಿನಲ್ಲಿ 'ಬ್ರಹ್ಮಾಂಡ' ಕಾದಂಬರಿ ಬರೆಯತೊಡಗಿದ ಕೆಲ ದಿನಗಳಲ್ಲಿ ಅವರಿಗೆ ತೊಂದರೆ ಕೊಡುತ್ತಿದ್ದ ಕಣ್ಣಿನ ಹಾಗೂ ಸಿಹಿಮೂತ್ರ ಚಿಕಿತ್ಸೆಗೆಂದು ಹುಬ್ಬಳ್ಳಿಗೆ ಹೊರಟರು. ಸಿ. ಡಿ. ನರಸಿಂಹಯ್ಯನವರು ರೈಲ್ವೆ ನಿಲ್ದಾಣದ ವರೆಗೆ ಹೋಗಿ ಅವರನ್ನು ಹುಬ್ಬಳ್ಳಿಗೆ ಬೀಳ್ಕೊಂಡಾಗ 'ನಾನು ಖಾಯಿಲೆ ವಾಸಿ ಮಾಡಿಕೊಂಡು ಮತ್ತೆ ಬರುತ್ತೇನೆ' ಎಂದು ನುಡಿದರು. ಆದರೆ ವಿಧಿ ಅವರ ಬೆನ್ನು ಬಿಡಲಿಲ್ಲ. ಹುಬ್ಬಳ್ಳಿಯಲ್ಲಿ ಅವರು ಅನಂತರ ಕ್ಯಾನ್ಸರ್ ಆಸ್ಪತ್ರೆ ಸೇರಬೇಕಾಯಿತು. ಅನಂತರ ಜಮಖಂಡಿಗೆ. ಔಷಧೋಪಚಾರಕ್ಕೆ ಖರ್ಚು ಅತಿಯಾದಾಗ ಮಿತ್ರರು ಪತ್ರಿಕೆಯ ಮುಖಾಂತರ ಮನವಿ ಮಾಡಿ ಜನತೆಯಿಂದ ಧನ ಸಹಾಯ ಪಡೆಯಲು ಸೂಚಿಸಿದರು. ಆದರೆ ಸ್ವಾಭಿಮಾನಿಯಾದ ರಾವ್ ಬಹಾದ್ದೂರ್ ಅದಕ್ಕೆ ಒಪ್ಪಲಿಲ್ಲ. ಸರಕಾರದಿಂದ ಬಂದ ಅಲ್ಪ ಸಹಾಯವನ್ನು ಮಾತ್ರ ಸ್ವೀಕರಿಸಿದರು. ಎಪ್ಪತ್ತೈದು ವರ್ಷಗಳ ಕಾಲ ತುಂಬು ಬಾಳನ್ನು ಅನುಭವಿಸಿ ಕೊನೆಗಾಲದಲ್ಲಿ ರೋಗದಿಂದ ಬಳಲಿ ೩೧-೧೨-೧೯೬೪ ರಂದು ತಮ್ಮ ಕೊನೆಯುಸಿರನ್ನೆಳೆದರು. ಕನ್ನಡ ಸಾಹಿತ್ಯ ಲೋಕದಲ್ಲಿ ಚಿರಂಜೀವಿಯಾದರು.

ರಾವ್ ಬಹಾದ್ದೂರರು ಗ್ರಾಮೀಣ ಬದುಕನ್ನು ಸಾಹಿತ್ಯದಲ್ಲಿ ಮೂಡಿಸಿ ತಮ್ಮೊಡನೆ ಇತರರೂ ಅದರ ಕುರಿತು, ದೇಶದ ಮುನ್ನಡೆಯ ಕುರಿತು ಚಿಂತನೆ ನಡೆಸುವಂತೆ ಮಾಡಿದರು. ನೋಡಿದರೆ ಹಳ್ಳಿಯ ರೈತನಂತೆ ಕಾಣುತ್ತಿದ್ದ ಇವರು ನವ ಆದರ್ಶ ಭಾರತದ ನಿರ್ಮಾಣ ಕಾರ್ಯದಲ್ಲಿ ತಮ್ಮ ಕೊಡುಗೆ ನೀಡಿದ್ದಾರೆ.

ಗ್ರಾಮಾಯಣ ಕಾದಂಬರಿ ಜನರ ಮನ ಗೆದ್ದುದಕ್ಕೆ ರಾವ್ ಬಹಾದ್ದೂರ್ ಅವರಿಗೆ ಸಂತೃಪ್ತಿ ಇತ್ತು. ಇನ್ನೂ ಅದಕ್ಕಿಂತ ಉತ್ತಮ ಕೃತಿ ರಚಿಸಬೇಕೆಂಬ ಹಂಬಲವೂ ಇತ್ತು. ಬಹುಶಃ ಅವರು ತಮ್ಮ ಜೀವಿತದ ಕೊನೆಯ ಕಾಲದಲ್ಲಿ ಆರಂಭಿಸಿದ 'ಬ್ರಹ್ಮಾಂಡ' ಕಾದಂಬರಿ ಅವರಿಗೆ ಸಂತೃಪ್ತಿ ತಂದುಕೊಡುತ್ತಿತ್ತೋ ಏನೋ! ಗ್ರಾಮಾಯಣ ಕಾದಂಬರಿಯ ಬಿಡುಗಡೆಯ ಸಮಾರಂಭದಲ್ಲಿ ಡಾ. ವಿ. ಕೃ. ಗೋಕಾಕರು ಮತ್ತು ಡಾ. ದ. ರಾ. ಬೇಂದ್ರೆ ಅವರು ಆಡಿದ ಮಾತುಗಳು ರಾವ್ ಬಹಾದ್ದೂರ್ ಅವರಿಗೆ ಅಪರಿಮಿತ ಆನಂದ ಉಂಟು ಮಾಡಿದ್ದವಂತೆ.

ಕನ್ನಡ ಸಾಹಿತ್ಯ ಕ್ಷೇತ್ರ ಹಾಗೂ ಪತ್ರಿಕೋದ್ಯಮ ಕ್ಷೇತ್ರಗಳಲ್ಲಿ ರಾವ್ ಬಹಾದ್ದೂರ್ ಹೆಸರುವಾಸಿಯಾಗಿದ್ದಾರೆ. ಇತರರಿಗೆ ಆದರ್ಶರಾಗಿದ್ದಾರೆ.

ರಾವ್ ಬಹಾದ್ದೂರ್ ಅವರ ಹಾಗೂ ಅವರ ಕೊಡುಗೆಯ ಬಗ್ಗೆ ಮುಂದಿನ ಕೆಲವು ಹೇಳಿಕೆಗಳು ಪೂರಕ ಮಾಹಿತಿ ಒದಗಿಸಬಹುದಾಗಿದೆ.

ರಾವ್ ಬಹಾದ್ದೂರ್ ಅವರ ಜೀವನ ಸಾಹಿತ್ಯ ಕುರಿತು ಕೆಲವು ಅವಲೋಕಿಸಬಹುದಾಗಿದೆ.

● "ನಮ್ಮ ಸಂಸ್ಕೃತಿಯಲ್ಲಿ ಕಂಡುಬರುವಂತಹ ಹಿತಕಾರಿ ಉತ್ತಮ ಅಂಶಗಳನ್ನು ಜನರ ಮನಸ್ಸಿನ ಮೇಲೆ ಬಿಂಬಿಸಿ ಅವರಲ್ಲಿ ನೈತಿಕ ಮೌಲ್ಯವನ್ನು ಕಾಪಾಡುವ ಪ್ರವೃತ್ತಿಯನ್ನು ಜಾಗೃತಗೊಳಿಸುವುದೇ ನನ್ನ ಜೀವನ ದೃಷ್ಟಿ. ಇದನ್ನು ನನ್ನ ಸಾಹಿತ್ಯದಲ್ಲಿ ಪ್ರತಿಪಾದಿಸಿದ್ದೇನೆಂಬ ಸಮಾಧಾನ, ಸಂತೃಪ್ತಿ ನನಗಿದೆ" ಎಂದು ರಾವ್ ಬಹಾದ್ದೂರ್ ಅವರು ಡಾ. ತಿಪ್ಪೇಸ್ವಾಮಿಯವರಿಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

● "ಈ ಕಾದಂಬರಿ ಸಾವಯವ ಸಮಾಜವೊಂದು ಒಡೆದು ಹೋಗುವ ಸಮಸ್ಯೆಯನ್ನು ಪರಿಶೀಲಿಸುತ್ತದೆ. ಕಾದಂಬರಿ ಆರಂಭವಾಗುವ ಕಾಲಕ್ಕೆ ಈ ಬದಲಾವಣೆ ಆರಂಭವಾಗುತ್ತದೆ. ಅಂತೆಯೇ ಕಾದಂಬರಿ ಅಂತಃಕಲಹದಿಂದ ಪ್ರಾರಂಭವಾಗುತ್ತದೆ. ಈ ಅಂತಃಕಲಹದ ನಾನಾ ಮುಖಗಳು ವಿವಿಧ ಬೆಳವಣಿಗೆಗಳು ಕಾದಂಬರಿಯ ಮುಖ್ಯ ವಸ್ತು. ಆದರಿಂದ ಕಾದಂಬರಿಯಲ್ಲಿ ಮೌಲ್ಯಗಳ ತುಲನೆಯೂ ನಡೆಯುತ್ತದೆ" ಎಂದು ಡಾ. ಎಂ. ಜಿ. ಕೃಷ್ಣಮೂರ್ತಿ ಅವರು 'ಗ್ರಾಮಾಯಣ'ದ ಬಗ್ಗೆ ಹೇಳಿದ್ದಾರೆ.

● "ಕಾದಂಬರಿ ಪ್ರಕಾರ ನನ್ನ ಅಭಿವ್ಯಕ್ತಿಯ ಮುಖ್ಯ ಮಾಧ್ಯಮ ನಿಜ. ಆದರೆ ಸಣ್ಣ ಕತೆಯ ಸಾಹಿತ್ಯ ಪ್ರಕಾರದಲ್ಲಿ ನನಗೆ ಒಂದು ಕಾಲದಲ್ಲಿ ಹೆಚ್ಚು ಆಸ್ಥೆ ಇತ್ತು. ಸುಮಾರು ೫೦-೬೦ ಸಣ್ಣ ಕತೆಗಳನ್ನು ಬರೆದಿದ್ದೇನೆ. ಜಾಗತಿಕ ಕಥಾ ಸ್ಪರ್ಧೆಯಲ್ಲಿ 'ಇತಿಹಾಸ ಭೂತ' ಎಂಬ ನನ್ನ ಸಣ್ಣ ಕತೆಗೆ ಕನ್ನಡದಲ್ಲಿ ದ್ವಿತೀಯ ಸ್ಥಾನವೂ ಮುಂದೆ ಅಖಿಲ ಭಾರತದ ಎಲ್ಲ ಭಾಷೆಗಳ ಸ್ಪರ್ಧೆಯಲ್ಲಿ ಒಂಬತ್ತನೆಯ ಸ್ಥಾನ ದೊರೆತಿದೆ" ಎಂದು ರಾವ್ ಬಹಾದ್ದೂರ್ ಹೇಳಿದ್ದಾರೆ.

● "ಗ್ರಾಮಾಯಣದ ವೈಶಿಷ್ಟ್ಯವೆಂದರೆ, ಈ ಮೊದಲಿನ ಕಾದಂಬರಿಗಳ ಹರಹನ್ನು ಬಿಟ್ಟುಕೊಟ್ಟು, ಸಮಾಜದ ಒಂದು ಸಾಂಕ್ರಾಮಿಕ ಅವಸ್ಥೆಯಲ್ಲಿ ಲಕ್ಷ್ಯವನ್ನು ಕೇಂದ್ರೀಕರಿಸಿ ಏಕರೂಪತೆಯನ್ನು ಸಾಧಿಸಿದುದು. ಇದರಿಂದ ಇಲ್ಲಿನ ಜೀವನ ದರ್ಶನಕ್ಕೆ ಬರುವ ತೀವ್ರತೆ ಉಳಿದ ಕಾದಂಬರಿಗಳಿಗಿಂತ ಭಿನ್ನವಾಗಿದೆ" ಎನ್ನುತ್ತಾರೆ ಡಾ. ಜಿ. ಎಸ್. ಆಮೂರ ಅವರು.

● "ರಾವ್ ಬಹಾದ್ದೂರ್ ಅವರಿಗೆ ಅವರ ಗ್ರಾಮಾಯಣೇತರ ಕಾದಂಬರಿ ಕತೆಗಳನ್ನು ಕುರಿತಂತೆ ಕನ್ನಡ ವಿಮರ್ಶಕರು ವಿಚಾರ ಮಾಡಲೇ ಇಲ್ಲ" ಎಂಬ ಕೊರಗು ಕೊನೆಯ ವರೆಗೂ ಇತ್ತು ಎಂದು ಡಾ. ತಿಪ್ಪೇಸ್ವಾಮಿ ಹೇಳಿದ್ದಾರೆ.

● "ದ್ವೇಷ, ಮೋಹ, ಅಭಿಮಾನ, ಸ್ವಾರ್ಥ ಸಾಧನೆ, ಕಪಟ ಕಾರಸ್ಥಾನಗಳ ಬಲೆಯಲ್ಲಿ ಸಿಕ್ಕು ಒದ್ದಾಡುವ ಒಂದು ಜೀವಂತ ಸಮಾಜವೇ ಈ ಕತೆಯ ನಾಯಕ ಪಾತ್ರವನ್ನು ವಹಿಸಿದೆ" ಎಂದು ಪ್ರೊ. ಕೀರ್ತಿನಾಥ ಕುರ್ತಕೋಟಿ ಗ್ರಾಮಾಯಣದ ಬಗ್ಗೆ ಅಭಿಪ್ರಾಯಪಡುತ್ತಾರೆ.

● "ಇದು ಕೇವಲ ಹಳ್ಳಿಯ ಕಥೆಯಾಗಿ ಉಳಿಯದೆ ಆಧುನಿಕ ಪ್ರಭಾವಗಳಿಗೆ ಸಿಕ್ಕಿ ತಮ್ಮ ರಚನೆಯ ಮೂಲ ಸ್ವರೂಪವನ್ನೇ ಕಳೆದುಕೊಳ್ಳುತ್ತಿರುವ ಎಲ್ಲ ಭಾರತೀಯ ಹಳ್ಳಿಗಳ ಕಥೆಯೂ ಆಗುತ್ತದೆ" ಎಂದು ಡಾ. ಗಿರಡ್ಡಿ ಗೋವಿಂದರಾಜ್ ನುಡಿದಿದ್ದಾರೆ.

● "ಗ್ರಾಮಾಯಣ ಉಳಿದ ಕಾದಂಬರಿಗಳಿಗೆ ಒರೆಗಲ್ಲಾಗಿದೆ" ಎಂದು ಪ್ರೊ. ಸುಮತೀಂದ್ರ ನಾಡಿಗ್ ಅಭಿಪ್ರಾಯಪಡುತ್ತಾರೆ.

## ರಾವ್ ಬಹಾದ್ದೂರ್ ಅವರ ಕೃತಿಗಳು

**ಕಾದಂಬರಿ** : ಗ್ರಾಮಾಯಣ, ಮುತ್ತು ಕಟ್ಟಿದಳು, ವೃಂದಾವನ, ಧೂಮಕೇತು, ಕನಸು ನನಸು, ಸೂಜಿಗಲ್ಲು, ತಬ್ಬಲಿಗಳು, ಬಿತ್ತಿ ಬೆಳೆದವರು, ಕಾಂಚನ ಮೃಗ, ಗೌಡರ ಕೋಣ, ಬ್ರಹ್ಮಾಂಡ (ಅಪೂರ್ಣ) ಇತ್ಯಾದಿ.

**ಕಥಾಸಂಗ್ರಹ** : ಇತಿಹಾಸ ಭೂತ ಮತ್ತು ಇತರ ಕಥೆಗಳು, ನೆರೆಹೊರೆ, ಮರೆಯದ ನೆನಹುಗಳು, ಕರ ನಿರಾಕರಣೆಯ ವೀರಕತೆ ಇತ್ಯಾದಿ.

**ಪ್ರವಾಸ ಸಾಹಿತ್ಯ** : ನಾ ಕಂಡ ಬಾಂಗ್ಲಾದೇಶ.

(ಗುರುಪಾದಪ್ಪನ ವ್ಯಕ್ತಿಚಿತ್ರ ಕಲ್ಪಿಸಿ (ನಿರ್ಮಿಸಿ) ರಾಜಕೀಯ ಧೋರಣೆಗಳನ್ನು ಸರ್ವ ಸಾಮಾನ್ಯ ವ್ಯಕ್ತಿಯ ದೃಷ್ಟಿಯಿಂದ ನೋಡಿ ವ್ಯಂಗ್ಯ ರೂಪದ (ಹರಟೆ)ದಲ್ಲಿ ವ್ಯಕ್ತಿ ರೇಖೆ ನಿರ್ಮಾಣ ಮಾಡಿದ್ದು ಒಂದು ವಿಶೇಷ ಬರವಣಿಗೆ. ಕನ್ನಡ ಸಾರಸ್ವತ ಲೋಕದಲ್ಲಿಯೇ ಒಂದು ವಿಶಿಷ್ಟವಾದುದು. ಅದು ಗ್ರಂಥರೂಪದಲ್ಲಿ ಪ್ರಕಟವಾಗಬೇಕಾಗಿದೆ.)

# ಸಂ. ಶಿ. ಭೂಸನೂರಮಠ

ಆಧುನಿಕ ಕನ್ನಡದ ಕೃಷಿಕಾರರಾಗಿ ಸಂಶೋಧನೆ, ವಿಮರ್ಶೆ ಮತ್ತು ಗ್ರಂಥ ಸಂಪಾದನೆ ಕ್ಷೇತ್ರಗಳಲ್ಲಿ ಖ್ಯಾತರಾದ ಪ್ರೊ. ಎಸ್. ಎಸ್. ಭೂಸನೂರಮಠ (ಸಂ. ಶಿ.) ಅವರು ತಮ್ಮ ಅಮೋಘ ಮಹಾಕಾವ್ಯ ರಚನೆ ಮಾಡಿ ಇನ್ನೂ ಹೆಚ್ಚು ಜನಪ್ರಿಯತೆ ಗಳಿಸಿದ್ದಾರೆ. ಹಳಗನ್ನಡ ಕಾವ್ಯಗಳನ್ನು ಅಭ್ಯಾಸ ಮಾಡಿ ಅವುಗಳನ್ನು ಸುವ್ಯವಸ್ಥಿತವಾಗಿ ಸಂಪಾದಿಸಿ ಕೊಡಬಲ್ಲ ಕೆಲವರಲ್ಲಿ ಅಗ್ರಗಣ್ಯರಾಗಿದ್ದಾರೆಂದರೆ ತಪ್ಪಾಗಲಾರದು. ವಚನಕಾರರ ವಚನಗಳನ್ನು ಸಂಗ್ರಹಿಸಿ ಸಂಪಾದಿಸಿ ಪಾಂಡಿತ್ಯಪೂರ್ಣ ಮುನ್ನುಡಿಯೊಡನೆ ಪ್ರಕಟಿಸಿದ್ದು ಇವರ ದೊಡ್ಡ ಕೊಡುಗೆಯಾಗಿದೆ. ವಚನಗಳನ್ನು ಇಂಗ್ಲಿಷಿಗೆ ಅನುವಾದಿಸಿ ಅವುಗಳ ಮಹತ್ವವನ್ನು ಜಾಗತಿಕ ನೆಲೆಯಲ್ಲಿ ಗುರುತಿಸುವಂತೆ ಮಾಡಿದ್ದಾರೆ. 'ಭವ್ಯಮಾನವ' ಮಹಾಕಾವ್ಯ ರಚಿಸಿ ತಮ್ಮ ಕಾವ್ಯ ಸಾಮರ್ಥ್ಯವನ್ನು ಪ್ರಕಟಿಸಿದ್ದಾರೆ. ಅನುಭಾವಿಯ ಹಂತದಲ್ಲಿ ನಿಂತು ವಿಮರ್ಶೆ, ಗ್ರಂಥ ಸಂಪಾದನೆ ಹಾಗೂ ಕೃತಿ ರಚನೆ ಮಾಡಿದ್ದು ಇವರ ವ್ಯಕ್ತಿತ್ವದ ಹಿರಿಮೆಯನ್ನು ಎತ್ತಿ ತೋರಿಸುತ್ತದೆ.

೧೯೧೦ರಲ್ಲಿ (೭-೧೧-೧೯೧೦)ರಂದು ಧಾರವಾಡ ಜಿಲ್ಲೆಯ ರೋಣ ತಾಲೂಕಿನ ನಿಡಗುಂದಿಯಲ್ಲಿ ಒಂದು ಬಡಕುಟುಂಬದಲ್ಲಿ ಸಂಗಯ್ಯನು ಜನಿಸಿದನು. ತಂದೆ ಶಿವಮೂರ್ತಯ್ಯ. ತಾಯಿ ರಾಜಮ್ಮ. ಸಂಗಯ್ಯನಿಗೆ ಇಬ್ಬರು ಅಕ್ಕಂದಿರು ಹಾಗೂ ಒಬ್ಬ ಅಣ್ಣನಿದ್ದರೂ ಅವರು ಬಹುಕಾಲ ಬಾಳಲಿಲ್ಲ. ಪ್ರಾಥಮಿಕ ಶಾಲಾ ಶಿಕ್ಷಣ ಪಡೆಯುವ ತನಕ ತನ್ನ ಬಾಲ್ಯವನ್ನು ನಿಡಗುಂದಿಯಲ್ಲಿಯೇ ಕಳೆದನು. ಮುಂದೆ ಗದಗ ಮತ್ತು ಹುಬ್ಬಳ್ಳಿಗಳಲ್ಲಿ ಮಾಧ್ಯಮಿಕ ಶಾಲೆಯ ಅಭ್ಯಾಸ ಮುಂದುವರಿಸಿದರು. ಬಡತನ ಶಾಲಾಭ್ಯಾಸಕ್ಕೆ ತಡೆ ಉಂಟು ಮಾಡುತ್ತಿತ್ತು. ಬಾಲಕ ಗದಗಿನಲ್ಲಿದ್ದಾಗ ಪೆಟ್ರೋಲ್ ಪಂಪಿನಲ್ಲಿ ಕೆಲಸ ಮಾಡಿ ಹೊಟ್ಟೆ ತುಂಬಿಸಿಕೊಳ್ಳಬೇಕಾಗುತ್ತಿತ್ತು. ಕಲಿಯಬೇಕೆಂಬ ಹಟದಿಂದ ಹೇಗೋ ಅಭ್ಯಾಸ ಮುಂದುವರಿಸುತ್ತಿದ್ದ. ಒಬ್ಬ ಮಹಾನುಭಾವರ ನೆರವಿನಿಂದ ಮಾಧ್ಯಮಿಕ ಶಿಕ್ಷಣ ಹಾಗೂ ಮನೆಯಲ್ಲಿ ಸಂಗೀತ ಅಭ್ಯಾಸ ದೊರೆಯತೊಡಗಿತು. ಇತ್ತ ಕುಸುಗಲ್ಲು ಪಾರ್ವತಿ ದೇವಿಯವರೊಡನೆ ಹದಿನೇಳನೆಯ ವಯಸ್ಸಿನಲ್ಲಿ ವಿವಾಹವೂ ಜರುಗಿ ಹೋಯಿತು! ೧೯೩೧ರಲ್ಲಿ ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಆದರೆ ೧೯೩೩ರಲ್ಲಿ ತಂದೆಯ ಮರಣದಿಂದ ಶಿಕ್ಷಣ ಮುಂದುವರಿಸಲು ತೊಂದರೆಯಾಯಿತು. ಇವರು ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದುದರಿಂದ ವಿದ್ಯಾರ್ಥಿ ವೇತನ ದೊರೆಯಿತು.

ಸಾಸನೂರ, ಪತ್ರಾವಳಿ, ಮಾಳವಾಡ, ಕುಂದಣಗಾರರಂಥ ಗುರುಗಳ ನೆರವಿನಿಂದ ಬಿ. ಎ. ಪಾಸು ಮಾಡಿದರು. ಕೊಲ್ಲಾಪುರದ ರಾಜಾರಾಮ ಕಾಲೇಜ್ ಸೇರಿ, ಕನ್ನಡದಲ್ಲಿ ಎಂ. ಎ. ಪ್ರಥಮ ಸ್ಥಾನವನ್ನು ಮುಂಬಯಿ ವಿಶ್ವವಿದ್ಯಾಲಯದಿಂದ ೧೯೩೭ ರಲ್ಲಿ ಪಡೆದರು. ಬೆಳಗಾವಿಯ ಲಿಂಗರಾಜ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ವೃತ್ತಿ ಜೀವನ ಆರಂಭಿಸಿದರು. ಅನಂತರ ಕೆಲಕಾಲ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಹಂಗಾಮಿ ಅಧ್ಯಾಪಕರಾಗಿ ಅನಂತರ ಖಾಯಂ ಅಧ್ಯಾಪಕರೆಂದು ಲಿಂಗರಾಜ ಕಾಲೇಜಿನಲ್ಲಿ ನಿಯುಕ್ತರಾದರು. ಈ ಮೊದಲು ರಾಜಶೇಖರ್ ಮತ್ತು ದಾಕ್ಷಾಯಣಿ ಎಂಬ ಇಬ್ಬರು ಮಕ್ಕಳನ್ನು ಕೊಟ್ಟು ಪತ್ನಿ, ಪಾರ್ವತಮ್ಮ ೧೯೪೨ರಲ್ಲಿ ನಿಧನರಾದರು. ೧೯೪೪ರಲ್ಲಿ ಗೌರಾದೇವಿಯನ್ನು ಮದುವೆಯಾದರು. ವಿಜಯ ಮತ್ತು ಸುಭಾಷ್ ಎಂಬ ಎರಡು ಮಕ್ಕಳನ್ನು ಪಡೆದರು. ಲಿಂಗರಾಜ ಕಾಲೇಜಿನಲ್ಲಿ ಸುಮಾರು ಇಪ್ಪತ್ತು ವರ್ಷಗಳ ಕಾಲ ಕನ್ನಡ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಅನಂತರ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ೧೯೬೬ರಿಂದ ದುಡಿಯತೊಡಗಿದರು. ೧೯೭೬ರಲ್ಲಿ ನಿವೃತ್ತರಾಗಿ, ಭವ್ಯಮಾನವ ಕೃತಿಗೆ ಕೇಂದ್ರ ಹಾಗೂ ಕರ್ನಾಟಕ ರಾಜ್ಯ ಅಕಾಡೆಮಿಗಳ ಪ್ರಶಸ್ತಿ ಪಡೆದು, ಪಂಪ ಪ್ರಶಸ್ತಿಯ ಗೌರವ (೧೯೯೦) ಗಳಿಸಿ, ವಿಶ್ರಾಂತ ಜೀವನ ನಡೆಸಿ, ೧೯೯೧ರಲ್ಲಿ ನಿಧನರಾದರು.

ಭೂಸನೂರಮಠ ಅವರು ಅಧ್ಯಯನ, ಅಧ್ಯಾಪನಗಳೊಡನೆ ಹಲವು ಕೃತಿಗಳನ್ನು ಕನ್ನಡಕ್ಕೆ ಕೊಟ್ಟಿದ್ದಾರೆ. ಅವುಗಳಲ್ಲಿ 'ಶೂನ್ಯ ಸಂಪಾದನೆಯ ಪರಾಮರ್ಶೆ' ಮತ್ತು 'ಭವ್ಯ ಮಾನವ' ಕೃತಿಗಳಲ್ಲಿ ಅವರು ಸೃಜನಶೀಲತೆಯನ್ನು ಪ್ರಕಟಿಸಿದ್ದಾರೆ. ಇನ್ನುಳಿದ ಸುಮಾರು ೧೨ ಕೃತಿಗಳಲ್ಲಿ ಅವರ ಅಧ್ಯಯನ, ವಿಮರ್ಶಾ ಶಕ್ತಿ, ಗ್ರಂಥ ಸಂಪಾದನಾ ಸಾಮರ್ಥ್ಯ ಹಾಗೂ ಪಾಂಡಿತ್ಯಗಳನ್ನು ಗುರುತಿಸಬಹುದಾಗಿದೆ.

ಭೂಸನೂರಮಠ ಅವರಿಗೆ ಜನಪ್ರಿಯತೆಯನ್ನು ಗಳಿಸಿಕೊಟ್ಟ ಹಾಗೂ ಪ್ರಶಸ್ತಿಯನ್ನೂ ದೊರಕಿಸಿಕೊಟ್ಟ 'ಭವ್ಯ ಮಾನವ' ಮಹಾಕಾವ್ಯದಲ್ಲಿ ಹನ್ನೆರಡನೆಯ ಶತಮಾನದ ಶಿವಶರಣರಾದ ಮಹಾಮಾನವರಲ್ಲಿ ಅಕ್ಕಮಹಾದೇವಿಯ ಜೀವನ ವೃತ್ತಾಂತವಿದೆ. ಅವಳ ಕಥೆಯೊಡನೆ ಗುರುಚೆನ್ನಮಲ್ಲ ಮತ್ತು ಗಿರಿಮಲ್ಲರ ಕಥಾನಕಗಳನ್ನು ಸೇರಿಸಿದ್ದಾರೆ. ಭವ್ಯ ಎಂದರೆ ಭವಿಷ್ಯ. ಭವಿಷ್ಯ ಸದಾ ಬೆಳಗಬೇಕೆಂಬುದೇ ಕವಿಯ ಆಶಯ.

ಅನುಭಾವವನ್ನೇ ವಸ್ತುವಾಗಿರಿಸಿಕೊಂಡ ಗೂಳೂರ ಸಿದ್ಧವೀರಣ್ಣೊಡೆಯನ ಶೂನ್ಯ ಸಂಪಾದನೆಗೆ ವೈಜ್ಞಾನಿಕ ವಿಶ್ಲೇಷಣೆಯನ್ನು ಕೊಟ್ಟು ಅದರ ಮೂಲ ನೆಲೆಯನ್ನು ಗುರುತಿಸಿ ತೋರುವ ಕಾರ್ಯವನ್ನು ಬಹು ಸಮರ್ಥವಾಗಿ ಶೂನ್ಯ ಸಂಪಾದನೆಯ ಪರಾಮರ್ಶೆಯಲ್ಲಿ ಭೂಸನೂರಮಠ ಅವರು ಮಾಡಿದ್ದಾರೆ. ಇದು 'ಸೃಜನಾತ್ಮಕ ವಿಮರ್ಶೆ' ಎಂದು ಸಾ. ಶಿ. ಮರುಳಯ್ಯನವರು ಕರೆದದ್ದು ಯಥಾಯೋಗ್ಯವಾಗಿದೆ.

ಗ್ರಂಥ ಸಂಪಾದನೆ ಕಾರ್ಯ ಸುಲಭಸಾಧ್ಯವಾದುದಲ್ಲ. ಗ್ರಂಥದ ಹಸ್ತ ಪ್ರತಿಗಳನ್ನು ಅಭ್ಯಾಸ ಮಾಡಿ, ತಾವು ಸ್ವೀಕರಿಸಿದ ಪಾಠಕ್ಕೆ ಆಧಾರಕೊಟ್ಟು, ವಿವರಣೆ ಕೊಟ್ಟು, ಸಮರ್ಥ ರೀತಿಯಲ್ಲಿ ಸಂಪಾದಿಸಿ ಗ್ರಂಥ ಪ್ರಕಟಿಸಬೇಕಾಗುತ್ತದೆ. ಅಂಥ ಮೌಲಿಕ ಪ್ರಸ್ತಾವನೆಗಳೊಡನೆ ಸಂಪಾದಿತ ಕೃತಿಗಳಲ್ಲಿ ಘನ ಮಠದ ಶಿವಯೋಗಿಗಳು ರಚಿಸಿದ ತತ್ವಪದಗಳ ಸಂಪಾದನೆ 'ಭಕ್ತಿಸುಧಾಸಾರ', ಧಾರ್ಮಿಕ ಹಾಗೂ ಐತಿಹಾಸಿಕ ಅಂಶಗಳಿಂದ ಕೂಡಿದ ಸಿದ್ಧನಂಜೇಶನ 'ಗುರುರಾಜ ಚಾರಿತ್ರ' ಗೌರಾಂಕನ 'ಮೋಳಿಗಯ್ಯನ ಪುರಾಣ' (ಉತ್ತಂಗಿಯವರೊಡಗೂಡಿ ಸಂಪಾದಿಸಿದ್ದು), ಕಲ್ಲುಮಠದ ಪ್ರಭುದೇವನು ರಚಿಸಿದ 'ಲಿಂಗ ಲೀಲಾ ವಿಲಾಸ ಚಾರಿತ್ರ', ಜಕ್ಕಣಾರ್ಯನ 'ಏಕೋತ್ತರ ಶತಸ್ಥಲ' ಅದೃಶ್ಯ ಕವಿಯ 'ಪ್ರೌಢರಾಯನ ಕಾವ್ಯ'ಗಳಿವೆ.

ವೈಜ್ಞಾನಿಕ ದೃಷ್ಟಿಯಿಂದ ಗ್ರಂಥ ಸಂಪಾದನೆ ಮಾಡಿದ ಭೂಸನೂರಮಠ ಅವರು, ಸಂಶೋಧನೆಗೂ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಭೂಸನೂರಮಠ ಅವರ ಪಾಂಡಿತ್ಯ, ಪ್ರತಿಭೆ ಮತ್ತು ಅಭ್ಯಾಸಗಳು ಸಮ ಪ್ರಮಾಣದಲ್ಲಿ ಕಾರ್ಯ ಸಾಧನೆ ಮಾಡಿದ್ದು ಅವರ ಗ್ರಂಥಗಳಲ್ಲಿ ಕಾಣಬಹುದಾಗಿದೆ. ಅವರು ದೊಡ್ಡ ಅನುಭಾವಿಗಳೂ ಆಗಿದ್ದರೆಂಬುದು ಅವರ ಜೀವನ ಸಾಧನೆಗಳಲ್ಲಿ ಗೋಚರವಾಗುತ್ತದೆ.

ಭೂಸನೂರಮಠ ಅವರ ಜೀವನ ಹಾಗೂ ಕೃತಿಗಳ ಕುರಿತಾದ ಕೆಲವು ಹೇಳಿಕೆಗಳನ್ನು ಗಮನಿಸಿದರೆ ಅವರ ಪರಿಚಯ ಪರಿಪೂರ್ಣವಾಗಬಹುದು.

- "ಅವರ ಬೋಧೆಯಲ್ಲಿ ನಯವಿದೆ, ನೀತಿಯಿದೆ, ವಿಜ್ಞಾನವಿದೆ, ವೈಚಾರಿಕತೆ ಇದೆ. ಅನುಭಾವವಿದೆ, ಅಧ್ಯಾತ್ಮವಿದೆ, ಆಧುನಿಕತೆ ಎದ್ದು ಕಾಣುವಷ್ಟು ದಟ್ಟವಾಗಿದೆ. ಅವರು ವಿಚಾರವಾದಿಗಳು. ಅಷ್ಟೇ ಮಟ್ಟದ ತ್ರಿಕಾಲ ಜ್ಞಾನಿಗಳು. ಭವ್ಯಮಾನವ ಪ್ರಜ್ಞೆ ಉಳ್ಳವರು" ಎಂದು ಡಾ. ಸಾ. ಶಿ. ಮರುಳಯ್ಯನವರು ಭೂಸನೂರಮಠ ಅವರ ಗುಣಗಾನ ಮಾಡಿದ್ದಾರೆ.

- "ಭವ್ಯ ಮಾನವ" ಮಹಾಕಾವ್ಯಗಳಲ್ಲಿ ನವೀನವೂ, ವಿಶಿಷ್ಟವೂ ಆದ ವಸ್ತುವುಳ್ಳ, ತಾತ್ವಿಕ ಹಾಗೂ ಚಿಂತನೀಯ ವಿಷಯಗಳನ್ನು ಗಂಭೀರವಾಗಿ ನಿರೂಪಿಸುವ ಸಮಸ್ತ ಮಾನವ ಜನಾಂಗವನ್ನೇ ತನ್ನ ತೆಕ್ಕೆಗೆ ಅಳವಡಿಸಿಕೊಳ್ಳುವ, ಮಾನವ ಮೌಲ್ಯಗಳನ್ನು ಆವಿಷ್ಕರಣಗೊಳಿಸುವ ಒಂದು ಅಪೂರ್ವ ಕೃತಿಯಾಗಿದೆ" ಎಂದು 'ಭವ್ಯಮಾನವ' ಕಾವ್ಯದರ್ಶನದ ಸಂಪಾದಕರು ಹೇಳಿದ್ದಾರೆ.

- "ಪ್ರೊ. ಸಂ. ಶಿ. ಭೂಸನೂರಮಠ ಅವರ ಅಗಾಧ ಪ್ರತಿಭೆ, ಪರಿಪಕ್ವ ಚಿಂತನೆ, ವೈಜ್ಞಾನಿಕ ಧೋರಣೆ, ವೈಚಾರಿಕ ತೀಕ್ಷ್ಣತೆ ಮತ್ತು ಸ್ವಾನುಭಾವ ಸಿದ್ಧಿಯ ಅನುಭಾವ ದೃಷ್ಟಿಯನ್ನೊಳಗೊಂಡು ಮೂಡಿ ಬಂದಿರುವ ಅನುಭಾವ ಕಾವ್ಯವಿದು" ಎಂದು ಡಾ. ಶಾಂತಾ ಇಮ್ರಾಪೂರ ಅಭಿಪ್ರಾಯಪಡುತ್ತಾರೆ.

● "ಅಕ್ಕಮಹಾದೇವಿಯವರ ಜೀವನ ಕಾವ್ಯದಲ್ಲಿ ಕವಿವರ್ಯ ಸಂ. ಶಿ. ಭೂಸನೂರಮಠ ಅವರು ತಮ್ಮ ಕಲ್ಪನೆಯ ಸಾಮರ್ಥ್ಯದಿಂದ ಒಂದು ವಿನೂತನ ಸೃಷ್ಟಿಯನ್ನು ನಿರ್ಮಿಸಿದ್ದಾರೆ. ಭವ್ಯ ಮಾನವ ಮಹಾಕಾವ್ಯ ಕವಿಯ ಉಜ್ವಲ ಪ್ರತಿಭೆಗೆ ನಿದರ್ಶನವಾಗಿದೆ" ಎಂದು ಕೆ. ಕುಶಾಲಪ್ಪಗೌಡ ಹೇಳಿದ್ದಾರೆ.

● "ಈ ಶತಮಾನ (ಇಪ್ಪತ್ತನೆಯ)ದಲ್ಲೊಂದು ವಿಶ್ವ ಮಾನವ ಮಹಾಕಾವ್ಯ ನೀಡಿ ಶತಮಾನಕ್ಕೆ ಭರತವಾಕ್ಯವ ಹಾಡಿದ ಈ ಕವಿಗೆ ನಮೋ ನಮೋ" ಎಂದು ಭೂಸನೂರಮಠ ಅವರನ್ನು ಬಿ. ಸಿ. ಜವಳಿ ಅವರು ಕೊಂಡಾಡಿದ್ದಾರೆ.

● "ಭವ್ಯ ಮಾನವದಲ್ಲಿ ಕಂಡು ಬರುವ ಈ ವಿಶ್ವ ಪ್ರತಿಮೆಗಳೆಲ್ಲ ಈ ಮಹಾಕಾವ್ಯದಲ್ಲಿ ಚಿತ್ರಿಸಲಾದ ವಿಶ್ವ ಮಾನವ ಪ್ರಜ್ಞೆಗೆ ಪೂರಕವಾಗಿದ್ದು, ಕಾವ್ಯ ಸೌಂದರ್ಯವರ್ಧಕವಾಗಿವೆ" ಎಂದು ಡಾ. ಬಸವರಾಜ ನಾಯ್ಕರ್ ನುಡಿದಿದ್ದಾರೆ.

● "ಪ್ರೊ. ಭೂಸನೂರಮಠ ಅವರು ಕನ್ನಡ ಸಾಹಿತ್ಯಲೋಕ ಕಂಡ ಶ್ರೇಷ್ಠ ವಿದ್ವಾಂಸರಲ್ಲಿ ಒಬ್ಬರು. ಅವರು ಪ್ರಾಧ್ಯಾಪಕರಾಗಿ ತಮ್ಮ ವಿಸ್ತಾರವಾದ ಓದು, ಚಿಂತನೆಗಳ ಫಲವನ್ನು ಸಹಸ್ರಾರು ವಿದ್ಯಾರ್ಥಿಗಳಿಗೆ ಧಾರೆ ಎರೆದಿದ್ದಾರೆ. ಉತ್ತರ ಕರ್ನಾಟಕದಲ್ಲಂತೂ ಅವರ ವ್ಯಕ್ತಿತ್ವ ಮತ್ತು ವೈದುಷ್ಯಗಳಿಗೆ ಅಪಾರವಾದ ಮನ್ನಣೆ ಇದೆ. ಹಳೆಗನ್ನಡ ಗ್ರಂಥಗಳ ಸಂಪಾದನೆ, ಅವುಗಳ ವ್ಯಾಖ್ಯಾನಗಳ ಜೊತೆಗೆ ಅನುವಾದ ಕ್ಷೇತ್ರದಲ್ಲೂ ವಿಶಿಷ್ಟ ಸಾಧನೆಯನ್ನು ಅವರು ಮಾಡಿದ್ದಾರೆ. ಅವರ ಸೃಜನಶೀಲ ಪ್ರತಿಭೆಯ ಉತ್ತುಂಗ ಕೃತಿ 'ಭವ್ಯ ಮಾನವ' ಎಂಬ ಅವರ ಮಹಾಕಾವ್ಯ" ಎಂದು ಡಾ. ಎಚ್. ಜೆ. ಲಕ್ಕಪ್ಪಗೌಡ ನುಡಿದಿದ್ದಾರೆ.

● ಭೂಸನೂರಮಠರ ಮಹಾಂತ ಜೀವನ ತೆರೆದಿಡುವ ಶ್ರೀ ಗುರು ಭೂಸನೂರಮಠ 'ಸಂಗಮ ದೇವರು' ಎಂಬ ಡಾ. ಚಂದ್ರಶೇಖರ ಕಂಬಾರ ಅವರ ಕವನದ ಮೊದಲ ಸಾಲುಗಳು ಇವು :

ಯಾರೋ ಯಾರೋ ಮೈ ಬಂಗಾರದ ಜಂಗಮರಿವರ್‍ಯಾರೋ !
ಸೈನನ ಸದ್ಗುರು ಸಂಗಮ ದೇವರು ಬಾ ಶಿವನೇ ಬಾರೋ ॥

● ಕನ್ನಡದೊಡನೆ ಸಂಸ್ಕೃತ, ಮರಾಠಿ ಮತ್ತು ಇಂಗ್ಲಿಷ್ ಭಾಷೆ ಸಾಹಿತ್ಯವನ್ನು ಅವರು ಆಳವಾಗಿ ಅಭ್ಯಾಸ ಮಾಡಿದ್ದರು. ಜೊತೆಗೆ ಗಣಿತ ಮತ್ತಿತರ ವಿಜ್ಞಾನದ ವಿಷಯಗಳನ್ನು ಕುರಿತೂ ಅವರು ತಕ್ಕಷ್ಟು ವ್ಯಾಸಂಗ ಮಾಡಿದ್ದರು. ಅಲ್ಲದೆ ವೈಜ್ಞಾನಿಕ-ವೈಚಾರಿಕ ವಿಚಾರಧಾರೆಯ ಬಗ್ಗೆ ಅವರು ಪ್ರೀತಿ, ಗೌರವ ಇಟ್ಟುಕೊಂಡಿದ್ದರು. ತತ್ವಜ್ಞಾನ ಮತ್ತು ವಿಜ್ಞಾನ ಎರಡೂ ಒಂದು ಆರೋಗ್ಯಪೂರ್ಣವಾದ ಹದದಲ್ಲಿ ಅವರ ವ್ಯಕ್ತಿತ್ವದಲ್ಲಿ ಸೇರಿಕೊಂಡಿದ್ದವು" ಎಂದು ಡಾ. ನೀಲಗಿರಿ ತಳವಾರ ಅವರು ಭೂಸನೂರಮಠರ ಪಾಂಡಿತ್ಯದ ಕುರಿತು ಹೇಳಿದ್ದಾರೆ.

● "ಇಂಗ್ಲಿಷ್‌ನ ಉತ್ಸಾಹಿ- ಮೇಧಾವಿ ವಿದ್ವಾಂಸರಾಗಿದ್ದ ಪ್ರೊ. ಮೆನೆಝಿಸ್ ಅವರ ಜೊತೆಗೂಡಿ ಭೂಸನೂರಮಠರು ಶೂನ್ಯ ಸಂಪಾದನೆಯ ಇಂಗ್ಲಿಷ್ ಭಾಷಾಂತರದ ಎರಡು, ಮೂರು ಮತ್ತು ಒಂಬತ್ತನೆಯ ಸಂಪುಟಗಳನ್ನು ಪ್ರಕಟಿಸಿದರು. ಈ ಯೋಜನೆಯು 'ಸಂಪೂರ್ಣ ಸ್ಥಗಿತಗೊಂಡಂತಿದ್ದ ಕಾಲದಲ್ಲಿ ಭೂಸನೂರಮಠರು ಅದಕ್ಕೆ ಕಾಯಕಲ್ಪವಾಗಿ ಬಂದರು" ಎಂದು ಶೂನ್ಯ ಸಂಪಾದನೆಯ ಇಂಗ್ಲಿಷ್ ಅನುವಾದ ಕಾರ್ಯದಲ್ಲಿ ವಹಿಸಿದ ಶ್ರಮದ ಬಗ್ಗೆ ಡಾ. ತಳವಾರ ತಿಳಿಸಿದ್ದಾರೆ.

## ಸಂ. ಶಿ. ಭೂಸನೂರಮಠ ಅವರ ಜೀವನ ವಿವರ :

**ಜನನ :** ೧೯೧೦ (೭-೧೧-೧೯೧೦) ನಿಡಗುಂದಿಯಲ್ಲಿ (ರೋಣ ತಾಲೂಕು).

**ತಂದೆ-ತಾಯಿ :** ಶಿವಮೂರ್ತಯ್ಯ-ರಾಚಮ್ಮ.

**ಶಾಲಾ ಶಿಕ್ಷಣ :** ನಿಡಗುಂದಿ, ಗದಗ, ಹುಬ್ಬಳ್ಳಿಗಳಲ್ಲಿ

**ವಿವಾಹ :** ೧೯೨೭ ಕುಸುಗಲ್ಲಿನ ಪಾರ್ವತಮ್ಮ ಅವರೊಡನೆ.

**ಮೆಟ್ರಿಕ್ :** ೧೯೩೧ (ನ್ಯೂ ಇಂಗ್ಲಿಷ್ ಸ್ಕೂಲ್ ಹುಬ್ಬಳ್ಳಿಯಿಂದ).

**ಕಾಲೇಜು ಶಿಕ್ಷಣ :** ೧೯೩೫ ಬಿ. ಎ. (ಕನ್ನಡ) ಧಾರವಾಡ ಕರ್ನಾಟಕ ಕಾಲೇಜದಲ್ಲಿ.

**ಎಂ. ಎ. :** ೧೯೩೭ ಕೊಲ್ಲಾಪುರದ ರಾಜಾರಾಮ ಕಾಲೇಜಿನಿಂದ ಪ್ರಾಧ್ಯಾಪಕ ಕುಂದಣಗಾರರ ಮಾರ್ಗದರ್ಶನದಲ್ಲಿ.

**ಮಕ್ಕಳು :** ಮೂರು.

**ವೃತ್ತಿ :** ೧. ಅರೆಕಾಲಿಕ ಕನ್ನಡ ಅಧ್ಯಾಪಕ ೧೯೩೯-೪೨. ೨. ಕನ್ನಡ ಪ್ರಾಧ್ಯಾಪಕ ಲಿಂಗರಾಜ ಕಾಲೇಜ್ ಬೆಳಗಾವಿ ೧೯೪೩-೬೬. ೩. ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ಪ್ರಾಧ್ಯಾಪಕ ೧೯೬೭-೧೯೭೧.

**ನಿವೃತ್ತಿ :** ೧೯೭೬. ಯುಜಿಸಿ ಪ್ರಾಧ್ಯಾಪಕ : ೧೯೭೧-೭೯.

**ಪ್ರಶಸ್ತಿ :** ಶೂನ್ಯ ಸಂಪಾದನೆಯ ಪರಾಮರ್ಶೆ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ೧೯೭೨ರಲ್ಲಿ.

**ವಿಶೇಷ ಪ್ರಶಸ್ತಿ :** 'ಭವ್ಯ ಮಾನವ' ಮಹಾಕಾವ್ಯಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ೧೯೮೪ರಲ್ಲಿ.

**ಅಭಿನಂದನ ಗ್ರಂಥ :** 'ಗೌರವ'ದ ಸಮರ್ಪಣೆ ಗದುಗಿನ ಜಗದ್ಗುರು ತೋಂಟದಾರ್ಯ ಸ್ವಾಮೀಜಿಯವರಿಂದ ೧೯೮೬.

**ಸನ್ಮಾನ :** ಕರ್ನಾಟಕದ ಹಲವು ಮಠಾಧೀಶರಿಂದ.,

**ಪಂಪ ಪ್ರಶಸ್ತಿ ಗೌರವ :** ೧೯೯೦ ರಲ್ಲಿ.

ನಿಧನ : ೧೯೯೧ರಲ್ಲಿ.

## ಸಂ. ಶಿ. ಭೂಸನೂರಮಠ ಅವರ ಕೃತಿಗಳು

**ಸಂಪಾದನೆ :** ಭಕ್ತಿ ಸುಧಾಸಾರ- ೧೯೪೫, ಗುರುರಾಜ ಚಾರಿತ್ರ ೧೯೫೦, ಮೋಳಿಗೆಯ ಮಾರಯ್ಯ ಮತ್ತು ರಾಣಿ ಮಹಾದೇವಿಯರ ವಚನಗಳು (ಉತ್ತಂಗಿ ಚನ್ನಪ್ಪ ಅವರೊಡನೆ) ೧೯೫೦, ಮೋಳಿಗಯ್ಯನ ಪುರಾಣ, ಲಿಂಗ ಲೀಲಾ ವಿಲಾಸ ಚಾರಿತ್ರ್ಯ- ೧೯೫೬ ಪ್ರೌಢರಾಯನ ಕಾವ್ಯ ೧೯೫೭, ಪ್ರಭುದೇವರ ಶೂನ್ಯ ಸಂಪಾದನೆ- ೧೯೫೮, ವಚನ ಸಾಹಿತ್ಯ ಸಂಗ್ರಹ ೧೯೬೫, ಏಕೋತ್ತರ ಶತಸ್ಥಲ ೧೯೭೪, ಶೂನ್ಯ ಸಂಪಾದನೆಯ ಪರಾಮರ್ಶೆಯ ಸಂಗ್ರಹ ೧೯೭೮. ಶೂನ್ಯ ಸಂಪಾದನೆ ಸಂಪುಟ -೨- ೧೯೫೮ (ಇಂಗ್ಲಿಷ್‌ನಲ್ಲಿ ಮೆನೆಜಸ್ ಜೊತೆ ಸೇರಿ) ಶೂನ್ಯ ಸಂಪಾದನೆ ಸಂಪುಟ -೩- ೧೯೬೮ (ಇಂಗ್ಲಿಷ್‌ನಲ್ಲಿ ಮೆನೆಜಸ್ ಜೊತೆ ಸೇರಿ) ಶೂನ್ಯ ಸಂಪಾದನೆ ಸಂಪುಟ -೪- ೧೯೬೯ (ಇಂಗ್ಲಿಷ್‌ನಲ್ಲಿ ಮೆನೆಜಸ್ ಜೊತೆ ಸೇರಿ) ಶೂನ್ಯ ಸಂಪಾದನೆ ಸಂಪುಟ -೧೦- ೧೯೭೦ (ಇಂಗ್ಲಿಷ್‌ನಲ್ಲಿ ಮೆನೆಜಸ್ ಜೊತೆ ಸೇರಿ)

**ಮಹಾಕಾವ್ಯ :** ಭವ್ಯ ಮಾನವ -೧೯೮೪, ವಿಮರ್ಶೆ / ಸಂಶೋಧನೆ : ಶೂನ್ಯ ಸಂಪಾದನೆಯ ಪರಾಮರ್ಶೆ ೧೯೬೯.

**ಇತರ :** ಕಲ್ಯಾಣದಿಂದ ಕಾಶ್ಮೀರಕ್ಕೆ ೧೯೭೧.

✵ ✵ ✵

# ಜಯಲಕ್ಷ್ಮಿ ಶ್ರೀನಿವಾಸ್

ಇಪ್ಪತ್ತನೆಯ ಶತಮಾನದ ಆರಂಭ ಕಾಲದಲ್ಲಿ ಸಾಹಿತ್ಯ ಕೃಷಿ ಪ್ರಾರಂಭಿಸಿ, ಅವ್ಯಾಹತವಾಗಿ ಆರು ದಶಕಗಳ ಕಾಲ (೧೯೨೪-೧೯೮೦) ಕನ್ನಡ ಮತ್ತು ತಮಿಳುಗಳಲ್ಲಿ ಹಲವು ಪ್ರಕಾರಗಳಲ್ಲಿ ಕೃತಿ ರಚನೆ ಮಾಡಿದ ಹಾಗೂ ಹಲವಾರು ಪತ್ರಿಕೆಗಳಿಗೆ ಮೌಲಿಕ ಲೇಖನ ಒದಗಿಸಿದ ಏಕಮೇವ ಮಹಿಳೆ ಜಯಲಕ್ಷ್ಮಿ ಶ್ರೀನಿವಾಸ್ ಅವರು ಎಂದು ಹೇಳಿದರೆ ತಪ್ಪಾಗಲಾರದು.

ಪರಂಪರಾಪ್ರಿಯ ಶ್ರೀಮಂತ ಮನೆತನದಲ್ಲಿ ಹುಟ್ಟಿ ಕೇವಲ ಮಾಧ್ಯಮಿಕ ಶಿಕ್ಷಣದ ವರೆಗೆ ಕನ್ನಡ ಕಲಿತಿದ್ದರೂ ಜಯಲಕ್ಷ್ಮಿ ಆ ಮೊದಲು ತಾಯಿಯಿಂದ ತಮಿಳು ಭಾಷೆ ಅಭ್ಯಾಸ ಮಾಡಿದ್ದಳು. ಮನೆ ಮಾತು ತಮಿಳು. ಅವಳು ತನ್ನ ಸ್ವಂತ ಸತತ ಓದು-ಬರಹದ ಪರಿಣಾಮವಾಗಿ ಎರಡೂ ಭಾಷೆಗಳಲ್ಲಿ ನೈಪುಣ್ಯ ಪಡೆದು, ಲೇಖನ ಕಾರ್ಯ ಪ್ರಾರಂಭಿಸಿದಳು. ಹಲವಾರು ಬಗೆಯ ಕೃತಿಗಳನ್ನು ರಚಿಸಿ ಹಿರಿಯ ಸಾಹಿತಿಗಳಿಂದ, ಪತ್ರಿಕಾ ಸಂಪಾದಕರಿಂದ ಗೌರವ ಪಡೆದಳು. ಪತಿ ಮತ್ತು ಅತ್ತೆಯವರ ಸಹಕಾರವಿದ್ದುದರಿಂದ ಆಗಿನ ಕಾಲದಲ್ಲಿ ಉತ್ತಮ ಸಾಹಿತಿಯಾಗಿ ಬೆಳೆಯಲು ಸಾಧ್ಯವಾಯಿತು. ಕನ್ನಡ ತಮಿಳುಗಳನ್ನು ಚೆನ್ನಾಗಿ ಅರಿತ ಜಯಲಕ್ಷ್ಮಿ ಅವರು ಕನ್ನಡದಿಂದ ತಮಿಳಿಗೆ, ತಮಿಳಿನಿಂದ ಕನ್ನಡಕ್ಕೆ ಉತ್ತಮ ಲೇಖಕರ ಕೃತಿಗಳನ್ನು ಲೀಲಾಜಾಲವಾಗಿ ತರ್ಜುಮೆ ಮಾಡಿದರು. ತಾವು ಮಾಡಿದ ಸುದೀರ್ಘ ಮೌಲಿಕ ಸಾಹಿತ್ಯ ಸೇವೆಗಾಗಿ ಹಲವು ಸನ್ಮಾನ ಪ್ರಶಸ್ತಿಗಳನ್ನು ಪಡೆದರು. ಹೆಮ್ಮೆಯ ಹಿರಿಯ ಬರಹಗಾರ್ತಿ ಎಂಬ ಮನ್ನಣೆಯನ್ನೂ ಜನರಿಂದ ಗಳಿಸಿದರು.

೧೯೧೧ರಲ್ಲಿ (೧೨-೧೨-೧೯೧೧) ಜಯಲಕ್ಷ್ಮಿ ಶ್ರೀನಿವಾಸ್ ಅವರು ಜನಿಸಿದರು. ತಾಯಿ ಸೀತಾಲಕ್ಷ್ಮಿ, ತಂದೆ ಎ. ವಿ. ರಾಮನಾಥನ್. ಮನೆಮಾತು ತಮಿಳು. ತಂದೆ ಮೈಸೂರು ಸಂಸ್ಥಾನದ ಮೆಂಬರ್ ಆಫ್ ಕೌನ್ಸಿಲ್ ಆಗಿ ನಿವೃತ್ತರಾದರು. ತಾಯಿ ತಮಿಳುನಾಡಿನಿಂದ ಬಂದವಳು. ಜಯಲಕ್ಷ್ಮಿ ತಾಯಿಯಿಂದ ತಮಿಳು ಓದಲು-ಬರೆಯಲು ಕಲಿತು, ಮನೆಗೆ ಬರುತ್ತಿದ್ದ ತಮಿಳು ಪತ್ರಿಕೆಗಳನ್ನು, ಕಥೆ-ಕಾದಂಬರಿಗಳನ್ನು ಓದತೊಡಗಿದರು.

ಅನಂತರ ಕನ್ನಡ ಶಾಲಾ ಶಿಕ್ಷಣ ಶುರುವಾಯಿತು. ವಿಶೇಷವೆಂದರೆ ಜಯಲಕ್ಷ್ಮಿ ಚಿಕ್ಕ ವಯಸ್ಸಿನಲ್ಲಿಯೇ ಚಿಕ್ಕ-ಪುಟ್ಟ ಪದ್ಯಗಳನ್ನು, ಕಥೆಗಳನ್ನು ಬರೆಯಲು ಪ್ರಾರಂಭಿಸಿದಳು. ಹೈಸ್ಕೂಲಿನಲ್ಲಿ ಒಂಬತ್ತನೆಯ ತರಗತಿಯಲ್ಲಿ ಕಲಿಯುತ್ತಿದ್ದಾಗ ಅವಳ ವಿವಾಹವಾಯಿತು. ಆಗ ತುಮಕೂರು ಜಿಲ್ಲೆಯ ಡೆಪ್ಯೂಟಿ ಕಮೀಶನರ್ ಆಗಿದ್ದ ಎಸ್. ಕುಪ್ಪೇಸ್ವಾಮಿ ಅಯ್ಯರ್ ಅವರ ಮಗನಾದ ಕೆ. ಶ್ರೀನಿವಾಸ್ ಅವರನ್ನು ಮದುವೆ ಆದರು. ಐ.ಎ.ಎಸ್. ಪರೀಕ್ಷೆ ಪಾಸಾಗಿ ಅವರು ಮುಂದೆ ಮೈಸೂರು ಸಂಸ್ಥಾನದ ಪ್ರಧಾನ ಕಾರ್ಯದರ್ಶಿ ಪದವಿ ಪಡೆದರು.

ವಿಶೇಷವೆಂದರೆ ಜಯಲಕ್ಷ್ಮಿ, ಮದುವೆಯಾದ ನಂತರವೂ ಸಾಹಿತ್ಯ ರಚನೆಗೆ, ಗ್ರಂಥ ಪ್ರಕಟಣೆಗೆ ಪ್ರೋತ್ಸಾಹ ದೊರೆಯಿತು. ೧೯೨೯ರಲ್ಲಿ 'ಅರ್ಥ ಸಾಧಕ' ಎಂಬ ಬೆಂಗಳೂರು ಪತ್ರಿಕೆಯಲ್ಲಿ 'ಗ್ರಾಮೋದ್ಧಾರಕ ರಾಮಚಂದ್ರ' ಕಾದಂಬರಿ ಪ್ರಕಟವಾಗತೊಡಗಿತು. ಅನಂತರ ಪುಸ್ತಕ ರೂಪದಲ್ಲಿ ಮುದ್ರಿಸಲ್ಪಟ್ಟಿತು. ಈ ವಸ್ತುಗಳನ್ನೊಳಗೊಂಡ 'ರಾಮಚಂದ್ರನ್', 'ರುಕ್ಮಿಣಿ' ಎಂಬ ಕೃತಿಗಳನ್ನು ತಮಿಳಿನಲ್ಲಿ ಪ್ರಕಟಿಸಿದರು. 'ಸುಶೀಲೆ' ಮತ್ತು 'ಶಿಶು ಸಂರಕ್ಷಣೆ' ಎಂಬ ಆರೋಗ್ಯದ ಕುರಿತಾದ ಪುಸ್ತಕಗಳು ಪ್ರಕಟವಾದವು. 'ಮೊಗ್ಗು' ಎಂಬ ಕಥಾ ಸಂಕಲನಕ್ಕೆ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರು ಮುನ್ನುಡಿ ಬರೆದು ಪ್ರೋತ್ಸಾಹಿಸಿದರು. ಇಂಗ್ಲೀಷ್‌ನಿಂದ 'ಸರೋಜ ನಳಿನಿ' ಎಂಬುದೊಂದು ಜೀವನ ಚರಿತ್ರೆಯ ಅನುವಾದ ಮಾಡಿದರಲ್ಲದೆ 'ಭಾರತರಮಣಿ' ವಾರಪತ್ರಿಕೆಗಾಗಿ ನಾಟಕ, ಸಣ್ಣಕತೆ ಹಾಗೂ ಲಘು-ಬರಹಗಳನ್ನು ಬರೆದು ತಮಿಳು ಸಾಹಿತ್ಯ ಲೋಕದಲ್ಲಿ ಸ್ಥಾನ ಗಳಿಸಿಕೊಂಡರು.

೧೯೩೦ರಲ್ಲಿ ಪಂಜೆ ಮಂಗೇಶರಾಯರ 'ಕಂಠೀರವ' ಪತ್ರಿಕೆಯಲ್ಲಿ ಜಯಲಕ್ಷ್ಮಿ ಅವರ ಲೇಖನಗಳು, ಸಣ್ಣಕತೆಗಳು ಮತ್ತು ಎರಡು ಕಾದಂಬರಿಗಳು ಪ್ರಕಟವಾದವು. ಪುಸ್ತಕ ರೂಪದಲ್ಲಿ ಇವರ ಒಂದು ಕಾದಂಬರಿ, ಕುಮುದಿನೀ-ಕೃಪಾ ಶಂಕರ್' ಎಂಬುದನ್ನು ಪಂಜೆಯವರೇ ಪ್ರಕಟಿಸಿದರು.

ಆಗಿನ ಕಾಲದಲ್ಲಿ ಪ್ರಕಟವಾಗುತ್ತಿದ್ದ ಮುಂಬಯಿಯ 'ನವಜೀವನ' ಧಾರವಾಡದ 'ಜಯಂತಿ, ವಿಶ್ವ ಕರ್ನಾಟಕ, ಜಯ ಕರ್ನಾಟಕ' ಮತ್ತು ಬೆಳಗಾವಿಯ ಸಂಯುಕ್ತ ಕರ್ನಾಟಕ ಪತ್ರಿಕೆಗಳಲ್ಲಿ ಇವರ ಕಥೆ, ಕಾದಂಬರಿ, ಬಿಡಿ ಲೇಖನಗಳು ಪ್ರಕಟವಾಗಿವೆ. ಹಾಗೆಯೇ, ಪ್ರಜಾಮತ, ಜನವಾಣಿ, ಸುಬೋಧ, ಜೀವನ, ಸರಸ್ವತಿ, ಕೊರವಂಜಿ, ನಗುವ-ನಂದ ಪತ್ರಿಕೆಗಳಲ್ಲಿಯೂ ಜಯಲಕ್ಷ್ಮಿ ಅವರ ಸಾಹಿತ್ಯ ರಚನೆಗಳು ಪ್ರಕಟವಾಗಿವೆ.

ಸಿ. ಕೆ. ವೆಂಕಟರಾಮಯ್ಯ, ಅನಕೃ, ಮಾಸ್ತಿ, ದೇವುಡು, ರಾಜರತ್ನಂ ಮೊದಲಾದವರ ಕೃತಿಗಳನ್ನು ಜಯಲಕ್ಷ್ಮಿ ಅವರು ತಮಿಳಿಗೆ ಅನುವಾದ ಮಾಡಿ ಸುಪ್ರಸಿದ್ಧ ತಮಿಳು ಪತ್ರಿಕೆಗಳಲ್ಲಿ ಪ್ರಕಟಿಸಿದರು. ತಮ್ಮ ಸ್ವಂತ ಕೃತಿ ರಚನೆಯೊಡನೆ ಕನ್ನಡದಿಂದ ತಮಿಳಿಗೆ, ತಮಿಳಿನಿಂದ ಕನ್ನಡಕ್ಕೆ ಇವರು ಮಾಡಿದ ಭಾಷಾಂತರ ಕಾರ್ಯ ಶ್ಲಾಘನೀಯವಾಗಿದೆ.

ಕಲ್ಕಿ ಕೃಷ್ಣಮೂರ್ತಿ, ಸರಸ್ವತಿ, ಮಕ್ಕಳ ಮಂಟಪ ಪತ್ರಿಕೆಗಳಲ್ಲಿ ಇವರ ಮಕ್ಕಳ ಸಾಹಿತ್ಯ ಪ್ರಕಟವಾಗಿದೆ. ಪ್ರವಾಸ ಸಾಹಿತ್ಯವನ್ನೂ ರಚಿಸಿದ್ದಾರೆ. 'ರಂಗಭೂಮಿ' ಪತ್ರಿಕೆಯಲ್ಲಿ ಜಯಲಕ್ಷ್ಮಿ ಅವರು ರಚಿಸಿದ ನಾಟಕಗಳು ಪ್ರಕಟವಾಗಿವೆ. ಕೆಲವು ನಾಟಕಗಳು ರಂಗ ಪ್ರದರ್ಶನ ಕಂಡಿವೆ. ಕೆಲವು ಆಕಾಶವಾಣಿಯ ಮುಖಾಂತರ ಬಿತ್ತರಗೊಂಡಿವೆ.

ಜಯಲಕ್ಷ್ಮಿ ಅವರು ತಮ್ಮ ಸ್ವಂತ ಕೃತಿಗಳ ಜೊತೆಗೆ ಅನುವಾದ ಕಾರ್ಯವನ್ನು ಹೆಚ್ಚಾಗಿ ಮಾಡಿದ್ದು ಕಂಡು ಬರುತ್ತದೆ. ಅ.ನ.ಕೃ ಅವರ 'ಕಣ್ಣೀರು', 'ಸಂಧ್ಯಾರಾಗ', 'ಮಂಗಳ ಸೂತ್ರ' ಕಾದಂಬರಿಗಳನ್ನು ಮತ್ತು ಕಥೆಗಳನ್ನು ತಮಿಳಿಗೆ ಅನುವಾದಿಸಿ ಸುಪ್ರಸಿದ್ಧ ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ಹಾಗೆಯೇ ಶ್ರೀಮತಿ ವಾಣಿ, ಆರ್. ಕಲ್ಯಾಣಮ್ಮ, ಕೊಡಗಿನ ಗೌರಮ್ಮ ಮೊದಲಾದವರ ಕಾದಂಬರಿ. ಕಥೆಗಳನ್ನು ಅನುವಾದಿಸಿದ್ದಾರೆ. ಸಿ. ರಾಜಗೋಪಾಲಾಚಾರಿ ಅವರ ಹಲವಾರು ಕಥೆಗಳನ್ನು ಹಾಗೂ ಕೆ. ವಿ. ಜಗನ್ನಾಥರ 'ಕಲಾವಿದನ ತ್ಯಾಗ'ವನ್ನು ಕನ್ನಡಕ್ಕೆ ಭಾಷಾಂತರಿಸಿ ಕನ್ನಡ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಿಸಿದರು. ಗೃಹ ಕಾರ್ಯಕ್ಕೆ ಸಂಬಂಧಿಸಿದ ಹಾಗೂ ಆರೋಗ್ಯಕ್ಕೆ ಸಂಬಂಧಿಸಿದ ವಿಷಯಗಳ ಮೇಲೆ ಲೇಖನ ಹಾಗೂ ಗ್ರಂಥಗಳನ್ನು ಬರೆದಿದ್ದಾರೆ.

ಮಕ್ಕಳಿಗಾಗಿ ಕನ್ನಡದಲ್ಲಿ ಮಿಠಾಯಿ, ಪಂಚಾಮೃತ, ಮೂರು ಮುತ್ತುಗಳು, ಚಾಕಲೇಟ್, ಮೋಹನ್, ಆಟಗಳು, ಐಸ್‌ಕ್ರೀಂ' ಮೊದಲಾದ ಚಿಕ್ಕ ಪುಸ್ತಕಗಳನ್ನು ಪ್ರಕಟಿಸಿದರು. ಜಯಲಕ್ಷ್ಮಿ ಅವರು ಚಿಕ್ಕ ಚಿಕ್ಕ ನಾಟಕಗಳನ್ನೂ, ಆಧ್ಯಾತ್ಮಿಕ ಲೇಖನಗಳನ್ನು ಹಾಗೂ ಕೆಲವು ಲೇಖನಗಳನ್ನು ಹಿಂದಿ ಮತ್ತು ಇಂಗ್ಲೀಷ್‌ಗಳಲ್ಲಿಯೂ ಬರೆದಿದ್ದಾರೆ. 'ಗ್ರಾಹಕ ಸಮಿತಿಯ' ಸದಸ್ಯರಾಗಿಯೂ ಇವರು ಸಮಾಜ ಸೇವೆಯನ್ನು ಮಾಡಿದ್ದಾರೆ. ಯುರೋಪ್, ಅಮೇರಿಕಾ ಪ್ರವಾಸ ಮಾಡಿ ಅಲ್ಲಿ ಕನ್ನಡದಲ್ಲಿ ಹಲವಾರು ಭಾಷಣಗಳನ್ನು ಮಾಡಿದ್ದಾರೆ. ಹೀಗೆ ಸುಮಾರು ಅರವತ್ತು ವರುಷಗಳ ಕಾಲ ಕನ್ನಡ, ತಮಿಳು ಭಾಷೆಗಳಲ್ಲಿ ವಿವಿಧ ಸಾಹಿತ್ಯ ರಚನೆ ಮಾಡಿ ಹಿರಿಯ ಸಾಹಿತಿಗಳ ಮೆಚ್ಚುಗೆ ಗಳಿಸಿದ ಜಯಲಕ್ಷ್ಮಿ ತಮ್ಮ ಉಭಯ ಭಾಷಾ ಪ್ರಾವೀಣ್ಯದಿಂದ ಒಂದರಿಂದ ಮತ್ತೊಂದಕ್ಕೆ ಉತ್ತಮ ತರ್ಜುಮೆ ಮಾಡಿ ಆದಾನ ಪ್ರದಾನ ಕಾರ್ಯದಲ್ಲಿ ಮಹತ್ವದ ಪಾತ್ರವೆಸಗಿ, ಕನ್ನಡ ತಮಿಳು ಸಾಹಿತ್ಯಕ್ಕೆ ಗಮನಾರ್ಹ ಸೇತುವೆಯಾಗಿದ್ದರೆಂದರೆ ಅತಿಶಯೋಕ್ತಿಯೇನಲ್ಲ.

ಹಲವು ಪ್ರಶಸ್ತಿಗಳು, ಸನ್ಮಾನಗಳು ಜಯಲಕ್ಷ್ಮಿಯವರಿಗೆ ಲಭಿಸಿವೆ. ಗ್ರಾಹಕ ಸಮಿತಿ ಸನ್ಮಾನ, ಮದ್ರಾಸಿನಲ್ಲಿ ಉತ್ತಮ ಮಕ್ಕಳ ಸಾಹಿತಿ ಸನ್ಮಾನ, ಹೈದರಾಬಾದಿನಲ್ಲಿ ಅ. ಭಾ. ಮಹಿಳಾ ಸಮ್ಮೇಳನದ ಸನ್ಮಾನ, ತಿರುಕೋಯಿಲೂರ ತಪೋವನದ ಜ್ಞಾನಾನಂದ ಸ್ವಾಮಿಗಳಿಂದ ಸನ್ಮಾನ ಹಾಗೂ ವಿದ್ಯಾರತ್ನ ಎಂಬ ಬಿರುದು, ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು, ಎನ್. ಎಂ. ಕೆ. ಆರ್. ವಿ. ಸಂಸ್ಥೆಯಿಂದ (೧೯೭೧) ಉತ್ತಮ ಲೇಖಿಕಿ ಎಂಬ ಗೌರವ, ಅತ್ತಿಮಬ್ಬೆ ಪ್ರಶಸ್ತಿ ಹಾಗೂ ಇನ್ನೂ ಕೆಲವು ಪ್ರಶಸ್ತಿಗಳು ದೊರೆತಿವೆ.

ಹೀಗೆ ಗೌರವಾನ್ವಿತೆಯಾಗಿ ಮಾತೃಭಾಷೆಯಾದ ತಮಿಳಿಗೂ, ಕಲಿತ ಪರಿಸರ ಭಾಷೆ ಕನ್ನಡಕ್ಕೂ ಸುದೀರ್ಘ ಕಾಲ ಸಾಹಿತ್ಯ ಸೇವೆ ಸಲ್ಲಿಸಿ ಧನ್ಯರಾಗಿ ೨೦೦೧ (೩-೩-೨೦೦೧) ರಂದು ದೈವಾಧೀನರಾದರು.

ಇಪ್ಪತ್ತನೆಯ ಶತಮಾನದ ಆರಂಭದ ಕಾಲದ ಸಾಹಿತ್ಯ ರಚನಾ ಪರಿಸರದ ಬಗ್ಗೆ ಡಾ. ನಿರುಪಮಾ ಹೀಗೆ ಹೇಳುತ್ತಾರೆ :

'ಅಂದಿನ ಸಮಾಜ ಸುಧಾರಣೆಯ ಕ್ರಾಂತಿಯಲ್ಲಿ ಸಾಹಿತ್ಯವೂ ತನ್ನ ಪಾತ್ರವನ್ನು ನಿರ್ವಹಿಸಿತು. ಆ ಕಾಲದಲ್ಲಿ ಬಂದ ಸಾಹಿತ್ಯ ಅಂದಂದಿನ ಸಮಾಜದ ಜೀವನವನ್ನು ಪ್ರತಿಬಿಂಬಿಸುತ್ತ ಜನರಲ್ಲಿಯ ಮೂಢನಂಬಿಕೆಗಳನ್ನು ಹೋಗಲಾಡಿಸುವ ಪ್ರಯತ್ನ ಮಾಡಿದವು. ಈ ಅವಧಿಯಲ್ಲಾದ ಸ್ತ್ರೀ ಸುಧಾರಣಾ ಚಳುವಳಿಯ ಫಲವಾಗಿ ಹಲವಾರು ಮಹಿಳೆಯರು ಶಾಲಾ ಕಾಲೇಜುಗಳಿಗೆ ಹೋಗಿ ವಿದ್ಯಾವಂತರಾದರು. ಜನರನ್ನು ಜಾಗೃತಗೊಳಿಸಲು ಕೆಲ ಮಹಿಳೆಯರು ಸಾಹಿತ್ಯ ರಚನೆಗೆ ತೊಡಗಿದರು.

## ಜಯಲಕ್ಷ್ಮೀ ಶ್ರೀನಿವಾಸ್ ಅವರ ಜೀವನ ವಿವರಗಳು

**ಜನನ :** ೧೨-೧೨-೧೯೧೧ ಕರೂರ್ ಜಿಲ್ಲೆಯ ವಾಂಗಲ್ (ತಮಿಳುನಾಡು)

**ವಿದ್ಯಾಭ್ಯಾಸ :** ಎಸ್. ಎಸ್. ಎಲ್. ಸಿ. ವರೆಗೆ

**ಪ್ರವಾಸ :** ೧೯೭೧, ೧೯೭೬ ಯುರೋಪ್ ಮತ್ತು ಅಮೇರಿಕಾ ದೇಶಗಳಲ್ಲಿ ಉಪನ್ಯಾಸಗಳು ಕನ್ನಡ ಸಾಹಿತ್ಯದ ಬಗ್ಗೆ.

**ಸನ್ಮಾನ/ಪ್ರಶಸ್ತಿ :** ೧. ಮದ್ರಾಸ್ ಮಕ್ಕಳ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನ, 'ವಿದ್ಯಾರತ್ನ' ಬಿರುದು ಪ್ರದಾನ. ೨. ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ ೧೯೭೧. ೩. ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಹೈದರಾಬಾದಿನಲ್ಲಿ ಅಖಿಲ ಭಾರತ ಮಹಿಳಾ ಸಮ್ಮೇಳನದಲ್ಲಿ ಸನ್ಮಾನ. ೪. ಲಿಪಿ ಪ್ರಜ್ಞೆ ಪ್ರಶಸ್ತಿ ೧೯೯೪ರಲ್ಲಿ. ೫. ದಾನ ಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ ಕರ್ನಾಟಕ ಸರಕಾರದಿಂದ (೨೦೦೦ ಇಸ್ವಿ)

**ನಿಧನ :** ೩-೩-೨೦೦೧.

## ಜಯಲಕ್ಷ್ಮೀ ಅವರ ಕೃತಿಗಳು

**ಕಾದಂಬರಿ :** ಗ್ರಾಮೋದ್ಧಾರಕ ರಾಮಚಂದ್ರ (೧೯೩೦), ಸುಶೀಲೆ ಮತ್ತು ಶಿಶು ಸಂರಕ್ಷಣೆ (೧೯೩೦), ಕುಮುದಿನಿ ಕೃಪಾಶಂಕರ್ (೧೯೩೦), ಚಂಚಲೆ (೧೯೩೦), ಪರಿಮಳೆ, ಸುಲೋಚನೆ ಪುಷ್ಪಹಾರ (೧೯೫೦), ಪರಿಣಯ (೧೯೫೨), ವಿಜಯಾ.

**ಕಥೆ :** ದೀಪಾವಳಿ ಮತ್ತು ಇತರ ಕಥೆಗಳು (೧೯೪೦), ಪ್ರತಿಫಲ (೧೯೪೫).

**ಮಕ್ಕಳ ಸಾಹಿತ್ಯ :** ಮೂರು ಮುತ್ತುಗಳು (೧೯೬೦), ಮೋಹನ್, ಮಿಠಾಯಿ (೧೯೭೪), ಐಸ್‌ಕ್ರೀಂ (೧೯೭೯), ಲೇಡಿ ಬೇಡನ್ ಪವೆಲ್ (೧೯೭೦).

**ಪ್ರವಾಸ ಸಾಹಿತ್ಯ :** ಅಮೇರಿಕೆಯ ಪ್ರವಾಸ, ನಾ ಕಂಡ ಜರ್ಮನಿ (೧೯೭೦).

**ಅನುವಾದ : (ಕನ್ನಡದಿಂದ ತಮಿಳಿಗೆ)** ಅನಕೃ ಅವರ ಸಂಧ್ಯಾರಾಗ, ಮಂಗಳಸೂತ್ರ, ತಾಯಿಯ ಕರುಳು, ಕಣ್ಣೀರು, ಸಾಹಿತ್ಯ ರತ್ನ, ಗೃಹಲಕ್ಷ್ಮಿ. ಮಾಸ್ತಿ ಅವರ ಸುಬ್ಬಣ್ಣ, ಮಂಜುಳಾ.

**ಅನುವಾದ : (ತಮಿಳಿನಿಂದ ಕನ್ನಡಕ್ಕೆ)** ಕಲಾವಿದನ ತ್ಯಾಗ, ಬೇವಿನ ಮರದ ಬಂಗಲೆ, ರಾಜಾಜಿ ಅವರ ಸಣ್ಣ ಕಥೆಗಳು (೧೯೫೫).

**ತಮಿಳಿನಲ್ಲಿ ಬರೆದ ಕೃತಿಗಳು :** ರಾಮಚಂದ್ರನ್ (ತಮ್ಮದೇ ಕಾದಂಬರಿಯ ಅನುವಾದ), ರುಕ್ಮಿಣಿ, ಲಕ್ಷ್ಮೀ ಕಟಾಕ್ಷಂ, ನವಮಣಿಮಾಲೈ (ಸಣ್ಣ ಕಥೆಗಳು), ಕದ್ಯೆಕ್ಕೊತ್ತು (ಸಣ್ಣ ಕಥೆ), ಪರಿಣಯಂ, ಪುಷ್ಪಹಾರಂ, ವಿಜಯಾ, ಕುಮುದಿನಿ (ಕಾದಂಬರಿಗಳು), ಪ್ರೇಮಾ (೧೯೪೦), ಭೂ ಮಾವಿನ್ ಪುನ್ನಗೈ, ಅಲುಗ್ರ ರಾಣಿ, ಮುರಳಿ.

**ಇತರ :** ಶಿಶು ಪಾಲನೆ (೧೯೫೦), ನವದಂಪತಿಗಳಿಗೆ, ಸತ್ಯಮೂರ್ತಿ ಪತ್ರಗಳು, ಸಾಯಿಮಾ (೧೯೮೫), ವೈಭವದ ಮನೆ (ಸಮಾಜ ಶಾಸ್ತ್ರ).

ಕನ್ನಡ ಮತ್ತು ತಮಿಳು ಪತ್ರಿಕೆಗಳಲ್ಲಿ ಸಾವಿರಕ್ಕೂ ಹೆಚ್ಚು ಕಥೆ, ಲೇಖನ ಇತ್ಯಾದಿ ಪ್ರಕಟವಾಗಿವೆ.

✻ ✻ ✻

# ಜಯದೇವಿತಾಯಿ ಲಿಗಾಡೆ

ಕವಿ, ಶಿವಭಕ್ತೆ, ಗಡಿಭಾಗದಲ್ಲಿ ಹೋರಾಟಗಾರ್ತಿ ಎಂದು ಖ್ಯಾತಿ ಪಡೆದ ಜಯದೇವಿ ತಾಯಿ ಲಿಗಾಡೆ ಅವರು ಕನ್ನಡ ಮತ್ತು ಮರಾಠಿ ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿದ್ದರು. ಸೊಲ್ಲಾಪುರ ಗಡಿಭಾಗದಲ್ಲಿ ಕನ್ನಡದ ಏಳ್ಗೆಗಾಗಿ ದುಡಿದ ವೀರ ಮಹಿಳೆ.

ವಾರದ ಮಲ್ಲಪ್ಪನವರ ಮನೆತನ ಸೊಲ್ಲಾಪುರ ಭಾಗದಲ್ಲಿ ರಾಜಕೀಯ, ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಹೆಸರು ಗಳಿಸಿತ್ತು. ಮಲ್ಲಪ್ಪನವರು ಕೃಷಿ-ಉದ್ದಿಮೆಗಳಿಗಷ್ಟೇ ಅಲ್ಲ ಶೈಕ್ಷಣಿಕ ಕ್ಷೇತ್ರದಲ್ಲಿಯೂ ಬಹಳ ಕಾರ್ಯಸಾಧನೆ ಮಾಡಿದರು. ಅವರ ಮೊಮ್ಮಗಳು ಜಯದೇವಿ ಸೊಲ್ಲಾಪುರದಲ್ಲಿ ೧೯೧೨ರಲ್ಲಿ (೨೩-೬-೧೯೧೨) ಜನಿಸಿದಳು. ತಂದೆ ಚೆನ್ನಬಸಪ್ಪ, ತಾಯಿ ಸಂಗವ್ವ (ಭಾಗೀರಥಿ). ಇವರಿಗೆ ಇಬ್ಬರು ಗಂಡುಮಕ್ಕಳು. ಮೂರನೆಯವಳಾಗಿ ಜಯದೇವಿ ಜನಿಸಿದಳು. ತಾಯಿ ಒಳ್ಳೆಯ ಹಾಡುಗಾರ್ತಿ ಹಾಗೂ ವಾಗ್ಮಿಯಾಗಿದ್ದಳು. ಆಗಿನ ಕಾಲದಲ್ಲಿ (೧೯೧೦) ಸ್ಥಾಪಿತವಾಗಿದ್ದ ವಾರದ ಮಲ್ಲಪ್ಪನವರ ವೀರಶೈವ ಮಹಿಳಾ ಜ್ಞಾನ ಮಂದಿರಕ್ಕೆ ಹೋಗಿ ಧಾರ್ಮಿಕ - ಸಾಮಾಜಿಕ - ಸಾಂಸ್ಕೃತಿಕ ಕಾರ್ಯಗಳನ್ನು ಮಾಡುವ ತರಬೇತಿ ಪಡೆದಿದ್ದಳು.

ತಾಯಿಯ ಪ್ರಭಾವದ ಪರಿಣಾಮವಾಗಿ ಜಯದೇವಿಗೆ ಇವೆಲ್ಲ ಸ್ವಾಭಾವಿಕವಾಗಿ ಬಂದುವು. ತಂದೆ ಮಡಕಿ ಚೆನ್ನಬಸಪ್ಪನವರದು ಶ್ರೀಮಂತ ಮನೆತನ. ಆದರೆ ಮಗಳು ಜಯದೇವಿ ಸರಳ ಸಾದಾ ಜೀವಿ. ಕನ್ನಡ ಶಾಲೆಗಳು ಇರಲಿಲ್ಲವಾದ್ದರಿಂದ ಅವಳು ಮರಾಠಿ ಶಾಲೆಗೆ ಹೋಗಬೇಕಾಯಿತು.

ಜಯದೇವಿಯು ಹದಿನಾಲ್ಕು ವರ್ಷದವಳಾಗಿದ್ದಾಗಲೇ ಅವಳನ್ನು ಸೊಲ್ಲಾಪುರದ ಶ್ರೀಮಂತ ಮನೆತನದ ಚೆನ್ನಮಲ್ಲಪ್ಪನವರಿಗೆ ಕೊಟ್ಟು ಬಹಳ ವಿಜೃಂಭಣೆಯಿಂದ ವಿವಾಹ ಮಾಡಿದರು. ಆಗ ವರನಿಗೆ ಕೇವಲ ಹದಿನಾರು ವರ್ಷ. ಅತ್ತೆ ಮನೆಯಲ್ಲಿ ಹಲವಾರು ಹಿರಿಯರಿಂದ ಪ್ರಾರಂಭದಲ್ಲಿ ಕಿರಿಕಿರಿ ಉಂಟಾಗುತ್ತಿತ್ತು. ತವರು ಮನೆಯಲ್ಲಿದ್ದ ಸಭೆ ಸಮಾರಂಭಗಳಲ್ಲಿ ಭಾಗವಹಿಸುವ ಸ್ವಾತಂತ್ರ್ಯ ಅಲ್ಲಿರಲಿಲ್ಲ. ಬೆಳಗಿನಿಂದ ಸಂಜೆಯ ವರೆಗೆ ಗಾಣದ ಎತ್ತಿನಂತೆ ದುಡಿದು, ಗಂಡನಿಂದಲೂ ಆಗಾಗ ಶಿಕ್ಷೆ ಪಡೆಯಬೇಕಾಗುತ್ತಿತ್ತು. ಆದರೆ ಇವೆಲ್ಲವನ್ನೂ ಶಾಂತವಾಗಿ ಸಹಿಸಿ ಅತ್ತೆಯ ಮನೆಯವರ ಪ್ರೀತಿಯನ್ನು ಗಳಿಸಿದರು. ಮರಾಠಿ ಆರನೆಯ ಇಯತ್ತೆಯ ವರೆಗೆ ಅಭ್ಯಾಸ ಮಾಡಿ

ನೆಲ್ಲಿಸಿದ ಜಯದೇವಿ ಎರಡು ಮಕ್ಕಳನ್ನು ಹಡೆದ ನಂತರ ಕನ್ನಡ ಕಲಿತಳು. ವಚನ ಸಾಹಿತ್ಯವನ್ನು ಅಭ್ಯಾಸ ಮಾಡಿದಳು. ಅದರಿಂದ ಅವಳ ಜೀವನ ಹಾಗೂ ಸಾಹಿತ್ಯ ಪ್ರೇರಿತವಾದವು. ಈಗ ಮನೆಯವರ ಪ್ರೋತ್ಸಾಹವು ದೊರೆತದ್ದರಿಂದ ಹಲವಾರು ವೀರಶೈವ ಸಭೆಗಳಲ್ಲಿ ಅಧ್ಯಕ್ಷತೆ ವಹಿಸಿ ಪಾಲ್ಗೊಳ್ಳಲು ಸಾಧ್ಯವಾಯಿತು. ದೇಶಪ್ರೇಮ ಮತ್ತು ಗಾಂಧೀವಾದಗಳನ್ನು ತಮ್ಮ ಜೀವನದಲ್ಲಿ ರೂಢಿಸಿಕೊಂಡರು. ಸೊಲ್ಲಾಪುರದ ಸಿದ್ಧರಾಮ ದೇವಸ್ಥಾನ ಅವರ ನಿತ್ಯದ ಭಕ್ತಿಯ ಸ್ಥಾನವಾಯಿತು.

ಜಯದೇವಿಯವರ ಕಾರ್ಯವ್ಯಾಪ್ತಿ 'ಮಹಿಳಾ ಜ್ಞಾನ ಭಂಡಾರದ ಕಾರ್ಯ' ಹೈದರಾಬಾದಿನಲ್ಲಿ ರಜಾಕಾರರ ಹಾವಳಿಯಿಂದ ಅನಾಥರಾದವರಿಗೆ ಆಶ್ರಯ ಕೊಡುವ ಕೆಲಸ, ನೂಲು ತೆಗೆಯುವ ಸ್ಪರ್ಧೆಗಳನ್ನು ಬಡವರಿಗೆ ಏರ್ಪಡಿಸುವುದು, ಬಡವರಿಗೆ ಅನ್ನದಾನ ಮಾಡಿಸುವುದು, ಸ್ತ್ರೀ ಶಿಕ್ಷಣಕ್ಕೆ ಪ್ರೋತ್ಸಾಹ, ಔದ್ಯೋಗಿಕ ಸಂಸ್ಥೆಗಳಲ್ಲಿ ಸಾಕ್ಷರತಾ ವರ್ಗ ನಡೆಸುವುದು ಅಸ್ಪೃಶ್ಯರ ಸೇವೆ ಇತ್ಯಾದಿಗಳಲ್ಲಿ ತೊಡಗಿರುತ್ತಿತ್ತು.

ಇತ್ತ ತಮ್ಮ ದೊಡ್ಡ ಕುಟುಂಬದಲ್ಲಿ ಒದಗಿದ ಹಲವಾರು ವಿಪತ್ತುಗಳನ್ನು ಧೈರ್ಯದಿಂದ ಜಯದೇವಿ ಎದುರಿಸಿ ನಿಂತರು. ಮನೆಯಲ್ಲಿ ಆಸ್ತಿಯ ಬಗ್ಗೆ ಕಲಹ, ಹಿರಿಯರಿಗೆ ಉಂಟಾದ ದೈಹಿಕ ನೋವು.

ಅತ್ತ ಕರ್ನಾಟಕದ ಏಕೀಕರಣ, ಸೊಲ್ಲಾಪುರ ಭಾಗ ಏಕೀಕೃತ ಕರ್ನಾಟಕದಲ್ಲಿ ಸೇರಬೇಕೆಂಬ ಹಂಬಲ, ರಾಷ್ಟ್ರಭಾಷೆಯ ಬಗ್ಗೆಯೂ ಅವರಿಗೆ ಬಹಳ ಅಭಿಮಾನವಿತ್ತು. ಸೊಲ್ಲಾಪುರ ಭಾಗದಲ್ಲಿ ಕನ್ನಡ ಪ್ರಚಾರ, ಸೊಲ್ಲಾಪುರವು ಔದ್ಯೋಗಿಕ ಕೇಂದ್ರವಾಗಲು ಶ್ರಮಿಸಿದವರು ಕನ್ನಡಿಗರೆಂಬುದನ್ನೂ ಸುತ್ತಲಿನ, ವಿಶೇಷವಾಗಿ ದಕ್ಷಿಣದ ಭಾಗಗಳು ಕನ್ನಡ ಪ್ರದೇಶವೆಂದೂ ಜನರಿಗೆ ಮನದಟ್ಟು ಮಾಡಿಕೊಟ್ಟರು. ಅಕ್ಕನ ಜಯಂತಿ, ಬಸವ ಜಯಂತಿ, ನಾಡಹಬ್ಬಗಳಂಥ ವೇದಿಕೆಗಳನ್ನು ಕನ್ನಡ ಪ್ರಚಾರ ಕಾರ್ಯಕ್ಕಾಗಿ ಬಳಸಿಕೊಂಡರು. ತನುಮನಧನಗಳನ್ನು ಕನ್ನಡಕ್ಕಾಗಿ ಅರ್ಪಿಸಿ, ಕನ್ನಡ ಕಟ್ಟುವ ಕಾರ್ಯದೊಡನೆ ಸಾಹಿತ್ಯವನ್ನೂ ರಚಿಸಿದರು. ಜಯದೇವಿಯವರ ಹಿರಿಮೆ ಎಂದರೆ ಜೊತೆಗೆ ತಾವು ಬಲ್ಲ ಮರಾಠಿಯಲ್ಲಿಯೂ ಕೃತಿಗಳನ್ನು ರಚಿಸಿದರು.

ಹೈದರಾಬಾದ್ ಪ್ರದೇಶದಲ್ಲಿ ಕನ್ನಡ ಉಳಿಸಿ ಬೆಳೆಸಲು ಕನ್ನಡ ಶಾಲೆಗಳನ್ನು ಸ್ಥಾಪಿಸಿದರು. ಸ್ವಂತ ಖರ್ಚಿನಿಂದ ಶಿಕ್ಷಕರನ್ನು ನೇಮಿಸಿದರು. ಕನ್ನಡಿಗರ ಪ್ರೀತಿಗೆ ಪಾತ್ರರಾದರು. ಮಹಾಜನ ವರದಿಯ ಅನುಷ್ಠಾನಗೊಳಿಸಲು ಇಂದಿರಾ ಗಾಂಧಿಯವರನ್ನು ಕೇಳಿಕೊಂಡಿದ್ದರು. ಆದರೆ ಅವರು ಮರಣ ಹೊಂದುವವರೆಗೆ ಅದು ಸಾಧ್ಯವಾಗಲಿಲ್ಲ. ಇನ್ನೂ ಸಾಧ್ಯವಾಗಿಲ್ಲ.

ಕನ್ನಡ ಮರಾಠಿ ಭಾಷೆಗಳನ್ನು ಚೆನ್ನಾಗಿ ಬಲ್ಲ ಜಯದೇವಿ ಅವರು ಏಳು ಕನ್ನಡ ಕೃತಿಗಳನ್ನು ಹಾಗೂ ಏಳು ಮರಾಠಿ ಕೃತಿಗಳನ್ನು ರಚಿಸಿ, ಸಾಹಿತಿಯಾಗಿ ಅಜರಾಮರರಾಗಿದ್ದಾರೆ.

ಕನ್ನಡ ಕೃತಿಗಳಲ್ಲಿ 'ಜಯಗೀತೆ' ನಲ್ವತ್ತು ಸುಂದರ ಗೀತೆಗಳ ಸಂಕಲನ. ೧೯೫೭ರಲ್ಲಿ ಪ್ರಕಟವಾಯಿತು. ಭಕ್ತಿ, ನಿಷ್ಠೆಯ ಕುರಿತು ಅವರ ಮನದ ಹೊಯ್ದಾಟವನ್ನು ಈ ಸಂಗ್ರಹದ ಕವನಗಳಲ್ಲಿ ಕಾಣಬಹುದು.

'ಸಾವಿರದ ಪದಗಳು' (೧೯೮೬) ಒಂದು ಆಯ್ದ ಪದ್ಯ ಸಂಕಲನ, ದೇವರು ಶಿವಶರಣ-ಶರಣೆಯರು ಹಾಗೂ ಶ್ರೇಷ್ಠರ ಪುಣ್ಯ ಸ್ಮರಣೆಗಳು ಈ ಪದ್ಯಗಳ ವಸ್ತುಗಳಾಗಿವೆ. ಕನ್ನಡತನ ತೋರುವ ಪದ್ಯಗಳೂ ಅದರಲ್ಲಿವೆ. ಉದಾ :

ಸೊಲ್ಲಾಪುರದೊಳಗೆ ಸೊಲ್ಲಾ ಅಡಗಿಸ ಬ್ಯಾಡೋ
ನಿಲ್ಲೆಂದು ತಾಯಿ ನುಡಿ ನಿಲ್ಲಿಸು ! ಸಿದ್ಧರಾಮ
ಅಲ್ಲಗಳೆದವರಿಗೆ ತಿಳಿ ಹೇಳು ॥
ಕನ್ನಡ ತಾಯಿ ನುಡಿ । ಮನ್ನಿಸಿ ಮಾತನಾಡು
ಅನ್ಯಕ್ಕೆ ಮರುಳಾಗದಿರು । ಮರುಳೇ ನೀ
ಕನ್ನಡಿಗನೆಂಬುದ ಮರಿಬ್ಯಾಡ ॥

ತಾಯಿಯ ಪದಗಳಲ್ಲಿ ಸಂಸಾರ ನಿರಸನ, ಶರಣಸತಿ ಭಾವ, ಆತ್ಮಜ್ಞಾನ, ಶಿವಶರಣರಲ್ಲಿ ಭಕ್ತಿ, ದೇಶಾಭಿಮಾನ, ಐತಿಹಾಸಿಕ ಪ್ರಜ್ಞೆಗಳ ಕುರಿತು ಪದಗಳಿವೆ.

'ಸಿದ್ಧರಾಮ ಪುರಾಣ' ಜಯದೇವಿಯವರ ಅತ್ಯಂತ ಶ್ರೇಷ್ಠ ಕೃತಿ. ತ್ರಿಪದಿಯಲ್ಲಿ ರಚಿತವಾದ ಈ ಪುರಾಣವು ಕವಯತ್ರಿಯ ಹತ್ತು ವರ್ಷಗಳ ತಪಸ್ಸಿನ ಫಲ ಎನ್ನಬಹುದು. ೪೧ ಸಂಧಿಗಳಲ್ಲಿ ೪೧೦೦ ಪದ್ಯಗಳಿವೆ. ಅವರ ಅನುಭಾವದ ಆಳವನ್ನು ಇದರಲ್ಲಿ ಗುರುತಿಸಬಹುದು. ಹಲವಾರು ಹಿರಿಯ ಕನ್ನಡ ಕವಿಗಳು ಇದನ್ನು ಕೊಂಡಾಡಿದ್ದಾರೆ.

ಜಯದೇವಿ ತಾಯಿಯವರ ಮರಾಠಿ ಕೃತಿಗಳ ಬಗ್ಗೆ ಅವಲೋಕನ ಮಾಡಿದಾಗ ಅವರು ಬಸವೇಶ್ವರ ಮತ್ತು ಸಿದ್ಧರಾಮೇಶ್ವರ ವಚನಗಳನ್ನು ಮರಾಠಿ ಭಾಷೆಗೆ ಅನುವಾದಿಸಿದ್ದು ಕಂಡು ಬರುತ್ತದೆ.

ಬಸವ ದರ್ಶನ, ಮಹಾಯೋಗಿನಿ, ಸಿದ್ಧರಾಮಾಂಚಿ ತ್ರಿವಿಧಿ, ಮರಾಠಿ ತ್ರಿಪದಿಯಲ್ಲಿ 'ಅಕ್ಕಮಹಾದೇವಿ ಪುರಾಣ' ರಚಿಸಿದ್ದಾರೆ. ಮರಾಠಿಗೆ ತ್ರಿಪದಿ ಛಂದಸ್ಸನ್ನು ಈ ಮೂಲಕ ಕೊಂಡೊಯ್ದಿದ್ದಾರೆ. ಸಮೃದ್ಧ ಕರ್ನಾಟಕಾಂಚೆ ರೂಪರೇಷಾ' ಇವರ ಮತ್ತೊಂದು ಮುಖ್ಯ ಕೃತಿಯಾಗಿದೆ. ಜಯದೇವಿಯ ಹನ್ನೊಂದು ಅಪ್ರಕಟಿತ ಕೃತಿಗಳಿವೆ.

ಹುಬ್ಬಳ್ಳಿ ಮತ್ತು ತುಮಕೂರುಗಳಲ್ಲಿಯ ಅ. ಭಾ. ವೀರಶೈವ ಮಹಿಳಾ ಪರಿಷತ್ತಿನ ಅಧ್ಯಕ್ಷತೆ, ೩ನೆಯ ಅಖಿಲ ಕರ್ನಾಟಕ ಮಹಿಳಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷತೆ, ಬೇಲೂರಿನ (೧೯೫೦) ಸಾಹಿತ್ಯ ಸಮ್ಮೇಳನದಲ್ಲಿ ಮಹಿಳಾಗೋಷ್ಠಿಯಲ್ಲಿ ಅಧ್ಯಕ್ಷತೆ, ಸಿದ್ಧರಾಮೇಶ್ವರ ಪುರಾಣಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಮತ್ತು ದೇವರಾವ್ ಬಹದ್ದೂರ್ ಪ್ರಶಸ್ತಿ ಮತ್ತು ೧೯೭೪ ಮಂಡ್ಯದ ಕ.ಸಾ.ಪ. ಸಮ್ಮೇಳನದ ಅಧ್ಯಕ್ಷತೆಯ ಗೌರವ ತಾಯಿಯವರಿಗೆ ಲಭಿಸಿವೆ.

ಜಯದೇವಿಯವರು ಹಲವಾರು ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿದ್ದಾರೆ. ಕರ್ನಾಟಕದ ಹಾಗೂ ಸೊಲ್ಲಾಪುರದ ಬಳಿಯ ಕ್ಷೇತ್ರಗಳಿಗಂತೂ ಹಲವಾರು ಬಾರಿ ಹೋಗಿ ಪುಣ್ಯ ಗಳಿಸಿದ್ದಾರೆ.

ವಟವೃಕ್ಷದಂತೆ ಸೊಲ್ಲಾಪುರ ಗಡಿಭಾಗದಲ್ಲಿ ಕನ್ನಡಕ್ಕೆ ಆಶ್ರಯ ನೀಡಿದ ವೀರ ಶಿವಭಕ್ತೆ, ೨೫-೭-೧೯೮೬ರಂದು ಲಿಂಗೈಕ್ಯರಾದರು, ಇಪ್ಪತ್ತನೆಯ ಶತಮಾನದ ಗಣ್ಯ ಕವಯಿತ್ರಿಯರಲ್ಲಿ ಮಹತ್ವದ ಸ್ಥಾನ ಗಳಿಸಿದ ಜಯದೇವಿಯವರ ಜೀವನ, ಸಾಹಿತ್ಯದ ಕುರಿತು ಕೆಲವು ಹೇಳಿಕೆಗಳನ್ನು ಗಮನಿಸಬಹುದಾಗಿದೆ.

"ತಾಯ್ತನದ ಹಿರಿಮೆಯಿಂದ ಕೂಡಿದ ಈ ಪದಗಳು ಮಾನವ ಕುಲಕ್ಕೆ ನೀಡಿದ ಸಂಹಿತೆಗಳು. ತಾಯಿ ಹೃದಯದ ನೀತಿಯುಕ್ತವಾದ ವಾತ್ಸಲ್ಯಪೂರ್ಣ ನುಡಿಗಳು ಇಲ್ಲಿವೆ. ವೀರಶೈವ ಧರ್ಮ ದರ್ಶನ ತತ್ವವಲ್ಲದೆ, ಕಾವ್ಯತತ್ವ ಇಲ್ಲಿದೆ" ಎಂದು ತಾಯಿಯ ಪದಗಳು ಕೃತಿಯ ಬಗ್ಗೆ ಡಾ. ಚೆನ್ನಕ್ಕ ಪಾವಟೆ ಅಭಿಪ್ರಾಯ ಪಡುತ್ತಾರೆ.

"ಮಹಿಳಾ ಹೃದಯ ತನ್ನ ರಸಾನುಭವ ಸಂಪತ್ತನ್ನೆಲ್ಲಾ ಈ ಕೃತಿಯಲ್ಲಿ ಸೂರೆಮಾಡಿಕೊಂಡಿವೆ. ಹಿಂದೆ ಅನಾಮಧೇಯವಾಗಿ ತನ್ನ ದುಃಖ ತನ್ನ ಸುಖ ತನ್ನ ಭಕ್ತಿಗಳನ್ನು ಜಾನಪದ ತ್ರಿಪದಿಯಲ್ಲಿ ತೋಡಿಕೊಂಡ ತಾಯಿಯ ಹೃದಯ ಇಂದು ಪ್ರಜ್ಞಾಪೂರ್ವಕವಾಗಿ ಅದೇ ಸೊಗಸಿನ ಹಾಡನ್ನು ಹಾಡಿದೆ. ಜಯದೇವಿ ತಾಯಿಯವರ ಈ ಕೃತಿ ಘನವಾದುದು" ಎಂದು ಡಾ. ವಿ. ಕೃ. ಗೋಕಾಕ ಅಭಿಪ್ರಾಯಪಡುತ್ತಾರೆ.

"ನಾಡಿಗಾಗಿ, ನುಡಿಗಾಗಿ, ಮಹಿಳೆಯರಿಗಾಗಿ, ಕಾರ್ಮಿಕರಿಗಾಗಿ, ಅಸ್ಪೃಶ್ಯರಿಗಾಗಿ ಮಾಡಿದ ಅವರ ಸೇವೆ-ಚಿಂತನೆಗಳು ಸ್ಮರಣೀಯವಾಗಿವೆ" ಎಂದು ಜಯದೇವಿಯವರ ಬಗ್ಗೆ ಶಶಿಕಲಾ ವೀರಯ್ಯಸ್ವಾಮಿ ಅವರು ನುಡಿದಿದ್ದಾರೆ.

"ತಾಯಿ ಜಯದೇವಿಯವರು ಹತ್ತು ವರ್ಷಗಳ ತಪಸ್ಸಿನಿಂದ ಆರುನೂರು ಪುಟಗಳ ಬೃಹತ್ ಕೃತಿಯನ್ನು ರಚಿಸಿದ್ದಾರೆ. ಇಂಥ ಕಾವ್ಯಗಳಲ್ಲಿ ಮೊದಲನೆಯದು ಮಾಸ್ತಿಯವರ 'ನವರಾತ್ರಿ', ಎರಡನೆಯದು ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ', ಮೂರನೆಯದು 'ಶ್ರೀ ಸಿದ್ಧರಾಮ ಪುರಾಣ'. ಕವಯತ್ರಿ ಸೊಲ್ಲಾಪುರದ ಕನ್ನಡ ಕೋಟೆಯ ತಾಯಿ ಜಯದೇವಿ. ಇವರು ಸಂಚಿಯ ಹೊನ್ನಮ್ಮನ ನಂತರ ಕಾವ್ಯ ರಚನೆಯಲ್ಲಿ ಯಶಸ್ಸು ಸಾಧಿಸಿದವರು" ಎಂದು ಜಿ. ಪಿ. ರಾಜರತ್ನಂ ಅವರು ಜಯದೇವಿಯನ್ನು ಅವರ ಕೃತಿಗಳನ್ನು ಕೊಂಡಾಡಿದ್ದಾರೆ.

"ಜನಸಾಮಾನ್ಯರಿಗೆ ತಿಳಿದ ಸರಳ ಮಾರ್ಗದಲ್ಲಿ ತ್ರಿಪದಿಯ ಸಹಜ ಮಾಧ್ಯಮದಲ್ಲಿ ಪ್ರಪ್ರಥಮ ಬಾರಿಗೆ ರಚಿಸಿದ ಅಮೂಲ್ಯ ಕೃತಿರತ್ನ 'ಸಿದ್ಧರಾಮೇಶ್ವರ ಪುರಾಣ'" ಎಂದು ಡಾ. ಚೆನ್ನಕ್ಕ ಪಾವಟೆ ಅವರು ಹೇಳಿದ್ದಾರೆ.

## ಜಯದೇವಿ ಲಿಗಾಡೆ ಅವರ ಜೀವನ ವಿವರ :

ಜನನ : ೨೩-೬-೧೯೧೨ ಸೊಲ್ಲಾಪುರ.

ತಂದೆ-ತಾಯಿ : ಚನ್ನಬಸಪ್ಪ ಮತ್ತು ಭಾಗೀರಥಿ (ಸಂಗವ್ವ)
ಸೆನೆಟ್ ಸದಸ್ಯೆ : ಕರ್ನಾಟಕ ವಿಶ್ವವಿದ್ಯಾಲಯ ೧೯೫೫.
ಉಪಾಧ್ಯಕ್ಷೆ : ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ (೧೯೫೫-೫೭).
ಅಧ್ಯಕ್ಷೆ : ೪೧ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಮಹಿಳಾ ಪರಿಷತ್ತು (೧೯೬೦) ಬೀದರ್.
ಸಮಾರಂಭ : ಮೈಸೂರು ರಾಜ್ಯ ಸಾಹಿತ್ಯ ಮತ್ತು ಲಲಿತಕಲಾ ಅಕಾಡೆಮಿ - ೧೯೬೮.
ಅಧ್ಯಕ್ಷೆ : ಅಖಿಲ ಭಾರತ ೪೮ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಮಂಡ್ಯ ೧೯೭೪.
ಡಿ.ಲಿಟ್ : ಗೌರವ ಡಿ. ಲಿಟ್ ಪದವಿ ಕರ್ನಾಟಕ ವಿಶ್ವವಿದ್ಯಾನಿಲಯದಿಂದ.
ಸದಸ್ಯೆ : ಕರ್ನಾಟಕ ಸಾಹಿತ್ಯ ಅಕಾಡೆಮಿ ೧೯೭೭.
ಷಷ್ಟ್ಯಬ್ದಿ : ೧೯೭೨, ದೇಶದ ಪ್ರಮುಖ, ಅಭಿಮಾನಿಗಳ ಬಳಗದ ನಡುವೆ. ನಿಧನ : ೨೫-೭-೧೯೮೬.

## ಜಯದೇವಿ ತಾಯಿ ಲಿಗಾಡೆ ಅವರ ಕೃತಿಗಳು :

೧. ಜಯಗೀತೆ, ೨. ತಾಯಿಯ ಪದಗಳು, ೩. ಶ್ರೀ ಸಿದ್ಧರಾಮ ಪುರಾಣ, ೪. ತಾರಕ್ಕ ತಂಬೂರಿ, ೫. ಬಂದೇವು ಕಲ್ಯಾಣಕೆ, ೬. ಸಾವಿರದ ಪದಗಳು.

ಮರಾಠಿಯಲ್ಲಿ : ೧. ಸಿದ್ಧವಾಣಿ, ೨. ಬಸವದರ್ಶನ, ೩. ಸಮೃದ್ಧ ಕರ್ನಾಟಕಾಂಚೆ ರೂಪರೇಷಾ, ೪. ಮಹಾಯೋಗಿನಿ, ೫. ಸಿದ್ಧರಾಮಾಂಚಿ ತ್ರಿವಿಧಿ, ೬. ಬಸವ ವಚನಾಮೃತ, ೭. ಶೂನ್ಯ ಸಂಪಾದನೆ.

ಸಂಪಾದನೆ : ಅರಿವಿನಾಗರದಲ್ಲಿ. ಅಪ್ರಕಟಿತ : ೧. ಅಕ್ಕಮಹಾದೇವಿಯ ಪುರಾಣ, ೨. ಹುತಾತ್ಮ ಹರಳಯ್ಯ ಮಧುವಯ್ಯರ ಜೀವನ ಚರಿತ್ರೆ.

# ಕವಿ ಎಸ್. ಡಿ. ಇಂಚಲ

ಬೆಳಗಾವಿಯಲ್ಲಿ ಮರಾಠೀ ಭಾಷಿಗರ ಪ್ರಭಾವದಿಂದ ಕನ್ನಡಿಗರನ್ನು ಬಿಡುಗಡೆಗೊಳಿಸಿ ಕನ್ನಡತನವನ್ನು ಚುರುಕುಗೊಳಿಸುವ ಕಾರ್ಯವನ್ನು ಕನ್ನಡದ ಸೇನಾನಿಯಾಗಿ ನಿಷ್ಠೆಯಿಂದ ನಾಲ್ಕು ದಶಕ ಮಾಡಿದ ಕನ್ನಡಿಗರು ಕನ್ನಡಮ್ಮನ ಸೇವೆಗೆ ಭಕ್ತಿಯಿಂದ ತೊಡಗುವಂತೆ ಮಾಡಿದ ಶ್ರೇಯಸ್ಸು ಕವಿ, ಶಿಕ್ಷಕ, ಸಂಘಟಕ, ವಾಗ್ಮಿ ಎಸ್. ಡಿ. ಇಂಚಲರಿಗೆ ಸಲ್ಲಬೇಕು. ಕನ್ನಡಕ್ಕಾಗಿ ಒಂದು ಶಕ್ತಿಯಾಗಿ ನೆಲೆಯೂರಿ ನಿಂತು ಕನ್ನಡಿಗರು ಸುಸಂಸ್ಕೃತರಾಗಿ ಬಾಳುವಂತೆ ಹೋರಾಟ ನಡೆಸಿದ ವೀರಯೋಧರು.

ಕವಿ ಶಿವಪುತ್ರ ಇಂಚಲರು ಬೆಳಗಾವಿ ಜಿಲ್ಲೆಯ ಹಿರೇಬಾಗೇವಾಡಿಯಲ್ಲಿಯ ಕೃಷಿಕ ಕುಟುಂಬವೊಂದರಲ್ಲಿ ೧೯೧೩ರಲ್ಲಿ (೧-೪-೧೯೧೩) ಜನಿಸಿದರು. ತಂದೆ ದೇಮಪ್ಪ, ತಾಯಿ ಬಸವಂತವ್ವ. ಮೂಲತಃ ಅವರ ಕುಟುಂಬ ಸವದತ್ತಿ ತಾಲೂಕಿನ ಇಂಚಲ ಗ್ರಾಮದ್ದು. ಆದರೆ ಎರಡು ಮೂರು ತಲೆಮಾರುಗಳಿಂದ ಹಿರೇಬಾಗೇವಾಡಿಗೆ ಬಂದು ನೆಲೆಸಿದ್ದರು. ತಂದೆ ದೇಮಪ್ಪನವರು ಪ್ರಾಥಮಿಕ ಶಾಲೆಯಲ್ಲಿ ಪ್ರಾಮಾಣಿಕ ಶಿಕ್ಷಕರಾಗಿದ್ದರು.

ಇಂಚಲರ ಪ್ರಾಥಮಿಕ ಶಿಕ್ಷಣ ಹಿರೇಬಾಗೇವಾಡಿಯಲ್ಲಿಯೇ ಪ್ರಾರಂಭವಾಯಿತು. ಅವರ ತಾಯಿಯ ತವರುಮನೆ ಮುಗುಟಖಾನ ಹುಬ್ಬಳ್ಳಿ. ಅಲ್ಲಿ ಸುಪ್ರಸಿದ್ಧ ಶ್ರೀ ಚೆನ್ನಬಸವಪ್ಪ ಸಾಧುನವರ ಪ್ರೀತಿಯ ಮಗಳು. ಓದು-ಬರಹ ಕಲಿಯದಿದ್ದರೂ ಮಕ್ಕಳ ವಿದ್ಯಾಭ್ಯಾಸದಲ್ಲಿ ವಿಶೇಷ ಆಸಕ್ತಿ ಅವರಿಗೆ. ಶಾಲೆಯಲ್ಲಿ ಹೊಳೆಪ್ಪ ಮಾಸ್ತರರು ಶಿವಪುತ್ರನ ಮೇಲೆ ಬಹಳ ಪ್ರಭಾವ ಬೀರಿದರು. ಅವರ ಪ್ರೀತಿಯ ಪುತ್ರನಂತೆಯೇ ಬೆಳೆದರು. ಅವರೇ ಇಂಚಲರ ಸಾಹಿತ್ಯ ರಚನೆಗೆ ಪ್ರೋತ್ಸಾಹಿಸಿದರಷ್ಟೇ ಅಲ್ಲ, ವಾಕ್ಪಟುತ್ವಕ್ಕೆ ತಕ್ಕ ತರಬೇತಿ ನೀಡಿ ಮುಂದೆ ಅಸ್ಖಲಿತ ವಾಗ್ಮಿಯಾಗುವಂತೆ ಮಾಡಿದರೆನ್ನಬಹುದು. ಶಿವಪುತ್ರನ ವಿಚಾರ ಶಕ್ತಿ ಬೆಳೆದಂತೆ ಅವನ ಸ್ಮರಣ ಶಕ್ತಿಯೂ ಬೆಳೆಯಿತು. ಗುರುಗಳ ಪಾಠ ಕೇಳಿದ್ದನ್ನು ಮರೆಯುತ್ತಿರಲಿಲ್ಲ. ಪುನಃ ಅದನ್ನು ಅಭ್ಯಾಸ ಮಾಡಬೇಕಾಗುತ್ತಿರಲಿಲ್ಲ. ಗುರುಗಳೂ ಇವನ ಮುಖಾಂತರ ವರ್ಗದ ವಿದ್ಯಾರ್ಥಿಗಳಿಗೆ ಪಾಠ ಮಾಡಿಸುತ್ತಿದ್ದರು. ತಮ್ಮ ಪ್ರೀತಿಗೆ ಪಾತ್ರನಾದ ಶಿವಪುತ್ರನನ್ನು ಅಕ್ಕರೆಯಿಂದ ಶೀಪಣ್ಣಾ ಎಂದೇ ಕರೆಯುತ್ತಿದ್ದರಂತೆ.

೧೯೨೬ರಲ್ಲಿ ಮುಲ್ಕಿ ಪರೀಕ್ಷೆಯಲ್ಲಿ ಶೇಕಡಾ ಎಪ್ಪತ್ತರಷ್ಟು ಗುಣ ಗಳಿಸಿ ಜಿಲ್ಲೆಯಲ್ಲಿ ಆರನೆಯ ಸ್ಥಾನ ಗಿಟ್ಟಿಸಿಕೊಂಡರು. ಆಗ ಅವರಿಗೆ ಕೇವಲ ಹದಿಮೂರು ವರ್ಷ. ಮುಗುಟಖಾನ ಹುಬ್ಬಳ್ಳಿಯಲ್ಲಿ ಇಂಗ್ಲಿಷ್ ಶಾಲೆ ಸೇರಿದರು. ಆಗ ಮುಲ್ಕಿ ಪರೀಕ್ಷೆಯಲ್ಲಿ ಪಾಸಾದವರಿಗೆ ಒಂದೇ ವರ್ಷದ ಮೂರು ಇಂಗ್ಲಿಷ್ ಇಯತ್ತೆಗಳನ್ನು ಕಲಿಯುವ ಅವಕಾಶವಿತ್ತು. ಹೀಗೆ ಒಂದು ವರ್ಷ ಪೂರ್ಣ ಅಭ್ಯಾಸ ಮಾಡಿ ಉತ್ತೀರ್ಣರಾದರೂ ನಾಲ್ಕನೆಯ ವರ್ಗಕ್ಕೆ ಬೆಳಗಾವಿಯಲ್ಲಾಗಲೀ, ಬೈಲಹೊಂಗಲದಲ್ಲಾಗಲೀ ಶಾಲೆಗಳಲ್ಲಿ ಪ್ರವೇಶ ದೊರೆಯಲಿಲ್ಲ.

ಇಂಚಲರಿಗೆ ಧಾರವಾಡದಲ್ಲಿ ಕರ್ನಾಟಕ ಹೈಸ್ಕೂಲಿನಲ್ಲಿ ಪ್ರವೇಶ ದೊರೆಯಲು ಒಬ್ಬ ಶಾಲಾ ಗುರುಗಳು ನೆರವಾದರು. ಅವರು ವಿದ್ಯಾಧಿಕಾರಿಗಳಿಗೆ ಮನವಿ ಮಾಡಿಕೊಂಡು ಇಂಚಲರಿಗೆ ಮುಂದಿನ ಅಭ್ಯಾಸಕ್ಕೆ ಅನುಕೂಲ ಮಾಡಿಕೊಟ್ಟರು. ಆಗಿನ ಇಂಗ್ಲಿಷ್ ನಾಲ್ಕನೆಯ ಇಯತ್ತೆ ಎಂದರೆ ಈಗಿನ ಎಂಟನೆಯ ಇಯತ್ತೆ. ಅಲ್ಲಿಯೂ ಅವರಿಗೆ ಸಾಲಿ ರಾಮಚಂದ್ರರಾಯರಂಥ, ಶಂ. ಬಾ. ಜೋಶಿಯರಂಥ ಗುರುಗಳು ದೊರೆತು, ಅವರ ಸಾಹಿತ್ಯ ಅಭಿರುಚಿಯನ್ನು ಪ್ರೋತ್ಸಾಹಿಸಿದರು. ಡಾ. ಕಬ್ಬೂರ್ ಅವರು ಇಂಚಲರನ್ನು ಮಗನಂತೆ ನೋಡಿಕೊಂಡರು.

೧೯೨೯ರಲ್ಲಿ ನಾಲ್ಕನೆಯ ಇಯತ್ತೆಯಲ್ಲಿ ಜಯಭೇರಿ ಹೊಡೆದು ಬೆಳಗಾವಿಗೆ ಬಂದು ಗಿಲಗಂಚಿ ಅರಟಾಳ ಹೈಸ್ಕೂಲು ಸೇರಿದರು. ಅಲ್ಲಿ ಅವರಿಗೆ ತಮ್ಮ ಬಾಲ್ಯ ಸ್ನೇಹಿತರಲ್ಲಿ ಅನೇಕರು ದೊರೆತು, ಆತ್ಮೀಯ ವಾತಾವರಣ ನಿರ್ಮಾಣವಾಯಿತು. ಅಲ್ಲಿ ಅವರಿಗೆ ಆದರ್ಶಪ್ರಾಯರಾದ ಸಾಖರೆ, ಮಮದಾಪೂರ, ಪುರಾಣಿಕ, ಸರದಾರ ವೀರನ ಗೌಡರಂಥ ಶ್ರೇಷ್ಠ ಶಿಕ್ಷಕರು ಮಾರ್ಗದರ್ಶಕರಾದರು. ೧೯೩೦-೩೧ರಲ್ಲಿ ಅದೇ ಶಾಲೆಯಲ್ಲಿ ಶಿಕ್ಷಕರಾಗಿದ್ದ ಕೃಷ್ಣಕುಮಾರ ಕಲ್ಲೂರ ಅವರೊಡನೆ ವಿದ್ಯಾರ್ಥಿನಿಲಯದಲ್ಲಿ ಒಂದೇ ಕೋಣೆಯಲ್ಲಿ ವಾಸಿಸುವ ಯೋಗ ಲಭಿಸಿತು.

ಕೃಷ್ಣಕುಮಾರ ಕಲ್ಲೂರ ಅವರು ಶಿವಪುತ್ರನಿಗೆ ಕಥೆಗಳನ್ನು ಹೇಳುತ್ತಿದ್ದರು. ಒಳ್ಳೆಯ ಪುಸ್ತಕಗಳನ್ನು ಓದಲು ಕೊಡುತ್ತಿದ್ದರಷ್ಟೇ ಅಲ್ಲ, ಲೇಖನ ಕಾರ್ಯ ಮಾಡಲು ಪ್ರೋತ್ಸಾಹ ನೀಡಿದರು. ಶಾಲಾ ಪತ್ರಿಕೆಯಲ್ಲಿ ಶಿವಪುತ್ರನು ಬರೆಯತೊಡಗಿದ. ಅಂಬಿಕಾತನಯದತ್ತರ ಮತ್ತು ಮಧುರಚೆನ್ನರ ಕಾವ್ಯಗಳನ್ನು ಕಲ್ಲೂರರು ಹಾಡಿ ತೋರಿಸಿ ಆಧುನಿಕ ಭಾವಗೀತಗಳ ಬಗ್ಗೆ ಆಸಕ್ತಿ ಮೂಡಿಸಿದರು. ಅದೇ ಕಾಲದಲ್ಲಿ ಶಿವಪುತ್ರ ಕವನ ರಚಿಸತೊಡಗಿದನು. ಗುರುಭಕ್ತಿ ವರ್ಧಿಸತೊಡಗಿತು.

ಪ್ರಾಥಮಿಕ ಶಾಲೆಯಲ್ಲಿ ಕಲಿಯುತ್ತಿದ್ದಾಗ ಶಿವಪುತ್ರನಿಗೆ ಒಂದು ಬೆಳ್ಳಿಯ ಕಡಗ ಸಿಕ್ಕಿತಂತೆ. ಅದನ್ನು ಗುರುಗಳಿಗೆ ಕೊಟ್ಟು ಅದರ ಒಡೆಯರಿಗೆ ಕೊಡಲು ತಿಳಿಸಿದನು. ಪ್ರಾಮಾಣಿಕ ಬಾಲಕನ ಕಾರ್ಯ ಮೆಚ್ಚಿದ ಗುರುಗಳು ಗ್ರಾಮದ ಪೋಲೀಸರ ಮುಖಾಂತರ ಕಡಗದ ಮಾಲಕನನ್ನು ಕಂಡುಹಿಡಿಯಲು ಮಾಡಿದ ಪ್ರಯತ್ನ ವಿಫಲವಾಯಿತು. ಕೊನೆಗೆ

ಗ್ರಾಮದ ಪೊಲೀಸನು ಶಿವಪುತ್ರನಿಗೇ ಕಡಗವನ್ನು ಪ್ರಾಮಾಣಿಕತೆಗೆ ಪ್ರತಿಫಲವಾಗಿ ಕೊಟ್ಟನಂತೆ.

ಶಿವಪುತ್ರನು ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಉತ್ತೀರ್ಣನಾದನು. ಕಾಲೇಜು ಸೇರ ಬಯಸಿದನು. ಆದರೆ ಆಗ ತಾನೇ ನಿವೃತ್ತರಾದ ತಂದೆ, ದೇಮಪ್ಪ ಮಗನನ್ನು ಕಾಲೇಜಿಗೆ ಕಳಿಸಲು ಮನಸ್ಸು ಮಾಡಲಾರದ ಸ್ಥಿತಿಯಲ್ಲಿದ್ದರು. ಆಗ ಶಿವಪುತ್ರನ ಆಸೆಗೆ ನೀರೆರೆದು ಪ್ರೋತ್ಸಾಹಿಸಿದವಳು ಅವರ ತಾಯಿಯೇ. ಅವಳು ಹಟ ಹಿಡಿದು ಗಂಡನ ಮನವೊಲಿಸಿ ೧೯೩೨ರಿಂದ ೧೯೩೪ರ ವರೆಗೆ ಎರಡು ವರ್ಷ ಕೊಲ್ಲಾಪುರದ ರಾಜಾರಾಮ ಕಾಲೇಜಿನಲ್ಲಿ ಕಲಿಯಲು ಸದವಕಾಶ ಕಲ್ಪಿಸಿಕೊಟ್ಟಳು. ಆರ್ಥಿಕ ತೊಂದರೆ ಇಲ್ಲದಿದ್ದರೆ ಇಂಚಲರು ಧಾರವಾಡದ ಕರ್ನಾಟಕ ಕಾಲೇಜ್ ಸೇರುವ ವಿಚಾರದಲ್ಲಿದ್ದರು.

ಕೊಲ್ಲಾಪುರದಲ್ಲಿ ಟಿ. ಸಿ. ಇಟಗಿಯವರೊಡನೆ ಸ್ನೇಹ ಬೆಳೆದು ಅವರು ಇಂಚಲರಿಗೆ ಹಲವಾರು ಬಗೆಯಲ್ಲಿ ನೆರವು ನೀಡಿದರು. ಅತ್ತ ಕಾಲೇಜಿನಲ್ಲಿ ಪ್ರೊ. ಕೆ. ಜಿ. ಕುಂದಣಗಾರ, ಡಾ. ಆ. ನೇ. ಉಪಾಧ್ಯೆ, ಡಾ. ಗೋಕಾಕ ಮತ್ತು ಪ್ರಿನ್ಸಿಪಾಲ್, ಡಾ. ಬಾಲಕೃಷ್ಣ ಅವರು ಇಂಚಲರ ಮೇಲೆ ಬಹಳಷ್ಟು ಪ್ರಭಾವ ಬೀರಿ, ಸತತ ಅಭ್ಯಾಸದಲ್ಲಿ ಮತ್ತು ಕನ್ನಡ ಸಾಹಿತ್ಯ ವಾಚನದಲ್ಲಿ ತೊಡಗುವಂತೆ ಮಾಡಿದರೆನ್ನಬಹುದು. ವಾರ್ಷಿಕ ಕಾವ್ಯ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಗಳಿಸಿದರು. 'ಸಂಕ್ರಾಂತಿ', 'ತಾಯಿ', 'ಕರ್ನಾಟಕ ಗೀತೆ', 'ಕಳವಾದ ಕಿತ್ತೂರ' ಮೊದಲಾದ ಕವನಗಳು ಕಾಲೇಜಿನ ಮ್ಯಾಗಜಿನ್ 'ರಾಜಾರಾಮಿಯನ್'ನಲ್ಲಿ ಪ್ರಕಟವಾಗಿ ಇಂಚಲರಿಗೆ ಒಳ್ಳೆಯ ಹೆಸರು ಗಳಿಸಿ ಕೊಟ್ಟವು. ಗೆಳೆಯರು ಇಂಚಲರ ಕವನಗಳನ್ನು ಸಭೆ-ಸಮಾರಂಭಗಳಲ್ಲಿ ಹಾಡಿ ಪ್ರಚಾರ ಮಾಡಿದರು. ಕಾಲೇಜಿನ ಕರ್ನಾಟಕ ಸಂಘಕ್ಕೆ ಬಂದ ಹಲವು ಸಾಹಿತಿಗಳ ಪರಿಚಯವಾಯಿತು.

ಕಾಲೇಜ್ ಅಭ್ಯಾಸ ಮುಂದುವರಿಸಲೆಂದು ಬೆಳಗಾವಿಗೆ ಬಂದು ಲಿಂಗರಾಜ ಕಾಲೇಜಿನಲ್ಲಿ ಬಿ. ಎ. ತರಗತಿಗೆ ಪ್ರವೇಶ ಪಡೆದರು. ಅಲ್ಲಿ ಆಗ ಪ್ರೊ. ಶಿ. ಶಿ. ಬಸವನಾಳ, ಪ್ರೊ. ಬಾಗಿ, ಪ್ರೊ. ವ್ಹಿ. ಜಿ. ಕುಲಕರ್ಣಿ, ಪ್ರೊ. ಶ್ರೀನಿವಾಸ ಅಯ್ಯಂಗಾರ್‌ರಂಥ ಶ್ರೇಷ್ಠ ಪ್ರಾಧ್ಯಾಪಕರು ಲಭಿಸಿದರು. ಬಸವನಾಳರ ಕನ್ನಡ ಪ್ರೇಮ, ಪಾಂಡಿತ್ಯ, ವಿಮರ್ಶನ ನೈಪುಣ್ಯ, ಸ್ವಚ್ಛತೆ, ಶಿಸ್ತುಗಳನ್ನು ರೂಢಿಸಿಕೊಂಡು ೧೯೩೮ರಲ್ಲಿ ಬಿ. ಎ. ಪದವಿ ಪಡೆದರು.

ಕೆಲವು ಹಿರಿಯರ ಸಹಾಯದಿಂದ ಇವರು ಬೆಳಗಾವಿಯ ಗಿಲಗಂಚಿ ಅರಟಾಳ ಹೈಸ್ಕೂಲ್‌ನಲ್ಲಿ ಶಿಕ್ಷಕರಾಗಿ ವೃತ್ತಿ ಜೀವನ ಆರಂಭಿಸಿದರು. ಆದರೆ ತಮ್ಮ ಊರನ್ನು ಮರೆಯದೆ ಆಗಾಗ ಅಲ್ಲಿ ಕಾರ್ಯಕ್ರಮಗಳನ್ನು ಸಂಯೋಜಿಸುತ್ತಿದ್ದರು. ಊರಲ್ಲಿ ಹೈಸ್ಕೂಲ್ ಪ್ರಾರಂಭಿಸಲು ತ್ರಿಕರಣ ಪೂರ್ವಕವಾಗಿ ದುಡಿದರು. ಅಲ್ಲಲ್ಲಿ ಮಾಡುತ್ತಿದ್ದ ಇವರ ಭಾಷಣಗಳನ್ನು ಕೇಳಲು ಸುತ್ತಲಿನ ಹಳ್ಳಿಗಳ ಜನರು ಧಾವಿಸಿ ಬರುತ್ತಿದ್ದರು. ಅವರ ಭಾಷಣದ ಮೋಡಿ ಯಾರನ್ನಾದರೂ ಮಂತ್ರಮುಗ್ಧ ಮಾಡುತ್ತಿತ್ತು.

ಸಹಾಯಕ ಶಿಕ್ಷಣಾಧಿಕಾರಿಯಾಗಿ, ಬೆಳಗಾವಿಯ ಮತ್ತು ಹುಬ್ಬಳ್ಳಿಯ ಕೆ.ಪಿ.ಟಿ. ಕಾಲೇಜುಗಳ ಪ್ರಿನ್ಸಿಪಾಲರಾಗಿ ಕೊನೆಗೆ ೧೯೫೭ರಿಂದ ಗಿಲಗಂಚಿ ಅರಟಾಳ ಹೈಸ್ಕೂಲಿನ ಪ್ರಿನ್ಸಿಪಾಲರಾಗಿ ೧೯೭೪ರಲ್ಲಿ (೧-೪-೭೪) ನಿವೃತ್ತರಾದರು. ಆದರೆ ಅಸ್ತಮಾದಿಂದ ಬಳಲುತ್ತಿದ್ದ ಅವರು ಅನಿರೀಕ್ಷಿತವಾಗಿ ಎಪ್ರಿಲ್ ೭, ೧೯೭೪ರಂದು ನಿಧನರಾದರು. ಇದರಿಂದ ಸಮಾಜಕ್ಕೆ, ವಿಶೇಷವಾಗಿ ಬೆಳಗಾವಿಯ ಕನ್ನಡ ಜನತೆಗೆ ತುಂಬಲಾರದ ಹಾನಿಯುಂಟಾಯಿತು.

ಇಂಚಲರು ತಾವು ಸಾಹಿತಿಯಾಗಿ ಬೆಳೆದರಷ್ಟೇ ಅಲ್ಲ, ಹಲವು ಕಿರಿಯರನ್ನು ಪ್ರೋತ್ಸಾಹಿಸಿ ಬೆಳೆಸಿದರು. ತಾವು ಹಲವಾರು ಸಾಹಿತ್ಯಕ, ಸಾಂಸ್ಕೃತಿಕ ಚಟುವಟಿಕೆಗಳನ್ನು ಮಾಡಿದರಷ್ಟೇ ಅಲ್ಲ, ತಮ್ಮ ಒಡನಾಡಿಗಳೂ ಅಂಥ ಕಾರ್ಯದಲ್ಲಿ ನಿಷ್ಠೆಯಿಂದ ತೊಡಗುವಂತೆ ಮಾಡಿದರು. ಬೆಳಗಾವಿಯಲ್ಲಿ ಅವರು ಗಿಲಗಂಚಿ ಅರಟಾಳ ಹೈಸ್ಕೂಲಿನ ಮುಖ್ಯಾಧ್ಯಾಪಕರಾಗಿದ್ದುದು ಬೆಳಗಾವಿಯ ಕನ್ನಡಿಗರ ಭಾಗ್ಯವಾಗುವಂತೆ ಅವರು ಮಾಡಿದ ಕಾರ್ಯ ಸಂಸ್ಮರಣೀಯವಾಗಿದೆ. ಇಂಚಲರು ಕನ್ನಡದ ಸ್ಫೂರ್ತಿಯ ಸೆಲೆಯಾಗಿ, ಸಾಹಿತಿಗಳಿಗೆ ಮಾರ್ಗದರ್ಶಕರಾಗಿ, ಯುವಕರಿಗೆ ಕೇಂದ್ರ ಶಕ್ತಿಯಾಗಿ, ಕನ್ನಡ ಕಟ್ಟುವ ಕೆಲಸ ಮಾಡಿದರು. ಬೆಳಗಾವಿಯಲ್ಲಿ ಕನ್ನಡ ಉಳಿಸಿ, ಬೆಳೆಸಿ ಅದಕ್ಕೆ ನ್ಯಾಯಬದ್ಧ ಸ್ಥಾನ ದೊರಕಿಸಿಕೊಟ್ಟರು. ಕನ್ನಡಿಗರ ಕಣ್ಣು ತೆರೆಸಿ, ಕನ್ನಡಾಭಿಮಾನ ಜಾಗೃತಗೊಳಿಸಿದರು. ಅವರ ಪ್ರೋತ್ಸಾಹದ ಪ್ರವಾಹದಲ್ಲಿ ಮಿಂದು, ಬೆಳೆದ ಸಾಹಿತಿಗಳಲ್ಲಿ ಬಿ. ಎ. ಸನದಿ, ಪಿ. ಕೆ. ಭಾಗೋಜಿ, ರಾಜಶೇಖರ ಕರ್ಕಿ, ಪ್ರಭಾಕರ ಅನಿಗೋಳ, ಬಾಳೇಶ ಲಕ್ಷೆಟ್ಟಿ, ನಿಂಗಣ್ಣ ಸಣ್ಣಕ್ಕಿ, ಎಂ. ಎಸ್. ಲಠ್ಠೆ, ಡಿ. ಎಸ್. ಮೋಟಗಿ, ವಿ. ಸಿ. ಮಾಲಗಿತ್ತಿ, ಪುಂಡಲೀಕ ಪಾಟೀಲ, ಅಪ್ಪಣ್ಣ ಮಟ್ಟಿಕಲ್ಲಿ, ಎಸ್. ಬಿ. ಸಿದ್ಧಣ್ಣವರ, ವ್ಹಿ. ಜಿ. ಪಾಟೀಲ, ಮಹಾದೇವ ಕಣವಿ, ಎನ್. ಆರ್. ಹಿರೇಮಠ, ಬಿ. ಎಸ್. ಗವಿಮಠ ಮೊದಲಾದವರು ಪ್ರಮುಖರು.

ವಾಗ್ಮಿಯಾಗಿ ಇಂಚಲರು ಯುವಕರ ಮೇಲೆ ಬಹಳ ಪ್ರಭಾವ ಬೀರಿ ಅವರಲ್ಲಿ ಕನ್ನಡನಾಡು, ನುಡಿ ಮತ್ತು ಸಾಹಿತ್ಯಗಳ ಬಗ್ಗೆ ಅಭಿಮಾನ ಮೂಡಿಸಿದರು. ಹಲವೆಡೆ ಪ್ರವಾಸ ಕೈಕೊಂಡು ಸಭೆ ಸಮ್ಮೇಳನಗಳಲ್ಲಿ ಪಾಲ್ಗೊಂಡರು. ತಾವೂ ಹಲವಾರು ಸಭೆ ಸಮ್ಮೇಳನಗಳನ್ನು ಸಂಘಟಿಸಿ ಕನ್ನಡ ಸಂಸ್ಕೃತಿ ಬೆಳಗುವಂತೆ ಮಾಡಿದರು. ಹಿರಿಯ ಸಾಹಿತಿಗಳಿಗೆ ಗೌರವ, ಕಿರಿಯ ಸಾಹಿತಿಗಳಿಗೆ ನೆರವು ನೀಡಿದರು.

ಶಿಕ್ಷಕರಿಗೆ ಆದರ್ಶ ಒದಗಿಸಿದ ಇಂಚಲರು, ರಾಜ್ಯ ಪ್ರಶಸ್ತಿ ಮತ್ತು ರಾಷ್ಟ್ರ ಪ್ರಶಸ್ತಿ ಪಡೆದಿದ್ದರು. ಅವರು ಹಲವಾರು ಸಂಸ್ಥೆ, ಸಮಿತಿಗಳಲ್ಲಿ ಮಾರ್ಗದರ್ಶನ ಪರ ಸದಸ್ಯರಾಗಿದ್ದರು. ಅವುಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯತ್ವ, ಧಾರವಾಡ ಆಕಾಶವಾಣಿ ಕೇಂದ್ರದ ಸಲಹಾ ಸಮಿತಿಯ ಸದಸ್ಯತ್ವ, ಎಸ್. ಎಸ್. ಎಲ್. ಸಿ. ಪರೀಕ್ಷಾ ಮಂಡಳಿಯ ಸದಸ್ಯತ್ವ, ಬೆಳಗಾವಿ ಜಿಲ್ಲಾ ಮುಖ್ಯಾಧ್ಯಾಪಕರ ಸಂಘದ ಅಧ್ಯಕ್ಷತೆಗಳನ್ನು ಸ್ಮರಿಸಬಹುದು. ಅಲ್ಲದೆ ನಗರ ಕೇಂದ್ರ ಗ್ರಂಥಾಲಯ ಸ್ಥಾಪನೆಗೂ ಬಹಳ ಮುತುವರ್ಜಿ ವಹಿಸಿದ್ದರು. ಡಾ. ಶಿವಬಸವ ಸ್ವಾಮಿಗಳು ಸಂಘಟಿಸುತ್ತಿದ್ದ ಎಲ್ಲ ಕಾರ್ಯಗಳಲ್ಲಿ ಇಂಚಲರಿಗೆ ಸಿಂಹಪಾಲು ಇರುತ್ತಿತ್ತು.

೧೯೩೪ರಲ್ಲಿ ಸಂಘಟಿಸಿದ ನಾಡಹಬ್ಬ, ೧೯೪೩-೫೦ರಲ್ಲಿ ಪ್ರಾರಂಭಿಸಿ ಸಂಘಟಿಸಿದ 'ಕಿರಿಯರ ಬಳಗ'ದ ಸಾಹಿತ್ಯ ಚಟುವಟಿಕೆಗಳು ಇಂಚಲರ ಕಾರ್ಯಕ್ಷಮತೆಗೆ ಸಾಕ್ಷ್ಯ ಒದಗಿಸುತ್ತವೆ. ಇಂಚಲರೊಡನೆ ಇಂಥ ಕಾರ್ಯಗಳಲ್ಲಿ ಈಶ್ವರ ಸಣಕಲ್ಲ, ಡಿ. ಎಸ್. ಕರ್ಕಿ, ವ್ಹಿ. ಕೆ. ಕರಡಿ, ಬ. ಗಂ. ತುರಮರಿ ಮೊದಲಾದ ಮಿತ್ರರು ಸದಾ ಸಹಕರಿಸುತ್ತಿದ್ದರು. ತತ್ಫಲವಾಗಿ ಉತ್ಸಾಹ ತುಂಬಿ ಬರವಣಿಗೆಯಲ್ಲಿ ತೊಡಗಿದರು. ಇಂಚಲರ ತರಂಗಿಣಿ ೧೯೪೯ರಲ್ಲಿ ಪ್ರಕಟವಾಯಿತು. ಇಂಚಲರ ತರಂಗಿಣಿಯಲ್ಲಿ ನವೋದಯದ ಅವರ ಸ್ಪಷ್ಟದೃಷ್ಟಿಯನ್ನು ಕಾಣಬಹುದಾಗಿದೆ. ಇದರಲ್ಲಿ ಸೌಂದರ್ಯ ವರ್ಣಿಸುವ ಹಲವು ಕವನಗಳಿವೆ. ಹಾಗೆಯೇ ಕೆಲವು ಇಂಗ್ಲಿಷ ಕವಿತೆಗಳ ಭಾವಾನುವಾದಗಳೂ ಇವೆ. ಕವಿ ಮಧುರಚೆನ್ನರ ಮುನ್ನುಡಿ ಈ ಸಂಗ್ರಹಕ್ಕಿದೆ. ಇಂಚಲರ ಈ ಮೊದಲ ಕವನ ಸಂಕಲನವನ್ನು ವಾಚಕರು ಮೆಚ್ಚಿ ಬರಮಾಡಿಕೊಂಡರು.

ಇಂಚಲರ ಎರಡನೆಯ ಕವನ ಸಂಕಲನ 'ಸ್ನೇಹ ಸೌರಭ' ೧೯೫೬ರಲ್ಲಿ ಪ್ರಕಟವಾಯಿತು. ಇದರಲ್ಲಿ ಸ್ನೇಹ, ಸೌಂದರ್ಯದೃಷ್ಟಿಗಳೆರಡೂ ಸಂಮಿಳಿತವಾಗಿವೆ. ಈ ಸಂಕಲನದಲ್ಲಿಯೂ ಪ್ರಾಸ, ಪ್ರೇಮ ಎದ್ದು ತೋರುತ್ತವೆ. ೩೪ ಕವನಗಳಿದ್ದ ಈ ಸಂಕಲನದಲ್ಲಿ ಸ್ನೇಹವನ್ನು ಸೂಸುವ 'ಸ್ನೇಹ ಸೌರಭ', 'ಬಾಳ ಚಕೋರಿ', 'ತಾಯಿ', 'ಮುತ್ತು' ಮೊದಲಾದ ಕವನಗಳಲ್ಲದೆ 'ಬಿಸಿಲು ಮಳೆ' ಎಂಬ ಕವನದಲ್ಲಿ ನೈಸರ್ಗಿಕ ಚೆಲುವು ತುಂಬಿ ತುಳುಕುತ್ತದೆ. ಇದರಲ್ಲಿ 'ಗುರು ಬಸವನಾಳರಿಗೆ' ಸುನೀತ ಪದ್ಯ (ಅಷ್ಟಷಟ್ಪದಿ) ಕೂಡಾ ಸಮಾವೇಶಗೊಂಡಿದೆ. ಡಾ. ಡಿ. ಎಸ್. ಕರ್ಕಿ ಅವರು ಸ್ನೇಹದ ಮುನ್ನುಡಿ ಬರೆದಿದ್ದಾರೆ.

೧೯೬೫ರಲ್ಲಿ ಪ್ರಕಟವಾದ 'ಡಿಂಡಿಮ' ಸಂಕಲನದಲ್ಲಿ ನಾಡಿನ ಬಗ್ಗೆ ಕೆಚ್ಚು ಮೂಡಿಸುವಂಥ ಕವನಗಳಿವೆ. 'ಸಮರೋತ್ಸಾಹ', ವೀರದನಿ ಪ್ರಕಟಿಸುವ 'ಸಮರಭೇರಿ', 'ನಡೆ ಮುಂದೆ', 'ಆಹ್ವಾನ', 'ಡಿಂಡಿಮ' ಮೊದಲಾದ ವೀರಗೀತೆಗಳು ಈ ಸಂಕಲನದಲ್ಲಿವೆ.

೧೯೭೩ರಲ್ಲಿ ಪ್ರಕಟವಾದ 'ಭಾವಶ್ರೀ' ಸಂಕಲನದಲ್ಲಿ ಇಪ್ಪತ್ತೊಂದು ಕವನಗಳಿವೆ. ಇಲ್ಲಿಯೂ ದೇಶಪ್ರೇಮಕ್ಕೆ ಪ್ರಾಧಾನ್ಯ ಕೊಟ್ಟಿದ್ದಾರೆ. ಹಾಗೆಯೇ ಕೆಲವು ವ್ಯಕ್ತಿಚಿತ್ರಗಳನ್ನೂ ಇಲ್ಲಿ ಕಾಣಬಹುದಾಗಿದೆ. ವೈಯಕ್ತಿಕ ಕಷ್ಟಸುಖ ಹಂಚಿಕೊಳ್ಳುವ ಕೆಲವು ಕವನಗಳಿವೆ. ಹಾಗೆಯೇ ಕೆಲವು ಚುಟುಕುಗಳೂ ಈ ಸಂಗ್ರಹದಲ್ಲಿವೆ.

ಇವರ ಕವನಗಳನ್ನು ಸಮೀಕ್ಷಿಸಿದಾಗ ಬುದ್ಧಿ ಹಾಗೂ ಭಾವಗಳ ಸಮನ್ವಯವುಳ್ಳ ಇವರ ಕವನಗಳು ರಸಿಕ ವಾಚಕರ ಹೃದಯ ತಟ್ಟಿ ಮಿಡಿಯುತ್ತವೆ ಎನ್ನಬಹುದು. ಇವರು ನವೋದಯ ಕಾವ್ಯ ಪರಂಪರೆಯಲ್ಲಿ ತಮ್ಮ ಕಾವ್ಯ ರಚನೆ ಮಾಡಿದರು.

೧೯೫೭ರಲ್ಲಿ ಪ್ರಕಟವಾದ 'ಕಿತ್ತೂರ ಕ್ರಾಂತಿ' ಲಾವಣಿಯಲ್ಲಿ ಕಿತ್ತೂರ ಚೆನ್ನಮ್ಮನ ಸಾಹಸದ ಕಥೆಯನ್ನು ಹೃದಯಂಗಮವಾಗಿ ಬಣ್ಣಿಸಿದ್ದಾರೆ. ೧೯೭೦ರಲ್ಲಿ ಪ್ರಕಾಶನಗೊಂಡ ಇಂಚಲರ 'ಮಹಾಂತ ಮಹಿಮೆ' ಜಾನಪದ ಗೀತೆಗಳ ಸಂಕಲನದಲ್ಲಿ ಮುರಗೋಡ ಮಠದ ಮಹಾಂತ ಶಿವಯೋಗಿಗಳನ್ನು ಭಕ್ತಿಯಿಂದ ಹಾಡಿ ಹೊಗಳಿದ ಗೀತೆಗಳಿವೆ.

೧೯೬೭ರಲ್ಲಿ ಪ್ರಕಟವಾದ 'ಬಣ್ಣದ ಚೆಂಡು' ಎಂಬ ಮಕ್ಕಳ ಗೀತೆಗಳ ಸಂಗ್ರಹದ ಮೊದಲ ಭಾಗದಲ್ಲಿ (ಪುಟಿಗೆಯಲ್ಲಿ) ಡಾ. ಡಿ. ಎಸ್. ಕರ್ಕಿ ಅವರು ಬರೆದ ಹನ್ನೊಂದು ಹಾಡುಗಳಿವೆ. ಎರಡನೆಯ ಭಾಗ (ಪುಟಿಗೆಯಲ್ಲಿ)ದಲ್ಲಿ ಇಂಚಲರ ಒಂಬತ್ತು ಮಕ್ಕಳ ಪದ್ಯಗಳಿವೆ. 'ತಾಯಿ ಮುದ್ದು', 'ಪುಟ್ಟ ತಂಗಿ', ಆಟದ ಬಯಲು, ಉತ್ತಮ ಕವನಗಳು. ೧೯೫೬ರಲ್ಲಿ ಇಂಚಲರು ಕನ್ನಡ ರಾಜ್ಯ ಉದಯವಾದ ಸವಿನೆನಪಿಗಾಗಿ ಸುಪ್ರಸಿದ್ಧ ಕವಿಗಳ ಕವನಗಳನ್ನು ಸಂಪಾದಿಸಿ ಕರ್ನಾಟಕ ದರ್ಶನ ಕವನ ಸಂಕಲ ಪ್ರಕಟಿಸಿದ್ದಾರೆ.

'ನಾದಮಯ ಕವಿ', ಇಂಚಲರು ಹಾಡಿ, ಹಾಡಿಸಿ, ಕನ್ನಡಿಗರನ್ನು ಜಾಗೃತಗೊಳಿಸಿ ತಮ್ಮ ಅಮೂಲ್ಯ ಕೃತಿಗಳನ್ನು ಕೊಟ್ಟು ಅಜರಾಮರರಾಗಿದ್ದಾರೆ.

ಕವಿ ಇಂಚಲರ ಜೀವನ, ಕಾವ್ಯಗಳ ಕುರಿತು ಕೆಲವು ಅಭಿಪ್ರಾಯಗಳು ಹೀಗಿವೆ :

- "ತರಂಗಿಣಿಯ ಪ್ರಶಾಂತ ಪುಣ್ಯ ಪ್ರವಾಹದಲ್ಲಿ ಮಿಂದ ಕನ್ನಡ ಕಾವ್ಯ, ಪ್ರೇಮಿಗಳ ಸ್ನೇಹ ಸೌರಭದ ಸುಗಂಧವನ್ನು ಸವಿದು, ಡಿಂಡಿಮದ ಕರೆಗೆ ಓಗೊಟ್ಟರು... ಕಿತ್ತೂರ ಕ್ರಾಂತಿ ಲಾವಣಿಯನ್ನು ಕವಿ ಇಂಚಲರ ಬಾಯಿಯಿಂದ ಕೇಳುವದೇ ಒಂದು ಹಬ್ಬವೆನಿಸುತ್ತಿತ್ತು" ಎಂದು ಪ್ರೊ. ಬಿ. ಎಸ್. ಗವಿಮಠ ಹೇಳಿದ್ದಾರೆ.

- "ಬೆಳಗಾವಿ ಕನ್ನಡದ ಉಸಿರೆಂಬುದು ಇವರ ಜೀವನ ಸಿದ್ಧಾಂತ. ಬೆಳಗಾವಿ ಕನ್ನಡದ್ದೆಂಬ ಸತ್ಯವನ್ನೇ ಸತ್ಯವೆಂದು ಪ್ರತಿಪಾದಿಸುವುದೇ ಈ ಪ್ರಜಾಪ್ರಭುತ್ವದಲ್ಲಿ ಅವರು ಮಾಡಿದ ಕೆಲಸ. ಬೆಳಗಾವಿಯ ಒಂದು ಅಂಗುಲವನ್ನು ಮಹಾರಾಷ್ಟ್ರಕ್ಕೆ ಕೊಡಕೂಡದೆಂದು ಇವರ ಪ್ರತಿಜ್ಞೆ. ಇದನ್ನು ಸಾಧಿಸಲು ಇವರು 'ಡಿಂಡಿಮ'ವನ್ನು ಬಾರಿಸಿದರು. ವಿದ್ಯಾರ್ಥಿಗಳಲ್ಲಿ ಯುವಕರಲ್ಲಿ ಕನ್ನಡ ಚೇತನ ತುಂಬಿದರು" ಎಂದು ಕೃಷ್ಣಮೂರ್ತಿ ಪುರಾಣಿಕರು ಎಸ್. ಡಿ. ಇಂಚಲರ ಬಗೆಗೆ ಹೇಳಿದ್ದಾರೆ.

- "ರಾಷ್ಟ್ರದ ಪುನರುದ್ಧಾರದಲ್ಲಿ ಇಂಚಲರ ಕಾವ್ಯಕ್ಕಿರುವ ಅಪರಿಮಿತ ಆಸಕ್ತಿ ಗಮನಾರ್ಹವಾದುದು. ರಾಷ್ಟ್ರೀಯ ಭಾವೈಕ್ಯವನ್ನು ಕುರಿತು ಇವರು ಬರೆದಿರುವಷ್ಟು ಪದ್ಯಗಳನ್ನು ಕನ್ನಡದಲ್ಲಿ ಬಹುಶಃ ಇನ್ನಾರೂ ಬರೆದಿರಲಾರರು. ಜೀವನದಲ್ಲಿ ಪ್ರೀತಿ, ಸ್ನೇಹ, ಪ್ರಾಮಾಣಿಕತೆ, ಔದಾರ್ಯ, ದೇಶಭಕ್ತಿಗಳಿಗೆ ಒತ್ತು ಕೊಟ್ಟಿರುವ ಇಂಚಲರ ಕಾವ್ಯ ಸಾಂದರ್ಭಿಕ ರಚನೆಯ ಅಡೆತಡೆಗಳನ್ನು ಮೀರಿ ಓದುಗರ ಹೃದಯವನ್ನು ತಟ್ಟಬಲ್ಲವು" ಎಂದು ಭಾವಶ್ರೀಯ ಮುನ್ನುಡಿಯಲ್ಲಿ ಚೆನ್ನವೀರ ಕಣವಿ ಪ್ರಶಂಸಿಸಿದ್ದಾರೆ.

- "ಬೆಳಗಾವಿಯಲ್ಲಿ ಮರಾಠಿಗರ ಪ್ರಾಬಲ್ಯವಿದ್ದ ಸಮಯದಲ್ಲಿ ಕನ್ನಡ ಪಾಂಚಜನ್ಯ ಮೊಳಗಿಸಿ ಕನ್ನಡಿಗರನ್ನು ಬಡಿದೆಬ್ಬಿಸಿ, ಬೆಳಗಾವಿಗೆ ಕನ್ನಡ ಸಾಂಸ್ಕೃತಿಕ, ಸಾಹಿತ್ಯಿಕ ಮೆರುಗನ್ನು ಕವಿ ದಿ. ಎಸ್. ಡಿ. ಇಂಚಲರು ನೀಡಿದರು" ಎಂದು ಸಿ. ಡಿ. ಎಲಿಗಾರ ಅವರು ಇಂಚಲರ ಕಾರ್ಯಗಳನ್ನು ಬಣ್ಣಿಸಿದ್ದಾರೆ.

- "ಸುಲಭ ಶೈಲಿಯ ದೃಷ್ಟಿಯಿಂದ, ಭಾವಾವೇಶದ ದೃಷ್ಟಿಯಿಂದ, ವಿಷಯ ವೈವಿಧ್ಯದ ದೃಷ್ಟಿಯಿಂದ, ನಾದ ಮಾಧುರ್ಯದ ದೃಷ್ಟಿಯಿಂದ ಇಂಚಲ ಅವರ ಕವನಗಳು

ಮನೋನುರಾಗವನ್ನು ಉಂಟು ಮಾಡತಕ್ಕಂಥವುಗಳಾಗಿವೆ. ಅವರೊಬ್ಬ ಸಹಜ ಕವಿ" ಎಂದು ಡಾ. ಡಿ. ಎಸ್. ಕರ್ಕಿ ನುಡಿದಿದ್ದಾರೆ.

## ಎಸ್. ಡಿ. ಇಂಚಲ ಅವರ ಜೀವನ ವಿವರ

ಜನನ : ೧೯೧೩ (೧-೪-೧೯೧೩) ಹಿರೇಬಾಗೇವಾಡಿಯಲ್ಲಿ, ಬೆಳಗಾವಿ ಜಿಲ್ಲೆ

ತಂದೆ-ತಾಯಿ : ದೇಮಪ್ಪ – ಬಸವಂತವ್ವ

**ಮುಲ್ಕಿ ಪರೀಕ್ಷೆ** : ೧೯೨೬ ಪ್ರಥಮ ಶ್ರೇಣಿಯಲ್ಲಿ

**ಹೈಸ್ಕೂಲು** : ಎಂ. ಕೆ. ಹುಬ್ಬಳ್ಳಿ, ಧಾರವಾಡ

**ಕವನ ರಚನೆ** : ೧೯೩೧-೩೨

**ನಾಡಹಬ್ಬ ಆಚರಣೆ** : ೧೯೩೪ ಬೆಳಗಾವಿಯಲ್ಲಿ, ಶಿ. ಶಿ. ಬಸವನಾಳರ ಮಾರ್ಗದರ್ಶನದಲ್ಲಿ.

**ಅಧ್ಯಯನ** : ರಾಜಾರಾಮ ಕಾಲೇಜ್, ಕೊಲ್ಲಾಪುರ ೧೯೩೨-೩೪

ಬಿ. ಎ. : ೧೯೩೮ ಲಿಂಗರಾಜ ಕಾಲೇಜಿನಿಂದ (ಬೆಳಗಾವಿ)

**ಶಿಕ್ಷಕ** : ಬೆಳಗಾವಿಯ ಗಿಲಗಂಚಿ ಅರಟಾಳ ಹೈಸ್ಕೂಲಿನಲ್ಲಿ ೧೯೩೮.

**ಕಿರಿಯರ ಬಳಗ** : ಸಂಘಟನೆ (೧೯೪೩-೫೦) ಪ್ರಾರಂಭ ಹಾಗೂ ಕಾರ್ಯ

**ಪ್ರಿನ್ಸಿಪಾಲ್** : ಕೆ. ಪಿ. ಟಿ. ಕಾಲೇಜ್, ಬೆಳಗಾವಿ ಮತ್ತು ಕೆ. ಪಿ. ಟಿ. ಕಾಲೇಜ್, ಹುಬ್ಬಳ್ಳಿ. ೧೯೫೭ರಿಂದ ಗಿಲಗಂಚಿ ಅರಟಾಳ ಹೈಸ್ಕೂಲ ಪ್ರಿನ್ಸಿಪಾಲರು.

**ಪ್ರಥಮ ಕವನ ಸಂಕಲನ** : ತರಂಗಿಣಿ ೧೯೪೯ರಲ್ಲಿ ಪ್ರಕಟಿತ

**ನಿವೃತ್ತಿ** : ೧೯೭೪ (೧-೪-೧೯೭೪)

**ನಿಧನ** : ೧೯೭೪ (೭-೪-೧೯೭೪)

**ಭಾವಶ್ರೀ ಸಂಕಲನ** : ಮರಣೋತ್ತರ ಪ್ರಕಟಣೆ (ಇಂಚಲ ಸ್ಮಾರಕ ಸಮಿತಿ, ಬೆಳಗಾವಿ)

## ಕವಿ. ಎಸ್. ಡಿ. ಇಂಚಲ ಅವರ ಕೃತಿಗಳು

**ಕವನ ಸಂಕಲನ** : ತರಂಗಿಣಿ-೧೯೪೯, ಸ್ನೇಹ ಸೌರಭ-೧೯೫೬ ; ೧೯೬೮, ಡಿಂಡಿಮ ೧೯೬೫, ಭಾವಶ್ರೀ -೧೯೯೩, ಕಿತ್ತೂರ ಕ್ರಾಂತಿ- ೧೯೫೭ ಜಾಪನದ ಗೀತೆಗಳು, ಮಹಾಂತ ಮಹಿಮೆ- ೧೯೭೦,

**ಶಿಶುಗೀತೆಗಳ ಸಂಕಲನ** : ಬಣ್ಣದ ಚೆಂಡು- ೧೯೬೮.

**ಸಂಪಾದನೆ** : ಕರ್ನಾಟಕ ದರ್ಶನ- ೧೯೫೬.

# ಬೀChi (ಬೀಚಿ)

ಆಧುನಿಕ ಕನ್ನಡ ಸಾಹಿತ್ಯದಲ್ಲಿ 'ಹಾಸ್ಯ ಚಕ್ರವರ್ತಿ' ಎಂದೇ ಗುರುತಿಸಲ್ಪಡುವ ಬೀಚಿ ಅವರು ಕಾದಂಬರಿ, ನಾಟಕ, ಕಥೆ, ಹರಟೆಗಳು, ಚುಟುಕು (ಗದ್ಯ ಮತ್ತು ಪದ್ಯಗಳಲ್ಲಿ) ರಚಿಸಿ ಅಮರರಾಗಿದ್ದಾರೆ. ರಾಯಸಂ ಭೀಮಸೇನ ರಾವ್ ಬೀಚಿಯವರ ಹೆಸರು. ಬೀಚಿ ಅವರ ಕಾವ್ಯನಾಮ. ಅದನ್ನು 'ಬೀChi' ಎಂದು ಬರೆಯುತ್ತಿದ್ದರು.

೧೯೧೩ರಲ್ಲಿ (೨೩-೪-೧೯೧೩) ಜನಿಸಿದ ಬೀಚಿಯವರಿಗೆ, ಜನಿಸಿದ ಕೂಡಲೇ ತಂದೆ ಶ್ರೀನಿವಾಸರಾಯರನ್ನು ಕಳೆದುಕೊಂಡು ಪಡಬಾರದ ಕಷ್ಟಗಳನ್ನು ಧೈರ್ಯದಿಂದ ಎದುರಿಸಿ ಬಾಳಬೇಕಾಯಿತು. ಕೆಲ ಸಮಯದಲ್ಲಿಯೇ ತಾಯಿ ಭಾರತಮ್ಮನನ್ನು ಕಳೆದುಕೊಂಡು ಅನಾಥರಾದರು. ಬಡವಳಾದ ಸೋದರತ್ತೆ ಹೇಗೋ ಬಾಲಕ ಬೀಚಿ ಅವರನ್ನು ಸಾಕಿದರು. ಸೋದರಮಾವ ಅರ್ಚಕರಾಗಿದ್ದರು. ಬೀಚಿಯ ಅಣ್ಣ ಹಯವದನ, ವಾರಾನ್ನ ಉಂಡು ಬೆಳೆದನು. ಅಕ್ಕ ಲಕ್ಷ್ಮೀ ಹುಟ್ಟಿದಾಗ ಬೀಚಿ ಅವರ ತಂದೆಗೆ ಶ್ರೀಮಂತಿಕೆ ಬಂದು ಪ್ರತಿಷ್ಠೆ ದಯಪಾಲಿಸಿತ್ತಂತೆ ! ಇವರ ಊರು ಹರಪನಹಳ್ಳಿ.

ಬಾಲಕ ಬೀಚಿಗೆ ಮನೆಯ ಊಟ ಹೇಗೋ (ತಂಗಳನ್ನ) ದೊರೆಯುತ್ತಿತ್ತು. ಆದರೆ ಒಂದೂಕಾಲು ರೂಪಾಯಿ ಶಾಲೆಯ ಫೀಗಾಗಿ ಮನೆಮನೆಗೆ ಹೋಗಿ, ಭಿಕ್ಷೆ ಬೇಡಿ ಸಂಗ್ರಹ ಮಾಡಬೇಕಾಗುತ್ತಿತ್ತು. "ಅಂತೂ ಇಂತೂ ತೆಲುಗು ಶಾಲೆಯಲ್ಲಿ ಎಸ್.ಎಸ್.ಸಿ ಓದಿ ಪಾಸಾದ ನಾನು ಲೇಖಕನಾದ ಮೇಲೆಯೇ ಕನ್ನಡ ಕಲಿತೆ" ಎಂದು ತಮಾಷೆಯಾಗಿ ಹೇಳಿದ ಬೀಚಿಯವರು ನಿಜವಾಗಿಯೂ ಹರಪನಹಳ್ಳಿಯಲ್ಲಿ. ೧೯೩೦ರಲ್ಲಿ ಎಸ್.ಎಸ್.ಸಿ. ಪಾಸಾದ ಮೇಲೆಯೇ ಕನ್ನಡ ಓದಲು ಬರೆಯಲು ಕಲಿತರು. ಹೊಟ್ಟೆಯ ಪಾಡಿಗಾಗಿ ನೌಕರಿಯಲ್ಲಿ ಸೇರಿಕೊಳ್ಳಲೇಬೇಕಾಗಿತ್ತು. ಕೆಲಕಾಲ ಹುಬ್ಬಳ್ಳಿಯಲ್ಲಿ ಜೀವ ವಿಮಾ ಕಚೇರಿಯಲ್ಲಿ ಕೆಲಸ ಮಾಡಿದರು. ೧೯೩೧ರಲ್ಲಿ ಪೊಲೀಸ್ ಇಲಾಖೆಯಲ್ಲಿ ಅಟೆಂಡರ್ ಎಂದು ನೇಮಕಗೊಂಡರು. ಬಳ್ಳಾರಿ, ಮದ್ರಾಸ್, ಬೆಂಗಳೂರುಗಳಲ್ಲಿ ಸೇವೆ ಸಲ್ಲಿಸಿ ಸೂಪರಿಟೆಂಡೆಂಟ್ ಆಗಿ ೧೯೬೮ರಲ್ಲಿ ನಿವೃತ್ತರಾದರು. ನೌಕರಿಯೊಡನೆ ಲೇಖನ ಕಾರ್ಯವನ್ನು ಪ್ರಾರಂಭಿಸಿದರು. ಅವರ ಮೊದಲ ಲೇಖನವು ೧೯೩೩ರಲ್ಲಿ ಪ್ರಜಾಮತ (ಮದ್ರಾಸ್)ದಲ್ಲಿ ಮುದ್ರಣಗೊಂಡಿತು.

೧೯೩೩ರಲ್ಲಿ ಜಮಖಂಡಿಯ ಶ್ರೀನಿವಾಸಾಚಾರ್ಯರ ಮಗಳು ಸೀತಾಬಾಯಿಯೊಡನೆ ವಿವಾಹ ಜರುಗಿತು. ಕಟ್ಟುನಿಟ್ಟಿನ ಪರಂಪರಾಪ್ರಿಯ ಕುಟುಂಬದಿಂದ ಬಂದ ಸೀತಾಬಾಯಿ ಅವರು ಗಂಡನ ಮನೆಯಲ್ಲಿಯೂ ತಮ್ಮ ದೇವತಾಕಾರ್ಯ, ನಿಯಮ, ನಿಷ್ಠೆಗಳನ್ನು ಬಿಡದೆ ನಡೆಸಿಕೊಂಡು ಹೋದರು. ಬೀಚಿಯವರಿಗೆ ಸ್ವತಃ ಇಂಥವುಗಳಲ್ಲಿ ವಿಶ್ವಾಸವಿಲ್ಲದಿದ್ದರೂ ಅವರು ಹೆಂಡತಿಯ ನಂಬುಗೆಯನ್ನು ಪ್ರಶ್ನಿಸುತ್ತಿರಲಿಲ್ಲ. ಒಂದೇ ಮನೆಯಲ್ಲಿ ಹೀಗಿದ್ದರೂ ಸರಾಗವಾಗಿ ನೆಮ್ಮದಿಯ ಬಾಳನ್ನು ಬಾಳಿದರು.

ಬೀಚಿಯವರಿಗೆ ಕನ್ನಡ ಸಾಹಿತ್ಯ ರಚನೆಯಲ್ಲಿ ಆಸಕ್ತಿ ಮೂಡಿ ತಮ್ಮ ವಿಶಿಷ್ಟ ವ್ಯಂಗ್ಯ ಶೈಲಿಯಿಂದ ಮುನ್ನಡೆಯಲು ಕಾರಣಕರ್ತರಾದವರು ಪರ್ಯಾಯವಾಗಿ ಅ.ನ.ಕೃ., ನೇರವಾಗಿ ಅವರ 'ಸಂಧ್ಯಾರಾಗ' ಕಾದಂಬರಿ ಎಂದರೆ ಆಶ್ಚರ್ಯವೆನಿಸಬಹುದು. ಆದರೆ ಇದು ಸತ್ಯ. ಇವರು ಓದಲೆಂದು ಒಬ್ಬ ಪುಸ್ತಕ ವ್ಯಾಪಾರಿಯಲ್ಲಿ ಯಾವುದಾದರೂ ಒಂದು ಕನ್ನಡ ಪುಸ್ತಕ ಕೊಡು ಎಂದು ಕೇಳಿದಾಗ ಜನಪ್ರಿಯವಾಗಿದ್ದ 'ಸಂಧ್ಯಾರಾಗ' ಕಾದಂಬರಿಯನ್ನು ಇವರಿಗೆ ಕೊಟ್ಟ. ಕನ್ನಡ ಸಾಹಿತ್ಯಕ್ಕೆ ಆ ವ್ಯಾಪಾರಿ ಮಾಡಿದ ಪುಣ್ಯವನ್ನು ಎಲ್ಲರೂ ಸ್ಮರಿಸಬೇಕು. ಅದರ ಪರಿಣಾಮವಾಗಿ ಬೀಚಿಯಂಥ ಪ್ರತಿಭಾವಂತ, ಕನ್ನಡ ಸಾಹಿತ್ಯ ರಚನೆಗೆ ಮನಸ್ಸು ಮಾಡಿದ್ದು ಒಂದು ವರವಾಗಿ ಪರಿಣಮಿಸಿತು. ಮುಂದೆ ಅನಕೃ ಬೀಚಿಯವರ ಗುರುಗಳಾಗಿ, ಮಿತ್ರರಾಗಿ, ಆತ್ಮೀಯರಾಗಿ ಪ್ರೋತ್ಸಾಹಿಸಿದರು. ಹುಟ್ಟು ಹಾಸ್ಯಗಾರರಾದ ಬೀಚಿಯವರಿಗೆ ಹಾಸ್ಯ ಲೇಖಕನಾಗುವುದು ಬಹಳ ಸುಲಭ ಸಾಧ್ಯವಾಯಿತು. ಅವರ ವಿಶಾಲವಾದ ಅನುಭವ, ಭಾಷಾ ಪ್ರೌಢಿಮೆ, ಪ್ರತಿಭೆ ಮತ್ತು ವಿಶಿಷ್ಟ ಹಾಸ್ಯ ಶೈಲಿ ಅವರಿಗೆ ತಾವಾಗಿಯೇ ದೊರೆತು ಬಂದುವು. ಇದರೊಡನೆ ಅವರ ಇಂಗ್ಲಿಷ್ ಪುಸ್ತಕಗಳ ವಾಚನವಂತೂ ಅವರ ಹಾಸ್ಯ ಪ್ರಜ್ಞೆಗೆ ಸಾಕಷ್ಟು ಸಂದರ್ಭಗಳನ್ನು, ವಿಚಾರಗಳನ್ನು ಒದಗಿಸಿತು. ಟಾಲ್‌ಸ್ಟಾಯ್, ಆಸ್ಕರ್‌ವೈಲ್ಡ್ ಜೋಲಾ, ಡಾ. ರಾಧಾಕೃಷ್ಣನ್, ಇಬ್ಸನ್ ವಾಲ್ಡನ್, ವುಡ್‌ಹೌಸ್ ಇವರು ಮೆಚ್ಚಿನ ಸಾಹಿತಿಗಳು.

ಬೀಚಿಯವರ ನಾಲಿಗೆಯಷ್ಟೇ ಅವರ ಲೇಖನಿಯೂ ಜೋಕು, ವಿನೋದ, ವ್ಯಂಗ್ಯ ಕಟು ಉಕ್ತಿಗಳಿಂದ ಚುರುಕಾಗಿತ್ತು. ಇಂಗ್ಲಿಷ್‌ನಿಂದ ಎರವಲಾಗಿ ಪಡೆದ ಆ ಜೋಕುಗಳನ್ನು ಸ್ವಾಭಾವಿಕ ಕನ್ನಡ ಪರಿಸರದಲ್ಲಿ ನಮ್ಮದೇ ಜೋಕು ಎನ್ನುವಂತೆ ವರ್ಣಿಸುವುದು, ಬರೆಯುವುದು, ನಗಿಸಿ ನಲಿಯುವುದು ಅವರ ವೈಶಿಷ್ಟ್ಯ. ಅವರ ಮೊದಲ ಕೃತಿ ರೇಡಿಯೋ ನಾಟಕಗಳು ಪ್ರಕಟವಾದದ್ದು ೧೯೪೬ರಲ್ಲಿ. ಅನಂತರ ಅವರ ಪ್ರಕಟಣಾ ಕಾರ್ಯವು ಲೇಖನ ಕಾರ್ಯವನ್ನು ಅನುಸರಿಸಿ, ನಿರರ್ಗಳವಾಗಿ, ನಿರ್ವಿಘ್ನವಾಗಿ ತಮ್ಮ ಜೀವನದ ಕೊನೆಯುಸಿರೆಳೆಯುವ ವರೆಗೂ ನಡೆದೇ ಇತ್ತು. ಐವತ್ತಕ್ಕೂ ಹೆಚ್ಚು ಕೃತಿಗಳನ್ನು ನೀಡಿದ ಬೀಚಿಯವರ ಕೆಲವು ಕೃತಿಗಳು ಪುನರ್ ಮುದ್ರಣವನ್ನು ಪಡೆದಿವೆ. ನಾ ಮುಂದು, ತಾ ಮುಂದು ಎಂದು ಪ್ರಕಾಶಕರು ಅವರ ಕೃತಿಗಳನ್ನು ಪ್ರಕಟಿಸಲು ಹಾತೊರೆಯುತ್ತಿದ್ದರು. ಬೆಳಗಾವಿಯಲ್ಲಿ ಮಿರ್ಜಿ ಅಣ್ಣಾರಾಯರ ಅಧ್ಯಕ್ಷತೆಯಲ್ಲಿ ಜರುಗಿದ ಬೀಚಿಯವರ ಅರವತ್ತನೇ ಹುಟ್ಟುಹಬ್ಬದ ಸನ್ಮಾನ ಸಮಾರಂಭದಲ್ಲಿ ಪ್ರಕಟಿಸಲ್ಪಟ್ಟ 'ತಿಂಮಾಯಣ'

ಗ್ರಂಥದಲ್ಲಿ ಅವರ ಕೃತಿಗಳ ಪ್ರಕಟಣೆಯ ಸಂಪೂರ್ಣ ವಿವರಗಳನ್ನು ಪಟ್ಟಿ ಮಾಡಲಾಗಿದೆ. ಅದರಿಂದ ಗ್ರಂಥ ಪ್ರಕಾಶಕ, ಪ್ರಕಟಣೆ, ವರ್ಷಗಳು ತಿಳಿದು ಬರುವುದಲ್ಲದೆ ಯಾವ ಪ್ರಕಾಶಕರು ಎಷ್ಟು ಕೃತಿಗಳನ್ನು ಪ್ರಕಟಿಸಿದ್ದಾರೆ ಎಂಬುದೂ ವಿದಿತವಾಗುತ್ತದೆ.

'ತಿಂಮ'ನನ್ನು ಬೀಚಿಯವರು ಕನ್ನಡ ಸಾಹಿತ್ಯಕ್ಕೆ ಕೊಟ್ಟು ಮಹದುಪಕಾರ ಮಾಡಿದ್ದಾರೆ. 'ತಿಂಮ'ನಂಥ ಒಂದು ಸಾಹಿತ್ಯ ಸೃಷ್ಟಿಯನ್ನು ಒದಗಿಸಬೇಕೆಂಬ ವಿಚಾರ ಅವರು ಇಂಗ್ಲಿಷ್ ಸಾಹಿತ್ಯ ಅಭ್ಯಾಸ ಮಾಡುತ್ತಿದ್ದಾಗ ಬಂದದ್ದು ಕನ್ನಡಿಗರ ಭಾಗ್ಯ. ಅವರ ಹಲವು ಕೃತಿಗಳಲ್ಲಿ ಗೋಚರಿಸುವ "ತಿಂಮನ ನಗು ದೇಹವಾದರೆ, ಆ ನಗುವಿನ ಹಿಂದೆ ಹುದುಗಿಕೊಂಡಿರುವ ನೋವೇ ಜೀವ. ಅದನ್ನು ಗುರುತಿಸದಿದ್ದರೆ ದೊರೆಯುವುದು ತಿಂಮನ ಹೆಣ ಮಾತ್ರ" ಎಂದು ಬೀಚಿ ಹೇಳಿದ್ದಾರೆ. ತಿಂಮನ ಮುಖಾಂತರ ತಮ್ಮನ್ನು ತಾವೇ ಅರಿತುಕೊಳ್ಳಲು ಮಾಡಿದ ಪ್ರಯತ್ನ ಶ್ಲಾಘನೀಯವಾಗಿದೆ. ಒಂದು ಸಂದರ್ಭದಲ್ಲಿ ಬೀಚಿ ಅವರು ಸ್ವ-ಸಂದರ್ಶನ 'ತಿಂಮ'ನೊಡನೆ ಹೀಗೆ ಮಾಡಿಕೊಂಡಿದ್ದಾರೆ. ತೂಗಿ ನೋಡಿಕೊಂಡಿದ್ದಾರೆ.

ತಿಂಮ : ತಾವು ಚಿಕ್ಕವರಾಗಿ ಕಾಣುತ್ತಿರುವಿರಿ?

ಬೀಚಿ : ಅಹುದು ತಿಂಮ! ಇದೇ ನನ್ನ ವೈಶಿಷ್ಟ್ಯ ತಿಳಿಯಿತೇ ? ನಾನು ನಿಜವಾಗಿ ಯಾವುದು ಅಲ್ಲವೋ ಅದಾಗಿಯೇ ಕಾಣುತ್ತೇನೆ. ಸಾಕಷ್ಟು ವಯಸ್ಸಾಗಿದೆ. ಚಿಕ್ಕವನಾಗಿ ಕಾಣುತ್ತೇನೆ.

ತಿಂಮ : ಹಾಗಾದರೆ ಬರವಣಿಗೆಯಲ್ಲಿ ಕನ್ನಡ ಪಂಡಿತರಂತೆ ಕಾಣುತ್ತೀರಲ್ಲ ?

ಬೀಚಿ : ಅದೂ ಅಷ್ಟೆ. ನನ್ನ ಕನ್ನಡ ಪಾಂಡಿತ್ಯವೂ ಅಷ್ಟಕ್ಕಷ್ಟೆ.

ತಿಂಮ : ಅನುಗಾಲವೂ ಆನಂದದಲ್ಲಿ ಇರುವಂತೆ ಕಾಣುತ್ತೀರಿ ನೀವು ?

ಬೀಚಿ : ಒಳಗಿನ ದುಃಖವನ್ನು ಮುಚ್ಚಿಕೊಳ್ಳಲಿಕ್ಕೆ. ಇನ್ನೂ ಹೇಗೆ ಕಾಣುತ್ತೇನೆ ಹೇಳಿಬಿಡೋ ?

ತಿಂಮ : (ಕೊಂಚ ಭಯದಿಂದ) ತಾವು ಕೋಪ ಮಾಡಿಕೊಳ್ಳುತ್ತಿರೋ ಏನೋ?

ಬೀಚಿ : (ಜಂಭದಿಂದ) ಇಲ್ಲ ಇಲ್ಲ. ಹೇಳಿ ಬಿಡೋ ತಿಂಮಾ ನೋಡೋಣ. ನನಗೆಲ್ಲಿಯ ಕೋಪವೊ ?

ತಿಂಮ : ನೋಡಿದರೆ ಸಂಪನ್ನರಂತೆ ಕಾಣುತ್ತೀರಿ.

ಬೀಚಿ : (ಕಿಡಿಕಿಡಿಯಾಗಿ) ಮುಚ್ಕೋ ಬಾಯಿ ! ಅವಿವೇಕಿ ! ಮೂರ್ಖ.

ಬೀಚಿಯವರ 'ದಾಸಕೂಟ' ಕಾದಂಬರಿಯನ್ನು ಜಗತ್ತಿನಲ್ಲಿಯ ಮೊದಲನೆಯ ಹಾಸ್ಯ ಪ್ರಧಾನ ಕಾದಂಬರಿ ಎಂದರೆ ತಪ್ಪಾಗಲಿಕ್ಕಿಲ್ಲ. ದಾಸಕೂಟದ ಪಾತ್ರಗಳ ಮೂಲಕ ನಮ್ಮ ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ಜೀವನವನ್ನು ತೀಕ್ಷ್ಣವಾಗಿ ಬೀಚಿ ಪರಿಶೀಲಿಸಿದ್ದಾರೆ. ಬ್ರಿಟಿಷರ ದಾಸರಾದ ಭಾರತೀಯರ ಜೀವನ ಇದರಲ್ಲಿದೆ.

ಬೀಚಿಯವರ 'ಸತೀಸೂಳೆ'ಯು ಮನೆಯ ಹೆಂಡಂದಿರು ಸೂಳೆತನಕ್ಕೆ ಇಳಿಯಬೇಕಾದ ಸಾಮಾಜಿಕ ಹೀನ ಸ್ಥಿತಿಯನ್ನು ಚಿತ್ರಿಸುತ್ತದೆ.

'ಸುಬ್ಬಿ' ಜೀವನ ಚರಿತ್ರೆಯೆಂಬಂತೆ ತೋರಿಬಂದರೂ ಕಾದಂಬರಿಯ ಎಲ್ಲ ಲಕ್ಷಣಗಳಿಂದ ಕೂಡಿ ಬಂದಿದೆ. ಆದುದರಿಂದ ಅದು ವಾಸ್ತವತೆ ಹೆಚ್ಚು ಕಾಣುವ, ಕಲ್ಪನೆ ಕಡಿಮೆ ಕಾಣುವ, ಬೀಚಿಯವರ ಕಾದಂಬರಿಯಾಗಿದೆ.

'ಸರಸ್ವತಿ ಸಂಹಾರ', 'ಖಾದಿಸೀರೆ', 'ದೇವನ ಹೆಂಡ', 'ಏರದ ಬಳೆ', 'ಮೋಡಮ್ಮನ ಗಂಡ', 'ಆರಿದ ಚಹಾ', 'ಬಿತ್ತಿದ್ದೇ ಬೇವು' ಮೊದಲಾದ ಮೂವತ್ತಕ್ಕೂ ಹೆಚ್ಚು ಕಾದಂಬರಿಗಳನ್ನು ರಚಿಸಿ, ಹಲವಾರು ವೈವಿಧ್ಯಪೂರ್ಣ ಪಾತ್ರಗಳನ್ನು ನಮಗೆ ಕೊಟ್ಟಿದ್ದಾರೆ.

'ಅಮ್ಮಾವ್ರ ಕಾಲ್ಗುಣ' ಬೀಚಿಯವರ ಸರಸ ಹಾಸ್ಯ ಶೈಲಿಯಲ್ಲಿ ಬರೆದ ಇಪ್ಪತ್ತೊಂದು ಕಥೆಗಳ ಸಂಕಲನ. 'ಹನ್ನೊಂದನೆಯ ಅವತಾರ' ಮತ್ತು 'ರೇಡಿಯೋ ನಾಟಕಗಳು' ಬೀಚಿಯವರ ಸುಪ್ರಸಿದ್ಧ ನಾಟಕಗಳು. ಇಂದಿನ ದೇಶಭಕ್ತ (ದೇಭ) ಹನ್ನೊಂದನೆಯ ಅವತಾರವಾಗಿದ್ದಾನೆ ಎಂಬುದನ್ನು ಆ ನಾಟಕದಲ್ಲಿ ವ್ಯಂಗ್ಯವಾಗಿ ನಿರೂಪಿಸಲಾಗಿದೆ.

ಬೀಚಿಯವರ ಹಾಸ್ಯ ಬರಹಗಳು (ಚುಟುಕು, ನಗೆಹನಿ, ತಿಂಮ ದರ್ಶನ, ಹರಟೆಗಳು ಇತ್ಯಾದಿ) ನಮಗೆ ಅವರ ನಿಜವಾದ ದರ್ಶನ ಮಾಡಿಸುತ್ತವೆ. ಅವರ ಎಲ್ಲ ಕೃತಿಗಳಲ್ಲಿಯೂ ಅವರು ತಮ್ಮ ಮಾತಿನ ಓಘದಲ್ಲಿ ಸೆಳೆದುಕೊಂಡು ಹೋಗುತ್ತಿರುವುದು ಕಂಡುಬರುತ್ತದೆ. ವಸ್ತು ಅಥವಾ ವಿಷಯಕ್ಕಿಂತ ಅವರ ರಚನೆಗಳಲ್ಲಿ ಮಾತಿಗೆ ಮೊದಲ ಮಣೆ. ಬಹುಶಃ ಅವರ ಪ್ರಬಂಧದ ಬರವಣಿಗೆಯ ವೈಶಿಷ್ಟ್ಯವೇ ಇದಾಗಿದೆ. 'ಸ್ವಂತ ಸುಳ್ಳುಗಾರರು', 'ಆ ದಡ ಕಂಡವರು', 'ನರಸಿಂಹ', 'ಪಂಚ-ಷಷ್ಠಿ', 'ಕಸಾಸ ನಾಟಕಂ' – ಇವು ಕೆಲವು ಉತ್ತಮ ಪ್ರಬಂಧಗಳು.

ಒಂದೇ ಸವನೆ ನಡೆಯುತ್ತಿದ್ದ ಅವರ ಬರವಣಿಗೆಗೆ ವಿಶ್ರಾಂತಿ ಇರಲಿಲ್ಲ. ಪೊಲೀಸ್ ಖಾತೆ ಅದಕ್ಕೆ ಅಡ್ಡಿಯೊಡ್ಡಲಿಲ್ಲ. ಬದಲಾಗಿ ಅವರ ಬರವಣಿಗೆಗೆ ಅನುಭವದ ಆಳ ಮತ್ತು ವಿಸ್ತಾರ ಒದಗಿಸಿತು. ಪೆನ್ಶನ್ ಪಡೆದು ಬೆಂಗಳೂರಿನಲ್ಲಿಯೇ ವಾಸಿಸಿ ಬರವಣಿಗೆ ಮುಂದುವರಿಸಿದರು. ಸುಖ ಸಂಸಾರದಲ್ಲಿದ್ದು 'ತಿಂಮನ ತಲೆ'ಗೆ ಪ್ರಶಸ್ತಿ (ಮದ್ರಾಸ್ ಸರಕಾರದ) ಪಡೆದರು.

ಮಿರ್ಜಿ ಅಣ್ಣಾರಾಯರ ಅಧ್ಯಕ್ಷತೆಯಲ್ಲಿ ರಚಿತವಾದ ಬೀಚಿ ಸತ್ಕಾರ ಸಮಿತಿಯಿಂದ ೧೯-೯-೧೯೭೨ರಂದು ಬೆಳಗಾವಿ ನಾಗರಿಕರ ಪರವಾಗಿ ಬೀಚಿ ಅವರನ್ನು ಸತ್ಕರಿಸಲಾಯಿತು. 'ತಿಂಮಾಯಣ' ಸಂಭಾವನಾ ಗ್ರಂಥವನ್ನು ಕೃಷ್ಣಮೂರ್ತಿ ಪುರಾಣಿಕ ಅವರು ಬಿಡುಗಡೆ ಮಾಡಿದರು. ಸಮಾರಂಭಕ್ಕೆ ಸಿದ್ಧಯ್ಯ ಪುರಾಣಿಕ ಮುಖ್ಯ ಅತಿಥಿಗಳಾಗಿದ್ದರು.

ತಮ್ಮ ವೈಶಿಷ್ಟ್ಯಪೂರ್ಣ ರಚನೆಗಳಿಂದ ಕನ್ನಡಿಗರ ಹೃದಯದಲ್ಲಿ ಹಾಸ್ಯ ಲೇಖಕರಾಗಿ ಮನೆ ಮಾಡಿ ೧೯೮೦ರಲ್ಲಿ (೭-೧೨-೧೯೮೦) ಬೀಚಿ ಮರಣವನ್ನಪ್ಪಿದರು.

ಬೀಚಿಯವರ ಹಾಗೂ ಅವರ ಸಾಹಿತ್ಯ –ಜೀವನದ ಬಗ್ಗೆ ಬೇರೆಯವರ ಕೆಲವು ಹೇಳಿಕೆಗಳು ಹೀಗಿವೆ :

- "ಬಹುಶಃ ಇವರ ಹುಡುಕುಗಣ್ಣು, ಚುಚ್ಚುಮಾತು, ರಝಾಡಿಸುವ ಮನೋಧರ್ಮ ಇವೆಲ್ಲ ಬಹುಮಟ್ಟಿಗೆ ಆ ಡಿಪಾರ್ಟ್‌ಮೆಂಟ್‌ನ (ಪೋಲೀಸ್) ಪ್ರಸಾದ ಎನಿಸುತ್ತದೆ" ಎಂದು ಅ. ರಾ. ಮಿತ್ರ ಅಭಿಪ್ರಾಯ ಪಡುತ್ತಾರೆ.

- "ಜೈಲೊಂದನ್ನು ಬಿಟ್ಟು ಸಂಪನ್ನ ಕಳ್ಳರು ಎಲ್ಲೆಲ್ಲಿಯೂ ಇದ್ದಾರೆ. ಅಧಿಕಾರದ ಗಾದಿಗಳ ಮೇಲೆ ಮಾನ್ಯರಾಗಿ ಕುಳಿತಿದ್ದಾರೆ. ಮಠಪೀಠಗಳಲ್ಲಿ ಸನ್ಯಾಸಿ ಸ್ವಾಮಿಗಳಾಗಿ ಪವಡಿಸಿದ್ದಾರೆ. ಸಮಾಜ ಸೇವಕರಾಗಿ, ದೇಶಭಕ್ತರಾಗಿ ಪ್ರಜಾಮಿತ್ರರಾಗಿ, ಜ್ಞಾನೋಪಾಸಕರಾಗಿ ಇದ್ದಾರೆ. ಸಿಕ್ಕಿ ಬೀಳುವ ಕಳ್ಳರು ದಡ್ಡ ಕಳ್ಳರು. ದಡ್ಡರನ್ನು ತಿಂದು ಜಾಣರು ಬದುಕುತ್ತಿದ್ದಾರೆ", ಎಂದು 'ಸಂಪನ್ನರಿದ್ದಾರೆ ಎಚ್ಚರಿಕೆ' ಎಂಬ ಕೃತಿಯಲ್ಲಿ ಬೀಚಿ ಬರೆದ ಮಾತುಗಳಿವು.

- "ತನ್ನನ್ನು ತಾನೇ ರೂಪಿಸಿಕೊಂಡ ಅಪೂರ್ವ 'ಸ್ವಯಂಭೂ' ವ್ಯಕ್ತಿತ್ವ ಬೀಚಿ ವೈಶಿಷ್ಟ್ಯ. ಪಂಥ ಪಕ್ಷಕ್ಕಾಗಿ ತನ್ನ ಮಾರಿಕೊಳ್ಳಲು ಸಿದ್ಧರಿಲ್ಲದ ಬೀಚಿಗಳು ಬಹಳ ಸ್ವಲ್ಪ" ಎಂದು ಶಂ. ಬಾ. ಜೋಶಿ ನುಡಿದಿದ್ದಾರೆ.

- "ನಗೆಗಡಲ ಮಧ್ಯದಲ್ಲಿ ಸಾಹಿತ್ಯ ದೋಣಿ ಹಾಯಿಸುವುದು ಕಷ್ಟದ ಕೆಲಸ. ಈ ಕೆಲಸವನ್ನು ಬೀಚಿ ಮಾಡುತ್ತಿದ್ದಾರೆ" ಎಂದು ಕೃಷ್ಣಮೂರ್ತಿ ಪುರಾಣಿಕ ಹೇಳಿದ್ದಾರೆ.

- "ಬೀಚಿಯವರು ತಿಂಮನಂಥ ಒಬ್ಬ ವ್ಯಕ್ತಿಯನ್ನು ಸೃಷ್ಟಿಸಿ ಒಂದು ಜನಾಂಗವನ್ನು ನಗಿಸಿದ್ದಾರೆ" ಎಂದು ಪಿ. ಲಂಕೇಶ್ ಅಭಿಪ್ರಾಯ ಪಟ್ಟಿದ್ದಾರೆ.

- "ಬೀಚಿಯವರ ಹುಟ್ಟು ನಗೆಗೆ ಮಾಸುವುದೆಂಬುದಿಲ್ಲ. ಅಳುವು ತುಂಬಿದ ಪ್ರಪಂಚದಲ್ಲಿ ನಗೆಯನ್ನು ಬೀರುವ ಸಾಹಿತಿಗಳಿದ್ದಷ್ಟೂ ನಾಡಿಗೆ ಕ್ಷೇಮವಿದೆ" ಎಂದು ವಿ. ಕೃ. ಗೋಕಾಕ ಸಾರಿದ್ದಾರೆ.

- "ಅಂದನಾ ತಿಂಮ"ದಲ್ಲಿಯ ಪ್ರತಿಯೊಂದು ಕವನದಲ್ಲಿಯೂ ಹಾಸ್ಯವಿದೆ... ಇದನ್ನು ಕಾವ್ಯವೆಂದು ಕರೆಯುವುದಕ್ಕಿಂತ ಕವನ ಸಂಗ್ರಹ ಎನ್ನುವುದೇ ಹೆಚ್ಚು ಸಮಂಜಸ" ಎಂದು ಕೃ. ಹ. ಇಟಗಿ ಬರೆದಿದ್ದಾರೆ.

- "ನಗಲಾರದವನ ಕತ್ತೆ ಎಂದೊಡೆ । ಅಗಸನಾ ಕತ್ತೆ ಅತ್ತಿತೋ ತಿಂಮ" -ಬೀಚಿ

- "ಗಂಡ ಹೆಂಡತಿ ಜಗಳ ಬೀದಿಗೆ ಬಂತೊಮ್ಮೆ !<br>ಕಂಡು ನಿಂತರು ಎಲ್ಲ, ಜಾಣೊಬ್ಬ ನುಡಿದ ॥<br>ಗಂಡ-ಹೆಂಡತಿ ಜಗಳ ಉಂಡು ಮಲಗುವ ತನಕ ।<br>ಉಂಡರೆ ಮುಗಿದೀತು, ಊಟವಿಲ್ಲದೆ ಜಗಳವ್ಹೋ ತಿಂಮ ॥ -ಬೀಚಿ

## ಬೀಚಿ ಅವರ ಜೀವನ ವಿವರ

ಜನನ : ೧೯೧೩ (೨೩-೪-೧೯೧೩). ಎಸ್.ಎಸ್.ಸಿ. : ೧೯೩೦,

**ನೌಕರಿಗೆ ಸೇರಿದ್ದು :** ೧೯೩೧ (ಪೊಲೀಸ್ ಇಲಾಖೆಯಲ್ಲಿ ಅಟೆಂಡರ್),

ಪ್ರಥಮ ಲೇಖನ ಮುದ್ರಣ : ೧೯೩೩ ಪ್ರಜಾಮತ (ಮದ್ರಾಸ್),

ಮದುವೆ : ೧೯೩೩ (ಜಮಖಂಡಿಯ ಶ್ರೀನಿವಾಸಾಚಾರ್ಯರ ಮಗಳು ಸೀತಾಬಾಯಿಯೊಡನೆ). ಪ್ರಥಮ ಸಂತಾನ : ೧೯೪೦.

ಪ್ರಥಮ ಪುಸ್ತಕ ಪ್ರಕಟನೆ : ೧೯೪೬ (ರೇಡಿಯೋ ನಾಟಕಗಳು),

ನೌಕರಿಯಲ್ಲಿ ಬಡ್ತಿ : ಸುಪರಿಂಟೆಂಡೆಂಟ್ ಸ್ಪೆಶಲ್ ಬ್ರ್ಯಾಂಚ್ (ಸಿಐಡಿ) ಬೆಂಗಳೂರು.

ನಿವೃತ್ತಿ : ೧೯೬೮,

ಸತ್ಕಾರ : ಬೆಳಗಾವಿ ನಾಗರಿಕರ ಪರವಾಗಿ, ಮಿರ್ಜಿ ಅಣ್ಣಾರಾಯರ ಅಧ್ಯಕ್ಷತೆಯಲ್ಲಿ (೧೯-೯-೧೯೭೨) 'ತಿಂಮಾಯಣ ಸಂಭಾವನಾ ಗ್ರಂಥ ಅರ್ಪಣೆ.

ಮರಣ : ೧೯೮೦ (೭-೧೨-೧೯೮೦).

## ಬೀಚಿ ಅವರ ಕೃತಿಗಳು :

**ಕಾದಂಬರಿ :** ದಾಸಕೂಟ (೧೯೫೦), ಸತೀಸೂಳೆ (೧೯೫೬), ಸರಸ್ವತಿ ಸಂಹಾರ (೧೯೫೭), ಖಾದಿ ಸೀರೆ (೧೯೫೭). ಸತ್ತವನು ಎದ್ದು ಬಂದಾಗ (೧೯೫೬), ಏರದ ಬಳೆ (೧೯೬೦), ಮೇಡಮ್ಮನ ಗಂಡ (೧೯೬೦), ಎಲ್ಲರೂ ಸಂಪನ್ನರೇ (೧೯೬೧), ಬ್ರಹ್ಮಚಾರಿಯ ಮಗ (೧೯೬೧), ಮೂರು ಹೆಣ್ಣು ಐದು ಜಡೆ (೧೯೬೨), ಕಮಲಮ್ಮನ ಕುಂಕುಮ ಬಲ (೧೯೬೩), ಮಹಾಯುದ್ಧ (೧೯೬೫), ಗರತಿಯ ಗುಟ್ಟು (೧೯೬೯), ಕಮಲೆಯ ಓಲೆಗಳು (೧೯೭೨). ದೇವರಿಲ್ಲದ ಗುಡಿ (೧೯೭೪) ಇತ್ಯಾದಿ.

**ನಾಟಕ :** ಹನ್ನೊಂದನೆಯ ಅವತಾರ (೧೯೫೧), ರೇಡಿಯೋ ನಾಟಕಗಳು (೧೯೪೬) ಇತ್ಯಾದಿ.

**ನಗೆಬರಹ :** ತಿಂಮನ ತಲೆ (೧೯೪೬), ಹುಚ್ಚು ಹುರುಳು (೧೯೫೧), ಚಿನ್ನದ ಕಸ (೧೯೫೯), ತಿಂಮರಸಾಯನ (೧೯೬೦), ಅಮ್ಮಾವ್ರ ಕಾಲ್ಗುಣ (೧೯೬೬), ಹೆಂಡತಿ ನಕ್ಕಾಗ (೧೯೬೮), ಸಂಪನ್ನರಿದ್ದಾರೆ ಎಚ್ಚರಿಕೆ (೧೯೬೯), ಕಾಮಂಣ (೧೯೬೯) ಇತ್ಯಾದಿ.

**ಇತರ :** ನನ್ನ ಭಯಾಗ್ರಫಿ (ಆತ್ಮಕಥನ) ೧೯೭೭, ಥರ್ಡ್‌ಕ್ಲಾಸ್ ವೇಟಿಂಗ್ ರೂಂ, ರವೀಂದ್ರ ದರ್ಶನ, ನಾಡಿಗೇರ್ ಇತ್ಯಾದಿ.

✵ ✵ ✵

# ಎನ್ಕೆ

'ಎನ್ಕೆ' ಎಂದೇ ಕನ್ನಡ ಸಾಹಿತ್ಯ ರಚನಾಕಾರರಲ್ಲಿ ಕೀರ್ತಿ ಗಳಿಸಿದ ಎನ್. ಕೆ. ಕುಲಕರ್ಣಿಯವರು ಹಲವು ಪ್ರಕಾರಗಳಲ್ಲಿ ಸಮರ್ಥ ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ. ಶಿಷ್ಟ ಓದುಗರಿಂದ, ವಿಶಿಷ್ಟ ಓದುಗರಿಂದ ಮತ್ತು ಸಾಮಾನ್ಯ ಓದುಗರಿಂದ ಪ್ರೀತಿಯನ್ನು ಸಂಪಾದಿಸಿದ್ದಾರೆ. ಆಕಾಶವಾಣಿ, ಪತ್ರಿಕೆಗಳು, ಗ್ರಂಥಗಳು ಮತ್ತು ಭಾಷಣಗಳು ಇವರ ಮಾಧ್ಯಮಗಳು. 'ಅಳುನುಂಗಿ ನಕ್ಕ', ನಕ್ಕು ಜನಮನ ನಲಿದಾಡಿಸಿದ ಈ ಹಿರಿಯ ಚೇತನ ಮುಂದಿನ ಹಲವು ಪೀಳಿಗೆಗಳಿಗೆ ಆದರ್ಶ ಸಾಹಿತ್ಯ ರಚನಾಕಾರರೆಂಬ ಮಾದರಿಗೆ ಪಾತ್ರರಾದವರು.

ಜ್ಞಾನವೃದ್ಧರಾಗಿ, ವಯೋವೃದ್ಧರಾಗಿ ಪರಿಪಕ್ವ ಬಾಳನ್ನು ಈಗ ಧಾರವಾಡದಲ್ಲಿ ಸಾಗಿಸುತ್ತಿದ್ದರೂ ಕರ್ನಾಟಕದ ಒಳಹೊರ ಭಾಗಗಳಲ್ಲಿ ಹಲವು ವರ್ಷ ಬಾಳಿ, ಅಲ್ಲಿಯ ಜನಜೀವನ, ನಡೆನುಡಿ, ಆಚಾರ-ವಿಚಾರ, ಭಾಷೆ-ಸಾಹಿತ್ಯಗಳ ರುಚಿ ಕಂಡವರು.

೧೯೧೩ರಲ್ಲಿ (೨೯-೮-೧೯೧೩) ಮುಳುಗುಂದ ಗ್ರಾಮದಲ್ಲಿ, ಕುಲಕರ್ಣಿ ಮನೆತನದಲ್ಲಿ ಎನ್ಕೆ ಅವರು ಜನಿಸಿದರು. ಬಾಲ್ಯದಲ್ಲಿ ತಾಯಿ, ತಂದೆಯನ್ನು ಕಳೆದುಕೊಂಡು ಅಕ್ಕ, ಅತ್ತಿಗೆಯರ ಆಶ್ರಯದಲ್ಲಿ ಬೆಳೆದರು. ಮೊದಲು ಈ ಸುಪ್ರಸಿದ್ಧ ಗ್ರಾಮವು ಧಾರವಾಡ ಜಿಲ್ಲೆಯಲ್ಲಿತ್ತು. ಇತ್ತೀಚೆಗೆ ಈ ಗ್ರಾಮ ನೂತನ ಗದಗ ಜಿಲ್ಲೆಯಲ್ಲಿ ಸಮಾವೇಶವಾಗಿದೆ. ತಮ್ಮ ಬಾಲ್ಯದೊಡನೆ ಪ್ರಾಥಮಿಕ ಶಿಕ್ಷಣವನ್ನು ತನ್ನ ಗ್ರಾಮದಲ್ಲಿಯೇ ಪಡೆದು ಪ್ರೌಢ ಶಿಕ್ಷಣಕ್ಕಾಗಿ ಗದಗಿಗೆ ಬಂದು, ಮುನಿಸಿಪಲ್ ಹೈಸ್ಕೂಲ್ ಸೇರಿದರು.

ಗದಗಿನ ಹೈಸ್ಕೂಲ್‌ನಲ್ಲಿದ್ದಾಗ ಇವರಿಗೆ ಸಂಸ್ಕೃತ ವಿಷಯದಲ್ಲಿ ಆಸಕ್ತಿ ಮೂಡಿಸಿದ ಗುರುಗಳು ಗುರಾಚಾರ್ಯ ಜೋಶಿ ಅವರು. ಅವರು ಪಂಡಿತ ಭೀಮಸೇನ ಜೋಶಿ ಅವರ ತಂದೆಯಾಗಿದ್ದರು. ತಂದೆ ಕೃಷ್ಣರಾಯರು ಪಿಡಬ್ಲ್ಯುಡಿ ಖಾತೆಯಲ್ಲಿ ನರಗುಂದ, ರೋಣ, ನವಲಗುಂದಗಳಲ್ಲಿ ಕೆಲಸ ಮಾಡಿ ಗದಗಿಗೆ ಬಂದು ಸ್ಥಾಯಿಕರಾದರು.

"ಮ್ಯಾಟ್ರಿಕ್ ಪರೀಕ್ಷೆ ಪಾಸಾಗಿ ಧಾರವಾಡಕ್ಕೆ ಬಂದು ಕರ್ನಾಟಕ ಕಾಲೇಜ್ ಸೇರಿದರು. ಇಂಟರ್ ಪರೀಕ್ಷೆಯಲ್ಲಿ ಪಾಸಾಗಿ ಬಿ. ಎ. ಪರೀಕ್ಷೆಗೆ ಸಂಸ್ಕೃತ ಮತ್ತು ಕನ್ನಡ ವಿಷಯಗಳನ್ನು ಆಯ್ದುಕೊಂಡರು. ಆಗ ಅವರಿಗೆ ಸಂಸ್ಕೃತ ಕಲಿಸಿದ ಪ್ರಾಧ್ಯಾಪಕರು

ಡಾ. ಶ್ರೀರಂಗರು (ಪ್ರೊ. ಆರ್. ವಿ. ಜಹಗೀರದಾರ). ಪ್ರೊ. ಎ. ಟಿ. ಸಾಸನೂರ ಅವರು ಕನ್ನಡ ಪ್ರಾಧ್ಯಾಪಕರು. ೧೯೩೬ರಲ್ಲಿ ವಿದ್ಯಾರಣ್ಯ ಪಾರಿತೋಷಕವನ್ನೂ ಗಳಿಸಿ ಮುಂಬಯಿ ವಿಶ್ವವಿದ್ಯಾಲಯದಿಂದ ಬಿ. ಎ. ಪದವಿ ಪಡೆದರು. ಎಂ. ಎ. ಪದವಿ ಅಭ್ಯಾಸಕ್ಕೆಂದು ಸಾಂಗ್ಲಿಗೆ ಹೋಗಿ ವಿಲಿಂಗ್ಡನ್ ಕಾಲೇಜ್ ಸೇರಿದರು. ಅಲ್ಲಿ ಡಾ. ರಂ. ಶ್ರೀ. ಮುಗಳಿಯವರು ಎನ್ಕೆ ಅವರ ಗುರುಗಳಾಗಿದ್ದರು. ಕನ್ನಡ ಮತ್ತು ಸಂಸ್ಕೃತ ವಿಷಯಗಳನ್ನು ಆಯ್ದುಕೊಂಡು ೧೯೩೮ರಲ್ಲಿ ಮುಂಬಯಿ ವಿಶ್ವವಿದ್ಯಾಲಯದಿಂದ ಎಂ. ಎ. ಪದವಿ ಗಳಿಸಿದರು. ಕಾಲೇಜಿನಲ್ಲಿದ್ದಾಗಲೇ ಇಲೆಕ್ಷನ್ ಎಂಬ ನಾಟಕ ರಚಿಸಿ ಜನಪ್ರಿಯರಾಗಿದ್ದರು. ಶಾಲೆಯಲ್ಲಿ ಕಲಿಯುತ್ತಿದ್ದಾಗಲೇ ಬೀಗರ ಹಾಡು, ಭೂಮದ ಹಾಡುಗಳನ್ನು ರಚಿಸಿದ್ದರು.

೧೯೩೫ರಲ್ಲಿ ಎನ್ಕೆ ಅವರ ಏಕಾಂಕ ನಾಟಕ 'ಇಲೆಕ್ಶನ್' ಪ್ರಕಟವಾಗಿ ಜನಪ್ರಿಯವಾಯಿತು. ೧೯೩೭ರಲ್ಲಿ ಕೊಲ್ಲಾಪುರ ರಾಜಾರಾಮ ಕಾಲೇಜಿನ ವಾರ್ಷಿಕ ಉತ್ಸವದಲ್ಲಿ ಮೊದಲ ದಿನ 'ಪ್ಯಾಲೇಸ್ ಥೇಟರ್'ನಲ್ಲಿ ಶಾಮರಾವ್ ರೋಹಿಡೇಕರ್ ಹಾಗೂ ಅವರ ಕನ್ನಡ ಕಾಲೇಜು ಸ್ನೇಹಿತರು ಎನ್ಕೆ ಅವರ 'ಇಲೆಕ್ಶನ್' ಏಕಾಂಕವನ್ನು ಯಶಸ್ವಿಯಾಗಿ ಪ್ರಯೋಗಿಸಿದರು. ಧಾರವಾಡದಲ್ಲಿ ಕೆ. ಇ. ಬೋರ್ಡ್ಸ್ ಹೈಸ್ಕೂಲ್‌ನಲ್ಲಿ ೧೯೪೦ರಿಂದ ೧೯೪೩ರ ವರೆಗೆ ಶಿಕ್ಷಕರಾಗಿ ಸೇವೆ ಸಲ್ಲಿಸುವ ಮೊದಲು ಗದಗಿನಲ್ಲಿ ವಿದ್ಯಾದಾನ ಸಮಿತಿ ಹೈಸ್ಕೂಲಿನಲ್ಲಿ ಒಂದು ವರ್ಷ ಮಾಸ್ತರರಾಗಿದ್ದರು. ಅನಂತರ ಬೆಳಗಾವಿಗೆ ಹೋಗಿ ಬಿ. ಟಿ. ಪಾಸು ಮಾಡಿ ಧಾರವಾಡಕ್ಕೆ ಬಂದು, ನೆಲೆಸಿದರು. ಧಾರವಾಡದ ಪರಿಸರ ಎನ್ಕೆ ಅವರಿಗೆ ಸಾಹಿತ್ಯ ರಚನೆಗೆ ಪ್ರೋತ್ಸಾಹದಾಯಕವಾಗಿತ್ತು. ಜೊತೆಗೆ ಬೇಂದ್ರೆ, ಗೋಕಾಕ, ಶ್ರೀರಂಗ, ಮುಗಳಿ, ಮಾಳವಾಡ, ಸಾಸನೂರ ಮೊದಲಾದವರ ಸ್ನೇಹ, ಸಹವಾಸ ಪ್ರಾಪ್ತವಾಗಿತ್ತು. ಕುಮಾರವ್ಯಾಸನ ಅಭ್ಯಾಸದಿಂದಾಗಿ ಭಕ್ತಿಮಾರ್ಗದ ಕಡೆಗೆ ಮನಸ್ಸು ಹರಿಯತೊಡಗಿತು. ಮಹರ್ಷಿ ಅರವಿಂದರ ತತ್ವಜ್ಞಾನ ಹಾಗೂ ಶಿಕ್ಷಣ ತತ್ವಗಳಿಂದ ಪ್ರಭಾವಿತರಾದರು.

ಆಗಿನ ಕಾಲದಲ್ಲಿ ಸಾಮಾನ್ಯವಾಗಿ ಹುಡುಗರು ಕಾಲೇಜ್ ಸೇರುವ ಮೊದಲೇ ಮದುವೆಯಾಗುತ್ತಿದ್ದರು. ಆಗ ಹೆಂಡತಿಯ ತಂದೆ (ಮಾವ)ಯ ಸಹಾಯದಿಂದ ಕಾಲೇಜ್ ಶಿಕ್ಷಣ ಪಡೆಯುವುದು ಸಾಮಾನ್ಯ ವಿಷಯವಾಗಿತ್ತು. ಎನ್ಕೆ ಅವರೂ ಈ ಪರಂಪರೆಯಲ್ಲಿ ಶಿಕ್ಷಣ ಮುಂದುವರಿಸಿದರಾದರೂ ಅವರಿಗೆ ಅದು ನುಂಗಲಾರದ ತುತ್ತಾಗಿತ್ತು. ಎನ್. ಕೆ. ಎಂಬುದು ಕೆಲವರಿಂದ ನೋವು, ಕಷ್ಟ ಎಂದು ವ್ಯಾಖ್ಯಾನಿಸಲಾಗಿದೆ. ಕಷ್ಟದ ಸರಮಾಲೆ ಹಾಕಿಕೊಂಡೇ ಬಾಲ್ಯದಿಂದ ಜೀವನವನ್ನು ಧೈರ್ಯದಿಂದ, ಸಮಚಿತ್ತಭಾವದಿಂದ ನಡೆಸಿಕೊಂಡು ಬಂದಿರುವುದರಲ್ಲಿ ಅವರ ಜೀವನ ಗುಟ್ಟು ಇದೆ ಎನ್ನಬಹುದು. ಒಂದು ವರ್ಷ ಕಲಿತು ಬಿ. ಟಿ. ಪದವಿ ಗಳಿಸಿದರು.

ಮೊದಲ ಹೆಂಡತಿ ತೀರಿ ಹೋದಾಗ ಎನ್ಕೆ ಅವರಿಗೆ ಬಹಳ ಬೇಸರವಾಯಿತು. ಬಾಳಿನಲ್ಲಿ ಅರ್ಥ ಕಾಣದೆ, ಮರಣಕ್ಕೆ ಶರಣು ಹೋಗಬೇಕೆಂದುಕೊಂಡರು. ಆದರೆ ಲೋಕವಾಣಿ ಪತ್ರಿಕೆ ಅವರಿಗೆ ಆಶ್ರಯ ಕೊಟ್ಟಿತು. ಅದರ ಸಂಪಾದಕರಾಗಿ ದುಡಿದರು. ಮನಸ್ಸಿಗೆ ಸ್ವಲ್ಪ ನೆಮ್ಮದಿಯುಂಟಾಯಿತು. ಆ ಮೊದಲು ಗದಗಿನಲ್ಲಿ, ಧಾರವಾಡದಲ್ಲಿ

ಕೆಲವು ವರ್ಷ ಶಿಕ್ಷಕರಾಗಿದ್ದರು. ಅನಂತರ ಆಕಾಶವಾಣಿ ಸೇರಿದರು. ಆಕಾಶವಾಣಿ 'ಎನ್ಕೆವಾಣಿ' ಆಯಿತೆಂದರೆ ತಪ್ಪಾಗಲಾರದು. ಇತ್ತ ಅವರು ನಾಟಕ, ಕಾದಂಬರಿ, ಪ್ರಬಂಧ, ಜೀವನ ಚರಿತ್ರೆ ಮೊದಲಾದ ಸಾಹಿತ್ಯ ಪ್ರಕಾರಗಳಲ್ಲಿ ಉತ್ತಮ ಲೇಖನ ಕಾರ್ಯ ಮಾಡುತ್ತ ನಡೆದರು. ಶಿಸ್ತಿನಿಂದ ಮಾಡುವ ಅವರ ಅಭ್ಯಾಸ ಕ್ರಮ ಇತರರಿಗೆ ಮಾದರಿಯಾಗಬಲ್ಲದು. ಕುಮಾರವ್ಯಾಸನ ಬಗೆಗಂತೂ ಅವರ ಅಭ್ಯಾಸ ಒಂದು ತಪಸ್ಸಿನಂತೆ ನಡೆದಿತ್ತು. ಪರಿಣಾಮವಾಗಿ ಕುಮಾರವ್ಯಾಸನ ಕುರಿತು ಲೇಖನ, ಭಾಷಣ, ಗ್ರಂಥ ರಚನೆ ಅವರ ವಿಶಿಷ್ಟ ಕೊಡುಗೆಗಳಾಗಿವೆ. ಎನ್ಕೆ ಅವರು ನಾಟಕಕಾರರೆಂದೇ ಖ್ಯಾತಿ ಪಡೆದರಾದರೂ ಅವರ ಹರಟೆ, ವಿನೋದ ಲೇಖನಗಳೂ ಜನಮೆಚ್ಚುಗೆ ಪಡೆದಿವೆ.

ಎನ್ಕೆ ಅವರ ಗೆಳೆಯರ ಬಳ್ಳಿ ಬಹಳ ದೊಡ್ಡದು. ಕರ್ನಾಟಕದ ಒಳಹೊರಗೂ ಹಬ್ಬಿ ಸಮೃದ್ಧವಾಗಿ ಬೆಳೆದಿದೆ. ಅದರಲ್ಲಿ ಗುರು ಸದೃಶರಾದವರಿಂದ ತೊಡಗಿ ತಮ್ಮ ಎಳೆಯ ವಿದ್ಯಾರ್ಥಿಗಳು, ಯುವ ಸ್ನೇಹಿತರ ವರೆಗೆ ಸಮಾವೇಶವಾಗಿದ್ದಾರೆ. ಒಮ್ಮೆ ಅವರ ಆತ್ಮೀಯ ವಲಯದಲ್ಲಿ ಸೇರಿದರೆ ಆಯಿತು. ಅನಂತರ ಅದರಿಂದ ಹೊರಬರಲು ಸಾಧ್ಯವಿಲ್ಲ ಎನ್ನುವಷ್ಟು ಎನ್ಕೆ ಕಾಳಜಿ ವಹಿಸುತ್ತಾರೆ. ಮಾಸ್ತಿ, ಬೇಂದ್ರೆ, ಗೋಕಾಕ್, ಕಣವಿ, ಮುಗಳಿ. ಹಾಮಾನಾ, ಗೌರೀಶ ಕಾಯ್ಕಿಣಿ, ಗಂಗೂಬಾಯಿ ಹಾನಗಲ್, ಪ್ರೊ. ಎಸ್. ಎಸ್. ಮಾಳವಾಡ; ಕೆ. ಎಸ್. ದೇಶಪಾಂಡೆ, ಸಿದ್ಧಲಿಂಗ ಪಟ್ಟಣಶೆಟ್ಟಿ, ಶಂಕರ ಪಾಟೀಲ, ಜಿ. ಡಿ. ನಾಡಕರ್ಣಿ, ಪ್ರೇಮಾ ಭಟ್, ಕೆ. ಎಸ್. ಶರ್ಮಾ, ಪ್ರಹ್ಲಾದ ಕುಮಾರ್ ಭಾಗೋಜಿ, ಯಮುನಾ ಮೂರ್ತಿ, ಜ್ಯೋತಿಷಿ ಎನ್. ಕೆ. ಜೋಗಳೇಕರ, ಸದಾನಂದ ಕನವಳ್ಳಿ, ಸುರೇಂದ್ರ ದಾನಿ, ಡಾ. ಎಸ್. ಜಿ. ಜೈನಾಪೂರ, ಶಾಂತವೀರಯ್ಯ, ಜಿ. ಬಿ. ಜೋಶಿ ಇತ್ಯಾದಿ. ಸ್ವಾಭಾವಿಕವಾಗಿ ಸದಾ ನಗುಮೊಗ ತೋರುತ್ತಿದ್ದ ಎನ್ಕೆ ವಿನಯಶೀಲರು, ಸಜ್ಜನರು. ಶಿಕ್ಷಕರಾಗಿ, ಪತ್ರಕರ್ತರಾಗಿ ನಾಟಕಗಳನ್ನು ರಚಿಸಿ ಹೆಸರು ಪಡೆದ ಎನ್ಕೆ ಮುಂಬೈ ಆಕಾಶವಾಣಿ ಕೇಂದ್ರದಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರೆಂದು ನೇಮಕಗೊಂಡರು. ಕನ್ನಡ ಕಾರ್ಯಕ್ರಮಗಳ ಮಹಾಪೂರ ಹರಿಸಲು ಕಾರಣಕರ್ತರಾದರು. ಮುಂಬಯಿ ಕರ್ನಾಟಕದ ಜನರಿಗೆ ಕನ್ನಡದ ಕಂಪನ್ನು ತಲುಪಿಸುವಲ್ಲಿ ಯಶಸ್ವಿಯಾದರು. ವೈವಿಧ್ಯಮಯ, ಹಾಸ್ಯಮಯ ಕಾರ್ಯಕ್ರಮಗಳನ್ನು ಬಿತ್ತರಿಸಿ ಆಕಾಶವಾಣಿಗೂ ತಮಗೂ ಹೆಸರು ಗಳಿಸಿದರು. ಜೊತೆಗೆ ಮುಂಬಯಿಯಲ್ಲಿ ಸ್ನೇಹ ವಲಯ ರಚಿಸಿಕೊಂಡರು. ಸಾಹಿತ್ಯ ರಚನೆಯಂತೂ ನಿರಂತರವಾಗಿ ಮಾಡುತ್ತಲೇ ಇದ್ದರು. ಸಾಹಿತ್ಯ ರಚನೆಯು ಅವರಿಗೆ ಸಂತಸ ನೀಡುವ, ದುಃಖ ಮರೆಯುವ ಸಾಧನ. ವೃದ್ಧಾಪ್ಯದಲ್ಲೂ ಅದು ಮುಂದುವರಿದಿರುವುದು ಕನ್ನಡಿಗರ ಪುಣ್ಯ, ಕನ್ನಡ ಸಾಹಿತ್ಯಕ್ಕೆ ಲಾಭ. ೧೯೫೦ರಲ್ಲಿ ಎನ್ಕೆ ಅವರು ವರ್ಗವಾಗಿ ಧಾರವಾಡಕ್ಕೆ ಬಂದರು. ಎನ್ಕೆ ಅವರ 'ಗೃಹಗೋಷ್ಠಿ' ಕಾರ್ಯಕ್ರಮ ಬಹಳ ಜನಪ್ರಿಯತೆ ಗಳಿಸಿತು. ಕರ್ನಾಟಕ ವಿಶ್ವವಿದ್ಯಾಲಯದ ಗ್ರಂಥಾಲಯ, ಎನ್. ಕೆ. ದೀಕ್ಷಿತ್ ವಕೀಲರ ಮನೆ, ಪ್ರೊ. ಮಾಳವಾಡರ ಮನೆ ಮತ್ತು ವಿದ್ಯಾವರ್ಧಕ ಸಂಘದಲ್ಲಿ ಗೆಳೆಯರೊಡನೆ ಸೇರಿ ಸಾಹಿತ್ಯದ ಸವಿಯುಂಡರು, ಉಣಿಸಿದರು. ವಿದ್ಯಾವರ್ಧಕ ಸಂಘದ ವಾಗ್ಭೂಷಣ ಪತ್ರಿಕೆಯನ್ನು ಪುನರುಜ್ಜೀವನಗೊಳಿಸಲು ಆಗ ಎನ್ಕೆ ಅವರು ಮಾಡಿದ ಸಹಾಯ ಯಾರೂ ಮರೆಯುವಂತಿಲ್ಲ.

ಅನಂತರ ೧೯೫೮ರಿಂದ ಅವರು ಹಲವು ವರ್ಷ ಬೆಂಗಳೂರಿನಲ್ಲಿ ಕೆಲಸ ಮಾಡಿ ಸ್ನೇಹಿತರ ಗುಂಪನ್ನು ಬೆಳೆಸಿಕೊಂಡು, ಪುನಃ ಧಾರವಾಡದ ಆಕಾಶವಾಣಿ ಕೇಂದ್ರಕ್ಕೆ ೧೯೬೬ರಲ್ಲಿ ವರ್ಗವಾಗಿ ಬಂದರು.

೧೯೬೭ರಲ್ಲಿ ಪತ್ನಿಯ ವಿಯೋಗದಿಂದ ಕುಟುಂಬ ಸಂಕಷ್ಟಕ್ಕೀಡಾಯಿತು. ಎನ್ಕೆ ಅವರಿಗೆ 'ಕುಮಾರ ವ್ಯಾಸ ಭಾರತದ ಸರಳ ಗದ್ಯಾನುವಾದ'ವು 'ಕನ್ನಡ ವ್ಯಾಸ ಮಹಾಭಾರತ', 'ವಿನಾಯಕ ಮಹಾ ದರ್ಶನ'ಗಳಂಥ ಗ್ರಂಥ ರಚನಾ ಕಾರ್ಯ 'ಜೀವನದಲ್ಲಿ ಕಷ್ಟ ಮರೆಯಲು' ಸಾಧ್ಯವಾಯಿತೆಂದರೆ ತಪ್ಪಾಗಲಿಕ್ಕಿಲ್ಲ. 'ದತ್ತೂ ಮಾಸ್ತರ' ಎನ್ಕೆ ಅವರ ಇತ್ತೀಚಿನ ಕಾದಂಬರಿ.

ಮೂವರು ಗಂಡುಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಮತ್ತು ಒಬ್ಬ ಮರಿಮಗ– ಎನ್ಕೆ ಅವರ ಪರಿವಾರ. ಹೃದಯ ರೋಗದ ತೊಂದರೆಯಿದ್ದರೂ ತಮ್ಮ ನೋವನ್ನು ಗಮನಿಸದೆ ಇತರರ ದುಃಖಕ್ಕಾಗಿ ಮರುಗುವ ಸ್ವಭಾವ ಎನ್ಕೆ ಅವರ ವಿಶೇಷತೆ ಎನ್ನಬಹುದು. ಅವರ ಸಾಹಿತ್ಯ ಕಾರ್ಯಕ್ಕೆ ಹಲವು ಸತ್ಕಾರ, ಸನ್ಮಾನಗಳು ದೊರೆತಿವೆ. ಅವರು ಮಾಡಿದ ಕಾರ್ಯಕ್ಕೆ ಸಾಮಾಜಿಕ ಮನ್ನಣೆಯ ಮೊತ್ತ ಕಡಿಮೆ ಎನ್ನಬೇಕು. 'ಕವಿ ಹೃದಯ ಕಣ್ದೆರೆದಿತ್ತು' ನಾಟಕಕ್ಕೆ ರಾಷ್ಟ್ರೀಯ ಪ್ರಶಸ್ತಿ, 'ವಿನಾಯಕ ಮಹಾದರ್ಶನ' ಕೃತಿಗೆ ಮಾಳವಾಡ ಪ್ರಶಸ್ತಿ, ಸಾಹಿತ್ಯ ಸೇವೆಗೆ ರಾಜ್ಯ ಅಕಾಡೆಮಿ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ಹಾಸ್ಯ ಲೇಖಕ ಸನ್ಮಾನ, ಧಾರವಾಡ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ (ನರಗುಂದ) ಅಧ್ಯಕ್ಷತೆಯ ಗೌರವಗಳು ದೊರೆತಿವೆ. ೧೯೭೪ರಲ್ಲಿ ಎನ್ಕೆ ಅವರ ಬದುಕು-ಬರಹದ ಕುರಿತು ಬೃಹತ್ ಪ್ರಮಾಣದ ಪ್ರಕಟಣೆ ಹಾಗೂ ಎನ್ಕೆ ಅವರಿಗೆ ಸನ್ಮಾನ ಮತ್ತು ೧೯೯೬ರಲ್ಲಿ 'ನಾನೀ ಕಾಕಾ' ಅಭಿನಂದನ ಗ್ರಂಥ ಸಮರ್ಪಣೆ (೮೪ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದಾಗ) ದೊರೆತಿವೆ.

ಎಂಬತ್ತೊಂಬತ್ತರ ವೃದ್ಧಾಪ್ಯದಲ್ಲಿಯೂ ಧಾರವಾಡದ ಮಾಳಮಡ್ಡಿಯ ಮನೆಯಲ್ಲಿ ಬಹಳ ಲವಲವಿಕೆಯಿಂದ ಬಾಳುತ್ತಿರುವ ಎನ್ಕೆ ಅವರು ಧನ್ಯರು. ಶತಾಯುಷಿಯಾಗಿ ಬಾಳಿ ಕನ್ನಡ ಸಾಹಿತ್ಯಕ್ಕೆ ಇನ್ನೂ ಸಾಧ್ಯವಾದ ಕೊಡುಗೆ ಕೊಡಲಿ. ಅದರಿಂದ ಕನ್ನಡದ ಕಣಜ ಶ್ರೀಮಂತವಾಗಲಿ ಎಂದು ಹಾರೈಸೋಣ. ಎನ್ಕೆ ಅವರ ಸಾಹಿತ್ಯದ ಹರಹಿನ ಕುರಿತು ಸಂಕ್ಷಿಪ್ತವಾಗಿ ಇನ್ನು ಗಮನಿಸಬಹುದಾಗಿದೆ.

ಎನ್ಕೆ ಅವರು ರಚಿಸಿದ 'ಸಾವಿನ ಉಡಿಯಲ್ಲಿ' ೧೯೪೪ರಲ್ಲಿ ಪ್ರಕಟವಾಯಿತು. ಆಗಿನ ಕಾಲದ ಉತ್ತರ ಕರ್ನಾಟಕದ ಮಧ್ಯಮ ವರ್ಗದವರ ಜೀವನವನ್ನು ಚಿತ್ರಿಸುವ ಕಾದಂಬರಿ. ಕಾದಂಬರಿಯ ಪ್ರಧಾನ ವಸ್ತು ಎರಡನೆಯ ಸಂಬಂಧ (ಮದುವೆ). ಅನಂತರ ಎರಡನೆಯ ಸಂಬಂಧ ಮತ್ತು 'ವೈನಿ' ಕಾದಂಬರಿಗಳ ವಸ್ತು ಕೂಡ ಅದೇ ಆಗಿದೆ ! ಒಂದು ದೃಷ್ಟಿಯಿಂದ ಅಂದಿನ ಅವಿಭಕ್ತ ಕುಟುಂಬದ ಈ ಸಾಮಾಜಿಕ ಸಮಸ್ಯೆ ಎನ್ಕೆ ಅವರ ಜೀವನವನ್ನೂ ಆವರಿಸಿದ್ದುದು ಕಂಡು ಬರುತ್ತದೆ.

'ಕಲೋಪಜೀವಿ ಮತ್ತು 'ಲಲಿತಾ' ನೃತ್ಯ ಕಲಾವಿದನ ಹಾಗೂ ಗಾನ ಕಲಾವಿದೆಯ ಕುರಿತಾದ ಉತ್ತಮ ಕಾದಂಬರಿಗಳು. ಮುಂಬಯಿ, ಬೆಂಗಳೂರು, ಧಾರವಾಡಗಳಲ್ಲಿ ಎನ್ಕೆ ಅವರು ಆಕಾಶವಾಣಿ ಕೇಂದ್ರಗಳಲ್ಲಿ ಕಾರ್ಯಕ್ರಮ ನಿರ್ವಾಹಕರಾಗಿ ದುಡಿದದ್ದು ಇಂತಹ ಕಲಾವಿದರನ್ನು ಹತ್ತಿರದಿಂದ ಕಂಡು ಅನುಭವ ಪಡೆಯಲು ಹಾಗೂ ಅವರ ಜೀವನಗಳಿಂದ ಪ್ರಭಾವಿತರಾಗಿ ಕಾದಂಬರಿ ರಚಿಸಲು ಕಾರಣವಾಗಿರಬಹುದಾಗಿದೆ.

'ಗೌರೀ ಶಂಕರ' ಕಾದಂಬರಿಯಲ್ಲಿ ಮಹಾತ್ಮಾ ಗಾಂಧಿ ಮತ್ತು ಅರವಿಂದರ ಆದರ್ಶ ಮೆಚ್ಚಿ ಅನುಯಾಯಿಗಳಂತೆ ಬಾಳಿದವರ ಚಿತ್ರಣವಿದೆ. ಮೂರು ತಲೆಮಾರು ಕಾದಂಬರಿಯಲ್ಲಿ ಪೀಳಿಗೆ-ಪೀಳಿಗೆಗಳಲ್ಲಿಯ ಅಂತರ ಇಂದಿನ ಸಮಾಜದಲ್ಲಿ ಹೋರಾಟವೆಸಗಲು ಹೇಗೆ ಕಾರಣವಾಗಬಹುದೆನ್ನುವುದನ್ನು ಸುಂದರವಾಗಿ ಚಿತ್ರಿಸುವ ಕಾದಂಬರಿ. ವಿಧುರನಾಗಿ ಬಾಳುವವನ ವೈರಾಗ್ಯವನ್ನು ಆತ್ಮೀಯವಾಗಿ ಚಿತ್ರಿಸುವ 'ವಿಧುರ ವೈರಾಗ್ಯ', 'ವಲ್ಲಿ' ಧಾರಾವಾಹಿಯಾಗಿ ಪ್ರಕಟವಾಯಿತು. ಬೇಂದ್ರೆಯವರನ್ನು ಕೇಂದ್ರೀಕರಿಸಿ ರಚಿಸಿದ ಕಾದಂಬರಿ 'ದತ್ತೂ ಮಾಸ್ತರ'. ಸುಮಾರು ಐವತ್ತು ವರ್ಷ ಎನ್ಕೆ ಅವರು ಕಾದಂಬರಿಗಳನ್ನು ರಚಿಸಿದ್ದಾರೆ. (೧೯೪೪-೧೯೯೭). ಅವರ ವೈನಿ ಕಾದಂಬರಿಯನ್ನು ವಿಡಿಯೋ ಸೀರಿಯಲ್ ಮಾಡುವುದಾಗಿ ಹೇಳಿ ಮೋಸ ಮಾಡಿ ಹಿಂದಿ ಸಿನೇಮಾ ಮಾಡಿ ಜನಪ್ರಿಯತೆ ಗಳಿಸಿದ್ದು ಒಂದು ವಿಷಾದನೀಯವಾದ, ಸಂತೋಷದ ದಾಖಲೆಯಾಗಿದೆ.

ಹಲವಾರು ಸಾಹಿತ್ಯ ಪ್ರಕಾರಗಳಲ್ಲಿ ಕೃತಿ ರಚಿಸಿದ ಎನ್ಕೆ ಅವರು ನಾಟಕ ಮಾಧ್ಯಮದಲ್ಲಿ ಬಹಳ ಸಾಧನೆ ಮಾಡಿದ್ದಾರೆ. ಸುಮಾರು ಹದಿನೈದು ಏಕಾಂಕ ಸಂಗ್ರಹಗಳನ್ನು ಹಾಗೂ ನಾಲ್ಕು ದೊಡ್ಡ ನಾಟಕಗಳನ್ನು ಪ್ರಕಟಿಸಿದ್ದಾರೆ. ವಿದ್ಯಾರ್ಥಿ ಜೀವನದಲ್ಲಿ ಇಲೆಕ್ಷನ್ ಏಕಾಂಕ ರಚಿಸಿ (೧೯೩೫) ಆಡಿಸಿದ ಕೀರ್ತಿಗೆ ಪಾತ್ರರಾದರು. ನೂರಕ್ಕಿಂತ ಹೆಚ್ಚು ಚಿಕ್ಕ ದೊಡ್ಡ ನಾಟಕಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಏಕಪಾತ್ರ ಅಭಿನಯದ, ದ್ವಿಪಾತ್ರ ಅಭಿಯನದ, ಏಕಾಂಕ, ಗೀತ ರೂಪಕ, ಬಾನುಲಿ ರೂಪಕ ಮತ್ತು ದೊಡ್ಡ ನಾಟಕಗಳು, ಸಮಾವೇಶವಾಗುತ್ತವೆ. ಅವುಗಳಲ್ಲಿ ಎನ್ಕೆ ಏಕಾಂಕಗಳು, ಬುಶ್‌ಕೋಟು, ಠಕ್ಕ ಠಕ್ಕಿ, ಏಕಾಂಕ ಮಾಲಿಕೆ, ಎನ್ಕೆ ದ್ವಿಪಾತ್ರಗಳು, ಮಂದಿರ ಪ್ರವೇಶ, ಕರೇ ಹೆಂಡತಿ ಅದರ ಖರೇ ಹೆಂಡತಿ ನಾಟಕಗಳನ್ನು ಹೆಸರಿಸಬಹುದು. ಎನ್ಕೆ ಅವರಿಗೆ ವೃತ್ತಿ ರಂಗಭೂಮಿಯ ಬಗ್ಗೆ ವಿಶೇಷ ಆಕರ್ಷಣೆ ಇತ್ತು. ಅವುಗಳನ್ನು ಕಂಡು ತಣಿದಿದ್ದಾರೆ. ಅವುಗಳ ಬಗ್ಗೆ ಅಧಿಕಾರವಾಣಿಯಿಂದ ಮಾತನಾಡುವ, ಬರೆಯುವ ಸಾಮರ್ಥ್ಯ ಅವರಿಗಿದೆ. ಉತ್ತರ ಕರ್ನಾಟಕದ ಗರೂಡ ಸದಾಶಿವರಾಯರು, ವಾಮನರಾವ್ ಮಾಸ್ತರ್, ಗಾನರತ್ನ ಗಂಗೂಬಾಯಿ ಹಾನಗಲ್ಲ, ಡಾ. ಮಲ್ಲಿಕಾರ್ಜುನ ಮನಸೂರ ಇವರ ಜೀವನ ಪರಿಚಯಿಸುವ ಕೃತಿಗಳನ್ನು ರಚಿಸಿದ್ದಾರೆ. ರಂಗ ಸೇವಕರ ಕಾರ್ಯವನ್ನು ಅರಿಯಲು ನೆರವಾಗಿದ್ದಾರೆ. 'ಮುಂಗಾಲ ಪುಟಿಗೆ', ಮೋಡಕಾ ಬಾಜಾರ್ ಮೊದಲಾದ ಹರಟೆಗಳ ಸಂಕಲನಗಳಿಂದ ಖ್ಯಾತರಾದ ಎನ್ಕೆ ಅವರು ''ವ್ಯಕ್ತಿನಿಷ್ಠ ಬರವಣಿಗೆಯೆ ನನ್ನ ಜೀವಾಳ'' ಎಂದು ತಮ್ಮ ಲಲಿತ ಪ್ರಬಂಧಗಳ ಸ್ವರೂಪ ವೈಶಿಷ್ಟ್ಯವನ್ನು ತಿಳಿಸಿದ್ದಾರೆ. ರದ್ದಿ ಕಾಗದ, ಮೊದಲ ಅಳಿಯತನ, ಜೇಬುಗಳು – ಇಂಥ ಸಾಮಾನ್ಯ ವಿಷಯಗಳ ಬಗ್ಗೆ ಉತ್ತಮ ಲಲಿತ

ಪ್ರಬಂಧ ರಚಿಸಿದ್ದಾರೆ. 'ಆ ಧರ್ಮಶಾಲೆ, ಮಾಮಾನ ಮಖಮಲ್ ಚಂಚಿ, ವಾಸನೆಗಳು, ನರ್ಸಿಂಗ್ ಹೋಮ್, ವೃದ್ಧಾಪ್ಯದ ವೈಭವ ಇವು ಅವರ ಬಲು ಸೊಗಸಾದ ಪ್ರಬಂಧಗಳು.

ಎನ್ಕೆ ಅವರ ಸಾಹಿತ್ಯ ವಿಮರ್ಶಾ ಕೃತಿಗಳು ಮಹತ್ವದ ಕೊಡುಗೆಗಳಾಗಿವೆ. ಎನ್ಕೆ ಅವರಿಗೆ ಕುಮಾರವ್ಯಾಸನು ಬಹು ಮೆಚ್ಚುಗೆಯ ಕವಿ. ಆದುದರಿಂದ ಅವರ ಅಭ್ಯಾಸದಲ್ಲಿ ಆಳವನ್ನು, ಹರಹನ್ನು, ಎತ್ತರವನ್ನು ಕಾಣಬಹುದಾಗಿದೆ. ಪರಿಣಾಮವಾಗಿ 'ಕುಮಾರವ್ಯಾಸ ಮತ್ತು ಕೃಷ್ಣ ಕಥೆ' (೧೯೬೮), ಕುಮಾರವ್ಯಾಸ ಭಾರತ ಗದ್ಯಸಾರ (೧೯೭೦), ಕುಮಾರವ್ಯಾಸ ನಿಘಂಟು (೧೯೭೧), ಗದುಗಿನ ಗಂಡು ಕವಿ ಕುಮಾರವ್ಯಾಸ (೧೯೭೮) ಕೃತಿಗಳು ಹೊರಬಂದಿವೆ. ಕನ್ನಡ ವ್ಯಾಸ ಭಾರತ (೧೯೮೨) ಹಾಗೂ ತಿಮ್ಮಣ್ಣ ಕವಿಯ ಕಾವ್ಯಭಾಗದ ಗದ್ಯಸಾರಗಳನ್ನು ನೀಡಿದ್ದಾರೆ. ಹಾಗೆಯೇ ಆಧುನಿಕ ಕನ್ನಡ ಸಾಹಿತ್ಯಕ್ಕೆ ಮಹತ್ವದ ಕಾಣಿಕೆ ನೀಡಿ ಅಜರಾಮರರಾದ ಬೇಂದ್ರೆ, ಗೋಕಾಕರ ಕುರಿತಾದ ಅಭ್ಯಾಸಪೂರ್ಣ ವಿಮರ್ಶಾ ಗ್ರಂಥಗಳನ್ನು ತಮ್ಮ ಇಳಿವಯಸ್ಸಿನಲ್ಲಿ ರಚಿಸಿದ್ದು ರೋಮಾಂಚಕಾರಿಯಾದ ವಿಷಯ. ದ. ರಾ. ಬೇಂದ್ರೆ (೧೯೯೧) ವಿನಾಯಕ ಮಹಾದರ್ಶನ (೧೯೮೬) ಮತ್ತು ಶ್ರೀರಂಗ (೧೯೮೯) ಈ ವಿಮರ್ಶಾ ಗ್ರಂಥಗಳಲ್ಲಿ ಸಾಹಿತಿಗಳ ಜೀವನ ಹಾಗೂ ಸಾಧನೆಗಳ ವಿವರಗಳೂ ನಮಗೆ ದೊರೆಯುತ್ತವೆ.

'ಬಂಕಿಮಚಂದ್ರ' ಎಂಬ ಹೊತ್ತಗೆಯನ್ನು ಇಂಗ್ಲಿಷಿನಲ್ಲಿ ರಚಿಸಿದ ಎನ್ಕೆ ಹಲವಾರು ವ್ಯಕ್ತಿಗಳ ಜೀವನ ಪರಿಚಯ ರಚಿಸಿ ಪ್ರಕಟಿಸಿದ್ದಾರೆ. ಉದಾ : ಲೋಕೂರ ನಾರಾಯಣ ರಾಯರು, ಅಬ್ದುಲ್ ಕರೀಂ ಖಾನ್, ಮಡಿವಾಳೇಶ್ವರ ತುರಮರಿ, ಹುಕ್ಕೇರಿ ಮಾಸ್ತರ್, ಸ. ಸ. ಮಾಳವಾಡ, ದ. ರಾ. ಬೇಂದ್ರೆ, ಶ್ರೀರಂಗ ಇತ್ಯಾದಿ ಇನ್ನೂ ಕೆಲವು ಲೇಖನಗಳು, ಪ್ರಬಂಧಗಳು ಗ್ರಂಥರೂಪದಲ್ಲಿ ಪ್ರಕಟವಾಗಬೇಕಾಗಿದೆ. ಎನ್ಕೆ ಅವರ ಜೀವನ ಸಾಧನೆಗಳ ಕುರಿತು ಕೆಲವು ಹೇಳಿಕೆಗಳನ್ನು ಇನ್ನು ಪರಿಶೀಲಿಸಿದರೆ ಅವರ ಪರಿಚಯ ಕಾರ್ಯಕ್ಕೆ ಸಹಾಯಕವಾಗಬಹುದಾಗಿದೆ.

● "ಸುಮಾರು ಅರವತ್ತಕ್ಕೂ ಮೀರಿದ ವಿವಿಧ ಬಗೆಯ ಗ್ರಂಥಗಳನ್ನು ಬರೆದಿರುವ ಎನ್. ಕೆ. ಕುಲಕರ್ಣಿಯವರು ಆಧುನಿಕ ಕನ್ನಡದ ಅದ್ಭುತಗಳಲ್ಲಿ ಒಂದು. ಅವರ ನೆನಪಿನ ಶಕ್ತಿ ಅಗಾಧವಾದುದು. ಅವರ ನೆನಪುಗಳನ್ನು ಓದುತ್ತಿದ್ದರೆ, ಜ್ಞಾಪಕ ಚಿತ್ರಶಾಲೆಯ ಡಿ. ವಿ. ಜಿ. ನೆನಪಿಗೆ ಬರುತ್ತಾರೆ. ಕಾರಂತರ ಕೃತಿಗಳಲ್ಲಿ ಕಂಡುಬರುವ ಜೀವನದ ದಟ್ಟತೆಯನ್ನು ನಾವು ಕುಲಕರ್ಣಿ ಅವರಲ್ಲಿ ಕಾಣಬಹುದು" ಎಂದು ಡಾ. ಹಾ. ಮಾ. ನಾಯಕರು ೧೯೯೬ರಲ್ಲಿ ಬರೆದಿದ್ದಾರೆ.

● "ಎಂಬತ್ತೊಂರು ವರ್ಷಗಳನ್ನು ದಾಟಿ ನಿಂತಿರುವ ಎನ್ಕೆಯವರ ಬರವಣಿಗೆ ಇಂದಿಗೂ ಮುಂದುವರಿದಿದೆ. ಅವರಿಗಿರುವ ಸಂಗೀತ ಹಾಗೂ ಗಾನಕೋಗಿಲೆಗಳ ಜ್ಞಾನ ಪರಿಚಯ, ನಮ್ಮ ಪೌರಾಣಿಕ ಮಹಾ ಕೃತಿಗಳಲ್ಲಿರುವ ಅವರ ಆಸಕ್ತಿ, ಹೊಸ ಜನಾಂಗದ ಬಗೆಗಿನ ಅವರ ಆಶೆ-ಆಕಾಂಕ್ಷೆಗಳು ಅವರ ಲೆಕ್ಕಣಿಕೆಗೆ ಮಹಾಶಕ್ತಿಯಾಗಿದೆ" ಎಂದು ೧೯೯೬ರಲ್ಲಿ ಪ್ರಿನ್ಸಿಪಾಲ್ ಪ್ರಹ್ಲಾದಕುಮಾರ್ ಭಾಗೋಜಿ ಬರೆದಿದ್ದಾರೆ.

● "ಅವರ ಸ್ನಿಗ್ಧ ವ್ಯಕ್ತಿತ್ವ, ಅಂತಃಕರಣ, ವಿಶಾಲ ಮನೋಧರ್ಮ, ಸಾಹಿತ್ಯಕ ಸೃಜನಶೀಲತೆ ಸ್ನೇಹಮಯ ಭಾವನೆಗಳು, ಬೇರೆಯವರ ಅಭಿವೃದ್ಧಿಯಲ್ಲಿ ಪಡುವ ಸಂತಸ ಅಭಿಮಾನ, ಗುಣಗ್ರಾಹಕತೆ ಮೊದಲಾದ ಹಲವಾರು ಗುಣಗಳು ನನ್ನ ಮನಸ್ಸನ್ನು ಗೆದ್ದಿವೆ" ಎಂದು ಡಾ. ಎಸ್. ಜಿ. ಜೈನಾಪೂರ ನುಡಿದಿದ್ದಾರೆ.

● "ಇಲ್ಲ, ಅವರು ಬರವಣಿಗೆ, ಭಾಷಣಗಳನ್ನು ಯಥೇಚ್ಛವಾಗಿ ಮಾಡಲಿ. ಅವುಗಳನ್ನು ಮಾಡುವುದರಿಂದಲೇ ಅವರಿಗೆ ಹೆಚ್ಚಿನ ಚಟುವಟಿಕೆ ಕೊಟ್ಟು, ಆರೋಗ್ಯ ಕಾಪಾಡುತ್ತದೆ" ಎಂದು ಎನ್ಕೆ ಅವರು ಹಾರ್ಟ್ ಟ್ರಬಲ್ (ಅಂಜೈನಾ)ದಿಂದ ಬಳಲಿದ್ದರಿಂದ ಬರವಣಿಗೆ ನಿಲ್ಲಿಸಲು ಮಕ್ಕಳು 'ಎನ್ಕೆ' ಅವರಿಗೆ ಹೇಳಿದಾಗ ಡಾ. ಹೆಬ್ಬಾಳ ಹೇಳಿದರೆಂದು ಎನ್ಕೆ ಅವರ ಮಗ ರವಿ ಉಲ್ಲೇಖಿಸುತ್ತಾರೆ.

● "ಗದಗ ತ್ರಿರತ್ನಗಳನ್ನು (ಮೂರು ನಾರಾಯಣರನ್ನು) ಕನ್ನಡನಾಡಿಗೆ ನೀಡಿದೆ. ಗದಗಿನ ಮೊದಲನೆಯ ನಾರಾಯಣನು ಕುಮಾರವ್ಯಾಸ... ಎರಡನೆಯ ನಾರಾಯಣ 'ಉದಯವಾಗಲಿ ನಮ್ಮ ಚಲುವ ಕನ್ನಡನಾಡು' ಎಂದು ಅಖಂಡ ಕರ್ನಾಟಕದ ಉದಯಕ್ಕಾಗಿ ಹಂಬಲಿಸಿ ಹಾಡಿದ ಹುಯಿಲಗೋಳ ನಾರಾಯಣರಾವ್, ಮೂರನೆಯ ನಾರಾಯಣ ಭವ್ಯ ಭಾವ ಭಾಗೀರಥಿಯನ್ನು ಸೃಜಿಸಿ ನೆಲಕ್ಕೆ ತರುವ ಕಲಾ ಭಗೀರಥ 'ಎನ್ಕೆ' " ಎಂದು ಡಾ. ಎಸ್. ಕೆ. ಜೋಶಿ ಸಾರಿದ್ದಾರೆ.

● "ಕಾದಂಬರಿ ಬರೆಯಲಿ, ಏಕಾಂಕಗಳನ್ನು ಬರೆಯಲಿ, ಲಲಿತ ಪ್ರಬಂಧಗಳನ್ನು ಬರೆಯಲಿ ಎನ್ಕೆ ಅವರ ಗದ್ಯ ಪಾರದರ್ಶಕ, ಅಷ್ಟೇ ತಳಸ್ಪರ್ಶಿ" ಎಂದು ಗೌರೀಶ ಕಾಯ್ಕಿಣಿ ಹೇಳಿದ್ದಾರೆ.

● "ನೋವು ನುಂಗಿ ನಗೆ ಚಿಮ್ಮಿಸುವ ಗುಣ ಎನ್ಕೆ ಅವರ ವಿಶಿಷ್ಟತೆಯಾಗಿದೆ. ಪಾರಿಜಾತದಂತೆ ಮೃದುವಾದ ಎನ್ಕೆ ನಮ್ಮ ಸಾಹಿತ್ಯಲೋಕದ ರಸಿಕ ಚೇತನವಾಗಿದ್ದಾರೆ" ಎಂದು ಡಾ. ಜಿ. ಎಂ. ಹೆಗಡೆ ನುಡಿದಿದ್ದಾರೆ.

● "ನನ್ನ ಅಧಿದೈವ ಕುಮಾರವ್ಯಾಸನ ಕುರಿತೇ ಒಂದು ಕಾದಂಬರಿ ಬರೆಯಬೇಕೆಂದಿದ್ದೇನೆ. ಅದು ಈಡೇರಿದರೆ ಮಾತ್ರ ನನಗೆ ದೀರ್ಘಾಯು ಕೊಟ್ಟ ಜ್ಯೋತಿಷಿ ಜೋಗಳೇಕರರಿಗೆ ಥ್ಯಾಂಕ್ಸ್ ಹೇಳುತ್ತೇನೆ" ಎಂದು ಎನ್ಕೆ ತಮ್ಮ ಹಂಬಲ ವ್ಯಕ್ತಪಡಿಸಿದ್ದಾರೆ.

● ಬೆಳಗಿನ ವಿಹಾರದಲ್ಲಿ 'ಮುಂಗಾಲ್ ಪುಟಿಗೆ'.

● ಎಂಟು ದಶಕವ ದಾಟಿ ಹಗುರು ಹೆಜ್ಜೆಯ ನಡಿಗೆ.

● ಕುಂಟು ನೆಪ ಕೇಳಲೆ ಬೇಡಿ. ನಿಷ್ಕಲ್ಮಷ ನಗೆ" ಎಂದು (ಎನ್ಕೆ – ಕಣವಿ) ಬೆಳಗಿನ ಭೆಟ್ಟಿ ಕವನದಲ್ಲಿ ಚೆನ್ನವೀರ ಕಣವಿ ಉಲ್ಲೇಖಿಸಿದ್ದಾರೆ. ಎನ್ಕೆ ಅವರನ್ನು ಭೇಟಿಯಾದಾಗಿನ ಅವರ ನಗೆಯ ಬಗ್ಗೆ.

● "ಎನ್ಕೆ ಅವರು ಶ್ರೀರಂಗರ ನಾಟಕಗಳಿಂದ ಸ್ಫೂರ್ತಿ, ಪ್ರೇರಣೆ, ಪ್ರಭಾವ ಹೊಂದಿ ನಾಟಕ ರಚನೆಗೆ ತೊಡಗಿದರು" ಎಂದು ಮಂದಾಕಿನಿ ಪುರೋಹಿತ ಅವರು ನುಡಿದಿದ್ದಾರೆ.

## ಎನ್ಕೆ ಅವರ ಜೀವನ ವಿವರ

ಜನನ : ೧೯೧೩ರಲ್ಲಿ (೨೯-೮-೧೯೧೩) ಮುಳಗುಂದದಲ್ಲಿ.

ಶಾಲಾ ಶಿಕ್ಷಣ : ಗದಗ.

**ಮ್ಯಾಟ್ರಿಕ್** : ಗದಗಿನ ಮುನಿಸಿಪಲ್ ಹೈಸ್ಕೂಲಿನ ಮುಖಾಂತರ (ಗುರುಗಳು ಪಂಡಿತ್ ಭೀಮಸೇನ್ ಜೋಶಿ ಅವರ ತಂದೆ ಗುರಾಚಾರ್ಯ ಜೋಶಿ).

ಬಿ. ಎ. ಆನರ್ಸ್ : ೧೯೩೬ ಮುಂಬಯಿ ವಿಶ್ವವಿದ್ಯಾಲಯ (ವಿದ್ಯಾರಣ್ಯ ಪಾರಿತೋಷಕ) ಧಾರವಾಡದ ಕರ್ನಾಟಕ ಕಾಲೇಜ್ ಮುಖಾಂತರ ಕನ್ನಡ ಮತ್ತು ಸಂಸ್ಕೃತ ವಿಷಯಗಳಲ್ಲಿ. ಸಂಸ್ಕೃತಕ್ಕೆ ಡಾ. ಶ್ರೀರಂಗರು, ಕನ್ನಡಕ್ಕೆ ಪ್ರೊ. ಎ. ಟಿ. ಸಾಸನೂರ ಪ್ರಾಧ್ಯಾಪಕರು.

ನಾಟಕ ರಚನೆ : ೧೯೩೫ ಇಲೆಕ್ಷನ್ (ಏಕಾಂಕ), ೧೯೩೫ ಮಂದಿರ ಪ್ರವೇಶ (ದೊಡ್ಡ ನಾಟಕ).

ಎಂ. ಎ. : ೧೯೩೮

ಬಿ. ಟಿ. : ಬೆಳಗಾವಿ ಕಾಲೇಜಿನಿಂದ,

**ಶಿಕ್ಷಕ** : ಕೆ. ಇ. ಬೋರ್ಡ್ಸ್ ಹೈಸ್ಕೂಲ್, ಧಾರವಾಡ,

**ಸಂಶೋಧನ** : ಕನ್ನಡ ಸಂಶೋಧನಾ ಸಂಸ್ಥೆಯಲ್ಲಿ ಕುಮಾರವ್ಯಾಸನ ಕುರಿತು ಸಂಶೋಧನೆ ಮತ್ತು ಪ್ರಬಂಧ ರಚನೆ (೧೯೪೩-೪೬)

**ಆಕಾಶವಾಣಿಯಲ್ಲಿ ಕಾರ್ಯ ನಿರ್ವಾಹಕ** : ೧೯೪೬-೭೧ ಮುಂಬಯಿ, ಧಾರವಾಡ-ಬೆಂಗಳೂರು- ಧಾರವಾಡ ಕೇಂದ್ರಗಳಲ್ಲಿ.

**ಹಾಸ್ಯ ಸಾಹಿತಿ ಬಿರುದು** : ಕನ್ನಡ ಸಾಹಿತ್ಯ ಪರಿಷತ್ತಿನಿಂದ ೧೯೭೦.

**ಪ್ರಶಸ್ತಿ** : ರಾಜ್ಯ ಸಾಹಿತ್ಯ ಅಕಾಡೆಮಿ- ೧೯೮೨.

**ನಾನಿಯ ನೆನಹುಗಳು** : ಧಾರಾವಾಹಿಯಾಗಿ ಸಂಯುಕ್ತ ಕರ್ನಾಟಕದಲ್ಲಿ ೧೯೮೩. ನಾನಿಯ ನೆನಹುಗಳು ೧೯೮೪ (ಆತ್ಮಕಥೆ), ರಾಜ್ಯಮಟ್ಟದ ಸನ್ಮಾನ. ೧೯೮೪ (ಎನ್ಕೆ ನಾನಿಕಾಕಾ) ಬದುಕು-ಬರಹ ಅಭಿನಂದನಾ ಗ್ರಂಥ.

**ರಾಜ್ಯಪ್ರಶಸ್ತಿ** : ೧೯೯೦.

**ಉಪನ್ಯಾಸ** : ಬೇಂದ್ರೆ ನಾಟಕಗಳ ಕುರಿತು (ಕ. ವಿ. ವಿ.) ೧೯೯೦.

**ಜಿಲ್ಲಾ ಸಮ್ಮೇಳನದ ಅಧ್ಯಕ್ಷತೆ** : ಧಾರವಾಡ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ -೧೯೯೨.

**ಫೆಲೋಶಿಪ್** : ನಾಟಕ ಅಕಾಡೆಮಿ ೧೯೯೨. ಉಪನ್ಯಾಸ : ೧೯೯೫ ಪಾವಟೆ ಸ್ಮಾರಕ,

**ಅಧ್ಯಕ್ಷತೆ** : ರಾಜ್ಯ ಸಾಹಿತ್ಯ ಅಕಾಡೆಮಿಯ ಗೋಷ್ಠಿ ಬೀದರ್ ೧೯೯೫.

**ಗೌ. ಡಾಕ್ಟರೇಟ್** : ೨೦೦೫ ಕರ್ನಾಟಕ ವಿಶ್ವವಿದ್ಯಾಲಯದಿಂದ.

## ಎನ್ಕೆ ಅವರ ಕೃತಿಗಳು

**ಸಾಹಿತ್ಯ ಕಾವ್ಯ ವಿಮರ್ಶೆ–** ೧. ಸಾಹಿತ್ಯ ವಾಹಿನಿ ೧೯೪೦, ೨. ಕುಮಾರವ್ಯಾಸ ಮತ್ತು ಕೃಷ್ಣ ಕಥೆ (೧೯೯೬), ೩. ಕುಮಾರವ್ಯಾಸ ಭಾರತ (ಗದ್ಯಸಾರ) ೧೯೭೦, ೪. ಕುಮಾರವ್ಯಾಸ ಕೋಶ ೧೯೭೦, ೫. ಗದುಗಿನ ಗಂಡುಕವಿ ಕುಮಾರವ್ಯಾಸ ೧೯೭೮, ೬. ಕನ್ನಡ ವ್ಯಾಸ ಭಾರತ (ಕುಮಾರವ್ಯಾಸ ಭಾರತ ಮತ್ತು ತಿಮ್ಮಣ್ಣರ ಗದ್ಯಸಾರ) ೧೯೮೨, ೭. ಕುಮಾರವ್ಯಾಸನ ಕೃಷ್ಣ (ಉಪನ್ಯಾಸ) ೧೯೮೪, ೮. ಕನ್ನಡದಲ್ಲಿ ಮಹಾಭಾರತಗಳು ಮತ್ತು ಇತರ ವಿಮರ್ಶಾ ಪ್ರಬಂಧಗಳು (೧೯೮೬). ಇಂಗ್ಲಿಷ್‌ನಲ್ಲಿ : ೧. ಬಂಕಿಮಚಂದ್ರ ೧೯೮೮.

**ಕಾದಂಬರಿಗಳು :** ೧. ಸಾವಿನ ಉಡಿಯಲ್ಲಿ ೧೯೪೪, ೧೯೯೩, ೨. ಎರಡನೆಯ ಸಂಬಂಧ ೧೯೫೧, ೩. ವೈನಿ- ೧೯೫೭, ೪. ಕಲೋಪಜೀವಿ ೧೯೫೮, ೫. ಗೌರಿಶಂಕರ- ೧೯೬೧, ೬. ಮೂರು ತಲೆಮಾರು ೧೯೭೧ (ಧಾರಾವಾಹಿ) ೭. ಲಲಿತಾ ೧೯೭೮, ೮. ವಲ್ಲಿ ೧೯೯೩ (ಧಾರಾವಾಹಿ), ೧೦. ವಿಧುರ ವೈರಾಗ್ಯ ೧೯೯೪, ೧೧. ದತ್ತು ಮಾಸ್ತರ (ಬೇಂದ್ರೆಯವರನ್ನು ಕೇಂದ್ರೀಕರಿಸಿ) ೧೯೯೬.

**ಏಕಾಂಕ ಸಂಗ್ರಹ :** ೧. ಇಲೆಕ್ಷನ್ ೧೯೩೭, ೨. ಎನ್ಕೆ ಏಕಾಂಕಗಳು ೧೯೪೭, ೩. ಬುಶ್‌ಕೋಟು ೧೯೫೫, ೪. ಎನ್ಕೆ ಏಕಪಾತ್ರ ದ್ವಿಪಾತ್ರಗಳು ೧೯೮೦, ೫. ಸೇತು ೧೯೫೫, ೧೯೯೫, ೬. ಪತಿಯಲ್ಲ ಪರಮ ವೈರಿ (ರೇಡಿಯೋ ನಾಟಕಗಳು) ೧೯೯೬ ಇತ್ಯಾದಿ ಏಕಾಂಕ ಸಂಗ್ರಹಗಳು.

**ದೊಡ್ಡ ನಾಟಕಗಳು :** ೧. ಮಂದಿರ ಪ್ರವೇಶ (ಕೇಂದ್ರ ಮತ್ತು ರಾಜ್ಯ ಸರಕಾರಗಳಿಂದ ಪುರಸ್ಕೃತ) ೧೯೩೫, ೨. ವಿದ್ಯಾ ೧೯೫೬, ೩. ಹಸ್ತಾಂತರ ೧೯೬೬ ೪. ಕರೇ ಹೆಂಡತಿ ಅಂದರ ಖರೇ ಹೆಂಡತಿ ೧೯೯೪.

**ಹರಟೆ ಸಂಗ್ರಹಗಳು :** ೧. ಮುಂಗಾಲ ಪುಟಿಗೆ ೧೯೪೫, ೨. ತ್ರಿಶೂಲಗಳು (ಅನ್ಯರೊಡನೆ) ೧೯೫೨, ೩. ಎನ್ಕೆ ಬರಹಗಳು ೧೯೬೬, ೪. ಮೋಡಕಾ ಬಜಾರ, ೧೯೭೬, ೫. ಎನ್ಕೆ ಲಲಿತ ಪ್ರಬಂಧಗಳು (೮೧ ಹರಟೆಗಳು) ೧೯೫೪.

**ಜೀವನ ಪರಿಚಯ :** ೧. ಲೋಕೂರ ನಾರಾಯಣರಾಯರು ೧೯೪೮, ೨. ಗರೂಡ ಸದಾಶಿವ ರಾಯರು ೩. ವಾಮನ್ ರಾವ್ ಮಾಸ್ತರ ೧೯೬೮, ೪. ಸಂಗೀತ ಪುಂಗವ ಸವಾಯಿ ಗಂಧರ್ವ ೧೯೭೬. ೫. ಹುಕ್ಕೇರಿಕರ ಮಾಸ್ತರ ೧೯೭೮, ೬. ಸಾವಿರದ ವರಕವಿ ಬೇಂದ್ರೆ ೧೯೮೨, ೭. ಶ್ರೀರಂಗ ೧೯೮೭, ೮. ಸ. ಸ. ಮಾಳವಾಡ ೧೯೯೦, ೯. ವಿನಾಯಕ ಮಹಾದರ್ಶನ ೧೯೮೬ ಇತ್ಯಾದಿ.

**ಇತರ :** ೧. ಭಾಷಣ ಕಲೆ ೧೯೭೫, ೨. ಕೃಷ್ಣಾನದಿ ೧೯೭೮, ೩. ಶ್ರೀ ಅರವಿಂದ ಕಲ್ಪನೆಯ ಸಮಗ್ರ ಶಿಕ್ಷಣ ೧೯೯೧.

**ಅಪ್ರಕಟಿತ :** ಹಲವಾರು ಪ್ರಬಂಧಗಳು, ರೇಡಿಯೋ ನಾಟಕಗಳು, ಲೇಖನಗಳು.

❋ ❋ ❋

# ಎಸ್. ವಿ. ಪರಮೇಶ್ವರ ಭಟ್ಟ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸುಪ್ರಸಿದ್ಧ ವಿದ್ವಾಂಸರಾಗಿ, ಕವಿಯಾಗಿ, ಪ್ರಾಧ್ಯಾಪಕರಾಗಿ ಹಾಗೂ ಅನುವಾದಕರಾಗಿ ಹೆಸರು ಗಳಿಸಿದ ಎಸ್. ವಿ. ಪರಮೇಶ್ವರ ಭಟ್ಟರು ಚಿರಸ್ಮರಣೀಯರಾಗಿದ್ದಾರೆ. ಮಲೆನಾಡಿನ ತೀರ್ಥಹಳ್ಳಿಯ ಪರಿಸರದಲ್ಲಿ ಹುಟ್ಟಿ ಬಾಲ್ಯ ಕಳೆಯಲು ಕಾರಣ ಶ್ರೀ ಪರಮೇಶ್ವರವರ ಹಿರಿಯರು ಆ ಭಾಗದಲ್ಲಿ ಬಂದು ನೆಲೆಸಿದ್ದು. ಅವರ ಪೂರ್ವಜರು ದಕ್ಷಿಣ ಕನ್ನಡ ಜಿಲ್ಲೆಯಿಂದ ಈ ಭಾಗಕ್ಕೆ ಬಂದಿದ್ದರು.

೧೯೧೪ರಲ್ಲಿ (೮-೨-೧೯೧೪) ಶಿವಮೊಗ್ಗ ಜಿಲ್ಲೆ ಮಾಳೂರಿನಲ್ಲಿ ಪರಮೇಶ್ವರ ಭಟ್ಟರು ಜನಿಸಿದರು. ಅವರದು ವೈದಿಕ ಮನೆತನ. ತಂದೆ ಸದಾಶಿವರಾಯರು ಅಲ್ಲಿಯೇ ಶಾಲಾ ಶಿಕ್ಷಕರಾಗಿದ್ದರು. ತಾಯಿ ಲಕ್ಷ್ಮಮ್ಮ ಈಗಾಗಲೇ ಇಬ್ಬರು ಹೆಣ್ಣುಮಕ್ಕಳನ್ನು ಪಡೆದಿದ್ದರು. ತಂದೆ ಮಗನಿಗೆ ಕನ್ನಡ ಪುಸ್ತಕಗಳನ್ನು ಓದಲು ಪ್ರೋತ್ಸಾಹಿಸುತ್ತಿದ್ದರಲ್ಲದೆ ಪುಸ್ತಕಗಳನ್ನೂ ತಂದು ಕೊಡುತ್ತಿದ್ದರು. ಪ್ರಾಥಮಿಕ ಶಾಲೆಯಲ್ಲಿ ಕಲಿಯುತ್ತಿರುವಾಗಲೇ ಪರಮೇಶ್ವರ ಭಟ್ಟರು 'ದೇವಿ ಚೌಧರಾಣಿ' ಕಾದಂಬರಿ ಓದಿದ್ದರು. ಬೊಮ್ಮನಹಳ್ಳಿಯ ಕಿಂದರಿ ಜೋಗಿ, ಗೋವಿನ ಹಾಡು ಹಾಡಲು ಕಲಿತಿದ್ದರು. ತಂದೆಗೆ ಯಕ್ಷಗಾನ, ನಾಟಕಗಳಲ್ಲಿ ಆಸಕ್ತಿಯಿತ್ತು. ಮಗನಿಗೆ ಅವುಗಳನ್ನು ತೋರಿಸಿ ಪಾತ್ರ ವಹಿಸಲು ಪ್ರೋತ್ಸಾಹಿಸುತ್ತಿದ್ದರು. ಸಂಗೀತ ಕಲಿಯಲು ಮಗನಿಗೆ ಅವಕಾಶ ಕಲ್ಪಿಸಿಕೊಡುತ್ತಿದ್ದರು. ಪರಮೇಶ್ವರವರ ಪ್ರಥಮ ಗುರು ತಂದೆಯೇ ಆದರೂ, ಪ್ರತಿಭೆಯನ್ನು ಗುರುತಿಸಿದ ಗುರು, ಪಂಡಿತ ಕುಮಕೋಡು ನರಸಿಂಹ ಶಾಸ್ತ್ರಿಗಳು ಪರಮೇಶ್ವರನಲ್ಲಿ ಕಾವ್ಯಾಸಕ್ತಿಯನ್ನು ಬೆಳಗಿಸಲು ಪ್ರೇರಕರಾದರು. ತೀರ್ಥಹಳ್ಳಿಯಲ್ಲಿ ಪ್ರೌಢಶಾಲಾ ಶಿಕ್ಷಣ ಮುಗಿಸಿದರೂ ಅವರು ಬೆಂಗಳೂರಿನಲ್ಲಿ ಪುನಃ ಎಸ್.ಎಸ್.ಎಲ್.ಸಿ. ತರಗತಿಯಲ್ಲಿ ಅಭ್ಯಾಸ ಮಾಡಿ ಪಾಸಾಗಬೇಕಾಯಿತು. ಅಲ್ಲಿಯೇ ಇಂಟರ್ ಮಿಡಿಯೇಟ್ ಕಾಲೇಜ್ ಸೇರಿದರು. ಅಲ್ಲಿ ಹಿರಿಯ ಸಾಹಿತಿಗಳೂ, ಪ್ರಾಧ್ಯಾಪಕರೂ ಆದ ಎ. ಆರ್. ಕೃಷ್ಣಶಾಸ್ತ್ರಿ, ವಿ. ಸೀ., ಕೆ. ವೆಂಕಟರಾಮಪ್ಪನವರು ಪರಮೇಶ್ವರ ಭಟ್ಟರಿಗೆ ಕನ್ನಡ ಕಲಿಸಿದರು. ಸಾಹಿತ್ಯ ರಚನೆಗೆ ತೊಡಗಲು ಪ್ರೋತ್ಸಾಹಕರಾದರು. ಭಟ್ಟರ ಕವನಗಳು 'ಕಲಾ', 'ಸುಬೋಧ', 'ಸರಸ್ವತಿ', 'ವಿಶ್ವವಾಣಿ' ಮೊದಲಾದ ಪತ್ರಿಕೆಗಳಲ್ಲಿ 'ಸಿರಿಗನ್ನಡದ ಡಿಂಗರಿಗ' ಎಂಬ ಕಾವ್ಯನಾಮದಲ್ಲಿ ಪ್ರಕಟವಾದವು.

ಮೈಸೂರಿಗೆ ಹೋಗಿ ಕನ್ನಡದಲ್ಲಿ ಬಿ. ಎ. ಪದವಿಗೆ ಮಹಾರಾಜಾ ಕಾಲೇಜಿನಲ್ಲಿ ಅಭ್ಯಾಸ ಮಾಡಿದರು. ಮುಂದೆ ಎಂ. ಎ. (ಕನ್ನಡ) ಅಭ್ಯಾಸಕ್ಕೆ ತೊಡಗಿದರು. ಆಗ ಎಚ್. ಎಂ. ಶಂಕರನಾರಾಯಣ ಮತ್ತು ಜಿ. ವೆಂಕಟಸುಬ್ಬಯ್ಯನವರು ಸಹಪಾಠಿಗಳಾಗಿದ್ದರೆ, ಬಿ. ಎಂ. ಶ್ರೀ, ತೀ. ನಂ. ಶ್ರೀ, ಟಿ. ಎಸ್. ವೆಂಕಣ್ಣಯ್ಯ, ಡಿ. ಎಲ್. ಎನ್. ಗುರುವೃಂದದಲ್ಲಿದ್ದರು. ಕುವೆಂಪು ಅವರ ಸಂಪರ್ಕ ಬಂದು ಅವರಿಂದ ಬಹಳ ಪ್ರಭಾವಿತರಾದರು. ಅವರ ರಕ್ತಾಕ್ಷಿ ನಾಟಕದಲ್ಲಿ ಭಟ್ಟರು, ನಾ. ಕಸ್ತೂರಿಯವರೊಡನೆ ಪಾತ್ರ ವಹಿಸಿದ್ದರು. ವರ್ಡ್ಸ್‌ವರ್ತ್ ಕವಿಯ 'ಮೈಕೇಲ್' ಕವನವನ್ನು ಎಂ. ಎ. ವರ್ಗದಲ್ಲಿರುವಾಗಲೇ 'ಮಾಚಯ್ಯ' ಎಂಬ ಕಥನಕವನ್ನಾಗಿ ರೂಪಾಂತರಿಸಿದರು. ೧೯೪೫ರಲ್ಲಿ ಎಂ. ಎ. (ಕನ್ನಡ) ಉಚ್ಚ ಶ್ರೇಣಿಯಲ್ಲಿ ಪಾಸಾಗಿ ಬಿ. ಎಂ. ಶ್ರೀ ಸ್ವರ್ಣ ಪದಕ ಕೂಡಾ ಪಡೆದರು.

೧೯೪೫ರಲ್ಲಿ ಮೈಸೂರಿನ ಮಹಾರಾಣಿ ಇಂಟರ್ ಮಿಡಿಯೇಟ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಭಟ್ಟರು ವೃತ್ತಿಯಲ್ಲಿ ತೊಡಗಿದರು. ಕೆಲದಿನಗಳಲ್ಲಿ ಒಳ್ಳೆಯ ಪ್ರಾಧ್ಯಾಪಕರೆಂಬ ಹೆಸರನ್ನೂ ಪಡೆದರು. ೧೯೫೦ರಲ್ಲಿ ರಾಜಲಕ್ಷ್ಮಿಯೊಡನೆ ವಿವಾಹವಾಯಿತು. ವಿಶೇಷವೆಂದರೆ ಅದೇ ವರ್ಷ ಅವರ ಪ್ರಥಮ ಕವನ ಸಂಕಲನ 'ರಾಗಿಣಿ'ಯು ಕುವೆಂಪು ಅವರ ಮೆಚ್ಚುಗೆಯ ಮುನ್ನುಡಿಯೊಡನೆ ಪ್ರಕಟವಾಯಿತು. ತುಮಕೂರು, ಶಿವಮೊಗ್ಗ, ಮೈಸೂರುಗಳಲ್ಲಿ ಗ್ರಹಸ್ಥ ಜೀವನ ನಡೆಸುತ್ತ, ಉತ್ತಮ ಸಾಹಿತ್ಯ ರಚನೆ ಹಾಗೂ ಅನುವಾದ ಕಾರ್ಯ ಮಾಡುತ್ತ ಸಂತೃಪ್ತ ವೃತ್ತಿ ಜೀವನ ನಡೆಸಿದರು. ಮಹಾರಾಜಾ ಕಾಲೇಜಿನಲ್ಲಿ ಬಿ. ಎ., ಎಂ. ಎ. ವಿದ್ಯಾರ್ಥಿಗಳಿಗೂ ಮೆಚ್ಚಿನ ಪ್ರಾಧ್ಯಾಪಕರೆನಿಸಿಕೊಂಡು ಉಪನ್ಯಾಸ ನೀಡಿದರು. ಜೀವನದ ಬಹುಕಾಲ ಮೈಸೂರಿನಲ್ಲಿ ಕಳೆದರು. ಅನಾರೋಗ್ಯದಿಂದ ಬಳಲುತ್ತಾ ಬಹುಕಾಲ ಜೊತೆಯಾಗಿ ಬಾಳಿದ ಹೆಂಡತಿಯ ಶುಶ್ರೂಷೆಯನ್ನು ಮಾಡಿದರಲ್ಲದೆ ಮಕ್ಕಳನ್ನೂ ಚೆನ್ನಾಗಿ ಸಾಕಿ ಬೆಳೆಸಿದರು. ಇವೆಲ್ಲ ಕಷ್ಟಗಳ ಜೊತೆಗೇ ಉತ್ತಮ ಸಾಹಿತ್ಯ ರಚಿಸಿದರು.

ಮೈಸೂರಿನಲ್ಲಿ ಭಟ್ಟರ ಅನುವಾದ ಕಾರ್ಯಕ್ಕೆ ಬಹಳ ಅನುವು ಮಾಡಿಕೊಟ್ಟವರು ಅವರ ಮಿತ್ರ, ಎಚ್. ಎಂ. ಶಂಕರನಾರಾಯಣರಾಯರು. ಕಾಳಿದಾಸನು ಸಂಸ್ಕೃತದಲ್ಲಿ ರಚಿಸಿದ ಪ್ರಮುಖ ಕೃತಿಗಳಾದ ಕುಮಾರಸಂಭವ, ಮೇಘದೂತ, ರಘುವಂಶ, ಮಾಲವಿಕಾಗ್ನಿಮಿತ್ರ, ಅಭಿಜ್ಞಾನ ಶಾಕುಂತಲಗಳ ಕನ್ನಡ ಅನುವಾದಗಳನ್ನು ಮಿತ್ರರು ಪ್ರಕಟಿಸಿದರು. ಭಟ್ಟರು ಸಂಪಾದಿಸಿಕೊಟ್ಟ ಶ್ರೀರಾಮ ಪಟ್ಟಾಭಿಷೇಕ, ಅದ್ಭುತ ರಾಮಾಯಣಗಳನ್ನು ಉಷಾ ಸಾಹಿತ್ಯ ಮಾಲೆಯ ಶ್ರೀ ಹಬ್ಬು ಅವರು ಪ್ರಕಟಿಸಿದರು. ೧೯೬೦ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರವಾಚಕರಾಗಿ ಭಟ್ಟರು ಬಂದು, ಅಧ್ಯಾಪನ ಕಾರ್ಯ ಮಾಡಿದರು.

೧೯೬೮ರಲ್ಲಿ ಮಂಗಳೂರಿನಲ್ಲಿ ಸ್ನಾತಕೋತ್ತರ ಅಧ್ಯಯನ ಕೇಂದ್ರ ಪ್ರಾರಂಭವಾದಾಗ ಅದಕ್ಕೆ ಭಟ್ಟರನ್ನೇ ಪ್ರಾಧ್ಯಾಪಕ ಹಾಗೂ ನಿರ್ದೇಶಕರನ್ನಾಗಿ

ನೇಮಿಸಲಾಯಿತು. ಕೇಂದ್ರಕ್ಕೆ ಮಂಗಳ ಗಂಗೋತ್ರಿ ಎಂದು ಹೆಸರು ಕೊಟ್ಟು ಅದನ್ನು ಜನಪ್ರಿಯಗೊಳಿಸಿದರು. ಅವರ ಖ್ಯಾತ ಶಿಷ್ಯಗಣದಲ್ಲಿ ಲಕ್ಕಪ್ಪಗೌಡ, ಗುಂಡ್ಮಿ ಚಂದ್ರಶೇಖರ ಐತಾಳ ಮತ್ತು ವಿವೇಕ ರೈ ಆಗ ತರುಣ ವಿದ್ಯಾರ್ಥಿಗಳಾಗಿದ್ದರು. ಹಿಂದೆ ಮೈಸೂರಿನಲ್ಲಿದ್ದ ಭಟ್ಟರು ತಮ್ಮ ಗ್ರಂಥಗಳನ್ನು ಪ್ರಕಟಿಸಲೆಂದು 'ಸರಸ ಸಾಹಿತ್ಯ ಪ್ರಕಾಶನ ಸ್ಥಾಪಿಸಿದ್ದರು. ಮಂಗಳೂರಿನಲ್ಲಿ 'ಪಲಂಚವಿ' ಎಂಬ ಪ್ರಕಾಶನ ಸಂಸ್ಥೆಯನ್ನು ಪ್ರಾರಂಭಿಸಿ ಹಲವಾರು ಉತ್ತಮ ಕೃತಿಗಳನ್ನು ಪ್ರಕಟಿಸಿದರು.

ಪರಮೇಶ್ವರ ಭಟ್ಟರ ವೈವಿಧ್ಯಪೂರ್ಣ ಸಾಹಿತ್ಯ ಹಾಗೂ ಅನುವಾದಗಳು ಪ್ರಕಟವಾಗತೊಡಗಿದವು. ಹಲವಾರು ಸಾಹಿತ್ಯಕ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಆಸಕ್ತಿ ವಹಿಸಿ ಪಾಲ್ಗೊಳ್ಳುತ್ತಿದ್ದರು. ದಕ್ಷಿಣ ಕನ್ನಡ ಜನರ ಪ್ರೀತಿ, ಕರಾವಳಿಯ ಪರಿಸರ, ಯಕ್ಷಗಾನಗಳ ಪ್ರಯೋಗಗಳು, ಉತ್ಸವಗಳು ಅವರಿಗೆ ಪ್ರಿಯವಾಗಿದ್ದವು. ಸರಸವಾಗಿ ವಿನೋದವನ್ನು ತಮ್ಮ ಚತುರ ಭಾಷಣದಲ್ಲಿ ತಂದು, ಜನರನ್ನು ನಲಿಸುವ ಅವರ ಮೋಡಿ ಜನಾಕರ್ಷಕವಾಗಿತ್ತು.

೧೯೭೪ರಲ್ಲಿ ನಿವೃತ್ತರಾಗಿ ಮತ್ತೆ ಮೈಸೂರಿಗೆ ಮರಳಿ ತಮ್ಮ ಸ್ವಂತ ಮನೆಯಲ್ಲಿ ವಾಸಿಸತೊಡಗಿದರು. ಕೆಲಕಾಲ ಯು.ಜಿ.ಸಿ.ಯ ಗೌರವ ಪ್ರಾಧ್ಯಾಪಕರಾಗಿದ್ದರು. ಕುವೆಂಪು ಅವರ ಬಗ್ಗೆ ಪ್ರೌಢ ಪ್ರಬಂಧ ರಚಿಸಿದರು. ವೃತ್ತಿಯಿಂದ ನಿವೃತ್ತರಾದರೂ ತಮ್ಮ ಲೇಖನ ಕಾರ್ಯದಲ್ಲಿ ನಿವೃತ್ತರಾಗಲಿಲ್ಲ. ಬದಲಾಗಿ ನಿವೃತ್ತಿಯ ನಂತರ ತಮ್ಮ ಬರವಣಿಗೆ ಹೆಚ್ಚಾಗಲು ಬಹಳ ಸಮಯ, ಅನುಕೂಲತೆಗಳು ಅವರಿಗೆ ದೊರೆತವು.

ಸುದೀರ್ಘ ಕಾಲ, ತುಂಬು ಬಾಳನ್ನು ನಡೆಸಿ ಸಾಧನೆಗಳನ್ನು ಪಡೆದ ಭಟ್ಟರಿಗೆ ಶ್ರೇಷ್ಠ ಅನುವಾದ ಕಾರ್ಯಕ್ಕಾಗಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ. ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. 'ಪೂರ್ಣಕುಂಭ', 'ಪರಮೇಶ್ವರ ಪ್ರಶಸ್ತಿ' ಇತ್ಯಾದಿ ಅಭಿನಂದನ ಗ್ರಂಥಗಳ ಮುಖಾಂತರ ಸನ್ಮಾನ ದೊರೆತಿದೆ. ಗೌರವ ಡಾಕ್ಟರೇಟ್, ಚಾವುಂಡರಾಯ ಪ್ರಶಸ್ತಿ, ಕ. ಸಾ. ಪರಿಷತ್ತಿನ ಗೌರವ ಸದಸ್ಯತ್ವ ದೊರೆತಿವೆ.

ಹೀಗೆ ಬಹುಕಾಲ ಜೀವನದ ಕಹಿಯುಂಡು ಬಾಳಿದ ಪರಮೇಶ್ವರ ಭಟ್ಟರು ಕನ್ನಡಕ್ಕೆ ಕೊಟ್ಟದ್ದು ಉತ್ತಮ ಸಾಹಿತ್ಯವನ್ನೇ. ಭಾರತದ ಶ್ರೇಷ್ಠ ಅನುವಾದಕರೆಂದು ಗೌರವಿಸಬಹುದಾದ ಸಮರ್ಥ ವ್ಯಕ್ತಿ. ಹಿರಿಯ ಚೇತನ ೨೦೦೦ ಇಸ್ವಿಯಲ್ಲಿ ಇಹಲೋಕ ಯಾತ್ರೆ ಮುಗಿಸಿ ಕನ್ನಡ ಸಾರಸ್ವತ ಲೋಕದಲ್ಲಿ ಪ್ರತಿಷ್ಠಿತ ಅಮರ ವ್ಯಕ್ತಿಯಾಗಿ ಶೋಭಿಸುತ್ತಿದ್ದಾರೆ. ಪಂಡಿತ-ಸಾಹಿತಿಗಳ ಅಭಿಮಾನದ ಮಿತ್ರರಾಗಿ ಹಾಗೂ ವಿನೂತನ ಕನ್ನಡ ಸಾಹಿತ್ಯದ ಕೊಂಡಿಯಾಗಿ ಪರಿಣಮಿಸಿದ್ದಾರೆ.

ಪ್ರತಿಭೆ, ಅಭ್ಯಾಸ, ಅನುಭವಗಳ ಸಂಪತ್ತನ್ನು ಪಡೆದು ಸುದೀರ್ಘವಾಗಿ ಬಾಳಿ ಬೆಳಗಿದ ಪರಮೇಶ್ವರ ಭಟ್ಟರು ಸುಮಾರು ೬೦ ಕನ್ನಡ ಕೃತಿಗಳನ್ನು ಕನ್ನಡ ಸಾಹಿತ್ಯ ಕಣಜಕ್ಕೆ ಸಮರ್ಪಿಸಿ ಕೃತಾರ್ಥರಾಗಿದ್ದಾರೆ. ಆಧುನಿಕ ಕನ್ನಡ ಸಾಹಿತ್ಯ ರಚನಾಕಾರರ ಎರಡನೆಯ ಹಾಗೂ ಮೂರನೆಯ ಪೀಳಿಗೆಯವರೊಡನೆ ಬಾಳಿ, ಕವನ, ವಚನ, ಮುಕ್ತಕಗಳನ್ನು ಮತ್ತು

ತ್ರಿಪದಿ ಸಾಂಗತ್ಯ ರಚಿಸಿದ್ದನ್ನು ವಿಶೇಷವಾಗಿ ಉಲ್ಲೇಖಿಸಬೇಕು. ಅನುವಾದ ಕಾರ್ಯದಲ್ಲಿ ಗಮನಾರ್ಹ ಸೇವೆ ಸಲ್ಲಿಸಿದ್ದಾರೆ. ವಿಮರ್ಶೆ, ಸಂಪಾದನಾ ಕಾರ್ಯವನ್ನು ಸಮರ್ಥವಾಗಿ ನಿಭಾಯಿಸಿದ್ದಾರೆ. ಉಪನ್ಯಾಸ, ಪ್ರಬಂಧ, ಮುನ್ನುಡಿ, ಗಾದೆಗಳ ರಚನೆ ಭಟ್ಟರ ವೈವಿಧ್ಯಮಯ ಲೇಖನ ಕಾರ್ಯಕ್ಕೆ ಸಾಕ್ಷ್ಯ ಒದಗಿಸುತ್ತವೆ.

ಕವಿ ಎಂದೇ ಖ್ಯಾತರಾದ ಭಟ್ಟರು ಪ್ರಾರಂಭದಲ್ಲಿ ಭಾವಗೀತೆಗಳನ್ನು ರಚಿಸಿದ್ದಾರೆ. ರಾಗಿಣಿ, ಗಗನ ಚುಕ್ಕಿ, ಅಂಚೆಯ ಪೆಟ್ಟಿಗೆ, ಕೃಷ್ಣ ಮೇಘ, ಸಂಜೆ ಮಲ್ಲಿಗೆ ಮೊದಲಾದುವು ಅವರ ಕವನ ಸಂಕಲನಗಳು ಇವರ ಪ್ರಸಿದ್ಧ ಭಾವಗೀತೆಗಳಲ್ಲಿ ಹೂವೊಂದರ ಕತೆ, ಒಂದು ರಾತ್ರಿ, ತಿಳಿನಗೆ ಮೂಡಿಸುವ ಅತಿಥಿಗೆ ಮೊದಲಾದುವುಗಳನ್ನು ಸ್ಮರಿಸಬಹುದು. ಭಾವಗೀತೆಗಳಿಂದ ಮುಕ್ತಕ ರಚನೆಯ ಕಡೆಗೆ ಮನ ಮಾಡಿದ ಭಟ್ಟರು, ಚಂದ್ರವೀಧಿ, ಇಂದ್ರ ಚಾಪ, ತುಂಬೆ ಹೂ, ಚಿತ್ರಕಥೆ, ಮೊದಲಾದವುಗಳ ಸಂಗ್ರಹ ಪ್ರಕಟಿಸಿದ್ದಾರೆ. ಇಂದ್ರಚಾಪದಲ್ಲಿ ಸಾಂಗತ್ಯ ರೂಪದಲ್ಲಿ ರಚಿತವಾದ ಮುಕ್ತಕಗಳಿವೆ. ಸಂಸಾರದ ತೊಂದರೆಗಳನ್ನು ಎದುರಿಸುವ ಕವಿಯ ಅನುಭವಗಳು ಈ ಮುಕ್ತಕ ಸಂಗ್ರಹದಲ್ಲಿವೆ. ಹಾಸ್ಯವು ಭಟ್ಟರ ಕಾವ್ಯದ ಮುಖ್ಯ ಲಕ್ಷಣಗಳೆಂದರೆ ತಪ್ಪಾಗಲಾರದು.

'ಸುರಗಿ ಸುರಹೊನ್ನೆ' ಏಳುನೂರು ತ್ರಿಪದಿಗಳ ಸಂಗ್ರಹವಾಗಿದ್ದು ಅದು ೧೯೬೭ರಲ್ಲಿ ಪ್ರಕಟವಾಗಿದೆ. ತುಂಬೆ ಹೂವಿನಲ್ಲಿ ಎಳುನೂರು ಚೊಕ್ಕ ಏಳೆಗಳಿವೆ. ಜೀವನದಲ್ಲಿ ಮಧುರವಾದ ಹಾಗೂ ಕಟುವಾದ ಅನುಭವಗಳಲ್ಲಿ ಆಶಾವಾದ ಪ್ರಕಟವಾಗಿದೆ. ಮಾಚಯ್ಯ, ಜಹನಾರ ಇವು ನೀಳ್ಗವನಗಳು.

ವಚನಗಳ ರಚನೆಯೂ ಭಟ್ಟರ ವೈಶಿಷ್ಟ್ಯವಾಗಿದೆ. ಉಪ್ಪು ಕಡಲು, ಪಾಮರ, ಅಂಬರ ಇವು ಅವರ ವಚನ ಸಂಗ್ರಹಗಳು. ವಿಚಾರಗಳ ಚಿಂತನ-ಮಂಥನ, ವಿಡಂಬನೆಯ ಚುರುಕು ಹಾಗೂ ದಿನಬಳಕೆಯ ಮಾತಿನಲ್ಲಿಯೇ ರೂಪಕಗಳ ನಿರ್ಮಾಣ ಗಮನಾರ್ಹವಾಗಿವೆ.

ಪಾಶ್ಚಾತ್ಯ ಶಿಕ್ಷಣದ ಪ್ರಭಾವದಿಂದ ಕನ್ನಡ ಸಾಹಿತಿಗಳು ನವ್ಯ ಕಾವ್ಯ ರಚಿಸಲು ತೊಡಗಿದಾಗ ಅದಕ್ಕೆ ಒಂದು ರೀತಿಯ ಶಾಂತ ಪ್ರತಿಭಟನೆ ಎನ್ನುವಂತೆ ಭಟ್ಟರು ನಮ್ಮ ದೇಶದ ಸಂಸ್ಕೃತ ಕಾವ್ಯ ಅಭ್ಯಾಸಕ್ಕೆ ತೊಡಗಿದರು. ಹಾಗೂ ಕನ್ನಡದಲ್ಲಿ ಅವುಗಳನ್ನು ಕಾವ್ಯರೂಪದಲ್ಲಿ ಅನುವಾದಿಸಿದರು. ನಿರಂತರವಾಗಿ ಮುಂದೆಯೂ ಅನುವಾದ ಕಾರ್ಯವನ್ನು ಒಂದು ವ್ರತವನ್ನಾಗಿ ಮಾಡುತ್ತಾ ಬಂದರು.

ವಿಶೇಷವೆಂದರೆ ಅವರು ಸಂಸ್ಕೃತ ಮಹಾಕವಿಗಳ ಸಮಗ್ರ ಕೃತಿಗಳನ್ನು ಅನುವಾದಿಸಿದ್ದು. ಹೀಗೆ ಸಮಗ್ರ ಸಂಪುಟಗಳ ಅನುವಾದ – ಭಾರತೀಯ ಭಾಷೆಗಳಲ್ಲಿ – ಕನ್ನಡದಲ್ಲಿ ಮಾತ್ರ ಭಟ್ಟರು ಮಾಡಿದ್ದು, ಶ್ಲಾಘನೀಯ. ಅದೂ ಕಾವ್ಯ ರೂಪದಲ್ಲಿ ಮತ್ತು ಸಂಸ್ಕೃತ ಪಾಠಗಳ ಸಮೇತ. ಭಟ್ಟರ ಪಾಂಡಿತ್ಯ ಮತ್ತು ಸಹಜ ಕವಿತಾ ರಚನಾ ಸಾಮರ್ಥ್ಯ ಎದ್ದು ಕಾಣುತ್ತವೆ. ಇವರ ಕೃತಿಗಳನ್ನು ಅವಲೋಕಿಸಿದರೆ ಗುಣ ಗಾತ್ರದ ದೃಷ್ಟಿಯಿಂದ ಅರ್ಧದಷ್ಟು ಕೃತಿಗಳು ಅನುವಾದವಾಗಿವೆ.

—

ಕಾಳಿದಾಸ, ಭಾಸ, ಭವಭೂತಿ, ಶ್ರೀಹರ್ಷ, ಅಶ್ವಘೋಷ, ಹಾಲ, ಅಮರ ಜಯದೇವ ಮೊದಲಾದವರನ್ನು ಕನ್ನಡಕ್ಕೆ (ಸಂಸ್ಕೃತ ಬಾರದಿರುವವರಿಗೆ ವಿಶೇಷವಾಗಿ) ಸಮಗ್ರವಾಗಿ ಪರಿಚಯಿಸಿ ಉಪಕಾರ ಮಾಡಿದ್ದಾರೆ.

ಪರಮೇಶ್ವರ ಭಟ್ಟರ ವಿಮರ್ಶಾ ಕೃತಿಗಳು ಮೂರು ಮಾತ್ರ ಇವೆ. ಭಟ್ಟರು ಹಳೆಯ ಮತ್ತು ಹೊಸ ಕಾವ್ಯಗಳ ರಸ ವಿಮರ್ಶೆ ಮಾಡಿದ್ದಾರೆ. 'ಅಕ್ಕಮಹಾದೇವಿ' ಮತ್ತು 'ಭಾವಗೀತೆ' ಪ್ರಚಾರೋಪನ್ಯಾಸದ ಚಿಕ್ಕ ಹೊತ್ತಿಗೆಗಳು, ಕವಿ-ಕಾವ್ಯ ಪರಿಚಯಿಸುವ ಕೃತಿಗಳಾಗಿವೆ. 'ಸೀಳು ನೋಟ'ದಲ್ಲಿ ಪ್ರೌಢ ವಿಮರ್ಶಾ ಲೇಖನಗಳಿವೆ. ಅವರ ಕೊನೆಯ ಪ್ರಕಟಿತ ವಿಮರ್ಶಾ ಗ್ರಂಥ 'ರಸಋಷಿ ಕುವೆಂಪು' ಕವಿಯ ಬಗ್ಗೆ, ಅವರ ಕೃತಿಗಳ ಬಗ್ಗೆ ಬರೆದ ಸುದೀರ್ಘ ಪ್ರೌಢ ಪ್ರಬಂಧ.

ಭಟ್ಟರು ಪ್ರಶಸ್ತಿಗಳಿಗಾಗಿ ಹಂಬಲಿಸಿದವರಲ್ಲ. ತಮ್ಮ ಕಾರ್ಯವನ್ನು ನಿರ್ಲಿಪ್ತಭಾವದಿಂದ ಮಾಡಿದವರು. ಸಲ್ಲಬಹುದಾದಷ್ಟು, ಸಲ್ಲಬೇಕಾದಷ್ಟು ಸನ್ಮಾನ, ಪ್ರಶಸ್ತಿಗಳು ಅವರಿಗೆ ಲಭಿಸಲಿಲ್ಲ ಎಂದೆನಿಸುತ್ತದೆ.

ಹಲವು ಪ್ರಶಸ್ತಿಗಳು, ಸನ್ಮಾನಗಳು ಹಾಗೂ ಡಾಕ್ಟರೇಟ್ ಪದವಿ ದೊರೆತಿವೆ. ಎರಡು ಅಭಿನಂದನ ಗ್ರಂಥಗಳನ್ನು ಸಮರ್ಪಿಸಲಾಗಿದೆ. ಪರಮೇಶ್ವರ ಭಟ್ಟರು ಗತಿಸಿಹೋದರೂ ತಮ್ಮ ಕೃತಿಗಳಿಂದ ಕೀರ್ತಿಶೇಷರಾಗಿದ್ದಾರೆ.

## ಎಸ್. ವಿ. ಪರಮೇಶ್ವರ ಭಟ್ಟರ ಜೀವನ ವಿವರ

**ಜನನ :** ೧೯೧೪ (೮-೨-೧೯೧೪) ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ, ಮಾಳೂರಿನಲ್ಲಿ.

**ಶಿಕ್ಷಣ :** ತೂದೂರುಕಟ್ಟೆ (ಪ್ರಾಥಮಿಕ), (ಪ್ರೌಢಶಾಲೆ), ಬೆಂಗಳೂರು (ಕಾಲೇಜ್), ಮೈಸೂರು ಮಹಾರಾಜಾ ಕಾಲೇಜ್, ಎಂ. ಎ. (ಕನ್ನಡ),

**ವೃತ್ತಿ :** ಅಧ್ಯಾಪಕರಾಗಿ ನೇಮಕ, ಅನಂತರ ಮೈಸೂರು ವಿ.ವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರು ೧೯೬೮ರ ವರೆಗೆ, ಮಂಗಳೂರು ಸ್ನಾತಕೋತ್ತರ ಕೇಂದ್ರದ ನಿರ್ದೇಶಕರು ೧೯೬೮-೧೯೭೪.

**ನಿವೃತ್ತಿ :** ೧೯೭೪

**ಗೌರವ :** ೧೯೭೦ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವದಲ್ಲಿ. ೧೯೭೧ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ, ೧೯೭೨ ಅಭಿನಂದನ ಗ್ರಂಥ 'ಪೂರ್ಣ ಕುಂಭ' ಅರ್ಪಣೆ ೧೯೯೦ ಕೇಂದ್ರ ಸಾಹಿತ್ಯ ಅಕಾಡೆಮಿಯ ಭಾಷಾಂತರ ಪ್ರಶಸ್ತಿ 'ಕಾಳಿದಾಸ' ಮಹಾಸಂಪುಟಕ್ಕೆ ೧೯೯೫ ಮೈಸೂರು ಮತ್ತು ಕುವೆಂಪು ವಿಶ್ವವಿದ್ಯಾನಿಲಯಗಳಿಂದ ಡಿ.ಲಿಟ್ ಗೌರವ, ೧೯೯೫. ಚಾವುಂಡರಾಯ ಪ್ರಶಸ್ತಿ, ೧೯೯೫ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಸದಸ್ಯತ್ವ.

**ನಿಧನ :** ೨೦೦೦ (೨೭-೧೦-೨೦೦೦).

## ಎಸ್. ವಿ. ಪರಮೇಶ್ವರ ಭಟ್ಟರ ಕೃತಿಗಳು

**ಕವನ :** ರಾಗಿಣಿ, ಗಗನ ಚುಕ್ಕಿ, ಸಂಜೆ ಮಲ್ಲಿಗೆ, ಅಂಚೆಯ ಪೆಟ್ಟಿಗೆ, ಇಂದ್ರಗೋಪ.

**ವಚನ :** ಉಪ್ಪು ಕಡಲು, ಪಾಮರ, ಅಂಬರ, ಕೃಷ್ಣಮೇಘ, ಜಹನಾರ (ನೀಳ್ಗವನ),

**ಮುಕ್ತಕ ಸಂಕಲನ :** ಇಂದ್ರಚಾಪ, ಚಂದ್ರವೀಧಿ, ಚಿತ್ರಪಥ, ಸುರಗಿ, ಸುರಹೊನ್ನೆ, ತುಂಬೆ ಹೂವು.

**ಅನುವಾದ :** ಕನ್ನಡ ಕಾಳಿದಾಸ ಮಹಾಸಂಪುಟ, ಕನ್ನಡ ಭಾಸ ಮಹಾ ಸಂಪುಟ, ಕನ್ನಡ ಹರ್ಷ ಮಹಾಸಂಪುಟ, ಕನ್ನಡ ಬುದ್ಧ ಚರಿತೆ, ಕನ್ನಡ ಗಾತಾ ಸಪ್ತಶತಿ, ಕನ್ನಡ ಅಮರುಕ ಶತಕ, ಕನ್ನಡ ಗೀತ ಗೋವಿಂದ, ಕನ್ನಡ ಕವಿ ಕೌಮುದಿ, ಕನ್ನಡ ಭರ್ತೃಹರಿಯ ಶತಕತ್ರಯ, ಕೆಲವು ಇಂಗ್ಲಿಷ್ ಪ್ರಬಂಧಗಳು, ಮಾಚಯ್ಯ.

**ವಿಮರ್ಶೆ :** ಸೀಳುನೋಟ, ಲೇಖನಗಳು, ಭಾಷಣಗಳು, ಪ್ರಬಂಧಗಳು, ಅಕ್ಕಮಹಾದೇವಿ, ಭಾವಗೀತೆ, ಮುನ್ನುಡಿಗಳು, ಕಾಣ್ಕೆ, ಬದುಕು-ಬೆಳಕು ಸ್ಮೃತಿಗಳು, ಸಮೀಕ್ಷೆಗಳು, ರಸಋಷಿ ಕುವೆಂಪು.

**ಸಂಕಲನ :** ಅರವತ್ತರ ಅರಳು, ಆಯ್ದ ಕವನಗಳು.

**ಸಂಪಾದಿತ :** ಮುದ್ದಣ ಕವಿಯ ಶ್ರೀರಾಮ ಪಟ್ಟಾಭಿಷೇಕಂ, ಮುದ್ದಣ ಕವಿಯ ಅದ್ಭುತ ರಾಮಾಯಣಂ,

**ಗಾದೆಗಳು :** ಮಂಥನ, ನೆನಪಿಗೆ ಬಂದ ಗಾದೆಗಳು. ಮಕ್ಕಳ

**ಸಾಹಿತ್ಯ :** ಭೂಮಿ ಮತ್ತು ಧೂಮಕೇತು, ಕಣ್ಣು ಮುಚ್ಚಾಲೆ.

✵ ✵ ✵

# ಭಾರತೀಸುತ

ಪ್ರಾದೇಶಿಕ ಜೀವನ ಚಿತ್ರವನ್ನು ಬಹಳ ಯಶಸ್ವಿಯಾಗಿ ತಮ್ಮ ಕಥೆ ಕಾದಂಬರಿಗಳಲ್ಲಿ ಮೂಡಿಸಿದ ಕೆಲವೇ ಕನ್ನಡ ಸಾಹಿತಿಗಳಲ್ಲಿ ಭಾರತೀಸುತರ ಹೆಸರನ್ನು ಮರೆಯಲು ಸಾಧ್ಯವಿಲ್ಲ. ಮಿರ್ಜಿ ಅಣ್ಣಾರಾಯರು, ರಾವ್ ಬಹಾದ್ದೂರ್ ಮೊದಲಾದವರಂತೆ ಭಾರತೀಸುತರು ತಮ್ಮ ಕರಾವಳಿ ಪ್ರದೇಶದ ಗ್ರಾಮೀಣ ಜೀವನದ ಒಳ ಪದರುಗಳನ್ನು ಕಂಡು ಚಿತ್ರಿಸಿದ್ದಾರೆ. ಅವರ ಭಾಷೆ ಹೋರಾಟಗಳನ್ನು ನಿರೂಪಿಸಿದ್ದಾರೆ. ಕೇರಳ, ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಕರಾವಳಿಯ ಚಿತ್ರಣದೊಡನೆ ಕೊಡಗಿನ ಜೀವನವನ್ನೂ ಯಥಾವತ್ತಾಗಿ ಚಿತ್ರಿಸಿದ್ದು ಕಂಡುಬರುತ್ತದೆ.

ಶಾನಭಾಗ್ ರಾಮಯ್ಯ ನಾರಾಯಣರಾವ್ ಅವರು ತಮ್ಮ ಕಾವ್ಯನಾಮ 'ಭಾರತೀಸುತ'ದಿಂದಲೇ ಪ್ರಖ್ಯಾತರಾಗಿದ್ದಾರೆ.

೧೯೧೫ರಲ್ಲಿ (೧೫-೫-೧೯೧೫) ಮಡಿಕೇರಿಯಿಂದ ಆರು ಮೈಲು ದೂರವಿರುವ ಬಿಳಿಗೇರಿ ಎಂಬ ಗ್ರಾಮದಲ್ಲಿ ಭಾರತೀಸುತರು ಜನಿಸಿದರು. ಕೊಡಗಿನಲ್ಲಿ ರಾಜರು ಆಳುತ್ತಿದ್ದ ಕಾಲದಲ್ಲಿ ಇವರ ಮನೆತನದವರು ಬಹಳ ಸಿರಿವಂತ ಶಾನಭೋಗರಾಗಿದ್ದರು. ಕಾಲಕ್ರಮೇಣ ಇವರ ಕುಟುಂಬ ವೈಭವ ಕಳೆದುಕೊಂಡು ಇವರ ತಂದೆಯ ಕಾಲಕ್ಕೆ ಬಡತನದ ಸ್ಥಿತಿಗೆ ಬಂದಿತ್ತು.

ಮಡಿಕೇರಿಯಲ್ಲಿ ಪ್ರೌಢ ಶಾಲೆಯಲ್ಲಿ ಕಲಿಯುತ್ತಿದ್ದಾಗ ಪಂಜೆ ಮಂಗೇಶರಾಯರು ಇವರ ಗುರುಗಳಾಗಿದ್ದರು. ಆಗಿನಿಂದಲೇ ಅಂದರೆ ತಮ್ಮ ಹದಿಮೂರನೆಯ ವಯಸ್ಸಿನಿಂದಲೇ ಬರವಣಿಗೆ ಶುರು ಮಾಡಿದ್ದರು. ಆಗ ಭಾರತದ ಸ್ವಾತಂತ್ರ್ಯ ಆಂದೋಲನ ಎಲ್ಲೆಡೆ ಪಸರಿಸಿತ್ತು. ಭಾರತೀಸುತರು ಆಂದೋಲನದಲ್ಲಿ ಪಾಲ್ಗೊಂಡದ್ದಕ್ಕಾಗಿ ಪೊಲೀಸರಿಂದ ಪೆಟ್ಟು ತಿಂದು, ಸರಕಾರೀ ಶಾಲೆಯಿಂದ ಹೊರಹಾಕಲ್ಪಟ್ಟು, ೧೯೩೨ರಲ್ಲಿ ಕೊಡಗಿನಿಂದ ಹೊರ ತಳ್ಳಲ್ಪಟ್ಟರು. ಮತ್ತು ಕೇರಳದ ವೈನಾಡಿನಲ್ಲಿ ಬಂಧಿಸಿ ಇಡಲಾಯಿತು. ಕೇರಳದ ಸುಪ್ರಸಿದ್ಧ ಸಮಾಜವಾದಿ ಮುಖಂಡರಾದ ನಂಬೂದ್ರಿಪಾದ್, ಎ. ಕೆ. ಗೋಪಾಲನ್ ಮೊದಲಾದ ಗಣ್ಯರ ಸಂಪರ್ಕ ಪ್ರಾಪ್ತವಾಯಿತು. ಪರಿಣಾಮವಾಗಿ ಭಾರತೀಸುತರು ಸಮಾಜವಾದಿ ಚಿಂತನದೆಡೆಗೆ ಆಕರ್ಷಿತರಾದರು ಮತ್ತು ದೀನ ದಲಿತರ ಬಗ್ಗೆ ವಿಶೇಷ ಪ್ರೇಮ ಹೊಂದಿದರು.

ಸೆರೆಮನೆಯಿಂದ ಬಿಡುಗಡೆಯಾಯಿತು. ಆದರೆ ತಮ್ಮ ಕುಟುಂಬದವರ ಹಾಗೂ ಸಂಬಂಧಿಕರ ತಿರಸ್ಕಾರ ಭಾವದಿಂದಾಗಿ ತಮ್ಮ ಮಡಿಕೇರಿ ಮನೆಗೆ ಮರಳಲಿಲ್ಲ. ಬದಲಾಗಿ ಕಲ್ಲಿಕೋಟೆಗೆ ಹೋಗಿ ಬಂದರಿನಲ್ಲಿ ದಿನಗೂಲಿಯಾಗಿ ದುಡಿಯಬೇಕಾಯಿತು. ಇಂಥ ಬಾಳಿಗೆ ಮುಕ್ತಿ ದೊರೆತದ್ದು ೧೯೩೬ರಲ್ಲಿ. ವೈನಾಡಿನ ಕಾಫಿ ಎಸ್ಟೇಟಿನಲ್ಲಿ ಉಸ್ತುವಾರಿ ಕೆಲಸ ಆರು ವರ್ಷ ನಿರ್ವಹಿಸಿದರು. ಅಲ್ಲಿಯ ಕನ್ನಡ ಜಮೀನ್ದಾರರ ಪ್ರೋತ್ಸಾಹದಿಂದ ಭಾರತೀಸುತರು ಕೃತಿ ರಚನೆಗೆ ತೊಡಗಿದರು. ಶೇಷಾಚಲ ಗ್ರಂಥ ಮಾಲೆಯಲ್ಲಿ ಪ್ರಕಟವಾದ ಅವರ ಮೊದಲ ಗ್ರಂಥ ಅವರಿಗೆ ಜನಪ್ರಿಯತೆಯನ್ನು ಗಳಿಸಿಕೊಟ್ಟಿತು. ಸದಾ ಪುಸ್ತಕ ಓದುವುದರಲ್ಲಿ ಮಗ್ನರಾಗಿರುತ್ತಿದ್ದ ಜೀವಿ ಅವರು.

೧೯೪೧ರಲ್ಲಿ ನಾಗವೇಣಿಯವರೊಡನೆ ಭಾರತೀಸುತರ ವಿವಾಹವಾಯಿತು. ೧೯೪೨ರಲ್ಲಿ ಕೊಡಗಿನ ರಾಮಸ್ವಾಮಿ ಕಣಿವೆಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಾದರು. ೧೯೪೫ರಲ್ಲಿ ಮದ್ರಾಸ್ ವಿಶ್ವವಿದ್ಯಾಲಯದಿಂದ 'ಕನ್ನಡ ವಿದ್ವಾನ್' ಪದವಿ ಪಡೆದುಕೊಂಡು, ಪ್ರೌಢ ಶಾಲೆಗಳಲ್ಲಿ ಕನ್ನಡ ಪಂಡಿತರೆಂದು ದುಡಿದರು. ಹೀಗೆ ಮಡಿಕೇರಿ, ವಿರಾಜಪೇಟೆಗಳಲ್ಲಿ ಶಿಕ್ಷಕರಾಗಿ ದುಡಿದು ೧೯೭೩ರಲ್ಲಿ ನಿವೃತ್ತರಾದರು. ೧೯೭೬ರಲ್ಲಿ (೪-೪-೧೯೭೬) ಮರಣವನ್ನಪ್ಪಿದರು. ಆಗ ಅವರಿಗೆ ೬೧ ವರ್ಷ. ಅವರಿಗೆ ಅದೇ ವರ್ಷ ರಾಜ್ಯ ಸಾಹಿತ್ಯ ಅಕಾಡೆಮಿಯು ಮರಣೋತ್ತರ ಪ್ರಶಸ್ತಿಯನ್ನು ಕೊಟ್ಟಿತು. 'ಬ್ರಹ್ಮಗಿರಿ' ಎಂಬ ಅವರ ಅಭಿನಂದನಾ ಗ್ರಂಥ ಪ್ರಕಟವಾಗಿದೆ.

ನೇರವಾಗಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡಿದ್ದರೂ ಅದಕ್ಕಾಗಿ ಭಾರತ ಸ್ವಾತಂತ್ರ್ಯ ಪಡೆದ ನಂತರ ವೈಯಕ್ತಿಕ ಪ್ರಯೋಜನ, ಲಾಭಗಳಿಗೆ ಆಸೆ ತೋರದಷ್ಟು ನಿಷ್ಠಾವಂತ ಹೋರಾಟಗಾರರಾಗಿದ್ದರು. ಸ್ವಾತಂತ್ರ್ಯಪೂರ್ವ ಕಾಲದಿಂದ ಸ್ವಾತಂತ್ರ್ಯೋತ್ತರ ಕಾಲದವರೆಗೆ ಪ್ರಾದೇಶಿಕ ಹಿನ್ನೆಲೆಯಲ್ಲಿ ಅಂದಿನ ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಆಗುಹೋಗುಗಳನ್ನು ತಮ್ಮ ಕೃತಿಗಳ ಮುಖಾಂತರ ನಮಗೆ ಪರಿಚಯಿಸಿದ್ದಾರೆ. ಕಾದಂಬರಿ, ಕಥೆಗಳಲ್ಲದೆ ಶಿಶು ಸಾಹಿತ್ಯ, ಅನುವಾದ ಮತ್ತು ವಯಸ್ಕರಿಗಾಗಿ ಸಾಹಿತ್ಯಗಳನ್ನು ರಚಿಸಿದ್ದಾರೆ. ಅವರ ಕಥೆ-ಕಾದಂಬರಿಗಳಿಗೆ ಹೆಚ್ಚು ಮನ್ನಣೆ ದೊರೆತಿದೆ.

೧೯೨೮ರಲ್ಲಿ ಭಾರತೀಸುತರ ಮೊದಲ ಕಥೆ ಪ್ರಕಟವಾಯಿತು. 'ಪೃಥ್ವೀರಾಜ' ಅವರು ರಚಿಸಿದ ಮೊದಲ ಕಾದಂಬರಿಯಾಗಿದೆ. 'ಜಯಂತಿ' ಮಾಸಪತ್ರಿಕೆಯಲ್ಲಿ ಭಾರತೀಸುತರ ಹಲವಾರು ಕಥೆಗಳು ಪ್ರಕಟವಾಗಿವೆ. ದಲಿತರ ಮತ್ತು ಶೋಷಿತರ ಕುರಿತು ಅವರು ಪ್ರಗತಿಶೀಲ ಸಾಹಿತ್ಯ ಚಳವಳಿಗಿಂತ ಮೊದಲೇ ಕಥೆಗಳನ್ನು ರಚಿಸಿ ಪ್ರಕಟಿಸಿದ್ದರು. ಅವರ ಕಥೆಗಳಲ್ಲಿ ಪ್ರಾದೇಶಿಕ ಜೀವನ ಚಿತ್ರಣ ತುಂಬಿ ತುಳುಕುತ್ತದೆ ಎಂದರೆ ತಪ್ಪಾಗಲಿಕ್ಕಿಲ್ಲ. ಸಮಕಾಲೀನ ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಜೀವನ ಚಿತ್ರಿಸುವ ವಸ್ತುಗಳುಳ್ಳ ಕಥೆಗಳು ಇವರ ವೈಶಿಷ್ಟ್ಯವೆನ್ನಬಹುದು. 'ಚೆಂಬ ಹಿಡಿದ ಮೀನು' ಸಂಕಲನದಲ್ಲಿ ಆರು ಕಥೆಗಳಿವೆ. ಕೊಡಗಿನ ಗಿರಿಜನರ ಜೀವನ ಚಿತ್ರಣ ಈ ಕಥೆಗಳಲ್ಲಿದೆ. ಬೆಂಕಿಯಲ್ಲಿ ಬೆಂದವಳು' ಸಂಕಲನದ ಕಥೆಗಳಲ್ಲಿಯೂ ಪ್ರಾದೇಶಿಕ ಜೀವನ

ನಿರೂಪಿತವಾಗಿದೆ. 'ಟೊಳ್ಳು ನಂದೀ ಮರ' ಕನ್ನಡ ಸಾಹಿತ್ಯದ ಉತ್ತಮ ಕಥೆಗಳ ಸಾಲಿನಲ್ಲಿ ನಿಲ್ಲಬಹುದಾಗಿದೆ. 'ನನ್ನ ಅತ್ತಿಗೆ', 'ದೂರ ಹೋದಳು', 'ಮನೆಗೆ ಬಂದ ಮಹಾಬಲಿ', 'ಗಿಳಿಯು ಪಂಜರದೊಳಿಲ್ಲ' ಮೊದಲಾದವು ಭಾರತೀಸುತರ ನೀಳ್ಗತೆಗಳು.

ಹಲವಾರು ಪ್ರಾದೇಶಿಕ ಕಾದಂಬರಿಗಳನ್ನು ರಚಿಸಿದ ಭಾರತೀಸುತರಿಗೆ ಹಲವು ಕ್ಷೇತ್ರಗಳಲ್ಲಿ ಜೀವನಾನುಭವ ಪ್ರಾಪ್ತವಾಗಿತ್ತು. ಆದುದರಿಂದಲೇ ಅವರು ಕೊಡಗು, ಕೇರಳ, ದಕ್ಷಿಣಕನ್ನಡ, ಉತ್ತರ ಕನ್ನಡ ಜಿಲ್ಲೆಗಳಲ್ಲಿಯ ಪ್ರಾದೇಶಿಕ ಕಂಪನ್ನು ಕಾದಂಬರಿಗಳಲ್ಲಿ ಹರಡಿಸಲು ಸಾಧ್ಯವಾಯಿತು. ಸ್ವಾತಂತ್ರ್ಯ ಹೋರಾಟದಲ್ಲಿ ತ್ರಿಕರಣಪೂರ್ವಕವಾಗಿ ಪಾಲ್ಗೊಂಡು ಸ್ವಾತಂತ್ರ್ಯ ಆಂದೋಲನದ ವಿವಿಧ ಮುಖಗಳನ್ನು ಚಿತ್ರಿಸುವ ಕೆಲವು ರಾಜಕೀಯ ಕಾದಂಬರಿಗಳನ್ನು ರಚಿಸಿದ್ದಾರೆ. ಅವರು ಸಾಮಾಜಿಕ ಕಾದಂಬರಿಗಳನ್ನಂತೂ ಹಲವಾರು ರಚಿಸಿದ್ದಾರೆ. ಆದರೆ ಅವುಗಳೊಡನೆ ಐತಿಹಾಸಿಕ ಕಾದಂಬರಿಗಳನ್ನು ರಚಿಸಿದ್ದು ಮಹತ್ವದ್ದಾಗಿದೆ. ವಿಶೇಷವೆಂದರೆ ಅವರ 'ಬಯಲುದಾರಿ', 'ಎಡಕಲ್ಲು ಗುಡ್ಡದ ಮೇಲೆ', 'ಹುಲಿಯ ಹಾಲಿನ ಮೇವು' ಮೊದಲಾದ ಕಾದಂಬರಿಗಳನ್ನು ಆಧರಿಸಿ ಚಲನಚಿತ್ರಗಳು ನಿರ್ಮಾಣವಾಗಿ ಬಹಳ ಜನಪ್ರಿಯತೆ ಗಳಿಸಿವೆ. 'ಹುಲಿಯ ಹಾಲಿನ ಮೇವು' ಎಂಬ ಪ್ರಾದೇಶಿಕ ಐತಿಹಾಸಿಕ ಕಾದಂಬರಿ ಮತ್ತು ವಾಲ್ಮೀಕ' ಎಂಬ ರಾಜಕೀಯ ಜೀವನ ಚಿತ್ರಿಸುವ ಕಾದಂಬರಿಗಳು ಸುಪ್ರಸಿದ್ಧವಾಗಿವೆ.

'ಹುಲಿಯ ಹಾಲಿನ ಮೇವು' ಕೊಡಗರ ವೀರಜೀವನ ಚಿತ್ರಿಸುವ ಬೃಹತ್ ಕಾದಂಬರಿ. ಇದನ್ನು ಕೊಡಗು ಜನಾಂಗದ 'ವಿಶ್ವಕೋಶ' ಎಂದು ಹೇಳಲಾಗುತ್ತಿದೆ. ಕೊಡವರ ಭಾಷೆ, ಸಂಸ್ಕೃತಿ, ಇತಿಹಾಸಗಳು ಇಲ್ಲಿ ತಮ್ಮ ಸೂಕ್ಷ್ಮ ವಿವರಗಳನ್ನೊಳಗೊಂಡು ನಿರೂಪಿತವಾಗಿವೆ. 'ಚೆಂಗುಮಣಿ' ಎಂಬ ಕಾಲ್ಪನಿಕ ವ್ಯಕ್ತಿಯ ಚಿತ್ರಣವು ಕೊಡಗಿನ ಪುರಾತನ ವೀರ ತರುಣನನ್ನು ಪರಿಚಯಿಸಿದ ಉತ್ತಮ ಐತಿಹಾಸಿಕ ಕಾದಂಬರಿ ಎಂದು ಪ್ರಸಿದ್ಧಿ ಪಡೆದಿದೆ.

'ವಲ್ಮೀಕ' ರಾಜಕೀಯ ಹಿನ್ನೆಲೆಯನ್ನು ಗುರುತಿಸುವ ಒಳ್ಳೆಯ ಕಾದಂಬರಿ. ಕಾದಂಬರಿಕಾರರು ತಮ್ಮ ಪರಿಚಿತ ಸಮಾಜದಲ್ಲಿ ಭ್ರಷ್ಟತೆಯು ರಾಜಕೀಯ ಕ್ಷೇತ್ರ ಮತ್ತು ವೈಯಕ್ತಿಕ ಜೀವನದಲ್ಲಿ ಉಂಟುಮಾಡುವ ದುಷ್ಪರಿಣಾಮಗಳನ್ನು ಕಲಾತ್ಮಕವಾಗಿ ನಿರೂಪಿಸಿದ್ದಾರೆ. ಆ ಕೆಲಸ ಗ್ರಂಥಕಾರರಲ್ಲಿ ಕಂಡುಬರುವ ಭಾಷಣ ರೂಪದ ವ್ಯಾಖ್ಯಾನ ಪ್ರೇಮ, ಅಸ್ವಾಭಾವಿಕ ಎನ್ನಬಹುದಾದ ಗ್ರಾಂಥಿಕ ಶಬ್ದಗಳ ಉಪಯೋಗ, ರೋಚಕತೆಯನ್ನು ಪೋಷಿಸುವ ಬರವಣಿಗೆ ಮೊದಲಾದ ವಿಪರ್ಯಾಸವನ್ನು ಇವರ ಕಾದಂಬರಿಗಳಲ್ಲಿಯೂ ಕಾಣಬಹುದಾಗಿದೆ. ಇವರ ವೈಶಿಷ್ಟ್ಯವೆಂದರೆ ಗ್ರಾಮೀಣ ಹಿನ್ನೆಲೆಯಿಂದಲೇ ಕೆಳವರ್ಗದ ಜನರ ಜೀವನವನ್ನು, ಉಚ್ಚವರ್ಗದ ನೈತಿಕ ಚಿಂತನೆಗೆ ಅನುಗುಣವಾದ ರೀತಿಯಲ್ಲಿ, ಕಾದಂಬರಿಗಳಲ್ಲಿ ವ್ಯಾಖ್ಯಾನಿಸುತ್ತಾ ಸಾಗುವುದು.

೧೯೩೮ರಲ್ಲಿ ಕಾವೇರಿ ನದಿಯ ಕುರಿತು ಒಂದು ಕವಿತೆಯೂ ಪ್ರಕಟವಾಗಿದೆ. 'ತಲೆತಿರುಕ ಯೋಧ', 'ಇರಾನಿನ ಯೋಧರು', 'ದೊರೆ ಮಗಳು' ಮೊದಲಾದ ಅನುವಾದಿತ

ಇಲ್ಲವೇ ರೂಪಾಂತರಿತ ಕೃತಿಗಳನ್ನು ಮಕ್ಕಳಿಗಾಗಿ ರಚಿಸಿದ್ದಾರೆ. ವಯಸ್ಕರ ಶಿಕ್ಷಣಕ್ಕಾಗಿ ಕೆಲವು ಕೃತಿಗಳನ್ನು ರಚಿಸಿದ್ದಾರೆ. ಉದಾ : ಜಾಕೀರ್ ಹುಸೇನ್, ಸೊಳ್ಳೆ ಹರಡುವ ರೋಗಗಳು, ಸುಮಾರು ಮೂವತ್ತು ಕಾದಂಬರಿಗಳು (ನಾಲ್ಕು ಅನುವಾದಿತ ಸೇರಿ), ಸುಮಾರು ೨೫ ಶಿಶು ಸಾಹಿತ್ಯ ಕೃತಿಗಳು, ಹಲವು ಕಥೆಗಳು, ಕೆಲವು ಅನುವಾದಗಳು, ಹಲವಾರು ವಯಸ್ಕರ ಶಿಕ್ಷಣಕ್ಕಾಗಿಯೆ ರಚಿಸಿದ ಕೃತಿಗಳು ಮತ್ತು ಹಲವಾರು ಕತೆಗಳು ಇವರ ವಿವಿಧ ಪ್ರಕಾರದ ಕೃತಿಗಳಾಗಿವೆ. ಭಾರತೀಸುತರ ಜೀವನ ಕೃತಿಗಳ ಬಗ್ಗೆ ಅವರ ಹಾಗೂ ಬೇರೆಯವರ ಕೆಲವು ಅಭಿಪ್ರಾಯಗಳನ್ನು ಪರಿಶೀಲಿಸಬಹುದಾಗಿದೆ.

● "ತಣ್ಣೀರನ್ನು ಆರಿಸಿ ಕುಡಿಯುವ ಪ್ರವೃತ್ತಿಯವರು" ಎಂದು ಡಾ. ಹಾ. ಮಾ. ನಾಯಕರು ಭಾರತೀಸುತರ ಕಠಿಣ ಪರಿಸ್ಥಿತಿಯ ಜೀವನಾನುಭವ ವರ್ಣಿಸಿದ್ದಾರೆ.

● "ಸ್ವಭಾವತಃ ನಿರಂಜನರು ಹೇಳುವಂತೆ ಭಾರತೀಸುತರು ಮಿತಭಾಷಿ. ಚಿಕ್ಕಂದಿನಲ್ಲಿಯೇ ತಂದೆಯನ್ನು ಕಳೆದುಕೊಂಡು ಕಾರ್ಪಣ್ಯದ ಜೀವನ ನಡೆಸಿದವರು. ಆದರ್ಶಕ್ಕೆ ಬೆನ್ನು ಹತ್ತಿದವರು" ಎಂದು ಅ. ರಾ. ಮಿತ್ರ ಹೇಳಿದ್ದಾರೆ.

● "ಬೆಟ್ಟಗುಡ್ಡಗಳ ನಾಡಿನ ಜೀವನ ಪದ್ಧತಿ, ಕಾಫಿ, ಏಲಕ್ಕಿ, ಕಿತ್ತಳೆ, ತೋಟಗಳ ಕೃಷಿಲೋಕ, ಅಲ್ಲಿಯ ಶ್ರೀಮಂತ ಪ್ಲಾಂಟರುಗಳ ವಿಲಾಸ ಜೀವನ, ಕೂಲಿ ಜನಾಂಗದವರ ಜೀವನ ವಿಧಾನ, ಕೊಡವರ ಹಬ್ಬ ಹರಿದಿನಗಳು, ಸಾಂಸ್ಕೃತಿಕ, ಸಾಮಾಜಿಕ ಕೂಟಗಳು, ದಟ್ಟವಾದ ಅರಣ್ಯ ಸಂಪತ್ತಿನ ಮಳೆ, ಮಂಜಿನ ವಿವರಗಳು ಇವೆಲ್ಲ ಅವರ ಕೃತಿಗಳಲ್ಲಿ ಸಹಜವಾಗಿ ಆಶ್ರಯ ಪಡೆಯುತ್ತವೆ" ಎಂದಿದ್ದಾರೆ ಪ್ರೊ. ಅ. ರಾ. ಮಿತ್ರ ಅವರು.

## ಭಾರತೀಸುತ ಅವರ ಜೀವನ ವಿವರ

ಜನನ : ೧೯೧೫ (೧೫-೫-೧೯೧೫).

**ಶಿಕ್ಷಣ** : ಮಡಿಕೇರಿ ಪ್ರೌಢಶಾಲೆಯಲ್ಲಿ, ಸ್ವಾತಂತ್ರ್ಯ ಚಳವಳಿಯಲ್ಲಿ ಪಾಲ್ಗೊಂಡು ಸೆರೆಮನೆ ವಾಸ.

ವೃತ್ತಿ : ಕೇರಳದ ವೈನಾಡಿನಲ್ಲಿ ತೋಟದ ಉಸ್ತುವಾರಿ. ಪ್ರೌಢಶಾಲೆಯಲ್ಲಿ ಕನ್ನಡ ಪಂಡಿತರು (ವಿದ್ವಾನ್ ಪರೀಕ್ಷೆ ಪಾಸಾಗಿ).

ಪ್ರಶಸ್ತಿ : ಮರಣೋತ್ತರ ೧೯೭೬ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ.

ಮರಣ : ೧೯೭೬ (೪-೪-೧೯೭೬).

## ಭಾರತೀಸುತರ ಕೃತಿಗಳು :

**ಶಿಶು ಸಾಹಿತ್ಯ** : ತಲೆತಿರುಕ ಯೋಧ, ಇರಾನಿನ ಯೋಧರು, ದೊರೆ ಮಗಳು, ಕಾಲಯಾನ, ಮಲ್ಲಿಗೆ ಹಳ್ಳಿಯ ಜಾಣರು (ವಯಸ್ಕರ ಶಿಕ್ಷಣ ರಚನೆಗಳು) ಡಾ. ಜಾಕೀರ್

ಹುಸೇನ್, ಸೊಳ್ಳೆ ಹರಡುವ ರೋಗಗಳು (ಕೇಂದ್ರ ಸರಕಾರದಿಂದ ಬಹುಮಾನಿತ) ಕಳ್ಳರ ಫಜೀತಿ, ಮಂತ್ರದ ಕೊಳಲು, ಹುಲಿಗಳ ದಿಬ್ಬಣ, ಹನ್ನೊಂದು ಹಂಸಗಳು, ನಳ ದಮಯಂತಿ ಇತ್ಯಾದಿ.

**ಕಥೆ :** ಚಿಂಬ ಹಿಡಿದ ಮೀನು, ಬೆಂಕಿಯಲ್ಲಿ ಬೆಂದವಳು,

**ನೀಳ್ಗತೆ :** ನನ್ನ ಅತ್ತಿಗೆ ದೂರ ಹೋದಳು, ಮನೆಗೆ ಬಂದ ಮಹಾಬಲಿ, ಗಿಳಿಯು ಪಂಜರದೊಳಿಲ್ಲ, ಪಟ್ರೀಷಿಯಾ ಕಂದನನ್ನು ಕದ್ದವಳು, ಇಲಿ ಮತ್ತು ಹಾವು.

**ಕಾದಂಬರಿ :** ಬಯಲುದಾರಿ, ಎಡಕಲ್ಲು ಗುಡ್ಡದ ಮೇಲೆ, ಹುಲಿಯ ಹಾಲಿನ ಮೇವು, ವಕ್ರರೇಖೆ, ಗಿರಿಕನ್ನಿಕೆ, ಕೊಳಲಿನ ಕರೆ, ಹುಲಿ ಬೋನು, ವಲ್ಮೀಕ, ಪೃಥ್ವೀರಾಜ, ಅವಳ ದಾರಿ, ಇಳಿದು ಬಾ ತಾಯಿ, ಬೆಂಕಿಯ ಮಳೆ, ಅಮಾತ್ಯ ನಂದಿನಿ, ಸಾಧನ ಕುಟೀರ, ಹಾವಿನ ಹುತ್ತ ಇತ್ಯಾದಿ.

❋ ❋ ❋

# ಕೆ. ಎಸ್. ನರಸಿಂಹಸ್ವಾಮಿ

'ಮೈಸೂರು ಮಲ್ಲಿಗೆ' ಕವನ ಸಂಕಲನದ ಮುಖಾಂತರ ಕನ್ನಡ ಜನತೆಯ ಹೃದಯ ಸ್ಪರ್ಶ ಮಾಡಿ ಅಲ್ಲಿ ಮನೆ ಮಾಡಿದ ಸುವಿಖ್ಯಾತ ಕವಿ ಕೆ. ಎಸ್. ನರಸಿಂಹಸ್ವಾಮಿ. ಅವರು 'ಕಬ್ಬಿಗನ ಕೂಗು' ಎಂಬ ಮೊದಲ ಕನ್ನಡ ಕವಿತೆಯನ್ನು ಪ್ರಬುದ್ಧ ಕರ್ನಾಟಕ ಪತ್ರಿಕೆಯಲ್ಲಿ ಪ್ರಕಟಿಸಿದರು. ಇಂಗ್ಲಿಷ್ ಕವಿಗಳಿಂದ ಪ್ರಭಾವಿತರಾಗಿ ಇಂಗ್ಲಿಷ್‌ನಲ್ಲಿಯೇ ಮೊದಲು ಕಾವ್ಯ ರಚನೆ ಮಾಡಲು ಶುರು ಮಾಡಿದರು. ನರಸಿಂಹ ಸ್ವಾಮಿಯವರ ಗುರುಗಳಾದ ಪಟ್ಟಾಭಿರಾಮನ್ ಅವರು ಕನ್ನಡದಲ್ಲಿ ಬರೆಯಲು ಪ್ರೋತ್ಸಾಹಿಸಿದ್ದು ಕನ್ನಡಕ್ಕೆ ಮಹದುಪಕಾರ ಮಾಡಿದಂತಾಯಿತು. ನರಸಿಂಹಸ್ವಾಮಿ ಅವರು ಪ್ರಬುದ್ಧ ಗದ್ಯಕಾರರೂ, ಅನುವಾದಕರೂ ಆಗಿದ್ದಾರೆ.

೧೯೧೫ರಲ್ಲಿ (೨೬-೧-೧೯೧೫) ಮಂಡ್ಯಜಿಲ್ಲೆಯಲ್ಲಿ ನರಸಿಂಹ ಸ್ವಾಮಿ ಇವರು ಜನಿಸಿದರು. ತಂದೆ ಸುಬ್ಬರಾಯರು, ತಾಯಿ ನಾಗಮ್ಮನವರು. ಅವರಿಗೆ ಇಬ್ಬರು ಮಕ್ಕಳು ಜನಿಸಿದರು. ನರಸಿಂಹಸ್ವಾಮಿಯವರೇ ಹಿರಿಯರು. ತಂದೆಯವರು ಕಂದಾಯ ಇಲಾಖೆಯಲ್ಲಿ ಶಿರಸ್ತೇದಾರರಾಗಿದ್ದರು. ಅವರು ಒಳ್ಳೆಯ ಪಿಟೀಲು ವಾದಕರು ಕೂಡ. ಮೈಸೂರು ಟ್ರೇನಿಂಗ್ ಕಾಲೇಜಿನ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ನರಸಿಂಹಸ್ವಾಮಿ ಅವರು ಶಾಲಾ ಶಿಕ್ಷಣವನ್ನು ೧೯೨೧ರಿಂದ ೧೯೨೮ರ ವರೆಗೆ ಪಡೆದು ಮುಂದಿನ ಪ್ರೌಢ ಶಿಕ್ಷಣಕ್ಕಾಗಿ ಮಹಾರಾಜ ಹೈಸ್ಕೂಲ್ ಸೇರಿ ಅಲ್ಲಿ ೧೯೨೮ರಿಂದ ೧೯೩೧ರ ವರೆಗೆ ಅಭ್ಯಾಸ ಮಾಡಿದರು. ಮೈಸೂರಿನ ಇಂಟರ್ ಮೀಡಿಯೆಟ್ ಕಾಲೇಜಿನಲ್ಲಿ ಕಲಿಯುತ್ತಿದ್ದಾಗ ಅವರು ಬೆಂಗಳೂರಿಗೆ ಬರಬೇಕಾಯಿತು. ಅಲ್ಲಿ ಸೆಂಟ್ರಲ್ ಕಾಲೇಜ್ ಸೇರಿದರು. ಜ್ಯೂನಿಯರ್ ಬಿ. ಎ. ಪರೀಕ್ಷೆಗೆ ಇಂಗ್ಲಿಷ್, ಭೌತಶಾಸ್ತ್ರ, ಗಣಿತಶಾಸ್ತ್ರಗಳನ್ನು ತಮ್ಮ ಐಚ್ಛಿಕ ವಿಷಯಗಳನ್ನಾಗಿ ಆಯ್ದುಕೊಂಡರು. ಬಿ. ಎಂ. ಶ್ರೀ. ಗುರುಗಳಾಗಿದ್ದರು. ಆದರೆ ತಂದೆಯ ಮರಣದಿಂದಾಗಿ ಕಾಲೇಜ್ ಬಿಟ್ಟು ಮನೆಯ ಜವಾಬ್ದಾರಿ ವಹಿಸಿಕೊಳ್ಳಬೇಕಾಯಿತು. ಚಿಕ್ಕಪುಟ್ಟ ಕೆಲಸ ಮಾಡಿ ಜೀವನ ಸಾಗಿಸತೊಡಗಿದರು. ಈ ನಡುವೆ ಮಾರ್ಚ ೧೯೩೬ರಲ್ಲಿ ತಿಪಟೂರಿನಲ್ಲಿ ವೆಂಕಮ್ಮನವರೊಡನೆ ವಿವಾಹವಾಯಿತು. ೧೯೩೭ರಲ್ಲಿ ಸರಕಾರಿ ನೌಕರಿ ಸೇರಿ ಮೈಸೂರು, ನಂಜನಗೂಡು ಮತ್ತು ಬೆಂಗಳೂರುಗಳಲ್ಲಿ ಕೆಲಸ ಮಾಡಿದರು. ೧೯೪೨ರಲ್ಲಿ 'ಮೈಸೂರು ಮಲ್ಲಿಗೆ' ಪ್ರಕಟವಾಯಿತು. ಆಗ ಅವರು ಮೈಸೂರಿನಲ್ಲಿ ಪುರಸಭಾ ಕಚೇರಿಯಲ್ಲಿ ಎರಡನೆಯ ದರ್ಜೆಯ ಕಾರಕೂನರಾಗಿದ್ದರು.

೧೯೭೦ರಲ್ಲಿ ಅವರು ಬೆಂಗಳೂರಿನಲ್ಲಿ ಹೌಸಿಂಗ್ ಬೋರ್ಡಿನ ಸೂಪರಿಂಟೆಂಡೆಂಟ್ ಆಗಿ ನಿವೃತ್ತರಾದರು. ಹೀಗೆ ಮೂವತ್ಮೂರು ವರ್ಷ ನೌಕರಿ ಮಾಡುತ್ತ ಉತ್ತಮ ಸಾಹಿತ್ಯ ರಚನೆ ಮಾಡಿ ಪ್ರಕಟಿಸುತ್ತ ಜೀವನ ನಡೆಸಿದರು.

ಈಗ (೨೦೦೨) ತಮ್ಮ ವೃದ್ಧಾಪ್ಯದಲ್ಲಿ ಪತ್ನಿ ಪುತ್ರರೊಡನೆ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಅವರಿಗೆ ನಾಲ್ವರು ಗಂಡು ಮತ್ತು ನಾಲ್ವರು ಹೆಣ್ಣುಮಕ್ಕಳು. ಜೀವನದಲ್ಲಿ ಕಷ್ಟಗಳನ್ನೇ ಹೆಚ್ಚಾಗಿ ಅನುಭವಿಸಿದರೂ ತಮ್ಮ ಸಾಹಿತ್ಯದಲ್ಲಿ ಹೆಚ್ಚಾಗಿ ಸುಖ ಸಂತೋಷ-ನಲಿವುಗಳನ್ನು ಮೂಡಿಸಿದ್ದಾರೆ. ಅನಾರೋಗ್ಯದಿಂದ ಚೇತರಿಸಿಕೊಂಡು ನೆಮ್ಮದಿಯ ಬಾಳನ್ನು ನಡೆಸುತ್ತಿರುವ ನರಸಿಂಹಸ್ವಾಮಿಯವರು ಗಳಿಸಿದ್ದು ಕನ್ನಡ ಜನತೆಯ ಅಪಾರ ಪ್ರೀತಿ. ಸರಳ ಜೀವಿಯಾಗಿ ಕುಟುಂಬ ವತ್ಸಲರಾಗಿ, ಹಿರಿಯ ಕವಿಯಾಗಿ ನರಸಿಂಹಸ್ವಾಮಿಯವರಿಗೆ ಕೆಲವು ಪ್ರಶಸ್ತಿ ಪುರಸ್ಕಾರಗಳು ಲಭಿಸಿವೆ. ಇನ್ನೂ ಹಲವು ಗೌರವ ಪ್ರಶಸ್ತಿಗಳು ದೊರೆಯಬೇಕಾಗಿವೆ ಎಂದೆನಿಸುತ್ತದೆ. ಅದಕ್ಕೂ ಕಾಲ ಸನ್ನಿಹಿತವಾಗಿದೆ.

'ಮೈಸೂರು ಮಲ್ಲಿಗೆ' ಪ್ರಕಟವಾದ ಮುಂದಿನ ವರ್ಷವೇ (೧೯೪೩) ಅದಕ್ಕೆ 'ದೇವರಾಜ್ ಬಹದ್ದೂರ್' ಪ್ರಶಸ್ತಿ ದೊರೆಯಿತು. 'ಶಿಲಾಲತೆ' ಕವನ ಸಂಕಲನಕ್ಕೆ ೧೯೫೮ರಲ್ಲಿ ಮೈಸೂರು ರಾಜ್ಯದ ಸಂಸ್ಕೃತಿ ಪ್ರಸಾರ ಇಲಾಖೆಯಿಂದ ಬಹುಮಾನ ಪ್ರಾಪ್ತವಾಯಿತು. ಕಾರವಾರಿನಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನದ ಕಾವ್ಯ ಮಂಥನ ಗೋಷ್ಠಿಗೆ ನರಸಿಂಹಸ್ವಾಮಿ ಅಧ್ಯಕ್ಷರಾಗಿದ್ದರು. ೧೯೬೮ರಲ್ಲಿ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆಯ ಸರ್ವಭಾಷಾ ಕವಿ ಸಮ್ಮೇಳನಕ್ಕೆ ಕನ್ನಡ ಕವಿ ಪ್ರತಿನಿಧಿಯಾಗಿ ಆಯ್ಕೆಯಾದರು. ೧೯೭೦ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವದಲ್ಲಿ ಸನ್ಮಾನಿಸಲಾಯಿತು. ೧೯೭೨ರಿಂದ ೧೯೭೪ರ ವರೆಗೆ ಸಾಹಿತ್ಯಾಧಿಕಾರಿಯಾಗಿ ನರಸಿಂಹಸ್ವಾಮಿ ಕಾರ್ಯ ಮಾಡಿದ್ದಾರೆ.

೧೯೭೨ರಲ್ಲಿ ಅವರಿಗೆ 'ಕರ್ನಾಟಕ ರಾಜ್ಯ ಪ್ರಶಸ್ತಿ ಹಾಗೂ ೧೯೭೪ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ಲಭಿಸಿವೆ. 'ತೆರೆದ ಬಾಗಿಲು' ಕವನ ಸಂಕಲನಕ್ಕೆ ೧೯೭೮ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪ್ರಾಪ್ತವಾಗಿದೆ. ಅದೇ ವರ್ಷ ಕೇರಳದ 'ಕವಿ ಕುಮಾರನ್ ಆಶಾನ್' ಪ್ರಶಸ್ತಿ ಗಳಿಸಿದ್ದಾರೆ. ಮೈಸೂರ ಮಲ್ಲಿಗೆಯ ಪ್ರಕಟಣೆಯ ಸುವರ್ಣ ಮಹೋತ್ಸವ ಆಚರಿಸಲಾಯಿತು. ನರಸಿಂಹಸ್ವಾಮಿಯವರ ಗೀತೆಗಳ ಜನಪ್ರಿಯತೆಯನ್ನು ಮಾನ್ಯ ಜನರು ಮೆಚ್ಚಿ ಹಾಡುವುದನ್ನು, ಹಾಡಿಕೊಳ್ಳುವುದನ್ನು, ಹಿನ್ನೆಲೆ ಗಾಯಕರು ಹಾಡಿ ನಿರ್ಮಿಸಿದ ಕ್ಯಾಸೆಟ್‌ಗಳನ್ನು ಮತ್ತು ಮೈಸೂರ ಮಲ್ಲಿಗೆ ಕ್ಯಾಸೆಟ್ ಮತ್ತು ಅದೇ ಹೆಸರಿನ ಚಲನಚಿತ್ರ ಕಥಾ ರಚನೆಗೆ ಅವರ ಕವನಗಳನ್ನು ಆಧರಿಸಿದ ನಿರ್ಮಾಣದಲ್ಲಿ ಕಾಣಬಹುದಾಗಿದೆ. ಕನ್ನಡ ಸಾಹಿತ್ಯ ಪರಿಷತ್ತು ಇವರಿಗೆ ಗೌರವ ಸದಸ್ಯತ್ವ ನೀಡಿದ್ದು ಅತಿ ಸಂತೋಷದಾಯಕ ಸಂಗತಿ. 'ಚಂದನ' ಎಂಬ ಅಭಿನಂದನೆ ಗ್ರಂಥವನ್ನು ೧೯೭೨ರಲ್ಲಿ ಇವರಿಗೆ ಅರ್ಪಿಸಲಾಗಿದೆ.

ನರಸಿಂಹಸ್ವಾಮಿಯವರ ಕವನ ಸಂಕಲನಗಳ, ಗದ್ಯ ಕೃತಿಗಳ ಹಾಗೂ ಅನುವಾದಗಳ ಕಿರುಪರಿಚಯವನ್ನು ಹೀಗೆ ಮಾಡಿಕೊಡಬಹುದಾಗಿದೆ.

ವಿದ್ಯಾರ್ಥಿಯಾಗಿದ್ದಾಗಲೇ 'ಕಬ್ಬಿಗರ ಕೂಗು' ಕವನ ಪ್ರಬುದ್ಧ ಕರ್ನಾಟಕದ ೧೪-೧-೧೯೩೩ರ ಸಂಚಿಕೆಯಲ್ಲಿ ಪ್ರಕಟವಾಗಿ ಮೆಚ್ಚುಗೆ ಪಡೆಯಿತು. ಅಂದಿನಿಂದ ಇವರ ಕಾವ್ಯ ರಚನಾ ಪ್ರತಿಭೆ ಮುನ್ನುಗ್ಗುತ್ತಲೇ ನಡೆದಿದೆ.

ಮೈಸೂರ ಮಲ್ಲಿಗೆ (೧೯೪೨) ಅತಿ ಜನಪ್ರಿಯತೆ ಗಳಿಸಿದ್ದು, ಈಗಾಗಲೇ ೨೨ ಕ್ಕೂ ಹೆಚ್ಚು ಸಲ ಮರುಮುದ್ರಣಗೊಂಡಿದೆ. ೪೫ ಕವನಗಳ ಸಂಕಲನವಾದ 'ಮೈಸೂರ ಮಲ್ಲಿಗೆ'ಯು ಕೃಷ್ಣಶಾಸ್ತ್ರಿ, ತೀ. ನಂ. ಶ್ರೀ, ಡಿ.ವಿ.ಜಿ., ವೆಂಕಣ್ಣಯ್ಯ ಮೊದಲಾದ ಹಿರಿಯರ ಮನ್ನಣೆ ಪಡೆದಿತ್ತು.

'ಐರಾವತ'ವು ಎರಡನೆ ಕವನ ಸಂಕಲನ. ೧೯೪೫ರಲ್ಲಿ ಪ್ರಕಟವಾಗಿ ಬಹಳ ಜನಪ್ರಿಯತೆ ಪಡೆದು ಈಗಾಗಲೇ ನಾಲ್ಕು ಸಲ ಮರುಮುದ್ರಣಗೊಂಡಿದೆ. 'ದೀಪದ ಮಲ್ಲಿ' ಮೂರನೆಯ ಸಂಕಲನ. ಇವರ ಕವನಗಳಲ್ಲಿ ನೋವು ಕೂಡ ನಲಿವಿನೊಡನೆ ಪ್ರಕಟವಾಗಿದೆ.

ಪ್ರೇಮ ಕವಿತೆಗಳು ವಿರಳವಾಗಿ ಕಾಣಿಸುವ 'ಉಂಗುರು' ಸಂಕಲನ ೧೯೪೯ರಲ್ಲಿ ಪ್ರಕಟವಾಗಿ ಅನಂತರ ಇನ್ನೂ ಮೂರು ಮುದ್ರಣ ಕಂಡಿದೆ. ಮೂವತ್ತು ಕವನಗಳ ಈ ಸಂಕಲನದಲ್ಲಿ 'ಮನೆಗೆ ಬಂದ ಹೆಣ್ಣು', 'ಪ್ರಥಮ ರಾಜನಿಗೆ', 'ಗಾನ ಮಂದಿರ'ದಲ್ಲಿ ಕವನಗಳು ಜನಮೆಚ್ಚುಗೆ ಪಡೆದಿವೆ. 'ಇರುವಂತಿಗೆ' ಸಂಕಲನದಲ್ಲಿ ೨೮ ಕವನಗಳಿವೆ. ೧೯೫೨ರಲ್ಲಿ ಪ್ರಕಟವಾದ ಈ ಕವನ ಸಂಕಲನದಲ್ಲಿ 'ಅಕ್ಕಿಯಾರಿಸುವಾಗ', 'ನಿನ್ನ ಹೆಸರು' ಕವಿತೆಗಳು ಜನಪ್ರಿಯವಾಗಿವೆ. ನಾಲ್ಕು ಬಾರಿ ಮುದ್ರಣಗೊಂಡಿರುವ 'ಶಿಲಾಲತೆ' ಸಂಕಲನ ಮೊದಲು ೧೯೫೮ರಲ್ಲಿ ಪ್ರಕಟವಾಯಿತು. 'ಗಡಿಯಾರದಂಗಡಿಯ ಮುಂದೆ', 'ಹಿಂದಿನ ಸಾಲಿನ ಹುಡುಗರು', 'ಕೇಳಬೇಡ ಎಲ್ಲಿಗೆ' ಕವನಗಳು ಗಮನಾರ್ಹವಾಗಿವೆ. ೧೯೬೦ರಲ್ಲಿ 'ಮನೆಯಿಂದ ಮನೆಗೆ' ಸಂಕಲನ ಪ್ರಕಟವಾಗಿದೆ. ಅದರಲ್ಲಿ ಕೆಲವು ಭಾಷಾಂತರಗೊಂಡ ಕವನಗಳೂ ಇವೆ. ೧೯೬೮ರಲ್ಲಿ 'ತೆರೆದ ಬಾಗಿಲು' ಪ್ರಕಟವಾಗಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿದೆ.

ನವಪಲ್ಲವ ಕವನ ಸಂಕಲನವು ೧೯೮೩ರಲ್ಲಿ ಪ್ರಕಟವಾಗಿದೆ. ಅದರಲ್ಲಿ ೨೭ ಕವನಗಳಿವೆ. 'ಮಲ್ಲಿಗೆ ಮಾಲೆ' ನರಸಿಂಹಸ್ವಾಮಿಯವರ ಸಮಗ್ರ ಕವನಗಳ ಸಂಗ್ರಹ, ೧೯೮೬ರ ವರೆಗೆ ಪ್ರಕಟವಾದ ೨೫೮ ಕವನಗಳಿವೆ. ಅನಂತರ ೧೯೯೩ರಲ್ಲಿ ಪ್ರಕಟವಾದ 'ದುಂಡು ಮಲ್ಲಿಗೆ' ಕವನ ಸಂಕಲನದಲ್ಲಿ ೪೨ ಕವನಗಳಿವೆ.

೧೯೪೪ರಲ್ಲಿ ಮತ್ತೊಮ್ಮೆ 'ಮಲ್ಲಿಗೆ ಮಾಲೆ' ಸಮಗ್ರ ಸಂಕಲನ ಪ್ರಕಟವಾಗಿದೆ. ಇದರಲ್ಲಿ ಇಲ್ಲಿಯವರೆಗಿನ ಅವರ ಎಲ್ಲ ಪ್ರಕಟಿತ ಮತ್ತು ಅಪ್ರಕಟಿತ ಕವನಗಳು ಸಮಾವೇಶಗೊಂಡಿವೆ.

ನರಸಿಂಹಸ್ವಾಮಿಯವರು ಅಗ್ರಗಣ್ಯ ಕವಿಗಳಾಗಿದ್ದಾರೆಂಬುದು ನಿಜ. ಆದರೆ ಅವರ ಪಳಗಿದ ಲೇಖನಿಯಿಂದ ಗದ್ಯ ಪ್ರಕಾರದಲ್ಲಿಯೂ ಸಾಹಿತ್ಯ ರಚಿಸಿದ್ದಾರೆ. 'ಮಾರಿಯ ಕಲ್ಲು' ಏಳು ಕತೆಗಳುಳ್ಳ ಕಥಾ ಸಂಕಲನವು ೧೯೪೨ರಲ್ಲಿಯೇ ಪ್ರಕಟವಾಗಿದೆ. 'ದಮಯಂತಿ', ನಳನ ಕತೆಯಲ್ಲಿ ದಮಯಂತಿಯನ್ನು ಕೇಂದ್ರವಾಗಿಟ್ಟುಕೊಂಡು ಹೆಣೆದ ಕತೆ. 'ಉಪವನ' (೧೯೫೮) ಹತ್ತೊಂಬತ್ತು ಪ್ರಬಂಧ ಮತ್ತು ವಿಮರ್ಶಾ ಲೇಖನಗಳ ಸಂಗ್ರಹ.

ನರಸಿಂಹಸ್ವಾಮಿಯವರು ಉತ್ತಮ ದರ್ಜೆಯ ಅನುವಾದಕ ಕೂಡಾ ಆಗಿದ್ದಾರೆ. ಉದಾ : ಹಕಲ್‌ಬರಿ ಫಿನ್ನನ ಸಾಹಸಗಳು (ಕಾದಂಬರಿ), 'ಮೀಡಿಯಾ' ಯೂರಿಪಿಡೀಸ್‌ನ ಗ್ರೀಕ್ ನಾಟಕದ ಅನುವಾದ, 'ಪ್ರಪಂಚದ ಬಾಲ್ಯದಲ್ಲಿ' (ಜಾನಪದ ಕತೆಗಳು), 'ಪತ್ರಗುಚ್ಛ' (ನೆಹರೂ ಅವರು ಬರೆದ ೩೬೮ ಪತ್ರಗಳು), 'ನನ್ನ ಕನಸಿನ ಭಾರತ' (ಗಾಂಧೀಜಿ ಭಾಷಣ-ಲೇಖನಗಳು), 'ಮೋಹನ ಮಾಲೆ' (ಗಾಂಧೀ ಅವರ ಸುಭಾಷಿತಗಳು ಮತ್ತು 'ಸುಬ್ರಹ್ಮಣ್ಯ ಭಾರತಿ' (ಶ್ರೀಮತಿ ಪ್ರೇಮಾ ನಂದಕುಮಾರ್ ಅವರ ಇಂಗ್ಲಿಷ್ ಕೃತಿಯ ಅನುವಾದ) ಇತ್ಯಾದಿ. ಮಾಗಿದ ಕವಿ ಮನದಿಂದ ಇನ್ನೂ ಕೆಲವು ಸತ್ಕೃತಿಗಳು ಹೊರಬರಲಿ ಎಂದು ಆಶಿಸೋಣ.

ನರಸಿಂಹಸ್ವಾಮಿಯವರ ಜೀವನ ಹಾಗೂ ಸಾಹಿತ್ಯ ಕುರಿತಾದ ಕೆಲವು ಹೇಳಿಕೆಗಳನ್ನು ಗಮನಿಸೋಣ.

- "ಮಧುರವಾದ ಆದರೆ ಅನನ್ಯವಾದ ತಮ್ಮ ಪ್ರೇಮ-ದಾಂಪತ್ಯದ ನೆಲೆಯಿಂದ ಬದುಕಿನ ನಿಷ್ಠುರ ವಿನ್ಯಾಸಗಳನ್ನು ಗುರುತಿಸುವ 'ತೆರೆದ ಬಾಗಿಲು ಕವನಗಳ ವರೆಗೆ ನಡೆದ ಈ ಕವಿಯ ಕಾವ್ಯದ ಒಡೆದು ತೋರುವ ಬೆಳವಣಿಗೆ ಬೆರಗು ಹುಟ್ಟಿಸುವಂಥದ್ದು. ಈ ಕವಿಯ ಕಾವ್ಯ ಈಗ ಕನ್ನಡ ಸಂಸ್ಕೃತಿಯ ಬಹುಮುಖ್ಯ ಆಸ್ತಿಯಾಗಿದೆ" ಎಂದು ಎಚ್. ಎಸ್. ವೆಂಕಟೇಶಮೂರ್ತಿ ನಿರೂಪಿಸಿದ್ದಾರೆ.

- "ಸ್ವಾಭಾವಿಕತೆ, ಸರಳತೆ, ಋಜುತೆಗಳೇ ಈ ಕಾವ್ಯದ ಮುಖ್ಯ ಲಕ್ಷಣಗಳಾಗಿವೆ" ಎಂದು ಡಿವಿಜಿ ಅವರು ಮೈಸೂರು ಮಲ್ಲಿಗೆ ಸಂಕಲನದ ಮುನ್ನುಡಿಯಲ್ಲಿ ಹೇಳಿದ್ದಾರೆ.

- "ಸಾವಿನ ದುರಂತ, ಸಾವಿನ ತಮಾಷೆ, ಸಾವಿನ ಅಬ್ಸರ್ಡಿಟಿ ಮೂರನ್ನೂ ತೋರುವ ಈ ಕವನ ಪ್ರೇಮ, ವಿರಹ, ಒಬ್ಬಂಟಿತನದ ಅವರ ವಸ್ತುಗಳನ್ನು ಅನುಭವದ ತುಟ್ಟ ತುದಿಗೆ ತಂದು ನೋಡುವ ಪ್ರಯತ್ನವಾಗಿಯೂ ನೋಡಬಹುದು" ಎಂದು ನರಸಿಂಹಸ್ವಾಮಿಯವರ 'ತೆರೆದ ಬಾಗಿಲು' ಕವನದ ವಸ್ತು ವಿವೇಚನೆಯ ಬಗ್ಗೆ ಪಿ. ಲಂಕೇಶ ಅವರು 'ಅಕ್ಷರ ಹೊಸಕಾವ್ಯ'ದ ಮುನ್ನುಡಿಯಲ್ಲಿ ನಮೂದಿಸಿದ್ದಾರೆ.

- "ನರಸಿಂಹಸ್ವಾಮಿಯವರ ಸರಳತೆಯೇ ಅವರ ಕಾವ್ಯದ ಸಾಮರ್ಥ್ಯ, ಸೌಂದರ್ಯ" ಎಂದಿದ್ದಾರೆ ಟಿ. ಪಿ. ಅಶೋಕ್.

● "ನನ್ನ ಕವಿತೆ ಎಂದರೆ ಇಷ್ಟೇ : ಕೆಲವು ಫಲಗಳು, ಕೆಲವು ಕವನಗಳು, ಕೆಲವು ಗೀತೆಗಳು, ಕೆಲವು ಪ್ರಯತ್ನಗಳು, ಕೆಲವು ದೂರದ ಬೆಳಕು, ಕೆಲವು ಹತ್ತಿರದ ದನಿ" ಎಂದು ನರಸಿಂಹಸ್ವಾಮಿ ತಮ್ಮ ಕಾವ್ಯದ ಬಗ್ಗೆ ಹೇಳಿದ್ದಾರೆ.

● "ಕಾವ್ಯ ಸೃಷ್ಟಿಯಲ್ಲಿ ಹೀಗೆ ಆತ್ಮ ಸಮೀಕ್ಷೆ ಮಾಡಿಕೊಳ್ಳುವವರು ಬಹಳ ಕಡಿಮೆ. ನರಸಿಂಹಸ್ವಾಮಿಯವರಿಗೆ ಕಾವ್ಯೇತರ ಸಿದ್ಧಿ, ಪ್ರಸಿದ್ಧಿಗಳಿಲ್ಲ. ಈ ದಿನಗಳಲ್ಲಿ ಅವರಂಥ ಶುದ್ಧ ಕವಿಗಳು ಸಿಕ್ಕುವುದು ದುರ್ಲಭ" ಎಂದು ಡಾ. ಹಾ. ಮಾ. ನಾಯಕರು ನುಡಿದ್ದಾರೆ.

## ಕೆ. ಎಸ್. ನರಸಿಂಹಸ್ವಾಮಿಯವರ ಜೀವನ ವಿವರ

**ಜನನ :** ೧೯೧೫ (೨೬-೧-೧೯೧೫) ಮಂಡ್ಯ ಜಿಲ್ಲೆಯ ಕಿಕ್ಕೇರಿಯಲ್ಲಿ.

**ಶಿಕ್ಷಣ :** ಪ್ರಾಥಮಿಕ ಶಿಕ್ಷಣ ಮೈಸೂರಿನಲ್ಲಿ (ಮೈಸೂರು ಟ್ರೇನಿಂಗ್ ಕಾಲೇಜಿನ ಸಂಸ್ಥೆಗಳಲ್ಲಿ).

**ಪ್ರೌಢ ಶಿಕ್ಷಣ :** ಮೈಸೂರಿನ ಮಹಾರಾಜಾ ಹೈಸ್ಕೂಲಿನಲ್ಲಿ,

**ಕಾಲೇಜು :** ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಜೂನಿಯರ್ ಬಿ. ಎ. ವರೆಗೆ.

**ವಿವಾಹ :** ೧೯೩೬ರಲ್ಲಿ ತಿಪಟೂರಿನಲ್ಲಿ ವೆಂಕಮ್ಮನವರೊಡನೆ.

**ವೃತ್ತಿ :** ೧೯೩೭ರಿಂದ ಸರಕಾರಿ ನೌಕರಿ ಮೈಸೂರು, ನಂಜನಗೂಡು, ಬೆಂಗಳೂರು.

**ನಿವೃತ್ತಿ :** ೧೯೭೦ರಲ್ಲಿ ಬೆಂಗಳೂರಿನಲ್ಲಿ ಅನಂತರ ಅಲ್ಲಿಯೇ ವಾಸ.

**ಸಾಹಿತ್ಯಾಧಿಕಾರಿ :** ೧೯೭೨-೭೪ ರಾಜ್ಯ ಸಾಹಿತ್ಯ ಅಕಾಡೆಮಿಯಲ್ಲಿ.

**ಪ್ರಥಮ ಕೃತಿ :** ೧೯೪೨ರಲ್ಲಿ 'ಮೈಸೂರು ಮಲ್ಲಿಗೆ' ಕವನ ಸಂಕಲನ ಪ್ರಕಟಣೆ.

**ಪ್ರಶಸ್ತಿ ಗೌರವಗಳು :** ೧೯೪೩ರಲ್ಲಿ 'ಮೈಸೂರು ಮಲ್ಲಿಗೆ'ಗೆ 'ದೇವರಾಜ ಬಹಾದ್ದೂರ ಪ್ರಶಸ್ತಿ. ೧೯೫೮ರಲ್ಲಿ 'ಶಿಲಾಲತೆ' ಕವನ ಸಂಕಲನಕ್ಕೆ ರಾಜ್ಯದ ಸಂಸ್ಕೃತಿ, ಪ್ರಸಾರ ಶಾಖೆಯ ಬಹುಮಾನ. ೧೯೭೦ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಸನ್ಮಾನ. ೧೯೭೨ರಲ್ಲಿ ಕರ್ನಾಟಕ ರಾಜ್ಯ ಪ್ರಶಸ್ತಿ, ೧೯೭೪ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ೧೯೭೭ರಲ್ಲಿ ತೆರೆದ ಬಾಗಿಲು ಕವನ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ. ೧೯೮೫ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಸದಸ್ಯತ್ವ, ೧೯೮೭ರಲ್ಲಿ ಕೇರಳದ 'ಕವಿಕುಮಾರನ್ ಅಶಾನ್' ಪ್ರಶಸ್ತಿ, ೧೯೯೦ ಮೈಸೂರು ಮಲ್ಲಿಗೆಯ ಸುವರ್ಣ ಮಹೋತ್ಸವ ಆಚರಣೆ. ೧೯೯೨ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಿಂದ ಗೌರವ ಡಿ.ಲಿಟ್ ಪದವಿ. ೧೯೯೫ರಲ್ಲಿ 'ದುಂಡು ಮಲ್ಲಿಗೆ' ಕವನ ಸಂಗ್ರಹಕ್ಕೆ ಪಂಪ ಪ್ರಶಸ್ತಿ ಮತ್ತು ೧೯೯೬ರಲ್ಲಿ ಮಾಸ್ತಿ ಸಾಹಿತ್ಯ ಪ್ರಶಸ್ತಿ.

## ಕೆ. ಎಸ್. ನರಸಿಂಹಸ್ವಾಮಿ ಅವರ ಕೃತಿಗಳು

ಕವಿತೆ : ಮೈಸೂರು ಮಲ್ಲಿಗೆ- ೧೯೪೨, ಐರಾವತ- ೧೯೪೫, ದೀಪದ ಮಲ್ಲಿ- ೧೯೪೭, ಉಂಗುರು- ೧೯೪೯, ಇರುವಂತಿಗೆ- ೧೯೫೨, ಶಿಲಾಲತೆ- ೧೯೫೮, ಮನೆಯಿಂದ ಮನೆಗೆ- ೧೯೬೦, ತೆರೆದ ಬಾಗಿಲು- ೧೯೮೩, ನವಪಲ್ಲವ- ೧೯೮೩, ಮಲ್ಲಿಗೆ ಮಾಲೆ (ಸಮಗ್ರ ಕವಿತೆಗಳು)- ೧೯೮೬, ದುಂಡು ಮಲ್ಲಿಗೆ- ೧೯೯೩, ರಾಬರ್ಟ್ ಬರ್ನ್ ಕವಿಯ ಕೆಲವು ಪ್ರೇಮ ಗೀತೆಗಳು- ೧೯೯೭, ಕೆಲವು ಚೀನೀ ಕವನಗಳು- ೧೯೯೭, ನವಿಲ ದನಿ- ೧೯೯೯, ಸಂಜೆ ಹಾಡು- ೨೦೦೦,

ಗದ್ಯ : ಮಾರಿಯ ಕಲ್ಲು- ೧೯೪೨, ಉಪವನ- ೧೯೫೮, ದಮಯಂತಿ- ೧೯೭೦,

ಅನುವಾದ : ಮೋಹನ ಮಾಲೆ- ೧೯೫೬, ನನ್ನ ಕನಸಿನ ಭಾರತ- ೧೯೬೧, ಪ್ರಪಂಚದ ಬಾಲ್ಯದಲ್ಲಿ- ೧೯೬೫, ಮೀಡಿಯಾ- ೧೯೬೬, ಹಕಲ್ ಬರಿಫಿನ್ನಿನ ಸಾಹಸಗಳು- ೧೯೬೯, ಸುಬ್ರಹ್ಮಣ್ಯ ಭಾರತಿ-೧೯೭೧, ಮಾಯಾಶಂಖ ಮತ್ತು ಇತರ ಕಥೆಗಳು-೧೯೭೨. ರಾಣಿಯ ಗಿಳಿ ಮತ್ತು ರಾಜನ ಮಗ- ೧೯೭೨.

***

# ಎಚ್. ಎಲ್. ನಾಗೇಗೌಡ

ಎಚ್. ಎಲ್. ನಾಗೇಗೌಡ ಎಂದರೆ ಜಾನಪದ, ಜಾನಪದ ಎಂದರೆ ಎಚ್. ಎಲ್. ನಾಗೇಗೌಡ ಎಂದು ಹೇಳಬಹುದಾದಷ್ಟು ಜಾನಪದ ಕ್ಷೇತ್ರಕ್ಕೆ ಕಾರ್ಯ ಮಾಡಿದ ನಾಗೇಗೌಡರು, ದಕ್ಷ ಆಡಳಿತಗಾರರೆಂದೂ, ಪ್ರಸಿದ್ಧ ಸಾಹಿತಿಯೆಂದೂ ಖ್ಯಾತರಾಗಿದ್ದಾರೆ.

ನಾಗೇಗೌಡರ ಪ್ರತಿಭೆಯನ್ನು ಹಲವು ಮುಖಗಳಲ್ಲಿ ಕಾಣಬಹುದಾಗಿದೆ. ತಮ್ಮ ಜೀವಮಾನದಲ್ಲಿ ಹಲವಾರು ಸಾಧನೆಗಳನ್ನು ಮಾಡಿದ ಹಿರಿಯರಲ್ಲಿ ಗಣ್ಯರಾಗಿದ್ದಾರೆ.

೧೯೧೫ರಲ್ಲಿ (೧೧-೨-೧೯೧೫) ತಾಯಿಯ ತವರು ಮನೆಯಲ್ಲಿ (ಬಂಗಲಿಯಲ್ಲಿ) ಜನಿಸಿದರು. ಮಂಡ್ಯ ಜಿಲ್ಲೆಯ ಹರಗನಹಳ್ಳಿಯಲ್ಲಿಯ ಒಂದು ಬಹುದೊಡ್ಡ 'ದೊಡ್ಡಮನೆ' ಕುಟುಂಬ ನಾಗೇಗೌಡರ ಹಿರಿಯರದು. ದೊಡ್ಡ ಮನೆಯಲ್ಲಿ ಜಂಟಿ ಕುಟುಂಬದ ಸದಸ್ಯರ ಸಂಖ್ಯೆ ದೊಡ್ಡದಾಗಿತ್ತು. ಹಾಗೆಯೇ ಗುಣ ಮತ್ತು ಸಂಸ್ಕೃತಿಗಳ ಪರಿಪಾಲನೆಯಲ್ಲೂ ಅದು ದೊಡ್ಡ ಮನೆಯೇ ಆಗಿತ್ತು ಎಂದರೆ ಉತ್ಪ್ರೇಕ್ಷೆಯಾಗುವುದಿಲ್ಲ. ನಾಗೇಗೌಡರ ತಾಯಿಯು ಅವರ ಬಾಲ್ಯದಲ್ಲಿಯೇ ಸಾವನ್ನಪ್ಪಿದ್ದರಿಂದ ತನ್ನ ಅಜ್ಜಿ (ತಂದೆಯ ತಾಯಿ)ಯ ಆರೈಕೆಯಲ್ಲಿ ಬೆಳೆದರು. ನಾಗೇಗೌಡರ ತಂದೆಯ ಹೆಸರು ಲಿಂಗೇಗೌಡ, ತಾಯಿಯ ಹೆಸರು ಹುಚ್ಚಮ್ಮದೇವಿ.

ಹರಗನಹಳ್ಳಿನ ತಮ್ಮ ದೊಡ್ಡಮನೆಯ ಜಗಲಿಯಲ್ಲಿ ಬಾಲಕ ನಾಗೇಗೌಡನ ವಿದ್ಯಾಭ್ಯಾಸ ಪ್ರಾರಂಭವಾಯಿತು. ಇವರ ಆಗಿನ ಗುರು ಓಚಯ್ಯನವರು. ಮುಂದೆ ತಂದೆಯವರು ಮಗನನ್ನು ನಾಗತಿಹಳ್ಳಿಯ ಪ್ರಾಥಮಿಕ ಶಾಲೆಗೆ ಸೇರಿಸಿದರು. ಅನಂತರ ಚೆನ್ನರಾಯ ಪಟ್ಟಣದಲ್ಲಿ ಲೋವರ್ ಸೆಕಂಡರಿಗೆ ಅಭ್ಯಾಸ ಮಾಡಿ ಪಾಸಾದರು. ಮಗನನ್ನು ದೊಡ್ಡ ಅಧಿಕಾರಿಯನ್ನಾಗಿ ಮಾಡಬೇಕೆಂಬುದು ತಂದೆಯ ಹಿರಿಯಾಸೆಯಾಗಿತ್ತು.

೧೯೩೦ರಲ್ಲಿ ಹೈಸ್ಕೂಲು ಸೇರಲು ಚನ್ನಪಟ್ಟಣಕ್ಕೆ ಬಂದರು. ಅಲ್ಲಿ ಕಲಿಯುತ್ತಿದ್ದಾಗ ಭಾರತದ ಸ್ವಾತಂತ್ರ್ಯ ಹೋರಾಟದ ಸಭೆಗಳಲ್ಲಿ ಸ್ವಯಂ ಸೇವಕನಾಗಿ ದುಡಿದು ವಿದೇಶೀ ವಸ್ತುಗಳನ್ನು ಸುಟ್ಟರು, ಖಾದೀ ಬಟ್ಟೆ ಧರಿಸಿದರು. ತಮ್ಮ ಗ್ರಾಮಕ್ಕೆ ಮರಳಿ ಬಂದ ಮೇಲೆ ಚರಕಾದಿಂದ ನೂಲು ತೆಗೆದರು. ಊರಿನ ಹರಿಜನರಿಗೆ ಹೆಂಡ ಕುಡಿಯಬೇಡಿರೆಂದು ಬೋಧಿಸಿದರು.

೧೯೩೩ರಲ್ಲಿ ಎಸ್.ಎಸ್.ಸಿ. ಪರೀಕ್ಷೆ ಪಾಸಾಗಿ ಬೆಂಗಳೂರಿಗೆ ಹೋದರು. ಅಲ್ಲಿಯ ಸರಕಾರಿ ಕಾಲೇಜಿನಲ್ಲಿ ಇಂಟರ್ ಮೀಡಿಯೇಟ್ ಅಭ್ಯಾಸ ಪ್ರಾರಂಭಿಸಿದರು. ವಿಶ್ವೇಶ್ವರಪುರದಲ್ಲಿದ್ದ ಒಕ್ಕಲಿಗರ ಹಾಸ್ಟೆಲ್‌ನಲ್ಲಿ ವಾಸವಾಗಿದ್ದರು. ಹತ್ತಿರದಲ್ಲಿದ್ದ ರಾಮಕೃಷ್ಣ ಆಶ್ರಮಕ್ಕೆ ಭೇಟಿ ಕೊಡುತ್ತಿದ್ದರು. ಆಗಿನ ಕಾಲದಲ್ಲಿ ಬೆಂಗಳೂರಿಗೆ ಬಂದು ಉತ್ತಮ ಭಾಷಣ ಕೊಡುತ್ತಿದ್ದ ವಾಗ್ಮಿಗಳ ಮಾತುಗಳನ್ನು ಕೇಳುವುದು ನಾಗೇಗೌಡರಿಗೆ ಸಾಧ್ಯವಾಯಿತು. ಸರೋಜಿನಿ ನಾಯಿಡು, ಶ್ರೀನಿವಾಸ ಶಾಸ್ತ್ರಿ, ಮಹಾತ್ಮಾ ಗಾಂಧಿ ಮೊದಲಾದವರ ಭಾಷಣ ಕೇಳುವ ಸುಸಂಧಿಗಳೂ ದೊರೆತವು.

ಇತ್ತ ಕಾಲೇಜಿನಲ್ಲಿ ಬಿ. ಎಂ. ಶ್ರೀ. ಅವರಿಂದ ಇಂಗ್ಲೀಷ್ ಮತ್ತು ವಿ.ಸೀ ಇವರಿಂದ ಕನ್ನಡ ಕಲಿಯಲು ಅವಕಾಶ ದೊರೆಯಿತು. ಸ್ವಾತಂತ್ರ್ಯ ಚಳವಳಿಯ ಕಾಲದಲ್ಲಿ ಹಿಂದೀ ಕಲಿತರೆ, ಒಂದು ರೀತಿಯ ಗೌರವ ದೊರೆಯುತ್ತಿತ್ತು. ನಾಗೇಗೌಡರು ಪಂಡಿತ ರಂಗಾಚಾರ್ ಎಂಬವರಿಂದ ಹಿಂದಿಯನ್ನೂ ಕಲಿತರು.

ಇಂಟರ್ ಮೀಡಿಯೇಟ್ ಪಾಸಾದ ನಂತರ ಮೈಸೂರಿಗೆ ಹೋಗಿ ಮಹಾರಾಜಾ ಕಾಲೇಜ್‌ದಲ್ಲಿ ಬಿ.ಎಸ್‌ಸಿ. ತರಗತಿಯಲ್ಲಿ ಅಭ್ಯಾಸ ಆರಂಭಿಸಿದರು. ಎ. ಎಲ್. ಡಿ. ಸೋಜಾ, ಎ. ಆರ್. ವಾಡಿಯಾ, ಟಿ. ಎಸ್. ವೆಂಕಣ್ಣಯ್ಯ, ಎ. ಆರ್. ಕೃಷ್ಣಶಾಸ್ತ್ರಿಗಳು, ತೀ. ನಂ. ಶ್ರೀಕಂಠಯ್ಯ, ಡಿ. ಎಲ್. ನರಸಿಂಹಾಚಾರ್ ಇವರ ಮೆಚ್ಚಿನ ಗುರುಗಳಾಗಿದ್ದರು. ೧೯೩೭ರಲ್ಲಿ ಬಿ.ಎಸ್‌ಸಿ. ಪಾಸಾಗಿ ಪುಣೆಗೆ ತೆರಳಿದರು. ಅಲ್ಲಿ ಆಗ ಸ್ವಾತಂತ್ರ್ಯ ಆಂದೋಲನ, ದೇಶಪ್ರೇಮ, ಖಾದೀ ಬಳಕೆಗೆ ಬಹಳ ಪ್ರೋತ್ಸಾಹವಿತ್ತು. ನಾಗೇಗೌಡರ ದೇಶಪ್ರೇಮ ವೃದ್ಧಿಸಲು ಈ ಪರಿಸರ ಪ್ರೇರಕವಾಯಿತು. ಪ್ರಾಧ್ಯಾಪಕ ಎಲ್. ಬಿ. ಬಾಪಟರಂಥ ಮೇಧಾವಿಗಳು ಇವರು ಎಲ್‌ಎಲ್.ಬಿ ಅಭ್ಯಾಸ ಮಾಡಲು ಸೇರಿದ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದರು.

ವೃತ್ತಿ ಜೀವನವು ಎಡೆಹಳ್ಳಿಯಲ್ಲಿ (ನರಸಿಂಹರಾಜಪುರ) ಹೆಡ್ ಮುನ್ಶಿಯಾಗಿ ಪ್ರಾರಂಭವಾಯಿತು. ವಿವಾಹವೂ ಆಯಿತು. ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ಪಾಸಾಗಿ ಪ್ರೊಬೇಶನರಿ ಅಧಿಕಾರಿಯಾದರು. ೧೯೪೧ರಲ್ಲಿ ಗೆಜೆಟೆಡ್ ಹುದ್ದೆ ದೊರೆಯಿತು. ಹಲವು ವಿಭಾಗಗಳಲ್ಲಿ ಪ್ರೊಬೇಶನರಿ ಅಧಿಕಾರಿಯ ತರಬೇತಿ ಪಡೆದು ೧೯೪೩ರಲ್ಲಿ ಹರಿಹರದಲ್ಲಿ ಅಮಾಲ್ದಾರರಾದರು. ಹರಿಹರದಲ್ಲಿದ್ದಾಗ ಅವರು ಮಾಡಿದ ಬಡಜನರ ಸೇವೆ ಗಮನಾರ್ಹವಾಗಿದೆ. ೧೯೪೭ರಲ್ಲಿ ನಾಗೇಗೌಡರು ತಂದೆಯನ್ನು ಕಳೆದುಕೊಂಡರು. ಅದೇ ವರ್ಷ ಅಸಿಸ್ಟೆಂಟ್ ಕಮೀಶನರ್‌ರಾಗಿ ನೇಮಕಗೊಂಡರು. ತಮ್ಮ ವೃತ್ತಿಯಲ್ಲಿ ಹೆಚ್ಚು ಹೆಚ್ಚು ಪ್ರಗತಿ ಸಾಧಿಸಲು ನಾಗೇಗೌಡರ ಗುಣಗಳು ನೆರವಾದುವು. ಸತತ ಅಭ್ಯಾಸ, ನಿಷ್ಠೆಯಿಂದ ಹಾಗೂ ಪರಿಶ್ರಮದಿಂದ ಕಾರ್ಯ ನಿರ್ವಹಿಸುವುದು, ಜನರೊಡನೆ ಬೆರೆತು ಅವರ ಕಷ್ಟ-ಸುಖ ಅರಿತುಕೊಳ್ಳುವುದು ಇವು ನಾಗೇಗೌಡರ ಹುಟ್ಟುಗುಣಗಳು. ಅಧಿಕಾರಿಯಾಗಿದ್ದಾಗ ಚೆನ್ನಾಗಿ ಪಾಲಿಸಿದರು.

ಗೆಜೆಟೆಡ್ ಅಧಿಕಾರಿಯಾಗಿ ಹಲವು ಕಡೆಗಳಲ್ಲಿ ಹಲವಾರು ಹುದ್ದೆಗಳಲ್ಲಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿದರು. ಉದಾ : ಜಿಲ್ಲಾ ಅಭಿವೃದ್ಧಿ ಅಧಿಕಾರಿ, ವಿದ್ಯಾ ಇಲಾಖೆಯ ಸಹ ಕಾರ್ಯದರ್ಶಿ, ರೆವೆನ್ಯೂ ಕಮಿಶನರ್, ಭದ್ರಾವತಿ ಉಕ್ಕಿನ ಕಾರ್ಖಾನೆಯಲ್ಲಿ ಆಡಳಿತ ಮಂಡಳದ ಕಾರ್ಯದರ್ಶಿ, ಸಕ್ಕರೆ ಕಾರ್ಖಾನೆಯ ಮ್ಯಾನೇಜಿಂಗ್ ಡೈರೆಕ್ಟರ್ ಅನಂತರ ೧೯೬೦ರಲ್ಲಿ ನಾಗೇಗೌಡರನ್ನು ಐ.ಎ.ಎಸ್. ಕೇಡರಿಗೆ ಆಯ್ಕೆ ಮಾಡಲಾಯಿತು. ಶಿವಮೊಗ್ಗ, ಚಿಕ್ಕಮಗಳೂರು, ದಕ್ಷಿಣ ಕನ್ನಡ ಜಿಲ್ಲೆಯ ಜನಪ್ರಿಯ ಜಿಲ್ಲಾಧಿಕಾರಿಯಾಗಿ ಸೇವೆ ಸಲ್ಲಿಸಿದರು. ೧೯೬೯ರಲ್ಲಿ ಲೇಬರ್ ಕಮಿಶನರ್ ಆಗಿ ೧೯೭೨ರಲ್ಲಿ ಸರ್ವೆ ಇಲಾಖೆಯ ಮುಖ್ಯ ಅಧಿಕಾರಿಯಾದರು. ಹಲವು ಇಲಾಖೆಗಳಲ್ಲಿ ಅನುಭವ ಗಳಿಸಿದ ಈ ಹಿರಿಯ ಅಧಿಕಾರಿಯನ್ನು ಸರಕಾರವು ೧೯೭೩ರಲ್ಲಿ ರಾಜ್ಯ ಲೋಕಸೇವಾ ಆಯೋಗದ ಸದಸ್ಯರನ್ನಾಗಿ ನೇಮಕಗೊಳಿಸಿತು.

ಶಿವಮೊಗ್ಗದಲ್ಲಿ ಜಿಲ್ಲಾಧಿಕಾರಿಗಳಾಗಿದ್ದ ನಾಗೇಗೌಡರು ಗ್ರಾಮ ಅಭಿವೃದ್ಧಿಗೆ ನೆರವಾಗುವಂತಹ ಮಾಸಪತ್ರಿಕೆ ಪ್ರಕಟಿಸಲು ನೆರವಾದರು. ಹಾಗೆಯೇ ಅಲ್ಲಿ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸಿದರು. ಅನಂತರ ರಾಜ್ಯದ ವಿಧಾನ ಪರಿಷತ್ತಿನ ಸದಸ್ಯರಾಗಿ ನಾಮಕರಣ ಹೊಂದಿದರು. ಸಾಹಿತ್ಯಕ್ಷೇತ್ರಕ್ಕೆ ಹಾಗೂ ಜಾನಪದ ಕ್ಷೇತ್ರಕ್ಕೆ ಸೇವೆ ಸಲ್ಲಿಸಲು ಇದರಿಂದ ಬಹಳ ಪ್ರಯೋಜನವಾಯಿತು.

ಮೇಲ್ನೋಟಕ್ಕೆ ಗಡುಸಾಗಿ ಕಾಣುವ ನಾಗೇಗೌಡರು ಆರ್ದ್ರ ಹೃದಯವುಳ್ಳವರು. ಮುಗ್ಧ, ಸರಳ ಜೀವಿ, ಶಿಸ್ತುಗಾರ, ಪ್ರಾಮಾಣಿಕ, ಎಲ್ಲರಿಂದ ಕೆಲಸ ಮಾಡಿಸಿಕೊಳ್ಳುವ ಸಾಮರ್ಥ್ಯ ಹೊಂದಿದ್ದಾರೆ. ತಮ್ಮ ಲೇಖನ ಪ್ರವೃತ್ತಿಯಿಂದ ಹಲವು ಕೃತಿಗಳನ್ನು ಕೊಟ್ಟಿದ್ದಾರೆ. ವಿಶೇಷವಾಗಿ ಅವರು ಜಾನಪದ ಕ್ಷೇತ್ರಕ್ಕೆ ಮಾಡಿದ ಸೇವೆ ಚಿರಸ್ಮರಣೀಯವಾಗಿದೆ.

ನಾಗೇಗೌಡರ ಕೃತಿಗಳನ್ನು ಸೃಜನಶೀಲ, ಅನುವಾದ, ಜಾನಪದ ಸಂಗ್ರಹ-ಸಂಶೋಧನೆ ಎಂದು ಗುರುತಿಸಬಹುದಾಗಿದೆ. ಇವುಗಳ ಸಂಕ್ಷಿಪ್ತ ಪರಿಚಯ ಹೀಗೆ ಮಾಡಿಕೊಡಬಹುದಾಗಿದೆ.

ನಾಗೇಗೌಡರು 'ಲಾ' ಅಭ್ಯಾಸವನ್ನು ಪುಣೆಯಲ್ಲಿ ಮಾಡುತ್ತಿದ್ದಾಗ ತಾರುಣ್ಯದಲ್ಲಿ ಬರೆದ ಕವಿತೆಗಳ ಸಂಕಲನ 'ನಾನಾಗುವೆ ಗೀಜಗನ ಹಕ್ಕಿ' ಇದರಲ್ಲಿ ಗೌಡರ ನವೋದಯ ಮಾದರಿಯ ಕವನಗಳು ಹೆಚ್ಚಾಗಿದ್ದರೂ ಕೆಲವು ಅನುವಾದಿತ ಕವನಗಳೂ ಸಮಾವೇಶಗೊಂಡಿವೆ. 'ಕಥೆ-ವ್ಯಥೆ' ಎಂಬ ಸಂಕಲನದ ಎಂಟು ನೀಳ್ಗವನಗಳಲ್ಲಿ ನಾಗೇಗೌಡರ ಸಾಮಾಜಿಕ ಕಳಕಳಿ ಕಾಣಬಹುದಾಗಿದೆ.

ನಾಗೇಗೌಡರ 'ಕಂಡು ಕೇಳಿದ ಕಥೆಗಳು' ಎಂಬ ಎಂಟು ಕಥೆಗಳ ಸಂಕಲನದ ಶೀರ್ಷಿಕೆ ಅನ್ವರ್ಥಕವಾಗಿದೆ. ಓದಿಸಿಕೊಂಡು ಹೋಗುವಂಥ ಹಾಸ್ಯಮಿಶ್ರಿತ ಗದ್ಯಶೈಲಿಯುಳ್ಳ ಈ ಕೃತಿ ನಾಗೇಗೌಡರ ಪ್ರಥಮ ಕಥಾ ಸಂಕಲನ. 'ಖೈದಿಗಳ ಕಥೆಗಳು' ಅವರ ಮತ್ತೊಂದು

ಕಥಾ ಸಂಕಲನ. ಜೈಲಿನಲ್ಲಿ ಖೈದಿಗಳನ್ನು ಭೇಟಿ ಮಾಡಿ ಅವರ ಬದುಕಿನ ದುಃಖ, ಸುಖ, ರೋಷ, ಪಶ್ಚಾತ್ತಾಪಗಳನ್ನು ಯಥಾವತ್ತಾಗಿ ಕಥಾರೂಪದಲ್ಲಿ ಹೆಣೆದಿದ್ದಾರೆ. ಓದುಗರು ಸಹೃದಯರಾಗಿ ಅನುಕಂಪ ತೋರುವಂತೆ ಕಥಾ ನಿರೂಪಣೆ ಮಾಡಿದ್ದಾರೆ.

'ದೊಡ್ಡಮನೆ' ನಾಗೇಗೌಡರ ಮೊದಲ ಕಾದಂಬರಿ. ಬಯಲು ಸೀಮೆಯ ರೈತರ ಬದುಕಿನ ದುರಂತ ಚಿತ್ರಣ. ದೊಡ್ಡಮನೆ (ಅವಿಭಕ್ತ ಕುಟುಂಬ) ಒಡೆದು ಹೋಗಬಾರದೆಂಬುದನ್ನು ಕೇಂದ್ರ ವ್ಯಕ್ತಿ ಬಹಳ ಪ್ರಯತ್ನಿಸಿದರೂ ವಿಫಲನಾಗುತ್ತಾನೆ ಆ ಗ್ರಾಮೀಣ ಪರಿಸರದಲ್ಲಿ. ಮತ್ತೊಂದು ಕಾದಂಬರಿ 'ಸೊನ್ನೆಯಿಂದ ಸೊನ್ನೆಗೆ' ಜನಪದ ಕಥೆಯೊಂದನ್ನು ವಿಸ್ತರಿಸಿ ಕಾದಂಬರಿಯನ್ನಾಗಿ ನಿರ್ಮಿಸಿದ್ದಾರೆ. 'ಕೆಟ್ಟ ಜನರು ಕೊನೆಗೆ ಕೆಟ್ಟದ್ದನ್ನೇ ಅನುಭವಿಸಬೇಕಾಗುತ್ತದೆ ಎಂಬುದು ಕಾದಂಬರಿ ಸೂಚಿಸುವ ವಿಚಾರವಾಗಿದೆ. 'ಭೂಮಿಗೆ ಬಂದ ಗಂಧರ್ವ' ಕಾದಂಬರಿಯಲ್ಲಿ ಸಂಗೀತಗಾರ ಭೈರವಿ ಕೆಂಪೇಗೌಡರ ಜೀವನ ಚಿತ್ರಿಸಲ್ಪಟ್ಟಿದೆ. ಕಲಾವಿದನ ಉತ್ತಮ ಚಿತ್ರಣ ಇದರಲ್ಲಿದೆ. 'ನನ್ನೂರು' ನಾಗೇಗೌಡರ ಊರಾದ ಹರಗನಹಳ್ಳಿಯ ಜೀವನ-ಸಂಸ್ಕೃತಿಯನ್ನು ಪರಿಚಯಿಸುವ ಕಾದಂಬರಿ.

ನಾಗೇಗೌಡರ ಇತರ ಕೃತಿಗಳಲ್ಲಿ 'ಬೆಟ್ಟದಿಂದ ಬಟ್ಟಲಿಗೆ' ಹೆಸರೇ ಸೂಚಿಸುವಂತೆ ಕಾಫಿಯ ಉಗಮ, ವ್ಯಾಪ್ತಿ, ತೋಟಗಾರಿಕೆ ಇವುಗಳ ಬಗ್ಗೆ ಅನುಭವ ಪಡೆದು ಅಂಕಿ-ಸಂಖ್ಯೆಗಳೊಡನೆ ಈ ಕೃತಿಯನ್ನು ರಚಿಸಿದ್ದಾರೆ.

'ಸರೋಜಿನಿ ದೇವಿ' ಹೋರಾಟದ ಜೀವನ ಪರಿಚಯಿಸುವ ಕೃತಿಯಾಗಿದೆ. 'ನಾ ಕಂಡ ಪ್ರಪಂಚ' ನಾಗೇಗೌಡರ ಪ್ರವಾಸ ಕಥನವಾಗಿದೆ. ಪೂರ್ವ ಮತ್ತು ಪಶ್ಚಿಮ ದೇಶಗಳಿಗೆ ಭೇಟಿ ಕೊಟ್ಟು, ಸರಸ ಶೈಲಿಯಲ್ಲಿ ಬರೆದ ಗ್ರಂಥವಾಗಿದೆ.

ನಾಗೇಗೌಡರು ತಮ್ಮ ಆತ್ಮಕಥೆಯನ್ನು 'ನಾಗಸಿರಿ'ಯ ನಾಲ್ಕು ಬೃಹತ್ ಸಂಪುಟಗಳಲ್ಲಿ ಪ್ರಕಟಿಸಿದ್ದಾರೆ. ಜೀವನ ಯಾತ್ರೆ, ವಿದೇಶ ಯಾತ್ರೆ, ಚುನಾವಣಾ ಯಾತ್ರೆ, ಜಾನಪದ ಯಾತ್ರೆ ಇವು ಆ ನಾಲ್ಕು ಸಂಪುಟಗಳು.

ನಾಗೇಗೌಡರು ಮಾಡಿದ ಅನುವಾದ ಕಾರ್ಯ ಕಡಿಮೆಯೇನಲ್ಲ. ಸರ್ ವಾಲ್ಟರ್ ಸ್ಕಾಟ್‌ನ 'ಕೆನಿಲ್ ವರ್ತ್' ಕಾದಂಬರಿಯನ್ನು ಅನುವಾದಿಸಿ ಅದೇ ಹೆಸರಿನಲ್ಲಿ ಪ್ರಕಟಿಸಿದ್ದಾರೆ. 'ಮಾರ್ಕೋ ಪೋಲೋ' ಪ್ರವಾಸ ಕಥನ ನಾಗೇಗೌಡರು ಕನ್ನಡ ಸಾಹಿತ್ಯಕ್ಕೆ ಕೊಟ್ಟ ಉತ್ತಮ ಅನುವಾದ ಕೃತಿ. 'ವೆರಿಯರ್ ಎಲ್ವಿನ್‌ರ ಗಿರಿಜನ ಪ್ರಪಂಚ' ಇಂಗ್ಲೆಂಡಿನಿಂದ ಭಾರತಕ್ಕೆ ಬಂದ ಪಾದ್ರಿಯೊಬ್ಬನು ಗಾಂಧೀಜಿ ಹಾಗೂ ಭಾರತೀಯ ಸಂಸ್ಕೃತಿಗಳ ಪ್ರಭಾವದಿಂದ ಭಾರತದ ಗಿರಿಜನರ ಸೇವೆ ಮಾಡುತ್ತಾ ಭಾರತೀಯ ಪೌರತ್ವ ಪಡೆದ ಎಲ್ವಿನ್‌ರ ಆತ್ಮಕಥೆಯ ಅನುವಾದ. 'ಪ್ರವಾಸಿ ಕಂಡ ಇಂಡಿಯಾ' ಅನಾದಿ ಕಾಲದಿಂದ ಭಾರತಕ್ಕೆ ಬಂದ ವಿದೇಶೀ ಯಾತ್ರಿಕರ ಬರವಣಿಗೆಗಳ ಅನುವಾದ. ಇದು ಬೃಹತ್ತಾದ ಏಳು ಸಂಪುಟಗಳಲ್ಲಿದೆ.

ಜಾನಪದ ನಾಗೇಗೌಡರ ಮತ್ತೊಂದು ವಿಶೇಷ ಆಸಕ್ತಿಯ ಕ್ಷೇತ್ರ. ಆ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆಯನ್ನು ಯಾರೂ ಮರೆಯಲಾರರು.

ಸರಕಾರಿ ಅಧಿಕಾರಿಯಾಗಿದ್ದಾಗಲೇ ನಾಗೇಗೌಡರು ಜನಪದ ಕಲೆ, ಸಾಹಿತ್ಯ, ಸಂಸ್ಕೃತಿಗಳನ್ನು ರಕ್ಷಿಸಿ ಪೋಷಿಸಲು ಗ್ರಾಮೀಣ ಜನರ ಒಡನಾಟ ಹೊಂದಿದರು. ಕಾಲೇಜಿನಲ್ಲಿ ಕಲಿಯುತ್ತಿದ್ದಾಗಲೇ ಅವರು ಜನಪದ ಸಾಹಿತ್ಯ ಸಂಗ್ರಹಿಸಲು ನಿರ್ಧರಿಸಿದ್ದರು. ಅದರಂತೆ ಜಾನಪದ ಸಂಗ್ರಹಣೆ, ಸಂಪಾದನೆ, ಧ್ವನಿ ಮುದ್ರಣ ಕಾರ್ಯ ಪ್ರಾರಂಭಿಸಿದರು. ಅಖಿಲ ಕರ್ನಾಟಕ ಮಟ್ಟದ ಜಾನಪದ ಸಮ್ಮೇಳನಗಳನ್ನು ಮತ್ತು ಜನಪದ ಕಲಾ ಮಹೋತ್ಸವಗಳನ್ನು ನಡೆಸಿದ ಕೀರ್ತಿಗೆ ಭಾಜನರಾದರು. ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಸಮಿತಿಗಳ ಸಹಕಾರದೊಂದಿಗೆ ನಾಗೇಗೌಡರು ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಜಾನಪದ ಸಂಗ್ರಹ ಕಾರ್ಯ ಮಾಡಿದರು. ಕಲಾಮೇಳಗಳನ್ನೂ ನಡೆಸಿದರು. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಸ್ಥಾಪಿಸಲು ಕಾರಣಕರ್ತರಾದರು. ಕರ್ನಾಟಕ ಸರಕಾರವು ಅವರನ್ನೇ ಈ ಅಕಾಡೆಮಿಗೆ ಅಧ್ಯಕ್ಷರನ್ನಾಗಿ ಎರಡು ಅವಧಿಗೆ ನಿಯುಕ್ತಿ ಮಾಡಿತು.

ನಾಗೇಗೌಡರಿಗೆ ಜಾನಪದ ಕಲಾವಿದರನ್ನು ಭೇಟಿಯಾಗಿ ಅವರ ಕಷ್ಟ-ಸುಖ ಅರಿತುಕೊಳ್ಳುವುದರಲ್ಲಿ ಬಹಳ ಆಸಕ್ತಿ ಇತ್ತು. ಅವರಿಗೆ ಹಲವಾರು ರೀತಿಯಲ್ಲಿ ನೆರವಾಗುವುದರಲ್ಲಿ ಅವರಿಗೆ ಸಂತೃಪ್ತಿ ಉಂಟಾಗುತ್ತಿತ್ತು. ಕೋಲಾಟ, ಗೊಂಬೆಯಾಟ, ದೊಂಬರಾಟ ಮೊದಲಾದ ಕಲಾವಿದರನ್ನು ಕರೆಸಿ ಇಲ್ಲವೇ ಅವರ ಬಳಿ ಹೋಗಿ ನೆರವು ನೀಡುತ್ತಿದ್ದರು. ಅವರಿಗೆ ಯೋಗ್ಯ ಅವಕಾಶಗಳನ್ನು ಆಕಾಶವಾಣಿ, ದೂರದರ್ಶನ ಮತ್ತು ಕಲಾಮೇಳಗಳಲ್ಲಿ ಕಲ್ಪಿಸಿ ಕೊಡುತ್ತಿದ್ದರು. ಅವಶ್ಯವಿದ್ದವರಿಗೆ ಆರ್ಥಿಕ ನೆರವನ್ನು ಕೊಡುತ್ತಿದ್ದರು, ಇಲ್ಲವೆ ಕೊಡಿಸುತ್ತಿದ್ದರು.

ಜಾನಪದ ಸಾಹಿತ್ಯ ಸಂಗ್ರಹಣೆಯಲ್ಲಿ ತೋರಿದ ಆಸಕ್ತಿ, ಮಾಡಿದ ಸಂಶೋಧನೆ ಗಮನಾರ್ಹವಾಗಿವೆ. 'ಸೋಬಾನೆ ಚಿಕ್ಕಮ್ಮನ ಪದಗಳು' ನಾಗೇಗೌಡರು ತಮ್ಮ ಹಗರನ ಹಳ್ಳಿಯ ಪ್ರತಿಭಾವಂತ ವೃದ್ಧೆಯ ಬಾಯಲ್ಲಿದ್ದ ವಿವಿಧ ದಾಟಿಗಳಲ್ಲಿದ್ದ ಹಾಡುಗಳನ್ನು ಸಂಗ್ರಹಿಸಿ ಉಳಿಸಿದ್ದಾರೆ. 'ಪದವವೆ ನಮ್ಮ ಎದೆಯಲ್ಲಿ' ನಾಗೇಗೌಡರ ಬೃಹತ್ ಸಂಗ್ರಹ. ಇದು ಗೀತ ಸಂಕಲನ. ಸೋಬಾನೆ ಪದಗಳು, ಒಸಗೆ ಪದಗಳು, ಹಚ್ಚೆ ಹೊಯ್ಯುವ ಪದಗಳು, ಮಕ್ಕಳ ಪದಗಳು, ಕೋಲಾಟದ ಪದಗಳು, ಲಾಲಿ ಪದಗಳು, ಹಾಡ್ಗತೆಗಳು ಮೊದಲಾದ ಹನ್ನೊಂದು ಪ್ರಕಾರದ ಹಾಡುಗಳನ್ನು ಬೇರೆ ವಿಭಾಗಗಳಲ್ಲಿ ಸಂಗ್ರಹಿಸಿಕೊಟ್ಟಿದ್ದಾರೆ. ನಾಗೇಗೌಡರ ಮೂರನೆಯ ಸಂಕಲನ 'ಕರ್ನಾಟಕದ ಜನಪದ ಕಥೆಗಳು' ಸಂಗ್ರಹದಲ್ಲಿ ಕರ್ನಾಟಕ ರಾಜ್ಯದ ಎಲ್ಲ ಜಿಲ್ಲೆಗಳಿಂದ ಆಯ್ದ ಜನಪದ ಕಥೆಗಳನ್ನು ಸಮಾವೇಶ ಮಾಡಿದ್ದಾರೆ. 'ಹೆಳವರು ಮತ್ತು ಅವರ ಕಾವ್ಯಗಳು' ಗ್ರಂಥದಲ್ಲಿ ನಾಗೇಗೌಡರು ಸಂಶೋಧನೆ ಮಾಡಿದ ಹೆಳವರ ಕುಲಗಳ ಮೂಲ ಮತ್ತು ಅವರು ಹಾಡುವ ಕಾವ್ಯಗಳ ಬಗ್ಗೆ ಸವಿಸ್ತಾರವಾದ ನಿರೂಪಣೆ ಇದೆ. ಹೆಳವರ ಅಧ್ಯಯನಕ್ಕೆ ಇದೊಂದು ಆಕರ ಗ್ರಂಥವಾಗಿದೆ. 'ಎಸೆನ್ಶಿಯಲ್ಸ್ ಆಫ್ ಕರ್ನಾಟಕ ಫೋಕ್‌ಲೋರ್' ನಾಗೇಗೌಡರು ಇಂಗ್ಲಿಷ್ ಪ್ರಾಧ್ಯಾಪಕರಾದ ಎಚ್. ಎ. ರಾಮಕೃಷ್ಣ ಅವರೊಡನೆ ಸೇರಿ ಇಂಗ್ಲಿಷ್‌ನಲ್ಲಿ

ರಚಿಸಿದ ಕರ್ನಾಟಕದ ಜಾನಪದವನ್ನು ಪರಿಚಯಿಸುವ ಗ್ರಂಥ. ಕನ್ನಡೇತರರಿಗೆ ಮಾಹಿತಿ ಪಡೆಯಲು ಇದರಿಂದ ಸಾಧ್ಯವಾಗಿದೆ.

'ಕನ್ನಡ ಜಾನಪದ ಕೋಶ'ವು ನಾಗೇಗೌಡರು ಪ್ರಧಾನ ಸಂಪಾದಕರಾಗಿ ಪ್ರಕಟಿಸಿರುವ ಜಾನಪದಕ್ಕೆ ಮೀಸಲಾಗಿರುವ ಶಬ್ದಾರ್ಥ ನಿಘಂಟು. ಈ ಬೃಹತ್ ನಿಘಂಟು ಅಭ್ಯಾಸಿಗಳಿಗೆ ಉಪಯುಕ್ತವಾಗಿದ್ದು ಈ ನಿಘಂಟಿನಲ್ಲಿ ಬಳಕೆ ನಿಂತು ಹೋಗಬಹುದಾದ ಹಳ್ಳಿಯ ಶಬ್ದಗಳನ್ನು ಸಂಗ್ರಹಿಸಿ ಕೊಡಲಾಗಿದೆ. ನಾಗೇಗೌಡರ ಪ್ರಧಾನ ಸಂಪಾದಕತ್ವದಲ್ಲಿ 'ಮೈಲಾರಲಿಂಗನ ಕಾವ್ಯ', ಗ್ರಾಮದೇವತೆ ಮಾರಮ್ಮ', 'ಹಾಡಬನ್ನಿ ದನಿಯೆತ್ತಿ', 'ಹಾವು ತುಳಿದೇನ' ಪುಸ್ತಕಗಳು ಪ್ರಕಟವಾಗಿವೆ.

'ಜಾನಪದ ಜಗತ್ತು' ಎಂಬ ತ್ರೈಮಾಸಿಕ ಜಾನಪದ ಪತ್ರಿಕೆಯನ್ನು ಕಳೆದ ಮೂವತ್ತಕ್ಕೂ ಹೆಚ್ಚು ವರ್ಷಗಳಿಂದ ನಾಗೇಗೌಡರು ಸಂಪಾದಿಸುತ್ತಿದ್ದಾರೆ. ಇದರ ವಿಶೇಷ ಸಂಚಿಕೆಗಳು ಜನಪದ ಸಂಶೋಧಕರಿಗೆ ಬಹಳ ಉಪಯುಕ್ತವಾಗಿವೆ.

೧೯೭೮ರಲ್ಲಿ ಸರಕಾರಿ ಸೇವೆಯಿಂದ ನಿವೃತ್ತರಾದ ಸಂದರ್ಭದಲ್ಲಿ ಸಾರ್ವಜನಿಕರು ಒಂದು ಅಪೂರ್ವ ಅಭಿನಂದನಾ ಕಾರ್ಯಕ್ರಮ ನಡೆಸಿ ನಾಗೇಗೌಡರಿಗೆ ೧,೧೫,೦೦೦ ರೂಪಾಯಿಗಳ ಹಮ್ಮಿಣಿಯನ್ನು ಕೊಟ್ಟರು. ನಾಗೇಗೌಡರು ಆ ಹಣವನ್ನು ಒಂದು ನಿಧಿಯಾಗಿಟ್ಟು 'ಜಾನಪದ ಟ್ರಸ್ಟ್' ಪ್ರಾರಂಭಿಸಿದರು. ಕನ್ನಡನಾಡನ್ನು ಸಂಚರಿಸಿ ಜನಪದ ಸಾಹಿತ್ಯದ ವಿವಿಧ ಪ್ರಕಾರಗಳನ್ನು ಧ್ವನಿ ಮುದ್ರಿಸಿಕೊಂಡರು. ಜಾನಪದ ಕಲೆ, ಜಾತ್ರೆ, ಉತ್ಸವ, ಕುಣಿತ, ವೇಷ, ಛಾಯಾಗ್ರಹಣ ಮಾಡಿದರು. ವಿಡಿಯೋ ಗ್ರಹಣ ಮಾಡಿದರು. ಹೀಗೆ ಹಲವಾರು ಆಡಿಯೋ ವಿಡಿಯೋ ಕ್ಯಾಸೆಟ್ ತಯಾರಿಸಿದರು.

ನಾಗೇಗೌಡರು 'ಜಾನಪದ ಲೋಕ' ನಿರ್ಮಾಣ ಮಾಡುವ ಕನಸು ಕಂಡಿದ್ದರು. ೧೯೯೪ರಲ್ಲಿ ರಾಮನಗರದ ಬಳಿ ಅವರ ಕನಸು ನನಸಾಗಿ, ಸಾಂಸ್ಕೃತಿಕ ಕೇಂದ್ರವಾಗಿ ಕಾರ್ಯಪ್ರವೃತ್ತವಾಯಿತು. ಮಹಾದ್ವಾರ, ಜಾನಪದ ವಸ್ತು, ಚಿತ್ರ ಸಂಗ್ರಹಾಲಯ, ಶಿಲ್ಪ ಸಂಗ್ರಹ, ಅತಿಥಿ ಗೃಹ, ಮಕ್ಕಳ ಮನೋರಂಜನೆಗಾಗಿ ಹಲವು ಸವಾರಿಗಳು ಜಾನಪದ ಲೋಕದಲ್ಲಿವೆ. ಕೆಲವು ಕರಕುಶಲ ಕಲಾವಿದರು ಇಲ್ಲಿದ್ದು ವಸ್ತು ತಯಾರಿಸುತ್ತಿದ್ದಾರೆ. ಕೆಲವು ಕಲೆಗಳಿಗೆ ತರಬೇತಿ ನೀಡಲಾಗುತ್ತದೆ. ಸಂಶೋಧನೆಗೂ ಇಲ್ಲಿ ಅವಕಾಶವಿದೆ. ಅಭ್ಯಾಸ ಮಾಡಿ ಡಿಪ್ಲೋಮಾ, ಸರ್ಟಿಫಿಕೇಟುಗಳನ್ನು ಇಲ್ಲಿ ಪಡೆಯಬಹುದು. ಜಾನಪದ ಲೋಕದ ವೈಶಿಷ್ಟ್ಯವೆಂದರೆ ಜಾನಪದ ಶಿಬಿರಗಳು ಸಂಶೋಧನಾ ಕಮ್ಮಟಗಳು, ವಿಚಾರ ಸಂಕಿರಣಗಳು ಮತ್ತು ಗ್ರಂಥಾಲಯ. ಜಾನಪದ ಲೋಕದ ಮುಖಾಂತರ ಜನಪದ ಕಲಾವಿದರನ್ನು ಗುರುತಿಸಿ, ಪ್ರೋತ್ಸಾಹಿಸಿ, ಸನ್ಮಾನಿಸುವ ಕಾರ್ಯಗಳನ್ನು ನಾಗೇಗೌಡರು ಮಾಡುತ್ತಿದ್ದಾರೆ. ಜಾನಪದ ಲೋಕ ನಾಗೇಗೌಡರ ಅತಿ ವಿಶಿಷ್ಟ ಕೊಡುಗೆ ಎನ್ನಬಹುದು. ಇನ್ನೂ ಹಲವಾರು ಯೋಜನೆಗಳನ್ನು ನಾಗೇಗೌಡರು ಕೃತಿ ರೂಪಕ್ಕೆ ಇಳಿಸ ಬಯಸುತ್ತಿದ್ದಾರೆ. ನಾಗೇಗೌಡರ ಇನ್ನೂ ಹಲವು ಕೃತಿಗಳು ಪ್ರಕಟವಾಗಬೇಕಾಗಿವೆ. ಈ ವಯಸ್ಸಿನಲ್ಲಿಯೂ ಅವರು ಅದಮ್ಯ ಉತ್ಸಾಹ ತೋರುತ್ತಿರುವುದು ಪ್ರಶಂಸನೀಯ.

ನಾಗೇಗೌಡರು ಮಾಡಿದ ಸಾಹಿತ್ಯ ಮತ್ತು ಜಾನಪದ ಕ್ಷೇತ್ರಗಳಲ್ಲಿಯ ಗಮನಾರ್ಹ ಸೇವೆಯನ್ನು ಮನ್ನಿಸಿ ಹಲವಾರು ಸಂಸ್ಥೆಗಳು, ಸರಕಾರ ಅವರಿಗೆ ಗೌರವ ಪ್ರಶಸ್ತಿಗಳನ್ನು ಸಲ್ಲಿಸಿವೆ. ಕರ್ನಾಟಕ ಸರಕಾರವು ವಿಧಾನ ಪರಿಷತ್ತಿಗೆ ಅವರನ್ನು ನಾಮಕರಣ ಮಾಡಿ ಗೌರವಿಸಿದೆ.

೧೯೭೪ರಲ್ಲಿ ನಾಗೇಗೌಡರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ. ೧೯೮೮ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪಡೆದಿದ್ದಾರೆ. ೧೯೯೦ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ೧೯೯೨ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಫೆಲೋಶಿಪ್, ೧೯೯೯ರಲ್ಲಿ ಜಾನಪದ ಮೇರು ಪ್ರೇರಣಾ ಪ್ರಶಸ್ತಿ ದೊರೆತಿದೆ.

ಹಾಗೆಯೇ ಅವರ ಕೆಲವು ಕೃತಿಗಳಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. 'ನನ್ನೂರು' ಕೃತಿಗೆ ೧೯೭೫ರಲ್ಲಿ, ವೆರಿಯರ್ ಎಲ್ವಿನ್‌ರ 'ಗಿರಿಜನ ಪ್ರಪಂಚ' ಅನುವಾದಕ್ಕೆ ೧೯೭೭ರಲ್ಲಿ, 'ಪದವವೆ ನಮ್ಮ ಎದೆಯಲ್ಲಿ' ಜನಪದ ಸಾಹಿತ್ಯ ಸಂಪಾದನೆಗೆ ೧೯೭೭ರಲ್ಲಿ ಮತ್ತು 'ನಾ ಕಂಡ ಪ್ರಪಂಚ' ಪ್ರವಾಸ ಸಾಹಿತ್ಯಕ್ಕೆ ೧೯೮೭ರಲ್ಲಿ ಅಕಾಡೆಮಿ ಪ್ರಶಸ್ತಿ ಲಭಿಸಿವೆ.

ಇಷ್ಟೆಲ್ಲ ಕಾರ್ಯ ಮಾಡಿದರೂ ಪ್ರಶಸ್ತಿ ಗಳಿಸಿದರೂ ಈ ಹಿರಿಯ ಚೈತನ್ಯಕ್ಕೆ ತನ್ನ ಕಾರ್ಯಗಳಿಂದ ನಿವೃತ್ತಿ ಇಲ್ಲ. ತಮ್ಮ ಚಟುವಟಿಕೆಗಳನ್ನು ತತ್ಪರತೆಯಿಂದ ಮುಂದುವರಿಸಿದ್ದಾರೆ. ಬೆಂಗಳೂರಿನಲ್ಲಿ ವಾಸವಾಗಿದ್ದಾರೆ. ಇವರಿಂದ ಇನ್ನೂ ಹೆಚ್ಚು ಸಾಧನೆಗಳನ್ನು ನಿರೀಕ್ಷಿಸಬಹುದಾಗಿದೆ. ನಾಗೇಗೌಡರ ಜೀವನ, ಸಾಧನೆಗಳ ಬಗ್ಗೆ ಅವರ ಹಾಗೂ ಇತರರ ಕೆಲವು ಹೇಳಿಕೆಗಳು ಹೀಗಿವೆ :

"ಶರಣ ವಿಶ್ವೇಶ್ವರ ಮಠದಲ್ಲಿ ಕುಳಿತು ಹಲವು ಬಗೆಯ ಹೆಂಗಸರು ಮತ್ತು ಗಂಡಸರ ಪದಗಳನ್ನು ಧ್ವನಿಮುದ್ರಿಸಿಕೊಂಡೆ. ಹೀಗೆ ನಾನು ಸಹಸ್ರಾರು ಗಂಟೆಗಳ ಹಾಡುಗಳನ್ನು ಧ್ವನಿಮುದ್ರಿಸಿಕೊಂಡ ಉದ್ದೇಶ ಅವು ಮುಂದೆ ಕೇಳುವವರಿಗೆ ಅಭ್ಯಾಸಿಗಳಿಗೆ, ಅಧ್ಯಯನಕಾರರಿಗೆ ಉಪಯೋಗವಾಗಲಿ ಎಂಬುದು ಒಂದಾದರೆ, ಅವುಗಳನ್ನು ಕ್ಯಾಸೆಟ್ ಮಾಡಿ ಆದರಲ್ಲಿಯೂ ನಗರದಲ್ಲಿ ಪ್ರಚಾರ ಮಾಡಬೇಕೆಂಬುದು ಇನ್ನೊಂದು ಉದ್ದೇಶ. ಈ ಉದ್ದೇಶದಿಂದಲೇ ನಾನು ಹಿಂದೆ ಆಕಾಶವಾಣಿಯಲ್ಲಿದ್ದ ಪದ್ಮಚರಣ್ (ನರಸಿಂಹಾಚಾರ್) ಅವರನ್ನು ಟ್ರಸ್ಟಿಗೆ ಕರೆಸಿಕೊಂಡು ಸುಮಾರು ಒಂದು ತಿಂಗಳು ನನ್ನ ಧ್ವನಿ ಮುದ್ರಿಕೆಗಳನ್ನು ಕೇಳಿಸಿದ್ದು" ಎಂದು ಕ್ಯಾಸೆಟ್ ತಯಾರಿಕೆಯ ಸಂದರ್ಭದಲ್ಲಿ ನಾಗೇಗೌಡರು ಹೇಳಿದ್ದಾರೆ. (ನಾಗಸಿರಿ, ಜಾನಪದ ಯಾತ್ರೆ ಸರಣಿ ಸಂಪುಟ- ೪, ಪುಟ- ೨೩೭, ೨೩೯).

● "ಸರಕಾರದ ಕಾರ್ಯಕ್ಷೇತ್ರದಲ್ಲಿ ನುರಿತ ಜಾಣ್ಮೆಯ ಆಡಳಿತಗಾರರೆಂದು ಹೆಸರು ಪಡೆದುಕೊಂಡು ಸಾಹಿತ್ಯ ಕ್ಷೇತ್ರದಲ್ಲಿಯೂ ಯಶಸ್ವಿಯಾಗಿ ಪ್ರಶಂಸಾರ್ಹವಾಗಿ ಕೈಯಾಡಿಸುತ್ತಾ ಕನ್ನಡದ ಭಂಡಾರವನ್ನು ಬೆಳೆಸುತ್ತಿರುವ ಕೆಲವೇ ಕೆಲವು ಸಾಹಿತಿಗಳಲ್ಲಿ ನಾಗೇಗೌಡರು ಒಬ್ಬರು" ಎಂದು ಕುವೆಂಪು ನುಡಿದಿದ್ದಾರೆ.

• "ನಾಗೇಗೌಡರು ಬುದ್ಧಿವಂತ, ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದರು. ಮಾಧ್ಯಮಿಕ ಶಾಲೆ ಸೇರಿದಂದಿನಿಂದಲೂ ಅವರಿಗೆ ಸ್ಕಾಲರ್‌ಶಿಪ್ ಇಲ್ಲವೇ ಫ್ರೀಶಿಪ್ ಬರುತ್ತಿತ್ತು. 'ದೊಡ್ಡ ಮನೆಯ ದೊಡ್ಡ ಸಂಸಾರವನ್ನು ನಿಭಾಯಿಸಲು ಸಾಧ್ಯವಾಗದೆ ಹೆಣಗಾಡುತ್ತಿದ್ದ ತಂದೆ ಲಿಂಗೇಗೌಡರಿಗೆ ತನ್ನ ವಿದ್ಯಾಭ್ಯಾಸದ ಖರ್ಚು ಹೊರೆಯಾಗದಂತೆ ನೋಡಿಕೊಂಡು ಪದವಿಯನ್ನು ಗಳಿಸಿದರು" ಎಂದು ಡಾ. ಚಕ್ಕರೆ ಶಿವಶಂಕರ ನುಡಿದಿದ್ದಾರೆ.

• "ಭೈರವಿ ಕೆಂಪೇಗೌಡರೆಂಬ ಖ್ಯಾತ ಸಂಗೀತಗಾರರ ಜೀವನದ ಸರ್ವ ಸ್ವಾರಸ್ಯವನ್ನು 'ಭೂಮಿಗೆ ಬಂದ ಗಂಧರ್ವ' ಎಂಬ ಶ್ರೇಷ್ಠ ಕಾದಂಬರಿಯಲ್ಲಿ ಒದಗಿಸಿಕೊಟ್ಟು ಕನ್ನಡನಾಡಿನ ಜನಮನದಲ್ಲಿ ಶಾಶ್ವತವಾಗಿ ಇರುವಂತೆ ಮಾಡಿದ್ದಾರೆ" ಎಂದು ಡಾ. ವಿ. ಕೃ. ಗೋಕಾಕ್ ಅವರು ನಾಗೇಗೌಡರ 'ಭೂಮಿಗೆ ಬಂದ ಗಂಧರ್ವ' ಕಾದಂಬರಿಯ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

• "ಇದು ಬರಿಯ ಕಥನವಲ್ಲ. ಇದರಲ್ಲಿ ಚರಿತ್ರೆ, ಭೂಗೋಳ, ಮಾನವಶಾಸ್ತ್ರ, ಜಾನಪದ ಎಲ್ಲವೂ ಹೆಣೆದುಕೊಂಡಿದೆ. (ನಾಗೇಗೌಡರ) ಹಾಸ್ಯ, ವ್ಯಂಗ್ಯ, ವಿಡಂಬನೆಗಳು, ಜೊತೆಗೆ ರಸಿಕತೆ ಯಾರನ್ನೂ ಆಕರ್ಷಿಸುತ್ತವೆ" ಎಂದು ಡಾ. ಹಾ. ಮಾ. ನಾಯಕ ಅವರು ನಾಗೇಗೌಡರ ಅನುವಾದ ಕೃತಿ ವೆರಿಯರ್ ಎಲ್ವಿನ್‌ರ ಗಿರಿಜನ ಪ್ರಪಂಚದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

• "ಒಂದು ಊರಿನ ಜನ, ಬಾಳು, ಸಂಸ್ಕೃತಿ, ಮೇಲುಕೀಳು, ಆಚಾರ, ಮತ, ಮೌಢ್ಯ, ಕೆಚ್ಚು, ಗ್ರಾಮೀಣ ರಸಿಕತೆ, ಬಲ ದೌರ್ಬಲ್ಯ ಎಲ್ಲವೂ ಸಮಗ್ರವಾಗಿ ದೃಗ್ಗೋಚರವಾಗಿ ನಿಮ್ಮ ಊರು 'ನನ್ನೂರು' ಆಗಿಬಿಡುತ್ತದೆ. ಇಂಥ ಗ್ರಾಮ ಜೀವನದ ಅಪೂರ್ವ ಪರಿಚಯದ ಕೃತಿ ಕನ್ನಡಕ್ಕೆ ಒಂದು ಹೊಸ ಕೊಡುಗೆಯಾಗಿದೆ" ಎಂದು ಕುವೆಂಪು ನಾಗೇಗೌಡರ 'ನನ್ನೂರು' ಸಂಕಲನದ ಬಗ್ಗೆ ಹೇಳಿದ್ದಾರೆ.

• "ಹರಗನಹಳ್ಳಿಯ ಮುರುಕಲು ಮನೆಯೊಂದರಲ್ಲಿ ಎಷ್ಟೋ ವರ್ಷ ಅಜ್ಞಾತಳಾಗಿ ಉಳಿದಿದ್ದ ಚಿಕ್ಕಮ್ಮ ತನ್ನ ೮೦-೯೦ರ ವಯಸ್ಸಿನಲ್ಲಿ ನಾಗೇಗೌಡರ ಜಾನಪದ ಜೋಳಿಗೆಗೆ ತನ್ನ ಸಮಸ್ತ ಸಾಹಿತ್ಯಧಾರೆಯನ್ನು ಎರೆದು ತನ್ನ ಜನ್ಮವನ್ನು ಸಾರ್ಥಕಪಡಿಸಿಕೊಂಡಳು" ಎಂದು ಜೀಶಂಪ 'ಸೋಬಾನೆ ಚಿಕ್ಕಮ್ಮನ ಪದಗಳ ಸಂಗ್ರಹ'ದ ಬಗ್ಗೆ ಹೇಳಿದ್ದಾರೆ.

## ಎಚ್. ಎಲ್. ನಾಗೇಗೌಡರ ಜೀವನ ವಿವರ :

**ಜನನ :** ೧೯೧೫ (೧೧-೨-೧೯೧೫) ಮಂಡ್ಯಜಿಲ್ಲೆಯ ಹರಗನಹಳ್ಳಿ.

**ತಂದೆ-ತಾಯಿ :** ಲಿಂಗೇಗೌಡ-ಹುಚ್ಚಮ್ಮದೇವಿ.

**ಶಿಕ್ಷಣ :** ಚನ್ನಪಟ್ಟಣದಲ್ಲಿ ಶಾಲಾ ಶಿಕ್ಷಣ, ಬೆಂಗಳೂರಿನಲ್ಲಿ ಕಾಲೇಜು ಬಿಎಸ್.ಸಿ ೧೯೩೭, ಎಲ್‌ಎಲ್. ಬಿ. ಪದವಿ ಪುಣೆಯಲ್ಲಿ.

**ವೃತ್ತಿ :** ಮುನ್ಸಿಫ್ ಕೋರ್ಟಿನಲ್ಲಿ ಹೆಡ್ ಮುನ್ಸಿ. ಕೆ.ಎ.ಎಸ್. ಆಯ್ಕೆ (೧೯೪೧), ಸರಕಾರದ ಅನೇಕ ಹುದ್ದೆಗಳಲ್ಲಿ ಕೆಲಸ. ಐ. ಎ. ಎಸ್. ಶ್ರೇಣಿಗೆ ಆಯ್ಕೆ (೧೯೬೦) ಹಲವು ಹುದ್ದೆಗಳಲ್ಲಿ.

**ನಿವೃತ್ತಿ :** ಲೋಕಸೇವಾ ಆಯೋಗದ ಸದಸ್ಯರಾಗಿದ್ದಾಗ.

**ಪ್ರಶಸ್ತಿ / ಸನ್ಮಾನ :** ಕನ್ನಡ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (೧೯೭೪), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (೧೯೮೮), ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ನಾಟಕ ಅಕಾಡೆಮಿಯ ಫೆಲೋಶಿಪ್. ಅ. ಭಾ. ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಮುಧೋಳದಲ್ಲಿ (೧೯೯೫).

**ಸಂಸ್ಥಾಪನೆ :** 'ಜಾನಪದ ಲೋಕ' ರಾಮನಗರದ ಬಳಿ.

## ಎಚ್. ಎಲ್. ನಾಗೇಗೌಡರ ಕೃತಿಗಳು :

**ಕಥಾ ಸಂಗ್ರಹ :** ಕಂಡು ಕೇಳಿದ ಕಥೆಗಳು, ಖೈದಿಗಳ ಕಥೆಗಳು.

**ಕಾದಂಬರಿ :** 'ದೊಡ್ಡಮನೆ', ಸೊನ್ನೆಯಿಂದ ಸೊನ್ನೆಗೆ, ನನ್ನೂರು (೧೯೭೪), ಭೂಮಿಗೆ ಬಂದ ಭಗವಂತ (೧೯೭೭).

**ಇತರ :** ಬೆಟ್ಟದಿಂದ ಬಟ್ಟಲಿಗೆ (೧೯೬೯) ಸರೋಜಿನಿ ದೇವಿ, ಪ್ರವಾಸಿ ಕಂಡ ಇಂಡಿಯಾ (ಏಳು ಸಂಪುಟಗಳು), ನಾ ಕಂಡ ಪ್ರಪಂಚ (೧೯೮೬), ನಾಗಸಿರಿ (ನಾಲ್ಕು ಸಂಪುಟಗಳು) ಮಾರ್ಕೋಪೋಲೊ ಪ್ರವಾಸ ಕಥನ.

**ಅನುವಾದ :** ಕೆನಿಲ್ ವರ್ತ್, ವೆರಿಯರ್ ಎಲ್ವಿನ್‌ನ ಗಿರಿಜನ ಪ್ರಪಂಚ.

**ಸಂಪಾದನೆ :** ಸೋಬಾನೆ ಚಿಕ್ಕಮ್ಮನ ಪದಗಳು, ಪದವವೆ ನಮ್ಮ ಎದೆಯಲ್ಲಿ, ಕರ್ನಾಟಕದ ಜನಪದ ಕಥೆಗಳು, ಹೆಳವರು ಮತ್ತು ಅವರ ಕಾವ್ಯಗಳು, ಕನ್ನಡ ಜಾನಪದ ಕೋಶ, ಜಾನಪದ ಜಗತ್ತು (ನಿಯತಕಾಲಿಕೆ).

❋ ❋ ❋

# ಪ್ರೊ. ಜಿ. ವೆಂಕಟಸುಬ್ಬಯ್ಯ

ಕನ್ನಡ ಪಾಂಡಿತ್ಯಕ್ಕೆ ಹಾಗೂ ಭಾಷೆ, ವಿಮರ್ಶೆ, ಸಂಶೋಧನೆ, ಶಿಕ್ಷಣ, ಅನುವಾದ, ಸಮಾಜ ಸೇವೆ ಕ್ಷೇತ್ರಗಳಲ್ಲಿ ಮಾಡಿದ ಅನನ್ಯ ಸೇವೆಗೆ ಖ್ಯಾತರಾದ ಹಿರಿಯ ಆದರ್ಶ ಪ್ರಾಧ್ಯಾಪಕ ಪ್ರೊ. ಜಿ. ವೆಂಕಟಸುಬ್ಬಯ್ಯನವರು ಎಲೆಯ ಮರೆಯ ಕಾಯಿಯಂತೆ ಬಾಳಿದವರು. ಅಪಾರ ಶಿಷ್ಯಸ್ತೋಮ ಪಡೆದ ಧನ್ಯ ಜೀವಿಗಳು. ತೊಂಬತ್ತು ವರ್ಷದವರಾದರೂ ಅದ್ಭುತವಾದ, ಉತ್ಸಾಹದಿಂದ ಹಲವಾರು ಕಾರ್ಯಗಳಲ್ಲಿ ತೊಡಗಿದವರು, ಅರಸಿ ಬಂದವರಿಗೆ ಮಾರ್ಗದರ್ಶನ ಮಾಡುವವರು.

ಕರ್ನಾಟಕ ರಾಜ್ಯದಲ್ಲಿ 'ಜೀವಿ' ಎಂಬ ಕಾವ್ಯನಾಮದಿಂದ ಖ್ಯಾತರಾಗಿ ಕೃತಿ ರಚನೆಗೆ ತೊಡಗಿದ ಜಿ. ವೆಂಕಟಸುಬ್ಬಯ್ಯನವರ ಸಂಪೂರ್ಣ ಹೆಸರು ಗಂಜಾಂ ವೆಂಕಟಸುಬ್ಬಯ್ಯ. ತಂದೆ ತಿಮ್ಮಣ್ಣಯ್ಯ, ಮೈಸೂರು ಅರಮನೆಯ ವಿದ್ವಾಂಸರಾಗಿ, ಸಂಸ್ಕೃತ-ಕನ್ನಡ ಪಂಡಿತರಾಗಿ ವೇದೋಪನಿಷತ್ತುಗಳಲ್ಲಿ ಪರಿಣತರೆನಿಸಿಕೊಂಡವರು. ಮಾಸಪತ್ರಿಕೆ, ಪುರಾಣಗಳ ಅನುವಾದ, ನಾಟಕ ರಚನೆ ಹಾಗೂ ಅನುವಾದ ಮಾಡಿದ ಪ್ರಸಿದ್ಧ ಪುರುಷರು.

ಪ್ರೊ. ವೆಂಕಟಸುಬ್ಬಯ್ಯನವರು ಕನ್ನಡ ಶಿಕ್ಷಣ ಕ್ಷೇತ್ರದಲ್ಲಿ ೧೯೭೩ರಲ್ಲಿ ನಿವೃತ್ತರಾಗುವವರೆಗೆ ದುಡಿದದ್ದಲ್ಲದೆ ಸಂಶೋಧನೆ, ವಿಮರ್ಶೆ, ಸಂಪಾದನೆ, ನಿಘಂಟು ಹಾಗೂ ಸಾಹಿತ್ಯ ರಚನೆಯಲ್ಲಿ ಮೌಲಿಕ ಕಾರ್ಯ ಮಾಡಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿ ಹಲವು ವಿಶ್ವವಿದ್ಯಾಲಯಗಳ ಸಮಿತಿಗಳಲ್ಲಿ ಸದಸ್ಯರಾಗಿ ಮಾರ್ಗದರ್ಶನ ಮಾಡಿದ್ದಾರೆ. ನಿಘಂಟು ಕ್ಷೇತ್ರಕ್ಕೆ ಇವರದು ಅಪರಿಮಿತ ಸೇವೆ. ನಿಘಂಟು ಸ್ವತಃ ರಚಿಸುವುದರಲ್ಲಿ ಎತ್ತಿದ ಕೈ. ಗ್ರಂಥ ಸಂಪಾದನಾ ಕಾರ್ಯದಲ್ಲಿ, ವಿಮರ್ಶೆ ಸಮಿತಿಗಳಲ್ಲಿ ಹಾಗೂ ನಿಘಂಟು ಸಾಹಿತ್ಯ ಚರಿತ್ರೆ, ಶಾಸ್ತ್ರ ಸಾಹಿತ್ಯ ಇತ್ಯಾದಿಗಳಲ್ಲಿಯ ಇವರ ಗ್ರಂಥಗಳು ನಮ್ಮ ಗಮನ ಸೆಳೆಯುತ್ತವೆ. ಅನುವಾದ ಕಾರ್ಯ, ಸಾಮಾಜಿಕ ಕಾರ್ಯದಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಹಲವಾರು ಮಾನ, ಸನ್ಮಾನ, ಪ್ರಶಸ್ತಿ ಗಳಿಸಿಯೂ ಹೆಮ್ಮೆಯಿಂದ ಬೀಗದೆ, ವಿನಯದಿಂದ ಬಾಗುವ 'ಜೀವಿ' ಇವರು.

೧೯೧೩ರಲ್ಲಿ (೨೩-೮-೧೯೧೩) ತಾಯಿಯ ತವರುಮನೆಯಾದ ಕೈಗೋನ ಹಳ್ಳಿಯಲ್ಲಿ ಜನಿಸಿದ ವೆಂಕಟಸುಬ್ಬಯ್ಯನವರು ಸುಸಂಸ್ಕೃತ ಮನೆತನದಲ್ಲಿ ಪಂಡಿತ

ಪರಂಪರೆಯಲ್ಲಿ ಬೆಳೆದು ಬಂದಿದ್ದಾರೆ. ಅವರ ಊರು ಗಂಜಾಂ. ಗಂಜಾಂ ಶ್ರೀರಂಗಪಟ್ಟಣ ದ್ವೀಪದ ಒಂದು ಭಾಗವಾಗಿದೆ. ಅವರಿಗೆ ಏಳು ಸಹೋದರರು. ಇಬ್ಬರು ಸಹೋದರಿಯರು. ತಂದೆಯವರು ಉಪಾಧ್ಯಾಯರಾಗಿದ್ದರು. ತಂದೆಯವರು ಪ್ರಾಥಮಿಕ ಶಿಕ್ಷಣ ಹಾಗೂ ಮಾಧ್ಯಮಿಕ ಶಿಕ್ಷಣದಲ್ಲಿ ನೆರವಾದರಷ್ಟೇ ಅಲ್ಲ, ವೆಂಕಟಸುಬ್ಬಯ್ಯನವರ ಮೇಲೆ ಸಾಕಷ್ಟು ಪ್ರಭಾವ ಬೀರಿದ್ದಾರೆ. ವೆಂಕಟಸುಬ್ಬಯ್ಯ ೧೯೨೭ರಿಂದ ೧೯೩೦ರ ವರೆಗಿನ ಪ್ರೌಢ ಶಾಲೆಯ ಶಿಕ್ಷಣವನ್ನು ಮಧುಗಿರಿಯಲ್ಲಿ ಮುಗಿಸಿ ಮೈಸೂರಿಗೆ ಬಂದರು.

ಅಲ್ಲಿ ಮಹಾರಾಜಾ ಕಾಲೇಜಿನಲ್ಲಿ ಇವರು ವಿದ್ಯಾಭ್ಯಾಸ ಮಾಡಿದರು. ಬಿ. ಎಂ. ಶ್ರೀ, ಟಿ. ಎಸ್. ವೆಂಕಣ್ಣಯ್ಯ, ಎ. ಆರ್. ಕೃಷ್ಣಶಾಸ್ತ್ರಿ, ತೀ. ನಂ. ಶ್ರೀ, ಡಿ. ಎಲ್. ನರಸಿಂಹಾಚಾರ್ ಮೊದಲಾದ ಹಿರಿಯರಿಂದ ಪ್ರೋತ್ಸಾಹ ಪಡೆದರು. ೧೯೩೭ರಲ್ಲಿ ಮಹಾರಾಜಾ ಕಾಲೇಜ್ ಮುಖಾಂತರ ಎಂ. ಎ. ಪದವಿ ಪಡೆದರು. ಪ್ರಥಮ ಸ್ಥಾನ ಗಳಿಸಿದ್ದಕ್ಕಾಗಿ ಕೇಣಿ ಸಿದ್ಧಪ್ಪ ಸುವರ್ಣ ಪದಕ ಮತ್ತು ಹೊನ್ನಶೆಟ್ಟಿ ಬಹುಮಾನಗಳು ಬಂದವು. ೧೯೩೯ರಲ್ಲಿ ಬಿ. ಟಿ. ಪದವಿ ಪಡೆದು, ೧೯೩೯ರಲ್ಲಿ ಮಹಾರಾಜಾ ಕಾಲೇಜ್‌ನಲ್ಲಿ ಕನ್ನಡ ಉಪನ್ಯಾಸಕರಾದರು.

೧೯೪೩ ಊದ ೧೯೪೫ರ ವರೆಗೆ ಬೆಂಗಳೂರು ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿದ್ದರು. ೧೯೪೫ರಲ್ಲಿ ಬೆಂಗಳೂರಿನ ವಿಜಯ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಆರಂಭಿಸಿದರು. ೧೯೭೨-೭೩ರಲ್ಲಿ ವಿಜಯಾ ಸಂಜೆ ಕಾಲೇಜಿನ ಪ್ರಿನ್ಸಿಪಾಲರಾಗಿ ೧೯೭೩ (೨೩-೩-೧೯೭೩) ರಲ್ಲಿ ವೃತ್ತಿಯಿಂದ ನಿವೃತ್ತರಾದರು.

ವೃತ್ತಿಯಿಂದ ನಿವೃತ್ತರಾದ ಮೇಲೂ ತಮ್ಮ ಬೋಧನಾ ಪ್ರವೃತ್ತಿಯ ಫಲವಾಗಿ ಕೆಲವು ಸಂಸ್ಥೆಗಳಿಗೆ ಮಾರ್ಗದರ್ಶನಪರ ಸೇವೆ ಸಲ್ಲಿಸಿದ್ದಾರೆ. ಹಿಂದೆ ೧೯೬೮-೭೩ರ ವರೆಗೆ ರಾಷ್ಟ್ರೀಯ ವಿದ್ಯಾಲಯ ಸಂಸ್ಥೆಯ ಶಿಕ್ಷಣ ಮಹಾವಿದ್ಯಾಲಯ ಬೋಧನಾ ಮಾರ್ಗಗಳ ವಿಶೇಷ ಪ್ರಾಧ್ಯಾಪಕ ಎಂದು ೧೯೭೧ರಿಂದ ೧೯೮೦ರ ವರೆಗೆ ಭಾರತ ಶಿಕ್ಷಣ ಸಂಸ್ಥೆಯ ಶಿಕ್ಷಣ ಮಹಾವಿದ್ಯಾಲಯದಲ್ಲಿ ಬೋಧನಾ ಮಾರ್ಗಗಳ ಸಂದರ್ಶಕ, ಪ್ರಾಧ್ಯಾಪಕ ಎಂದು, ೧೯೬೦ರಿಂದ ೧೯೬೪ರ ವರೆಗೆ ಮೈಸೂರು ವಿಶ್ವವಿದ್ಯಾನಿಲಯದ ಅಕಾಡೆಮಿಕ್ ಕೌನ್ಸಿಲ್‌ನ ಸದಸ್ಯ ಎಂದು ೧೯೬೪ರಿಂದ ೧೯೬೯ರ ವರೆಗೆ ಬೆಂಗಳೂರು ವಿಶ್ವವಿದ್ಯಾನಿಲಯ ಸೆನೆಟ್ ಸದಸ್ಯ ಮತ್ತು ಅಕಾಡೆಮಿಕ್ ಕೌನ್ಸಿಲ್ ಸದಸ್ಯ ಎಂದು ಮತ್ತು ೧೯೬೪ರಿಂದ ೧೯೬೭ರ ವರೆಗೆ ಬೆಂಗಳೂರು ವಿ.ವಿ.ಯ ಕನ್ನಡ ಪರೀಕ್ಷಾ ಸಮಿತಿಯ ಅಧ್ಯಕ್ಷ ಎಂದು ಕಾರ್ಯ ನಿರ್ವಹಿಸಿದ್ದಾರೆ.

ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದುದಲ್ಲದೆ ಸಾಹಿತ್ಯಕ್ಷೇತ್ರಕ್ಕೆ ಭಾಷಾ (ನಿಘಂಟು ನಿರ್ಮಾಣ ಕಾರ್ಯ) ಕ್ಷೇತ್ರಕ್ಕೆ ಅನುವಾದ ಕಾರ್ಯ, ವಿಮರ್ಶೆ, ಸಾಹಿತ್ಯ ಚರಿತ್ರೆ ಸಂಶೋಧನೆಗಳಿಗೆ ಮತ್ತು ಸಾಮಾಜಿಕ ಕಾರ್ಯಕ್ಕೆ ಅವರು ಸಾಕಷ್ಟು ದುಡಿದಿದ್ದಾರೆ. ಅವರ ಆ ದುಡಿಮೆ ಮಿತ್ರಕೂಟವನ್ನು, ಸಾಹಿತಿಗಳ ಸಾತತ್ಯವನ್ನು, ಭಾಷಾ ಪಂಡಿತರ ಒಲುಮೆಯನ್ನು,

ವಿದ್ಯಾರ್ಥಿವೃಂದವನ್ನು, ವಿದ್ವಜ್ಜನರ ಮೆಚ್ಚುಗೆಯನ್ನು ಗಳಿಸಿಕೊಟ್ಟು ನೆಮ್ಮದಿಯ ಬಾಳನ್ನು ನಡೆಸಲು ನೆರವು ನೀಡಿವೆ.

ವೆಂಕಟಸುಬ್ಬಯ್ಯನವರಿಗೆ ಈಗ ೯೦ ವರ್ಷ, ಆದರೇನು ? ಅವರ ಚಟುವಟಿಕೆಗಳನ್ನು ನೋಡಿ ಇಂದಿನ ಯುವಕರೂ ನಾಚಿಕೊಳ್ಳಬಹುದು. ಮೊಮ್ಮಕ್ಕಳು, ಮರಿಮಕ್ಕಳೊಡನೆ ಇಡೀ ದಿನ ನಲಿದಾಡಿ, ಪತ್ರಿಕೆ ಓದಿ, ಟಿ. ವಿ. ನೋಡಿ, ಕೇಳಿ ಸಮಯ ಕಳೆಯುವ ದಿನಗಳು. ಆದರೆ ತಮ್ಮ ಸ್ವಾಸ್ಥ್ಯ ಕಾಪಾಡಿದ್ದಷ್ಟೇ ಅಲ್ಲ, ತಮ್ಮ ದಿನಚರಿಯ ಕಟ್ಟುನಿಟ್ಟಿನ ಭಾಗವಾಗಿ ಮೂರು ಗಂಟೆ ಬರೆಯುವ, ಎರಡು ಗಂಟೆ ಓದುವ (ಪರಿಶ್ರಮ ಅಲ್ಲ) ಹವ್ಯಾಸ ಅವರದು. ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎಂಬ ಗಾದೆ ಹೇಳಿದಂತೆ ತಯಾರಿಸಲಾದ ವ್ಯಕ್ತಿತ್ವ ಇವರದು. ಆದರೆ ಆ ಅಹಂಕಾರ ಇವರ ಬಳಿ ಸುಳಿಯುವುದಿಲ್ಲ. ಮುಖದಲ್ಲಿ ದಪ್ಪ ಕನ್ನಡಕ ಸುತ್ತಲೂ ಎದ್ದು ತೋರುವ ನಗು. ಕುಟುಂಬ ವತ್ಸಲರಾದ ಇವರು ಸ್ನೇಹ 'ಜೀವಿ'.

ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ವೆಂಕಟಸುಬ್ಬಯ್ಯನವರ ಸೇವೆಯನ್ನು ಯಾರೂ ಮರೆಯಲು ಸಾಧ್ಯವಿಲ್ಲ. ಕನ್ನಡ ಸಾಹಿತ್ಯ ಪರಿಷತ್ತಿನೊಡನೆ ಇದ್ದ ಅವರ ನಂಟು ಬಹಳ ಹಳೆಯದು. ೧೯೫೪ರಿಂದ ೫೬ರ ವರೆಗೆ ಅದರ ಕಾರ್ಯದರ್ಶಿಯಾಗಿ ದುಡಿದು ಅನಂತರ (೧೯೬೪-೬೯) ಅದರ ಅಧ್ಯಕ್ಷರಾಗಿ ಅನುಪಮ ಸೇವೆ ಸಲ್ಲಿಸಿದ್ದಾರೆ. ಅಂದಿನ ಪರಿಷತ್ತಿನ ಆರ್ಥಿಕ ಸ್ಥಿತಿಯನ್ನು ಸದೃಢಗೊಳಿಸಿ ಅದರ ಚಟುವಟಿಕೆಗಳನ್ನು ವಿಸ್ತರಿಸಿದ್ದಲ್ಲದೆ ಅದಕ್ಕೊಂದು ಉತ್ತಮ ಅಂಗರಚನೆಯನ್ನೂ ರಚಿಸಿಕೊಟ್ಟರು. ಜನ ಸಂಪರ್ಕ ಕಾರ್ಯ, ಪ್ರಕಟನಾ ಕಾರ್ಯ, ಕನ್ನಡ ಕಲಿಕೆ ಕಾರ್ಯ ಹಾಗೂ ಇತರ ಕಾರ್ಯಗಳಲ್ಲಿ ಅಭಿವೃದ್ಧಿಯಾಗುವಂತೆ ಮಾರ್ಗದರ್ಶನ ಮಾಡಿದರು. ಜೊತೆಗೆ 'ಕನ್ನಡನುಡಿ' ಪತ್ರಿಕೆಯ ಸಂಪಾದಕರಾಗಿಯೂ ಇದೇ ಕಾಲದಲ್ಲಿ ಸೇವೆ ಸಲ್ಲಿಸಿದರು.

ಹಲವಾರು ಕೋಶಗಳ ನಿರ್ಮಾಣದಲ್ಲಿ ಇವರ ಸಿಂಹಪಾಲು ಇದೆ. ಉದಾ : ಕನ್ನಡ- ಕನ್ನಡ ಕೋಶ ಸಮಿತಿಯ ಸದಸ್ಯರಾಗಿ ೧೯೫೪ರಿಂದ ೯೫ರ ವರೆಗೆ, ಆ ಕೋಶದ ಪ್ರಧಾನ ಸಂಪಾದಕರಾಗಿ ೧೯೭೩ರಿಂದ ೧೯೮೦ರ ವರೆಗೆ, ಆ ಕೋಶ ಸಮಿತಿಯ ಅಧ್ಯಕ್ಷ ಹಾಗೂ ಪ್ರಧಾನ ಸಂಪಾದಕರಾಗಿ ೧೯೮೦ರಿಂದ ೯೨ರ ವರೆಗೆ ಅವ್ಯಾಹತವಾಗಿ ಟೊಂಕಕಟ್ಟಿ ದುಡಿದಿದ್ದಾರೆ. ೧೯೬೫ರಿಂದ ೧೯೬೭ರ ವರೆಗೆ ಕನ್ನಡ ವಿಶ್ವಕೋಶ ಸಮಿತಿಯ ಸದಸ್ಯರೂ ಆಗಿದ್ದರು. ವಿಶೇಷವೆಂದರೆ ವೆಂಕಟಸುಬ್ಬಯ್ಯನವರು ಕೇಂದ್ರ ಸರಕಾರದ ಭಾರತೀಯ ಭಾಷಾ ಸಮಿತಿಯಲ್ಲಿ ಕನ್ನಡದ (೧೯೬೫-೭೦), ಆಂಧ್ರಪ್ರದೇಶದ ತೆಲುಗು ಅಕಾಡೆಮಿಯ 'ಶಬ್ದ ಸಾಗರ'ದ ಸಮಾಲೋಚನ ಸಮಿತಿಯ ಸದಸ್ಯರಾಗಿ (೧೯೭೦-೮೫) ಮತ್ತು ಬಾರತೀಯ ನಿಘಂಟುಕಾರರ ಸಂಘದ ಉಪಾಧ್ಯಕ್ಷರಾಗಿ (೧೯೭೩-೯೦) ಅನುಪಮ ಸೇವೆ ಸಲ್ಲಿಸಿದ್ದಾರೆ.

ಸಾಹಿತ್ಯ ಕ್ಷೇತ್ರಕ್ಕೆ ಅವರು ಸಲ್ಲಿಸಿದ ಸೇವೆಯನ್ನು ನೆನಪಿಸಿಕೊಂಡು ಮುಂದುವರಿದರೆ ಅವರ ಇಂಥ ಇನ್ನೂ ಹಲವು ಕಾರ್ಯಗಳನ್ನು ಮರೆಯಲಾಗುವುದಿಲ್ಲ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿ (೧೯೬೫-೭೦), ಕರ್ನಾಟಕ ಜಾನಪದ ಟ್ರಸ್ಟಿನ ಆಡಳಿತ ಮಂಡಳಿಯ ಸದಸ್ಯರಾಗಿ (೧೯೭೬-೮೯) ಕೆಳದಿ ವಸ್ತು ಸಂಗ್ರಹಾಲಯ ಮತ್ತು ಇತಿಹಾಸ ಸಂಶೋಧನೆ ಕೇಂದ್ರದ ಆಡಳಿತ ಮಂಡಳಿಯ ಸದಸ್ಯರಾಗಿ (೧೯೯೦ರಿಂದ), ಇನ್‌ಸ್ಟಿಟ್ಯೂಟ್ ಆಫ್ ಏಶಿಯನ್ ಸ್ಟಡೀಸ್, ಚೆನ್ನೈ ಇದರ ಬಹು ಭಾಷಾ ನಿಘಂಟಿಗೆ (ಕನ್ನಡ, ಇಂಗ್ಲಿಷ್, ತಮಿಳು, ಜಾಪನೀಸ್) ಸಲಹಾಗಾರರಾಗಿ (೧೯೯೨ರಿಂದ), ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜನಪ್ರಿಯ ಸಾಹಿತ್ಯ ಪ್ರಕಟನಾ ಸಮಿತಿಯ ಅಧ್ಯಕ್ಷರಾಗಿ ೧೯೯೭ರಿಂದ ತಮ್ಮ ಅಮೂಲ್ಯ ಸೇವೆ ಸಲ್ಲಿಸಿದ್ದಾರೆ/ಸಲ್ಲಿಸುತ್ತಿದ್ದಾರೆ. ಕರ್ನಾಟಕ ಸರಕಾರದ 'ಪಂಪ ಪ್ರಶಸ್ತಿ' ಆಯ್ಕೆ ಸಮಿತಿಯ ಅಧ್ಯಕ್ಷತೆಯ ಗೌರವವೂ ಇವರಿಗೆ (೧೯೯೭-೯೮) ಪ್ರಾಪ್ತವಾಗಿತ್ತು.

ಪ್ರೊ. ವೆಂಕಟಸುಬ್ಬಯ್ಯನವರ ಮಹತ್ವದ ಸಾಧನೆ ಎಂದರೆ ಅವರು ಅವಿರತವಾಗಿ ಮಾಡಿದ ಗ್ರಂಥ ರಚನೆ, ಸಂಪಾದನೆಗಳ ಕಾರ್ಯ ಮತ್ತು ನಿಘಂಟು ರಚನೆ-ಸಂಪಾದನೆ ಕಾರ್ಯ.

೧೯೬೪ರಿಂದ ೧೯೯೨ರ ವರೆಗೆ 'ಕನ್ನಡ-ಕನ್ನಡ' ಬೃಹತ್ ಕೋಶದ ಪ್ರಧಾನ ಸಂಪಾದಕರಾಗಿ ಮಾಡಿದ ಕಾರ್ಯ ಗಮನಾರ್ಹವಾಗಿದೆ. ಇದಲ್ಲದೆ ಐ. ಬಿ. ಎಚ್., ಕನ್ನಡ-ಕನ್ನಡ- ಇಂಗ್ಲಿಷ್ ನಿಘಂಟನ್ನು ಇತರರೊಡನೆ ಜೊತೆಗೂಡಿ ರಚಿಸಿದ್ದಾರೆ. ಹಾಗೆಯೇ ಕನ್ನಡ- ಕನ್ನಡ ಸಂಕ್ಷಿಪ್ತ ನಿಘಂಟುವಿನ ರಚನೆಯನ್ನೂ ಇತರರೊಡನೆ ಸೇರಿ ಮಾಡಿದ್ದಾರೆ. 'ಮುದ್ದಣ ಪದಪ್ರಯೋಗ ಕೋಶ' ಇವರು ರಚಿಸಿದ ಮತ್ತೊಂದು ಕೋಶ. ಮುದ್ದಣ ಕವಿಯ ಕೃತಿಗಳನ್ನು ಈ ಪಂಡಿತರು ಎಷ್ಟು ಆಳವಾಗಿ ಅಭ್ಯಾಸ ಮಾಡುತ್ತಿದ್ದಾರೆನ್ನುವುದು ವಿದಿತವಾಗುತ್ತದೆ.

ಇಗೋ ಕನ್ನಡ ಸಾಮಾಜಿಕ ನಿಘಂಟುವನ್ನು ವೆಂಕಟಸುಬ್ಬಯ್ಯನವರು ಮೂರು ಸಂಪುಟಗಳಲ್ಲಿ ರಚಿಸಿದ್ದು, ಈಗಾಗಲೇ ಎರಡು ಸಂಪುಟಗಳು ಪ್ರಕಟವಾಗಿವೆ. ಮೂರನೆಯದು ಅಚ್ಚಿನ ಮನೆಯಲ್ಲಿದೆ. ಈ ನಿಘಂಟಿನ ವಿಶೇಷವೆಂದರೆ ಶಬ್ದಗಳಿಗೆ ಅರ್ಥ ವಿವರಣೆ ನೀಡುತ್ತ, ಕನ್ನಡ ಭಾಷೆ ಮತ್ತು ಸಂಸ್ಕೃತಿಗಳ ಕುರಿತಾಗಿ ಹೊಸ ರೀತಿಯ ಚಿಂತನೆ ನಡೆಸುವುದು. 'ಪತ್ರಿಕಾ ಪದಕೋಶ' ಇವರ ಮತ್ತೊಂದು ಮಹತ್ವದ ಸಂಪಾದನೆ. ಅದರ ಪ್ರಧಾನ ಸಂಪಾದಕರು ಇವರು. 'ಎರವಲು ಪದಕೋಶ' ಇವರ ಮತ್ತೊಂದು ವಿಶಿಷ್ಟ ಕೋಶ. ಗ್ರಂಥದ ಶೀರ್ಷಿಕೆಯೇ ಸೂಚಿಸುವಂತೆ ಇದು ಕನ್ನಡಕ್ಕೆ ಬೇರೆ ಭಾಷೆಗಳಿಂದ ಬಂದ ಶಬ್ದಗಳ ನಿಘಂಟು. ಎರವಲು ಪದಗಳ ಮೊದಲ ಕೋಶ ಇದು.

ಪ್ರೊ. ಜಿ. ವಿ. ಪ್ರಿಸಮ್ ಇಂಗ್ಲಿಷ್-ಕನ್ನಡ ನಿಘಂಟು ಇಪ್ಪತ್ತನೆಯ ಶತಮಾನದ ಕೊನೆಗೆ ಸಮಾಜದಲ್ಲಿ ಕಂಡು ಬರುತ್ತಿದ್ದ ಇಂಗ್ಲಿಷ್ ಭಾಷೆಯ ಪ್ರಯೋಗ ಗಮನಿಸಿ ಜಿ. ವಿ. ವೆಂಕಟಸುಬ್ಬಯ್ಯನವರು ರಚಿಸಿದ ಆಧುನಿಕ ನಿಘಂಟು ಇದು. 'ಕನ್ನಡ ನಿಘಂಟುಶಾಸ್ತ್ರ

ಪರಿಚಯ' ಕನ್ನಡದಲ್ಲಿ ಇವರು ರಚಿಸಿದ ಮೊದಲ ಶಾಸ್ತ್ರ ಪುಸ್ತಕ. ಇವರು ರಚಿಸಿದ 'ಕನ್ನಡ ನಿಘಂಟು ಪರಿವಾರ' ಎಂಬ ಗ್ರಂಥವೂ ಪ್ರಕಟವಾಗಿದೆ.

ಇನ್ನು ಪ್ರೊ. ಜಿ. ವೆಂಕಟಸುಬ್ಬಯ್ಯನವರು ರಚಿಸಿದ ವಿಮರ್ಶೆ, ಸಾಹಿತ್ಯ ಚರಿತ್ರೆ, ಶಾಸ್ತ್ರ ಸಾಹಿತ್ಯ ಇತ್ಯಾದಿ ಗ್ರಂಥಗಳನ್ನು ನೋಡಬಹುದಾಗಿದೆ. 'ನಯಸೇನ' (ವಿಮರ್ಶೆ), ಅನುಕಲ್ಪನೆ (ವಿಮರ್ಶೆ) ಭಾಷಾಂತರ ಪಾಠಗಳು (ಭಾಗ ೧, ೨, ೩), 'ವಿಕಾಸ' (ಇತರರೊಡನೆ) 'ಕನ್ನಡ ಶಾಸನ ಪರಿಚಯ', 'ಸಾಹಿತ್ಯ ಮತ್ತು ಶಿಕ್ಷಣ', 'ಕನ್ನಡ ಸಾಹಿತ್ಯ ನಡೆದು ಬಂದ ದಾರಿ' (ಸಾಹಿತ್ಯ ಚರಿತ್ರೆ), 'ಪ್ರೊ. ಟಿ. ಎಸ್. ವೆಂಕಣ್ಣಯ್ಯನವರು', 'ಡಿ. ವಿ. ಗುಂಡಪ್ಪ', 'ಕನ್ನಡವನ್ನು ಉಳಿಸಿ ಬೆಳೆಸಿದವರು', 'ಕನ್ನಡದ ನಾಯಕ ಮಣಿಗಳು' ಮತ್ತು 'ಇಣುಕು ನೋಟ', 'ಕರ್ನಾಟಕದ ವೈಭವ ಮತ್ತು ಇತರ ಶಬ್ದ ಚಿತ್ರಗಳು' ಈಗ ಮುದ್ರಣ ಹಂತದಲ್ಲಿದೆ.

ಪ್ರೊ. ವೆಂಕಟಸುಬ್ಬಯ್ಯನವರಿಂದ ಸಂಪಾದಿಸಲ್ಪಟ್ಟ ಗ್ರಂಥಗಳು ಹಲವಾರು. ಅವುಗಳಲ್ಲಿ ನಳಚಂಪು ಸಂಗ್ರಹ, ಅಕ್ರೂರ ಚರಿತ್ರೆಯ ಸಂಗ್ರಹ, ಕರ್ಣಕರ್ಣಾಮೃತ ಸಂಕಲನ, ಕಾವ್ಯ ಲಹರಿ (ಇತರರೊಡನೆ) ನಾಗರಸನ ಕನ್ನಡ ಭಗವದ್ಗೀತೆ, ಹೊಯ್ಸಳ ಕರ್ನಾಟಕ ಸಂಘದ ರಜತೋತ್ಸವ ಸಂಪುಟ, ಮುದ್ದಣ ಭಂಡಾರ (ಭಾಗ೧, ೨), ಶ್ರೀರಾಮ ಸಂಭವಗಳನ್ನು ಹೆಸರಿಸಲೇ ಬೇಕು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನಡೆಸಿದ ಕಮ್ಮಟದಲ್ಲಿ ನಾಲ್ಕು ಗ್ರಂಥಗಳನ್ನು ಸಂಪಾದಿಸಿದ್ದಾರೆ. ಅವು 'ತಮಿಳು ಕತೆಗಳು', 'ಮಲಯಾಳಂ ಕತೆಗಳು', 'ತೆಲುಗು ಕತೆಗಳು', ಕನ್ನಡದಲ್ಲಿ ಅನುವಾದಗೊಂಡು ಪ್ರಕಟವಾದ ಕಥಾ ಸಂಕಲನಗಳು. ಜೊತೆಗೆ 'ಕನ್ನಡದ ಕತೆಗಳು' ಎಂಬ ಸಂಕಲನವನ್ನು ಪ್ರಕಟಿಸಿದ್ದಾರೆ. ಪ್ರತಿಯೊಂದು ಸಕಲನದಲ್ಲಿ ಇಪ್ಪತ್ತು ಕತೆಗಳಿವೆ.

ಐ.ಬಿ.ಎಚ್. ಸಂಸ್ಥೆ ಪ್ರಕಟಿಸಿದ ವೆಂಕಟಸುಬ್ಬಯ್ಯನವರ ಸಂಪಾದಿತ ಗ್ರಂಥಗಳಿವು. ರತ್ನಾಕರವರ್ಣಿ, ದಾಸ ಸಾಹಿತ್ಯ, ಶಾಸನ ಸಾಹಿತ್ಯ, ಷಡಕ್ಷರ ದೇವ, ಸರ್ವಜ್ಞ, ಪುರಂದರ ದಾಸ, ಕನಕದಾಸ ಮತ್ತು ಶ್ರೀ ಬಸವೇಶ್ವರ. ಪ್ರೊ. ಜಿ. ವೆಂಕಟಸುಬ್ಬಯ್ಯವರ ಅನುವಾದಿತ ಗ್ರಂಥಗಳೂ ಕೆಲವು ಇವೆ. ಉದಾ. ಲಿಂಡನ್ ಜಾನ್‌ಸನ್ ಕಥೆ, ಸಂಯುಕ್ತ ಸಂಸ್ಥಾನಗಳನ್ನು ಪರಿಚಯ ಮಾಡಿಕೊಳ್ಳಿ. ಶಂಕರಾಚಾರ್ಯ, ಕಬೀರ, ಸರಳಾದಾಸ, ಇದು ನಮ್ಮ ಭಾರತ (ಭಾಗ ೧ರಿಂದ ೧೬) ಕವಿ ಜನ್ನ, ರಾಬಿನ್‌ಸನ್ ಕ್ರೂಸೋ ಇವು ಇವರು ರಚಿಸಿ ಪ್ರಕಟಿಸಿದ ಮಕ್ಕಳ ಪುಸ್ತಕಗಳು.

'ಇಗೋ ಕನ್ನಡ' ಎಂಬ ಜನಪ್ರಿಯ ಅಂಕಣವನ್ನು ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರತಿ ಭಾನುವಾರ ವೆಂಕಟಸುಬ್ಬಯ್ಯನವರು ಸುಮಾರು ಹನ್ನೆರಡು ವರ್ಷಗಳಿಂದ ಬರೆಯುತ್ತಿದ್ದಾರೆ. ಕನ್ನಡ ಭಾಷೆಯ ಕುರಿತಾದ ಓದುಗರ ಪ್ರಶ್ನೆಗಳಿಗೆ ಅವರು ಕೊಡುವ ಉತ್ತರಗಳಲ್ಲಿರುತ್ತವೆ.

ಇವರ ಸಂಶೋಧನಾ ಪ್ರವೃತ್ತಿಗನುಗುಣವಾಗಿ ಕರ್ನಾಟಕ ಕವಿ ಚರಿತೆ ಸಂಪುಟಗಳಲ್ಲಿ ಸಂಶೋಧನೆ ಮಾಡಿ ಹಲವಾರು ಹೊಸ ಅಂಶಗಳನ್ನು ಸಂಪುಟಗಳಲ್ಲಿ ಸೇರಿಸಿದ್ದಾರೆ. ಹಲವು ಪತ್ರಿಕೆಗಳಲ್ಲಿ, ವಿಶ್ವಕೋಶದಲ್ಲಿ, ಸಾಹಿತ್ಯ ವಿಮರ್ಶೆಯ ಸಂಕಲನಗಳಲ್ಲಿ ಇವರ ಸಾಹಿತ್ಯ ವಿಮರ್ಶೆ ಮತ್ತು ನಿಘಂಟು ವಿಚಾರವಾದ ಲೇಖನಗಳು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪ್ರಕಟವಾಗಿವೆ.

ಇವರು ಮಾಡಿದ ಸಮಾಜ ಸೇವೆಯ ಕಾರ್ಯಗಳಲ್ಲಿ ಉಲ್ಲೇಖಿಸಲೇಬೇಕಾದ ವಿಷಯವೆಂದರೆ ಅನೇಕ ವರ್ಷಗಳಿಂದ 'ಶ್ರೀ ರಾಮಕೃಷ್ಣ ಸ್ಟೂಡೆಂಟ್ಸ್ ಹೋಂ' ಸಂಸ್ಥೆಯ ಅಧ್ಯಕ್ಷರಾಗಿ ಸುಮಾರು ೫೦ ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ಉಚಿತ ಊಟ-ವಸತಿ ಏರ್ಪಡಿಸುತ್ತಿದ್ದುದು. ಇದರ ಪ್ರಯೋಜನ ಪಡೆದ ಹಲವಾರು ವಿದ್ಯಾರ್ಥಿಗಳು ಸಂಸ್ಥೆಯ ವಾರ್ಷಿಕೋತ್ಸವಕ್ಕೆ ಬಂದು ಪಾಲ್ಗೊಳ್ಳುವ ಪರಂಪರೆಯನ್ನು ಮಾಡುತ್ತಾ ಬಂದಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿಗೆ ೧೯೬೭ರಲ್ಲಿ ನೂತನ ಅಂಗರಚನೆ ಒದಗಿಸಿದ್ದಲ್ಲದೆ ಪರಿಷತ್ತಿನ ಆರ್ಥಿಕ ಸ್ಥಿತಿಯನ್ನು ಸುಧಾರಿಸಿದರು. ಅ. ಭಾ. ಕನ್ನಡ ಸಾಹಿತ್ಯ ಸಮ್ಮೇಳನದ ಸ್ವರೂಪ ಬದಲಿಸಿ ಆಧುನಿಕ ಸಾಹಿತ್ಯ ವಿಮರ್ಶೆಗೆ ಪ್ರಾಧಾನ್ಯ ನೀಡಿದರು. ಇಷ್ಟೆಲ್ಲ ಕಾರ್ಯ ಸಾಧನೆ ಮಾಡಿದರೂ, ತಕ್ಕಮಟ್ಟಿಗೆ ಸಾಮಾಜಿಕ ಮನ್ನಣೆ ದೊರೆತರೂ ಅದು ಅವರ ಕಾರ್ಯಕ್ಕೆ ಸಲ್ಲಬೇಕಾದಷ್ಟು ಗೌರವ ದೊರೆತಿದೆ ಎನಿಸುವುದಿಲ್ಲ. ಚಿಕ್ಕಮಗಳೂರಿನಲ್ಲಿ ಹಾಗೂ ಬೀದರ್‌ನಲ್ಲಿ ನಡೆದ ಜಿಲ್ಲಾ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷತೆಯ ಗೌರವ ದೊರೆತಿದೆ.

ಹಾಗೆಯೇ ಶೃಂಗೇರಿಯ ಶಂಕರಮಠದ ಜಿಲ್ಲಾ ಸಾಹಿತ್ಯ ಸಮ್ಮೇಳನ ಅಧ್ಯಕ್ಷ ಸ್ಥಾನವೂ ದೊರೆತಿದೆ. ಯುವಕರಿಗೆ ನಿಘಂಟು ಕಮ್ಮಟದಲ್ಲಿ ಮಾರ್ಗದರ್ಶನ ಮಾಡಿದ್ದಾರೆ. 'ವಿದ್ಯಾಲಂಕಾರ' ಎಂಬ ಬಿರುದು ಕೊಟ್ಟು ಶ್ರವಣಬೆಳಗೊಳದ ಚಾರುಕೀರ್ತಿ ಸ್ವಾಮೀಜಿ ಸನ್ಮಾನ ಮಾಡಿದ್ದಾರೆ. ವೆಂಕಟಸುಬ್ಬಯ್ಯನವರ 'ಮುದ್ದಣ ಭಂಡಾರ' ಕೃತಿಗೆ೧೯೮೭ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನ ದೊರೆತಿದೆ. ಇವರ ವಿದ್ಯಾರ್ಥಿಗಳು ಹಾಗೂ ಮಿತ್ರರು ಸೇರಿ ಸನ್ಮಾನ ಮಾಡಿದ್ದಾರೆ. 'ಸಾಹಿತ್ಯ ಜೀವಿ' ಎಂಬ ಸಂಭಾವನೆ ಗ್ರಂಥ ಅರ್ಪಿಸಿದ್ದಾರೆ. ಇವರ ಹೆಸರಿನಲ್ಲಿ ಬೆಂಗಳೂರು ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳಲ್ಲಿ ಸುವರ್ಣ ಪದಕಗಳನ್ನು ಸ್ಥಾಪಿಸಿದ್ದಾರೆ. ವಿಶೇಷವೆಂದರೆ ಆ ವಿದ್ಯಾರ್ಥಿಗಳೂ ಮಿತ್ರರೂ ವೆಂಕಟಸುಬ್ಬಯ್ಯನವರ ಹೆಂಡತಿಯ ಹೆಸರಿನಲ್ಲಿ ಒಂದು ದತ್ತಿನಿಧಿಯನ್ನು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸ್ಥಾಪಿಸಿದ್ದು. ವೆಂಕಟಸುಬ್ಬಯ್ಯನವರಿಗೆ ೧೯೯೧ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಲಭಿಸಿದೆ. ೧೯೯೨ರಲ್ಲಿ ಕೆನಡಾದ ಮಾಂಟ್ರಿಯಲ್‌ನಲ್ಲಿ ನಡೆದ 'ಕೆನ್.ಆಮ್ ಕನ್ನಡ ಸಮ್ಮೇಳನದಲ್ಲಿ' ವೆಂಕಟಸುಬ್ಬಯ್ಯನವರು ಮುಖ್ಯ ಅತಿಥಿಗಳಾಗಿ ಆಮಂತ್ರಿತರಾಗಿದ್ದರು. ೧೯೯೩ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪ್ರೊ. ಶಿ. ಶಿ. ಬಸವನಾಳ ಮೂಲಭೂತ ವಿಚಾರೋಪನ್ಯಾಸ ಮಾಲೆಯ ಮೊದಲ ಉಪನ್ಯಾಸ ನೀಡಿದ್ದಾರೆ.

೧೯೯೪ರಲ್ಲಿ ಧಾರವಾಡದಲ್ಲಿ ನಡೆದ ಅಂತರಾಷ್ಟ್ರೀಯ ನಿಘಂಟು ಸಮ್ಮೇಳನದಲ್ಲಿ ಮುಖ್ಯ ಅತಿಥಿಗಳಾಗಿ ಆಮಂತ್ರಿತರಾಗಿದ್ದರು.

೧೯೯೪ರ ಧರ್ಮಸ್ಥಳ ಶ್ರೀಕ್ಷೇತ್ರದ ಸಾಹಿತ್ಯ ಸಮ್ಮೇಳನಕ್ಕೆ ವೆಂಕಟಸುಬ್ಬಯ್ಯನವರು ಅಧ್ಯಕ್ಷರಾಗಿದ್ದರು. ೧೯೯೬ರಲ್ಲಿ ಪ್ರೊ. ಮರಿಯಪ್ಪ ಭಟ್ಟ ಸ್ಮಾರಕ ಉಪನ್ಯಾಸಗಳನ್ನು ಮದ್ರಾಸ್ ವಿಶ್ವವಿದ್ಯಾನಿಲಯದಲ್ಲಿ ನೀಡಿದರು. ೧೯೯೭ರಲ್ಲಿ ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ ದೊರೆತಿದೆ. ೧೯೮೯ರಲ್ಲಿ ಶಿವಮೊಗ್ಗ ಕರ್ನಾಟಕ ಸಂಘವು ಕೊಡ ಮಾಡುವ ಶಂಬಾ ಪ್ರಶಸ್ತಿ ವೆಂಕಟಸುಬ್ಬಯ್ಯನವರಿಗೆ ಸಂದಿದೆ. ೧೯೯೮ರಲ್ಲಿ ಪ್ರೊ. ಎ. ಸಿ. ದೇವೇಗೌಡ ಸ್ಮಾರಕ ಉಪನ್ಯಾಸ ನೀಡಿದ್ದಾರೆ.

೧೯೯೯ರಲ್ಲಿ ಉಡುಪಿಯ ಗೋವಿಂದ ಪೈ ಸಂಶೋಧನಾ ಕೇಂದ್ರವು 'ಸೇಡಿಯಾಪು ಪ್ರಶಸ್ತಿ' ನೀಡಿ ಗೌರವಿಸಿದೆ. ಅದೇ ವರ್ಷ ಮೂಡುಬಿದಿರೆಯ ಶಿವರಾಮ ಕಾರಂತರ ಪ್ರತಿಷ್ಠಾನವು 'ಶಿವರಾಮ ಕಾರಂತ' ಪ್ರಶಸ್ತಿಯನ್ನು ಇವರಿಗೆ ಪ್ರದಾನ ಮಾಡಿದೆ. ೨೦೦೦ ಇಸ್ವಿಯಲ್ಲಿ ಕರ್ನಾಟಕ ಪತ್ರಿಕಾ ಅಕಾಡೆಮಿಯು ಇವರಿಗೆ 'ವಿಶೇಷ ಪ್ರಶಸ್ತಿ' ನೀಡಿದೆ. ೨೦೦೨ರಲ್ಲಿ 'ಮುದ್ದಣ ಪುರಸ್ಕಾರ' ಹಾಗೂ 'ಅಂಕಣಶ್ರೀ' ಪ್ರಶಸ್ತಿ ಲಭಿಸಿದೆ. ೨೦೦೩ರಲ್ಲಿ ಶ್ರೀರಂಗಪಟ್ಟಣದಲ್ಲಿ ನಡೆದ ಮೊದಲನೆಯ ತಾಲೂಕು ಸಾಹಿತ್ಯ ಸಮ್ಮೇಳನ ಅಧ್ಯಕ್ಷತೆಯ ಗೌರವವೂ ಪ್ರಾಪ್ತವಾಗಿದೆ.

ಪ್ರೊ. ವೆಂಕಟಸುಬ್ಬಯ್ಯನವರ ಅತಿ ಸಂಕ್ಷಿಪ್ತ ಜೀವನ ಸಾಹಿತ್ಯ ಪರಿಚಯ ಮಾಡಲು ಮಾತ್ರ ಇಲ್ಲಿ ಸಾಧ್ಯವಾಯಿತು. ಇದರಿಂದ ಇವರ ಜೀವನ ಸಾಧನೆಗಳ ಕಲ್ಪನೆ ಮಾಡಬಹುದಾಗಿದೆ ಅಷ್ಟೆ. ಅವರ ಜೀವನ ಕೃತಿಗಳ ಬಗ್ಗೆ ಸವಿವರವಾಗಿ ತಿಳಿಸಲು ಕನಿಷ್ಠ ಪಕ್ಷಕ್ಕೆ ೨-೩ ಗ್ರಂಥಗಳು ರಚನೆಯಾಗಬೇಕಾಗುತ್ತದೆ. ಅಂಥ ವಿಶಿಷ್ಟ ವ್ಯಕ್ತಿತ್ವ ಹೊಂದಿದ ಹಿರಿಯ ಚೇತನ. ಈಗ ರಚಿತವಾಗುತ್ತಿರುವಂತೆ ಇನ್ನೂ ಹಲವು ವರ್ಷ ಅವರಿಂದ ಕೃತಿ ರಚನೆಯಾಗಲಿ ಎಂದು ಹಾರೈಸೋಣ.

## ಪ್ರೊ. ಜಿ. ವೆಂಕಟಸುಬ್ಬಯ್ಯ ಅವರ ಗ್ರಂಥಗಳು :

ನಿಘಂಟು- ಐ. ಬಿ. ಎಚ್. ಕನ್ನಡ- ಕನ್ನಡ- ಇಂಗ್ಲಿಷ್ ನಿಘಂಟು (ಇತರರೊಡನೆ), ಕನ್ನಡ- ಕನ್ನಡ ಸಂಕ್ಷಿಪ್ತ ನಿಘಂಟು (ಇತರರೊಡನೆ), ಮುದ್ದಣ ಪದಪ್ರಯೋಗ ಕೋಶ, ಇಗೋ ಕನ್ನಡ- ಸಾಮಾಜಿಕ ನಿಘಂಟು (ಭಾಗಗಳು೧, ೨, ೩) ಪತ್ರಿಕಾ ಪದಕೋಶ (ಪ್ರಧಾನ ಸಂಪಾದಕ) ಎರವಲು ಪದಕೋಶ (ಕನ್ನಡಕ್ಕೆ ಬೇರೆ ಭಾಷೆಗಳಿಂದ ಪದಗಳು), ಪ್ರೊ. ಜಿ. ವಿ. ಪ್ರಿಸಮ್ ಇಂಗ್ಲಿಷ್- ಕನ್ನಡ ನಿಘಂಟು, ಕನ್ನಡ ನಿಘಂಟು ಶಾಸ್ತ್ರ ಪರಿಚಯ ಕನ್ನಡ ನಿಘಂಟು ಪರಿವಾರ.

ವಿಮರ್ಶೆ, ಸಾಹಿತ್ಯ ಚರಿತ್ರೆ, ಶಾಸ್ತ್ರ ಸಾಹಿತ್ಯ ಇತ್ಯಾದಿ. ನಯಸೇನ (ವಿಮರ್ಶೆ), ಅನುಕಲ್ಪನೆ (ವಿಮರ್ಶೆ), ಭಾಷಾಂತರ ಪಾಠಗಳು (ಭಾಗ -೧, ೨, ೩) ಕಾಲೇಜ್

ಭಾಷಾಂತರ, ವಿಕಾಸ (ಇತರರೊಡನೆ), ಕನ್ನಡ ಶಾಸನ ಪರಿಚಯ, ಸಾಹಿತ್ಯ ಮತ್ತು ಶಿಕ್ಷಣ, ಕನ್ನಡ ಸಾಹಿತ್ಯ ನಡೆದು ಬಂದ ದಾರಿ, ಪ್ರೊ. ವೆಂಕಣ್ಣಯ್ಯನವರು, ಡಿ. ವಿ. ಗುಂಡಪ್ಪ, ಕನ್ನಡವನ್ನು ಉಳಿಸಿ ಬೆಳೆಸಿದವರು, ಕನ್ನಡದ ನಾಯಕ ಮಣಿಗಳು, ಇಣುಕು ನೋಟ, ಕರ್ನಾಟಕ ವೈಭವ ಮತ್ತು ಇತರ ಶಬ್ದ ಚಿತ್ರಗಳು (ಅಚ್ಚಿನಲ್ಲಿ).

**ಸಂಪಾದನೆ :** ನಳಚಂಪು ಸಂಗ್ರಹ, ಅಕ್ರೂರ ಚರಿತ್ರೆಯ ಸಂಗ್ರಹ, ಕರ್ಣ ಕರ್ಣಾಮೃತ (ಸಂಕಲನ), ಕಾವ್ಯಲಹರಿ (ಇತರರೊಡನೆ), ಕಾವ್ಯ ಸಂಪುಟ (ಇತರರೊಡನೆ), ನಾಗರಸನ ಕನ್ನಡ ಭಗವದ್ಗೀತೆ. ಹೊಯ್ಸಳ ಕರ್ನಾಟಕ ಸಂಘದ ರಜತೋತ್ಸವ ಸಂಪುಟ, ಮುದ್ದಣ ಭಂಡಾರ (ಭಾಗ- ೧, ೨) ಶ್ರೀರಾಮ ಸಂಭವ, ಕನ್ನಡ ಕತೆಗಳು (೨೦) ಸಂಕಲನ, ರತ್ನಾಕರ ವರ್ಣಿ, ದಾಸ ಸಾಹಿತ್ಯ, ವಚನ ಸಾಹಿತ್ಯ, ಶಾಸನ ಸಾಹಿತ್ಯ, ಷಡಕ್ಷರದೇವ, ಸರ್ವಜ್ಞ, ಪುರಂದರದಾಸ, ಕನಕದಾಸ, ಶ್ರೀ ಬಸವೇಶ್ವರ.

**ಮಕ್ಕಳ ಪುಸ್ತಕ :** ರಾಬಿನ್‌ಸನ್ ಕ್ರೂಸೋ, ಕವಿ ಜನ್ನ, ಚಾವುಂಡರಾಯ (ಒಟ್ಟು ೬೯ ಪುಸ್ತಕಗಳು)

**ವಿಶೇಷ :** ೧. ಆರ್. ನರಸಿಂಹಾಚಾರ್ಯರ **ಕರ್ನಾಟಕ ಕವಿಚರಿತೆ ಪೂರಕ ಸಾಮಗ್ರಿ** ಸಂಗ್ರಹಿಸಿ, ಸಂಶೋಧನೆ ಮಾಡಿ ಹೊಸ ಅಂಶಗಳನ್ನು ಸೇರಿಸಿದ್ದು. ೨. ಹಲವಾರು ಪತ್ರಿಕೆಗಳಲ್ಲಿ. ವಿಶ್ವಕೋಶಗಳಲ್ಲಿ, ವಿಮರ್ಶಾ ಸಂಕಲನಗಳಲ್ಲಿ ಹಾಗೂ ಬೇರೆ ಕಡೆಗಳಲ್ಲಿ ಇಂಗ್ಲಿಷ್- ಕನ್ನಡ ಭಾಷೆಗಳಲ್ಲಿ ಲೇಖನಗಳು.

## ಪ್ರೊ. ಜಿ. ವೆಂಕಟಸುಬ್ಬಯ್ಯ ಅವರ ಜೀವನ ವಿವರ :

**ಜನನ : ೧೯೧೩ (೨೩-೮-೧೯೧೩) ಕ್ಯಾಗೋನ ಹಳ್ಳಿಯಲ್ಲಿ (ತಾಯಿಯ ತವರೂರು).**

**ತಂದೆ-ತಾಯಿ :** ಗಂಜಾಂ ತಿಮ್ಮಣ್ಣಯ್ಯ-ಸುಬ್ಬಮ್ಮ.

**ವಿದ್ಯಾಭ್ಯಾಸ :** ಮಧುಗಿರಿಯ ಪ್ರೌಢಶಾಲೆಯಲ್ಲಿ. ೧೯೩೭-೪೦ ಮೈ[illegible] ಕಾಲೇಜಿನಿಂದ ಎಂ. ಎ. ಪದವಿ ಪ್ರಥಮ ಸ್ಥಾನ ಪಡೆದು ಸ್ವರ್ಣ ಪದಕದೊಂದಿಗೆ. ಬಿ. ಟಿ. ಪದವಿ ೧೯೩೯.

**ಕನ್ನಡ ಉಪನ್ಯಾಸಕ :** ಮಹಾರಾಜಾ ಕಾಲೇಜ್ ಮೈಸೂರು ೧೯೩೯-೪೩.

**ಅಧ್ಯಾಪಕ :** ಬೆಂಗಳೂರು ಹೈಸ್ಕೂಲು 1943-45

**ಕಾರ್ಯದರ್ಶಿ :** ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ೧೯೫೪-೫೬.

**ಕನ್ನಡ ಪ್ರಾಧ್ಯಾಪಕ :** ಬೆಂಗಳೂರಿನ ವಿಜಯಾ ಕಾಲೇಜ್ ೧೯೪೫-೭೨.

**ಅಧ್ಯಕ್ಷ :** ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು : ೧೯೬೪-೬೯.

**ಸಂಪಾದಕ :** ಕನ್ನಡ ನುಡಿ (೧೯೬೪-೬೯).

**ಪ್ರಿನ್ಸಿಪಾಲ್ :** ವಿಜಯಾ ಸಂಜೆ ಕಾಲೇಜ್- ೧೯೭೨-೭೩.

**ಅಧ್ಯಕ್ಷತೆ :** ಚಿಕ್ಕಮಗಳೂರು ಜಿಲ್ಲಾ ಸಾಹಿತ್ಯ ಸಮ್ಮೇಳನ (೧೯೭೨). ಬೀದರ್ ಜಿಲ್ಲಾ ಸಾ. ಸ. (೧೯೭೨), ಶೃಂಗೇರಿ ಶಂಕರಮಠ ಸಾ. ಸ.– ಧರ್ಮಸ್ಥಳ ಸಾ. ಸ. ೧೯೯೪.

**ನಿವೃತ್ತಿ :** ೧೯೭೩ (೨೩-೮-೧೯೭೩)

**ವಿಶೇಷ ಪ್ರಾಧ್ಯಾಪಕ :** ರಾಷ್ಟ್ರೀಯ ವಿದ್ಯಾಲಯ ಸಂಸ್ಥೆಯ ಶಿಕ್ಷಣ ಮಹಾವಿದ್ಯಾಲಯದಲ್ಲಿ ಬೋಧನ ಮಾರ್ಗಗಳು (೧೯೬೮-೭೩).

**ಸಂದರ್ಶಕ/ಪ್ರಾಧ್ಯಾಪಕ :** ಬಿ. ಇ. ಎಸ್. ಶಿಕ್ಷಣ ಮಹಾವಿದ್ಯಾಲಯದಲ್ಲಿ ಬೋಧನಾ ಮಾರ್ಗಗಳು (೧೯೭೧-೮೦).

**ಅಕಾಡೆಮಿಕ್ ಕೌನ್ಸಿಲ್ ಸದಸ್ಯ :** ಮೈಸೂರು ವಿಶ್ವವಿದ್ಯಾನಿಲಯ (೧೯೬೦-೬೪)

**ಸೆನೆಟ್ ಸದಸ್ಯ :** ಬೆಂಗಳೂರು ವಿಶ್ವವಿದ್ಯಾಲಯ (೧೯೬೪-೬೯).

**ಕನ್ನಡ ಪರೀಕ್ಷಾ ಸಮಿತಿಯ ಅಧ್ಯಕ್ಷ :** ಬೆಂಗಳೂರು ವಿಶ್ವವಿದ್ಯಾಲಯ (೧೯೬೪-೬೭).

**ಪ್ರಧಾನ ಸಂಪಾದಕ / ಅಧ್ಯಕ್ಷ :** ಕನ್ನಡ- ಕನ್ನಡ ಬೃಹತ್ ಕೋಶ (೧೯೭೩-೯೨).

**ಮುಖ್ಯ ಅತಿಥಿ :** ಕೆನಡಾದ ಮಾಂಟ್ರಿಯಲ್‌ನಲ್ಲಿ ನಡೆದ 'ಕೆನ್-ಆಮ್ ಕನ್ನಡ ಸಮ್ಮೇಳನ-೧೯೯೨'

**ಗೌರವ, ಮನ್ನಣೆ :** 'ವಿದ್ಯಾಲಂಕಾರ' ಎಂಬ ಬಿರುದು ಶ್ರವಣಬೆಳಗೊಳದ ಚಾರುಕೀರ್ತಿ ಸ್ವಾಮಿಗಳಿಂದ, 'ಮುದ್ದಣ ಭಂಡಾರ' ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ೧೯೯೧. ೧೯೯೭ನೇ ಸಾಲಿನ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ, 'ಶಂಬಾ ಪ್ರಶಸ್ತಿ' ೧೯೯೮ ಶಿವಮೊಗ್ಗ ಕರ್ನಾಟಕ ಸಂಘದಿಂದ. ಸೇಡಿಯಾಪು ಪ್ರಶಸ್ತಿ, ೧೯೯೯ ಉಡುಪಿಯ ಗೋವಿಂದ ಪೈ ಸಂಶೋಧನಾ ಕೇಂದ್ರದಿಂದ, 'ಶಿವರಾಮ ಕಾರಂತ ಪ್ರಶಸ್ತಿ' ೧೯೯೯ ಮೂಡಬಿದಿರೆಯ ಕಾರಂತ ಪ್ರತಿಷ್ಠಾನದಿಂದ, 'ವಿಶೇಷ ಪ್ರಶಸ್ತಿ' ೨೦೦೦ ಕರ್ನಾಟಕ ಪತ್ರಿಕಾ ಅಕಾಡೆಮಿಯಿಂದ. 'ಮುದ್ದಣ ಪುರಸ್ಕಾರ' ೨೦೦೨ ಕವಿ ಮುದ್ದಣ ಶತಸ್ಮೃತಿ ಸಮಿತಿಯಿಂದ. 'ಅಂಕಣಶ್ರೀ-೨೦೦೨' ಗದಗಿನ ಕಲಾಚೇತನ ಸಾಂಸ್ಕೃತಿಕ ಅಕಾಡೆಮಿಯಿಂದ 'ಸಾಹಿತ್ಯ ಜೀವಿ' ಎಂಬ ಸಂಭಾವನಾ ಗ್ರಂಥ ಸಮರ್ಪಣೆ.

❋ ❋ ❋

## ಸಂಘದ ಪದಾಧಿಕಾರಿಗಳು :

| | | |
|---|---|---|
| ಅಧ್ಯಕ್ಷರು | : | ಡಾ. ಪಾಟೀಲ ಪುಟ್ಟಪ್ಪ |
| ಉಪಾಧ್ಯಕ್ಷರು | : | ಶ್ರೀ ಎಂ. ಎಂ. ಹೂಲಿ |
| ಗೌರವ ಉಪಾಧ್ಯಕ್ಷರು | : | ಶ್ರೀ ಜಿ. ಜಿ. ದೊಡವಾಡ, ಧಾರವಾಡ |
| | | ಡಾ. ದೇ. ಜವರೇಗೌಡ, ಮೈಸೂರು |
| | | ಡಾ. ಡಿ. ಸುರೇಂದ್ರಕುಮಾರ, ಧರ್ಮಸ್ಥಳ |
| | | ಶ್ರೀ ಎಚ್. ಇಬ್ರಾಹೀಂ, ಶಿವಮೊಗ್ಗ |
| | | ಡಾ. ರಾಜನ್ ದೇಶಪಾಂಡೆ, ಧಾರವಾಡ |
| ಕಾರ್ಯಾಧ್ಯಕ್ಷರು | : | ಶ್ರೀ ಎಚ್. ಸಿ. ಮೊಗಲಿ |
| ಕೋಶಾಧ್ಯಕ್ಷರು | : | ಶ್ರೀ ಎಸ್. ಎಂ. ಹೊಳೆಯಣ್ಣವರ |
| ಪ್ರಧಾನ ಕಾರ್ಯದರ್ಶಿ | : | ಪ್ರೊ. ಬಿ. ವ್ಹಿ. ಗುಂಜೆಟ್ಟಿ |
| ಸಹ ಕಾರ್ಯದರ್ಶಿ | : | ಶ್ರೀ ಸದಾನಂದ ಶಿವಳ್ಳಿ |

### ಕಾರ್ಯಕಾರಿ ಸಮಿತಿ ಸದಸ್ಯರು :

ಶ್ರೀ ಕೃಷ್ಣ ಜೋಶಿ

ಶ್ರೀ ಸಿದ್ಧಲಿಂಗ ದೇಸಾಯಿ

ಶ್ರೀ ಶಿವಾನಂದ ಭಾವಿಕಟ್ಟಿ

ಶ್ರೀ ಬಸವಪ್ರಭು ಹೊಸಕೇರಿ

ಶ್ರೀ ಶಂಕರ ಹಲಗತ್ತಿ

ಶ್ರೀಮತಿ ವಿಜಯಾ ಸಂ. ಲಿಂಬಣ್ಣದೇವರಮಠ

ಪ್ರೊ. ಎಸ್. ಸಿ. ಹಿರೇಮಠ

ಶ್ರೀ ಮೋಹನ ನಾಗಮ್ಮನವರ

ಶ್ರೀಮತಿ ಜಯಶ್ರೀ ಗುತ್ತಲ

ಹಾಗೂ ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಬೆಂಗಳೂರು (ಸರ್ಕಾರದ ಪ್ರತಿನಿಧಿ)

ಕರ್ನಾಟಕದವರಾದ
ಡಾ. ಜಿ. ಡಿ. ಜೋಶಿ ಅವರು
ಬೃಹತ್ ಮುಂಬಯಿಯಲ್ಲಿ ನೆಲೆಸಿ
ಕನ್ನಡದ ಕೆಲಸಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಗಣನೀಯವಾಗಿ ಕಾರ್ಯನಿರ್ವಹಿಸುತ್ತಲಿದ್ದಾರೆ. ಶ್ರೀಯುತರು ಕಾಲೇಜಿನ ಪ್ರಾಂಶುಪಾಲರಾಗಿ ಮುಂಬಯಿ ವಿಶ್ವವಿದ್ಯಾನಿಲಯುದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಕನ್ನಡದ ಕೈಂಕರ್ಯವನ್ನು ಗೈದಿದ್ದಾರೆ. ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತಿನ ಮುಂಬಯಿ ಪ್ರತಿನಿಧಿಯಾಗಿ ಸಮ್ಮೇಳನಗಳನ್ನು ಏರ್ಪಡಿಸುವಲ್ಲಿ ವಿಜಯಿಯಾಗಿದ್ದಾರೆ. ಹಲವು ಹತ್ತು ಹರಟೆಗಳನ್ನು ಬರೆದು ಪ್ರಕಟಿಸಿದ್ದಾರೆ. ಕನ್ನಡದ ಕಣ್ಮಣಿಗಳನ್ನು ಪರಿಚಯಿಸಿದ್ದಾರೆ. ಪ್ರಸ್ತುತ 'ಕನ್ನಡದ ಪೋಷಕರು' ಕೃತಿ ಅವರ ಕನ್ನಡದ ಜನಮನವನ್ನು ತಟ್ಟುವಲ್ಲಿ ಸಂದೇಹವಿಲ್ಲ. ಕನ್ನಡ-ಮರಾಠಿ ಸ್ನೇಹದ ಹಲವು ಹತ್ತು ಕೊಂಡಿಗಳಲ್ಲಿ ಶ್ರೀಯುತರು ಪ್ರಮುಖರೆನಿಸಿದ್ದಾರೆ.

ಧಾರವಾಡ
1-2-2005

ಎಚ್. ಸಿ. ಮೊಗಲಿ
ಕಾರ್ಯಾಧ್ಯಕ್ಷರು
ಕರ್ನಾಟಕ ವಿದ್ಯಾವರ್ಧಕ ಸಂಘ
ಧಾರವಾಡ

# ಕನ್ನಡದ ಪೋಷಕರು